# ಕರ್ನಾಟಕ ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ

ಸಂಪುಟ : ೨೫ ಜುಲೈ–ಡಿಸೆಂಬರ್ ೨೦೧೧ ಸಂಚಿಕೆ : ೦೨

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ

ಎಂ.ವಿ.ಸೀ. ಸಂಶೋಧನ ಕೇಂದ್ರ

ಬಿ.ಎಂ.ಶ್ರೀ ಕಲಾಭವನ (ರಿ.)

೩ನೇ ಮುಖ್ಯ ರಸ್ತೆ, ನರಸಿಂಹರಾಜ ಕಾಲೋನಿ

ಬೆಂಗಳೂರು – ೧೯, ದೂರವಾಣಿ : ೨೬೬೧೫೮೭೭



6998

ಕರ್ನಾಟಕ

# ಲೋಚನ

## ಷಾಣ್ಮಾಸಿಕ ವಿದ್ವತ್ ಪತ್ರಿಕೆ

ಸಂಪುಟ : ೨೫ ಜುಲೈ–ಡಿಸೆಂಬರ್ ೨೦೧೧ ಸಂಚಿಕೆ : ೦೨

ಸಂಪಾದಕರು

**ಪ್ರೊ. ಜಿ. ಅಬ್ದುಲ್ ಬಷೀರ್**

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ ಕಲಾಭವನ
೩ನೆಯ ಮುಖ್ಯರಸ್ತೆ, ನರಸಿಂಹರಾಜ ಕಾಲೋನಿ, ಬೆಂಗಳೂರು – ೫೬೦ ೦೧೯
ದೂರವಾಣಿ : ೨೬೬೧೫೮೭೭, ೨೬೬೭೬೭೭೩
ಇಮೇಲ್: bmsritrust@gmail.com

**KARNATAKA LOCHANA** - (Half yearly Research Journal)
Editor : Prof. G. Abdul Basheer. Published by B.M.Sri. Smaraka Prathistana, M.V.Si. Reseach Center, B.M.Sri. Kalabhavan, 3rd Main Road, Narasimharaja Colony, Bangalore - 560 019. Ph.No. 080-26615877, 26676773 Pages: VI+110

Year : July-December 2011 (Vol. 25 , No. 02),

| | | |
|---|---|---|
| Yearly Subscription | : | **Rs. 100/-** (for Libraries) |
| For Individual | : | **Rs. 50/-** |
| Single issue | : | **Rs. 30/-** |

| | | |
|---|---|---|
| ವಾರ್ಷಿಕ ಚಂದಾ | : | ರೂ. ೧೦೦/– (ಗ್ರಂಥಾಲಯಗಳಿಗೆ) |
| ಪ್ರತಿಷ್ಠಾನದ ಆಜೀವ ಸದಸ್ಯತ್ವ | : | ರೂ. ೫೦೦/– (ಲೋಚನ ಉಚಿತ) |
| ವ್ಯಕ್ತಿಗಳಿಗೆ | : | ರೂ. ೫೦/– |
| ಬಿಡಿ ಪ್ರತಿ | : | ರೂ. ೩೦/– |


**ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಪದಾಧಿಕಾರಿಗಳು**

**ಪ್ರೊ॥ ಎಂ. ಎಚ್. ಕೃಷ್ಣಯ್ಯ**
ಗೌ॥ ಅಧ್ಯಕ್ಷರು

**ಪ್ರೊ. ಡಿ. ಲಿಂಗಯ್ಯ**
ಅಧ್ಯಕ್ಷರು

**ಡಾ॥ ನಾ. ಗೀತಾಚಾರ್ಯ**
ಗೌ॥ ಕಾರ್ಯದರ್ಶಿಗಳು

**ಶ್ರೀ ಎಸ್.ವಿ. ಶ್ರೀನಿವಾಸರಾವ್**
ವ್ಯವಸ್ಥಾಪಕ ಕಾರ್ಯದರ್ಶಿಗಳು

**ಶ್ರೀ ಎಂ.ಎಸ್. ರಾಮಪ್ರಸಾದ್**
ಕೋಶಾಧಿಕಾರಿಗಳು


ಮುದ್ರಣ
**ಚಂದನ ಪ್ರಿಂಟರ್ಸ್**
312, 7ನೇ ಮೇನ್
ನಾಗೇಂದ್ರ ಬ್ಲಾಕ್
ಬನಶಂಕರಿ 1ನೇ ಹಂತ
ಬೆಂಗಳೂರು–560 050

# ಸಂಪಾದಕೀಯ

ಸಂಪುಟ : ೨೫, ಜುಲೈ–ಡಿಸೆಂಬರ್–೨೦೧೧, ಸಂಚಿಕೆ : ೨ ಸಹೃದಯರ ಕೈಗೆ ತಡವಾಗಿ ಸೇರುತ್ತಿದೆ. ಇದಕ್ಕೆ ನಾನಾ ಕಾರಣಗಳು. ಮುಂದಿನ ಸಂಚಿಕೆಗಳು ಸಕಾಲದಲ್ಲಿ ಹೊರಬರುತ್ತವೆ ಎಂಬ ವಿಶ್ವಾಸವಿದೆ.

ಪ್ರಸ್ತುತ ಸಂಚಿಕೆಯ ಲೇಖನಗಳು ವೈವಿಧ್ಯಮಯವಾಗಿವೆ. ಭಾಷೆ, ಸಂಶೋಧನೆ, ವಿಮರ್ಶೆ, ತೌಲನಿಕ ವಿಚಾರಗಳನ್ನೊಳಗೊಂಡ ಲೇಖನಗಳಲ್ಲಿ ನವೀನ ಚಿಂತನೆಗಳಿವೆ; ಹೊಳಹುಗಳಿವೆ; ಚರ್ಚೆಗೆ ಕಾರಣವಾಗಬಹುದಾದ ಅನೇಕ ವಿಚಾರಗಳಿವೆ. ಸಹೃದಯರು ತಮ್ಮ ಅನಿಸಿಕೆಗಳನ್ನು ತಿಳಿಸಬೇಕೆಂದು ಕೋರುತ್ತೇನೆ.

ಪ್ರಸ್ತುತ ಸಂಚಿಕೆಗೆ ಲೇಖನಗಳನ್ನು ನೀಡಿ ಉಪಕರಿಸಿದ ಸಾಹಿತಿ–ವಿದ್ವಾಂಸರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು ಸಲ್ಲುತ್ತವೆ. ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಅಧ್ಯಕ್ಷರಾದ ಪ್ರೊ. ಡಿ. ಲಿಂಗಯ್ಯ ಅವರಿಗೆ, ಗೌ॥ ಕಾರ್ಯದರ್ಶಿಗಳಾದ ಡಾ॥ ನಾ. ಗೀತಾಚಾರ್ಯ ಅವರಿಗೆ, ವ್ಯವಸ್ಥಾಪಕ ಕಾರ್ಯದರ್ಶಿಗಳಾದ ಶ್ರೀ ಎಸ್. ವಿ. ಶ್ರೀನಿವಾಸರಾವ್ ಅವರಿಗೆ, ಕೋಶಾಧಿಕಾರಿಗಳಾದ ಶ್ರೀ ಎಂ. ಎಸ್. ರಾಮಪ್ರಸಾದ್ ಅವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು ಸಲ್ಲುತ್ತವೆ. ನನಗೆ ಸಹಕಾರ ನೀಡುತ್ತಿರುವ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಕಛೇರಿ ಸಿಬ್ಬಂದಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

–ಪ್ರೊ. ಜಿ. ಅಬ್ದುಲ್ ಬಷೀರ್

# ಪರಿವಿಡಿ


ಸಂಪಾದಕೀಯ

೧. ಬಿ.ಎಂ.ಶ್ರೀ. ಸ್ಮರಣೆ ೧

– *ಪ್ರೊ. ಡಿ. ಲಿಂಗಯ್ಯ*

೨. ಕನ್ನಡದಾಗ ವಿಭಕ್ತಿ ರೂಪವಾಗಿ ಸಮೀಪ ತೋರುಗ*–ಇ/*–ಈ ೩

– *ಪ್ರೊ. ಬಸವರಾಜ ಕೋಡಗುಂಟಿ*

೩. ತುಳುನಾಡಿನ ನಾಗಲೋಕ ೧೫

– *ಡಾ. ಲಕ್ಷ್ಮೀ ಜಿ. ಪ್ರಸಾದ*

೪. ಪಂಪಭಾರತದಲ್ಲಿ ಮಿಂಚಿದ ಜೀವನ ದರ್ಶನ 'ನೂಱಯ್ವರಾವಲ್ಲವೇ' ೨೦

– *ಡಾ. ಪ್ರಮೀಳ ಮಾಧವ*

೫. ಡಂಬಳ : ಸರ್ವಧರ್ಮಗಳ ಸಮನ್ವಯ ಕೇಂದ್ರ ೨೫

– *ಡಾ. ಅಪ್ಪಣ್ಣ ಎನ್. ಹಂಜೆ*

೬. ಹಿರಿಯೂರು ತಾಲ್ಲೂಕು ಗೌಡನ ಹಳ್ಳಿಯ ಪ್ರಾಚೀನ
ವೀರ–ಮಾಸ್ತಿ ಸ್ಮಾರಕಗಳು : ಒಂದು ಹೊಸ ಶೋಧನೆ ೪೧

– *ಡಾ. ಮುತ್ತುರಾಜು*

೭. ದಾಸರ ಕೀರ್ತನೆಗಳ ಭಾಷಿಕ ಅಭಿವ್ಯಕ್ತಿ ೪೬

– *ಪ್ರೊ. ಜಿ. ಅಬ್ದುಲ್ ಬಷೀರ್*

೮. 'ಯೋಗ ವಿಷಯಕ್ಕೆ ಜೈನ ಕವಿ ಶಾಂತರಸನ ಅಪೂರ್ವ ಕೊಡುಗೆ ೫೬
'ಯೋಗರತ್ನಾಕರ' – *ಪವಿತ್ರ*

೯. ಧರ್ಮ ಮತ್ತು ಕಾವ್ಯ ಧರ್ಮ : ಎತ್ತು ಏರಿಗೆ, ಕೋಣ ನೀರಿಗೆ ? ೬೭

– *ಡಾ. ಕಾ. ವೆಂ. ಶ್ರೀನಿವಾಸಮೂರ್ತಿ*

೧೦. ಡಾ॥ ಶ್ರೀಕಂಠಶಾಸ್ತ್ರಿಗಳು : ಕನ್ನಡ ಸಾಹಿತ್ಯ ಸೇವೆ, ಶೋಧನೆ ೭೨

– *ಡಾ॥ ಟಿ. ವಿ. ವೆಂಕಟಾಚಲಶಾಸ್ತ್ರೀ*

೧೧. ಕನ್ನಡದಲ್ಲಿ ಐತಿಹಾಸಿಕ ಕಾದಂಬರಿಗಳು ೭೯

– *ಡಾ॥ ಕೆ. ರಮಾನಂದ*

೧೨. ಚನ್ನಪಟ್ಟಣದ ಅಹೋಬಲದಾಸರು ೯೦

– *ಡಾ॥ ಶಿವಣ್ಣ ಬೆಳಕವಾಡಿ*

೧೩. ಮೇಘ ಸಂದೇಶ ಮತ್ತು ಮೇಘ ಪ್ರತಿ ಸಂದೇಶಗಳ ಒಂದು ವಿಶ್ಲೇಷಣೆ ೯೪
*– ಸುಬ್ರಾಯ ಈಶ್ವರ ಹೆಗಡೆ*

೧೪. ಶ್ರೀಮತ್ ಭಟಕಳ ಜೀವನ್ಮುಕ್ತ ಕವಿ ಅಪ್ಪಯ್ಯ ಸಮರ್ಥಕ ಪದಗಳಲ್ಲಿ ಕೆಳದಿ ಇತಿಹಾಸ ತುಣುಕುಗಳು *– ಡಾ॥ ಕೆಳದಿ ವೆಂಕಟೇಶ್ ಜೋಯಿಸ್* ೯೭

೧೫. ಕವನ ಹುಟ್ಟುವ ಸಮಯ ಮತ್ತು ಕಾವ್ಯ ಪರಿಕಲ್ಪನೆಗಳು *– ಸಂಧ್ಯಾ ಲಕ್ಷ್ಮೀನಾರಾಯಣ ಹೆಗಡೆ* ೧೦೩

೧೬. ಸಂಪಾದಕರು ಮತ್ತು ಲೇಖಕರ ವಿಳಾಸಗಳು ೧೧೦

# ೧. ಬಿ.ಎಂ.ಶ್ರೀ ಸ್ಮರಣೆ

– ಪ್ರೊ. ಡಿ. ಲಿಂಗಯ್ಯ

೧

ಸಂಪಿಗೆಯಲ್ಲಿ ಜನಿಸಿ, ಬೆಳ್ಳೂರಿನಲಿ ಬೆಳೆದು
ಕಾವೇರಿ ಹೊಳೆಯಲೀಜಾಡಿ, ರಂಗನಾಥನ
ಸನಿಹದಲಿ ನಲಿದಾಡಿ, ಒಡನಾಡಿಗಳ ಕೂಡಿ
ನಗರಗಳಲಿ ಶಿಕ್ಷಣ ಪಡೆದು ಆಂಗ್ಲಭಾಷೆಯ
ಬೋಧನೆಗೆ ತೊಡಗಿದ್ದು ಹೊಟ್ಟೆಪಾಡಿನ ಚರಿತೆ.

ಆವೇಶದಾಂಗ್ಲ ನುಡಿಯ ಗತ್ತುಗಮ್ಮತ್ತಿನೆಡೆ
ಕನ್ನಡದರಿವಿನಾ ಸೆಲೆಯೊಡೆದಿದ್ದು ಪವಾಡ.
ಎರಡು ಹಾದಿಯಲೂ ಸಾಧನೆಯ ಮಹಾಪೂರ
ಶಿಷ್ಯ ಕೋಟಿಗೆ ಉತ್ಸಾಹ ಹೊಳಹು ಸಂಚಾರ.
ನಾಡಿನುದ್ದಕೂ ಸಂಚರಿಸಿ ಕನ್ನಡಮ್ಮನ
ಆವಾಹನೆಯಲಿ ಹಾಡುಕಟ್ಟಿ ಅಲಂಕರಿಸಿ
ಪಲುಕಿದ್ದು ರೋಮಾಂಚನ. ಮೂಡಲ ಹೊಂಬೆಳಕು
ಪಡುವಲಕ್ಕೆ, ಪಡುವಲದ ಅರಿವು ಮೂಡಣಕ್ಕೆ.
ವಿಶ್ವ ದಿಗಂತಕ್ಕೆ ಚಾಚಿದ ಜ್ಞಾನದಾಹ.

೨

ಕನ್ನಡದ ಮೇಲ್ಮೆಗೆ ಕೋಡು ಶ್ರೀಶೈಲಿ ಕೊಡುಗೆ
ಪರಮ ಪರಂಪರೆಯ ಜೊತೆಗೆ ಹೊಸತನದ ಬೆಸುಗೆ
ಮಾತುಕೃತಿ ಸಂಚಯ ಕಾವೇರಿ ಹೊಳೆ ಹರಿವು.

ಇಂಗ್ಲಿಷ್ ಗೀತೆ ಹೊಂಗನಸು ಲಯ ಧಾಟಿಮಯ
ನವೋದಯ ನವಗೀತ ಮಾದರಿಗೆ ಹೆದ್ದಾರಿ.
ಕನ್ನಡ ಬಾವುಟವ ಹಾರಿಸಿ ಏರಿಸಿ ನಲಿದು
ಕನ್ನಡ ತಾಯಿಯ ನೋಟವ ಬವಣಿಸಿ ಬಣ್ಣಿಸಿ
ಕನ್ನಡತನವ ಮೈದುಂಬಿ ಮನ ತುಂಬಿ ಆಡಿ
ಹಾಡಿ ತಣಿದು ನಾಡವರ ಎದೆಯಲಿ ನೆಲೆನಿಂತ
ಅಮರ ಜೀವ ಮಹಾನುಭಾವ ಕನ್ನಡದ ಕಲಿ.

ಅಶ್ವತ್ಥಾಮನ್ ಸೃಜಿಸಿದ ತಲ್ಲಣಕ್ಕೆಣೆ
ಯಿಲ್ಲ. ಸರಸ ಮಾಂತ್ರಿಕ ಮಾತು ರೂಪಕ ಧಾತು.
ನಡೆ ನುಡಿ ಬರಹ ಬದುಕು ನಾಡು ನಾಡವರ ಮೆಲುಕು
ಆದಿ ಅಂತ್ಯದ ವರೆಗೆ ಅದೇ ಜಪ ತಪ ಕುರುಕು.

೩

ರಾಜನಿಷ್ಠೆ ರಾಜಗಾಂಭೀರ್ಯ ತೇಜೋರೇಖೆ
ಕೀಳರಿಮೆಗೆಡೆಯಿಲ್ಲ ಯುಗಪುರುಷ ಹಿರಿನಡೆಗೆ.
ರಾಜ ಸೇವಾಸಕ್ತ ಪದಕ ಗೌರವದ ಕುರುಹು
ಮೈಸೂರು ಪೇಟ ಶಿರಶಿಖರ ಪರಂಪರೆ ರೂಹು.
ಕುತ್ತಿಗೆ ತುಂಬ ಒತ್ತರಿಸಿದರೂ ಬಾಳ ನೋವು
ಎಡೆಬಿಡದೆ ಹೊರಟ ಕನ್ನಡ ಸೇವೆಗೆ ನಗುಮುಖ.

ಬರಹಕೆ ಮಿತಿಯಿರಬಹುದು, ಇಲ್ಲ ಮಾತಿಗೆ ಬರ
ಗದ್ಯವಾಗಲಿ ಪದ್ಯವಾಗಲಿ ದರ್ಶನ ಝರಿ.
ಮಂಜುಳ ದನಿಯಲಿ ಮಂಗಳನಾಡಿನ ಹಿರಿಮೆಯ
ಮೆರೆಸಿದ ನವ ಮನ್ವಂತರದ ಕಳೆ ಕಣ್ವ ಮುನಿ.
ಕನ್ನಡ ಕಟ್ಟಾಳುಗಳಿಗೆ ನಿತ್ಯ ಪ್ರೇರಣೆ.
ಸಿರಿಗನ್ನಡಂ ಗೆಲ್ಗೆ, ಕನ್ನಡದ ತಾಯ್ ಬಾಳ್ಗೆ,
ಶ್ರೀವಾಣಿ ಮಾಸಿಲ್ಲ ಮರೆತಿಲ್ಲ ಈತನಕ
ಮುಂದೆ ಮಾಸುವುದಿಲ್ಲ ಕರುನಾಡು ಇರುವನಕ.

# ೨. ಕನ್ನಡದಾಗ ವಿಬಕ್ತಿ ರೂಪವಾಗಿ ಸಮೀಪ ತೋರುಗ : *-ಇ/*-ಈ

–ಬಸವರಾಜ ಕೋಡಗುಂಟಿ

೧. ಜಗತ್ತಿನ ಮಾತುಗಳಾಗ ವಿಬಕ್ತಿ ಒಟ್ಟುಗಳು ಸ್ವತಂತ್ರ ಆಕ್ರುತಿಮಾಗಳಿಂದ ಬೆಳೆದಿವೆ ಎಂಬುದು ಒಂದು ನಂಬಿಕೆ. ಇದನ್ನ ಕನ್ನಡದ ಸಂದರ್ಬದಾಗೂ ಹೆಚ್ಚಿನ ವಿದ್ವಾಂಸರು ಮಾತನಾಡಿದ್ದಿದೆ. ಜಗತ್ತಿನ ಮಾತಿನಾಗ ವಿಬಕ್ತಿ ಒಟ್ಟುಗಳಿಗೆ ಕ್ರಿಯಾಪದಗಳು ಮತ್ತು ನಾಮಪದಗಳು ಹೀಗೆ ಎರಡು ಮೂಲಗಳು ಇವೆ ಎಂದು ತೋರಿಸಲಾಗಿದೆ. ಈ ಎರಡರಾಗ ಕ್ರಿಯಾಪದಗಳು ಬಹುಮುಕ್ಯವಾದ ಮೂಲ ಎಂದು ತಿಳಿಯಲಾಗಿದೆ (ಬೆರ್ರಿ,ಕೇಂಬ್ರಿಜ್ ವಿಶ್ವವಿದ್ಯಾಲಯ,ಕೇಂಬ್ರಿಜ್,೨೦೦೨).

೨. ಕನ್ನಡದ ಸಂದರ್ಬದಾಗ ಕಾರಕ ಸಂಬಂದದ ಒಟ್ಟುಗಳು ಸ್ವತಂತ್ರ ಆಕ್ರುತಿಮಾದಿಂದ ಬೆಳೆದು ಬಂದಿವೆ ಎಂದು ತಿಳಿಯಲಾಗಿದೆ ಮತ್ತು ಹೆಚ್ಚು ವಿದ್ವಾಂಸರು ಇದನ್ನು ಮಾತನಾಡುತ್ತಾರೆ. ಆದರೆ ಈ ನಿಟ್ಟಿನಾಗ ಈ ಬೆಳವಣಿಗೆಯನ್ನ ತೋರಿಸುವ ನಿರ್ದಿಶ್ಟವಾದ ಅದ್ಯಯನ ಇದುವರೆಗೆ ಬಂದಿರಲಿಲ್ಲ. ಇದೆ ಮಾತನ್ನ ದ್ರಾವಿಡದ ಸಂದರ್ಬದಾಗೂ ಹೇಳಬಹುದು. ದ್ರಾವಿಡದಾಗ ಸ್ವತಂತ್ರ ಆಕ್ರುತಿಮಾಗಳು ಕಾರಕ ಸಂಬಂದಗಳನ್ನ ಹೇಳುವುದಕ್ಕೆ ಬೆಳೆದಿವೆ ಎಂದು ಹೇಳಲಾಗುತ್ತದೆಯಾದರೂ ಈ ನಿಟ್ಟಿನ ಒಳ್ಳೆಯ ಅದ್ಯಯನ ಬಂದಿರಲಿಲ್ಲ. ಸಾಮಾನ್ಯವಾಗಿ ಈ ವಿವರಣೆ ಕೊಡುವಾಗ **-ಇಲ್* < **ಇಲ್* 'ಮನೆ', ಮತ್ತು **-ಉಳ್* < **ಉಳ್* 'ಒಳ', 'ಒಳಗೆ' ಎಂಬ ಒಂದೆರಡು ರೂಪಗಳ ವಿವರಣೆಯನ್ನು ಎತ್ತಿಕೊಳ್ಳಲಾಗುತ್ತಿತ್ತು. ಆದರೆ ಉಳಿದ ಹೆಚ್ಚು ರೂಪಗಳಿಗೆ ಯಾವುದೆ ವಿವರಣೆ ಇಲ್ಲ. ಅಲ್ಲದೆ ಕೊಟ್ಟಿರುವ ಈ ಎರಡು ವಿವರಣೆಗಳು ಕೂಡ ಬೇರೆಯ ಬೆಳವಣಿಗೆಯನ್ನು ಹೊಂದಿವೆ. ಈ ನಿಟ್ಟಿನಾಗ ವಿಬಕ್ತಿ ರೂಪಗಳ ಮೇಲೆ ವಿಶೇಶವಾದ ಅದ್ಯಯನವನ್ನು ಮಾಡಿ ನಾನು ಹೆಚ್ಚು ಅಂಶಗಳನ್ನ ತೋರಿಸಿಕೊಟ್ಟಿದ್ದೇನೆ.

೩. ಕನ್ನಡದಾಗ/ದ್ರಾವಿಡದಾಗ ಕಾರಕದೊಟ್ಟುಗಳಿಗೆ ಒಟ್ಟು ಮೂರು ಮೂಲಗಳಿವೆ.

೧. ತೋರುಗ ಪದ

೨. ನೆಲೆವಾಚಿ ಹೆಸರ್ಪದ

೩. ಕ್ರಿಯಾಪದ

೪. ಇಲ್ಲಿ ತೋರುಗ ಮೂಲದ ಬಗೆಗೆ ಒಂದಶ್ಟು ಚಿಂತನೆಯನ್ನ ಮಾಡಬಹುದು. ದ್ರಾವಿಡದಾಗ ಮೂರು ತೋರುಗ ಪದಗಳಿವೆ.

ದೂರ ತೋರುಗ *-ಅ/*-ಆ

ನಡು ತೋರುಗ *-ಉ/*-ಊ

ಸಮೀಪ ತೋರುಗ *-ಇ/*-ಈ

ಹೊಸಗನ್ನಡವು ನಡುತೋರುಗವನ್ನ ಕಳೆದುಕೊಂಡಿದೆ. ಆದರೆ ಇದರಿಂದ ಬೆಳೆದ ಬೇರೆ ಬೇರೆ ವ್ಯಾಕರಣಾತ್ಮಕ ರೂಪಗಳು ಕನ್ನಡದಾಗ ಉಳಿದುಕೊಂಡು ಬಂದಿವೆ.

ಜಗತ್ತಿನ ಹೆಚ್ಚು ಮಾತುಗಳಾಗ ತೋರುಗ ಪದಗಳು ಬೇರೆ ಬೇರೆ ವ್ಯಾಕರಣಾತ್ಮಕ ಅಂಶಗಳಾಗಿ ಬೆಳೆದಿವೆ (ಹೊಲ್ಗರ್.ಜಾನ್ ಬೆಂಜಮಿನ್ ಪಬ್ಲೀಶಿಂಗ್ ಕಂಪನಿ, ಆಮ್‌ಸ್ಟರ್‌ಡ್ಯಾಮ್ ಮತ್ತು ಪಿಲಿಡೆಲ್ಪಿಯಾ ೧೯೯೯). ಅದೆ ರೀತಿ ದ್ರಾವಿಡದಾಗೂ ತೋರುಗ ಪದಗಳು ಬೇರೆ ಬೇರೆ ವ್ಯಾಕರಣಾತ್ಮಕ ಅಂಶಗಳಾಗಿ ಬೆಳೆದಿವೆ.

| | | ಇದುರಿಗ (ಪ್ರತಮ ಪುರುಶ) ರೂಪಗಳು | ನೆಲೆವಾಚಿ ಹೆಸರ್ಪದಗಳು | ಅಳತೆವಾಚಿ ಹೆಸರ್ಪದಗಳು |
|---|---|---|---|---|
| ದೂರ ತೋರುಗ | *-ಅ/*-ಆ | ಅವಳ್ | ಅಲ್ಲಿ | ಅನಿತು |
| ನಡು ತೋರುಗ | *-ಉ/*-ಊ | ಉವಳ್ | ಉಲ್ಲಿ | ಉನಿತು |
| ಸಮೀಪ ತೋರುಗ | *-ಇ/*-ಈ | ಇವಳ್ | ಇಲ್ಲಿ | ಇನಿತು |

**ಅಟ್ಟ ೧: ತೋರುಗ ಪದಗಳು ಬೇರೆ ಬೇರೆ ವ್ಯಾಕರಣಾತ್ಮಕ ಅಂಶಗಳಾಗಿ.**

ಇದೆ ರೀತಿಯಲ್ಲಿ ದ್ರಾವಿಡದಾಗ ತೋರುಗ ಪದಗಳು ವಿಬಕ್ತಿಗಳಾಗಿಯೂ ಬೆಳೆದಿದೆ.

| | | |
|---|---|---|
| ದೂರ ತೋರುಗ | *-ಅ/*-ಆ | -ಅಣ, *-ಅತ್, -ಅತು, -ಅದು, *-ಆ, *-ಆನ್, *-ಆಲ್,*-ಆಳ್ |
| ನಡು ತೋರುಗ | *-ಉ/*-ಊ | *-ಉನ್, *-ಉಲ್, -ಉವ *-ಉಳ್, -ಉಳ, -ಉಳ, *-ಊ |
| ಸಮೀಪ ತೋರುಗ | *-ಇ/*-ಈ | -ಇದು, *-ಇನ್, *-ಇಲ್, -ಇಲ್ಲಿ, *-ಈ |

**ಅಟ್ಟ ೨: ವಿಬಕ್ತಿ ರೂಪಗಳಾಗಿ ತೊರುಗ ಪದಗಳು.**

ಕೆಳಗೆ ಅಟ್ಟ '೩'ರಾಗ ತೋರುಗ ಪದಗಳೆ ವಿಬಕ್ತಿಗಳಾಗಿ ಬಳಕೆಯಾಗಿರುವುದನ್ನ ಕಾಣಿಸಲಾಗಿದೆ. ಅಟ್ಟ '೪'ರಾಗ ತೋರುಗದಿಂದ ಬೆಳೆದ ರೂಪಗಳು ವಿಬಕ್ತಿಗಳಾಗಿ ಬಳಕೆಯಲ್ಲಿರುವುದನ್ನು ಕೊಟ್ಟಿದೆ. ಅಟ್ಟ '೫'ರಾಗ ತೋರುಗದಿಂದ ಬೆಳೆದ ವಿಬಕ್ತಿ ರೂಪಗಳು ಮತ್ತು ಅವುಗಳು ಹೇಳುವ ಕಾರಕಗಳನ್ನ ಪಟ್ಟಿ ಮಾಡಿ ತೋರಿಸಿದೆ.

| ತೋರುಗ ಪದ | ತೋರುಗ ಪದ ಹೇಳುವ ಕಾರಕ ಸಂಬಂದ |
|---|---|
| *-ಅ/*-ಆ | ನೆಲೆ, ಆಗುಗ, ಸಂಬಂದ |
| *-ಉ/*-ಊ | ನೆಲೆ |
| *-ಇ/*-ಈ | ನೆಲೆ |

## ಅಟ್ಟ ೩: ತೋರುಗ ಪದಗಳು ವಿಬಕ್ತಿಗಳಾಗಿ.

| ತೋರುಗ ಪದ | ಬೆಳೆದ ವಿಬಕ್ತಿ ರೂಪಗಳು | ತೋರುಗ ರೂಪ ಮತ್ತು ಅದರ ಬೆಳೆದ ರೂಪಗಳು ಹೇಳುವಕಾರಕ ಸಂಬಂಧಗಳು |
|---|---|---|
| *-ಅ/*-ಆ | *-ಅ, -ಅಣ, *-ಅತ್, -ಅತು, -ಅದು,*-ಆ,*-ಆನ್,*-ಆಲ್,*-ಆಳ್ | ನೆಲೆ, ಆಗುಗ, ಸಂಬಂದ |
| *-ಉ/*-ಊ | -ಉ, *-ಉನ್, *-ಉಲ್, -ಉವ *-ಉಳ್, -ಉಳ, -ಉಳೆ, *-ಊ | ನೆಲೆ |
| *-ಇ/*-ಈ | *-ಇ, -ಇದು, *-ಇನ್, *-ಇಲ್,-ಇಲ್ಲಿ, *-ಈ | ನೆಲೆ |

## ಅಟ್ಟ ೪: ತೋರುಗ ಪದಗಳಿಂದ ಬೆಳೆದ ವಿಬಕ್ತಿ ರೂಪಗಳು.

| ದೂರ ತೋರುಗದ ಬೆಳೆದ ರೂಪಗಳು | ಅವು ಹೇಳುವ ಕಾರಕ ಸಂಬಂದಗಳು |
|---|---|
| -ಅ, -ಅಣ,-ಅತು, -ಅನ್, -ಅಲ್, -ಅಳ್-ಆ,*-ಆನ್,*-ಆಲ್,*-ಆಳ್ | ನೆಲೆ |
| -ಅನ್, -ಅನ, -ಅನು, *-ಆನ್, -ನ | ಆಗುಗ |
| *-ಅ, -ಅತು, -ಅದು, *-ಆ | ಬಿಡುಗಡೆ |
| *-ಅ, -ಅದು, *-ಆ | ಸಂಬಂದ |

## ಅಟ್ಟ ೫.೧: ದೂರ ತೋರುಗದ ಬೆಳೆದ ರೂಪಗಳು ಮತ್ತು ಅವುಗಳು ಹೇಳುವ ಕಾರಕಗಳು.

| ನಡು ತೋರುಗದ ಬೆಳೆದ ರೂಪಗಳು | ಕಾರಕ ಸಂಬಂದಗಳು |
|---|---|
| *-ಉ, *-ಉನ್, *-ಉಲ್, *-ಉಳ್, -ಒಳ್, -ಒಳು | ನೆಲೆ |
| *-ಉಳ್ | ಕರಣ |

## ಅಟ್ಟ ೫.೨: ನಡು ತೋರುಗದ ಬೆಳೆದ ರೂಪಗಳು ಮತ್ತು ಅವುಗಳು ಹೇಳುವ ಕಾರಕಗಳು.

| ಸಮೀಪ ತೋರುಗದ ಬೆಳೆದ ರೂಪಗಳು | ಕಾರಕ ಸಂಬಂದಗಳು |
|---|---|
| *-ಇ, *-ಇನ್, *-ಇಲ್ | ನೆಲೆ |
| ಇನ್, -ಇನ್ದ, -ಇನ್ದನ್, -ಇನ್ದೆ | ಸಾದನ |
| ಇನ್, -ಇನ | ಸಂಬಂದ |

## ಅಟ್ಟ ೫.೩: ಸಮೀಪ ತೋರುಗದ ಬೆಳೆದ ರೂಪಗಳು ಮತ್ತು ಅವುಗಳು ಹೇಳುವ ಕಾರಕಗಳು.

ಹೀಗೆ ದ್ರಾವಿಡದಾಗ ಇಲ್ಲವೆ ಕನ್ನಡದಾಗ ತೋರುಗ ಪದಗಳು ವಿಬಕ್ತಿಗಳಾಗಿ ಬೆಳೆದಿವೆ ಎಂಬುದು ಅರ್ತವಾಗುತ್ತದೆ. ಮೂಲದ ಒಂದಕ್ಕರದ ತೋರುಗ ಪದಗಳಿಗೆ ಪೂರಕ ಒಟ್ಟುಗಳು ಸೇರಿಕೊಳ್ಳುವುದರ ಮೂಲಕ ಬೇರೆ ಬೇರೆ ವ್ಯಾಕರಣಾತ್ಮಕ ಅಂಶಗಳಾಗಿ ತೋರುಗಗಳು ಬೆಳೆದಿದೆ. ವಿಬಕ್ತಿಗಳಾಗಿ ಬೆಳೆದಿರುವ ಅವಕಾಶಗಳನ್ನ ನೋಡುವಾಗ ಮೂಲದ್ರಾವಿಡದ ಹಂತದಾಗ ಯಾವುದೊ ಒಂದು ಉಲಿ ಹೀಗೆ ಸೇರಿಕೊಂಡಿದೆ. ಆ ಉಲಿ ಯಾವುದು ಎಂಬುದನ್ನೂ ತಿಳಿದುಕೊಳ್ಳಬೇಕಿದೆ. ಈ

ಉಲಿಯು ಮುಂದೆ /ನ್/, /ಲ್/, /ಳ್/, /ತ್/ ಮೊದಲಾದ ಉಲಿಗಳಾಗಿ ಒಡೆದುಕೊಂಡಿದೆ. ಕನ್ನಡದಾಗ /ನ್/, /ಲ್/, /ಳ್/ ಉಲಿಗಳ ಬೆಳವಣಿಗೆ ವಿಶೇಶವಾಗಿದೆ. ಇದರೊಂದಿಗೆ /ಣ್/, /ತ್/, ಯ್/ವ್/ ಮೊದಲಾದ ಉಲಿಗಳು ಅಲ್ಲಲ್ಲಿ ಕಂಡುಬರುತ್ತವೆ. ಇವುಗಳನ್ನ ಇನ್ನೂ ಸರಿಯಾಗಿ ಅದ್ಯಯನ ಮಾಡಬೇಕಿದೆ. ಈ ಎಲ್ಲವುಗಳಲ್ಲಿ ಇದುವರೆಗಿನ ತಿಳುವಳಿಕೆಯನ್ನ ಇಟ್ಟುಕೊಂಡು /ನ್/, /ಲ್/, /ಳ್/ ಇವುಗಳನ್ನ ಮೂಲಕನ್ನಡಕ್ಕೆ ಮತ್ತೆ 'ಕಟ್ಟಿದ್ದೇನೆ. ತೋರುಗ ರೂಪಗಳ ಬೆಳವಣಿಗೆಯನ್ನ ವಿವರಿಸುವುದಕ್ಕೆ ಈ ಬರಿಗೆಯಾಗ ಈ ಮೂಲಕನ್ನಡದ ರೂಪಗಳನ್ನ ಇಟ್ಟುಕೊಳ್ಳಲಾಗಿದೆ.

ಈ ಬರಿಗೆಯಾಗ ಸಮೀಪ ತೋರುಗವನ್ನ ಕುರಿತು ಮಾತನಾಡಲು ಎಡೆ ಮಾಡಿಕೊಳ್ಳಲಾಗಿದೆ. ಕನ್ನಡದ ಅಯ್ತಿಹಾಸಿಕ ಮತ್ತು ಪ್ರಾದೇಶಿಕ ಒಳನುಡಿಗಳನ್ನ ಇಟ್ಟುಕೊಂಡು ಸಮೀಪ ತೋರುಗಕ್ಕೆ ಸಂಬಂದಪಟ್ಟ ರೂಪಗಳನ್ನ ಮೊದಲು ಒಂದೆಡೆ ಕಲೆ ಹಾಕಿ ಅವುಗಳನ್ನ ಅಯ್ತಿಹಾಸಿಕವಾಗಿ ಅದೆ ವೇಳೆಗೆ ತವ್ಲನಿಕವಾಗಿ ವಿವರಿಸಲಾಗಿದೆ. ಇದರಿಂದ ಸಮೀಪ ತೋರುಗದ ಬೆಳೆದ ರೂಪಗಳ ಬಗೆಗೆ ಸ್ಪಶ್ಟವಾದ ಚಿತ್ರಣ ದೊರಕಿದೆ.

*-ಇ/*-ಈ ಇದರಿಂದ ಬೆಳೆದ ಕೆಲವು ರೂಪಗಳು ಕನ್ನಡಗಳಾಗ ಸಿಗುತ್ತವೆ. ಇವುಗಳ ಬೆಳವಣಿಗೆಯನ್ನ ಅವಲೋಕಿಸಿದಾಗ ಇವೆಲ್ಲ ಕೆಲವು ಬೆಳವಣಿಗೆಯ ಸಾದ್ಯತೆಗಳೊಳಗೆ ಬರುತ್ತವೆ ಎಂಬುದು ತಿಳಿಯುತ್ತದೆ. ಈ ಬೆಳವಣಿಗೆಯ ಸಾದ್ಯತೆಗಳನ್ನ ಆ ದಾರಿಯಾಗ ಬೆಳೆದ ರೂಪಗಳೊಂದಿಗೆ ಇಲ್ಲಿ ತೋರಿಸಿದೆ.

**ಪಟ್ಟಿ ೧: *-ಇ/*-ಈ ಇದರ ಬೆಳವಣಿಗೆ ಸಾದ್ಯತೆಗಳು:**

| | | | |
|---|---|---|---|
| *೧.* | **-ಇ/*-ಈ* | > | **-ಇ* |
| *೨.* | **-ಇ/*-ಈ* | > | **-ಇನ್, -ಇನ* |
| *೩.* | **-ಇ/*-ಈ* | > | **-ಇಲ್, -ಇಲ್ಲಿ* |
| *೪.* ಉಳಿದವು | **-ಇ/*-ಈ* | > | *-ಇವ, -ಇವದ, -ಇವದುಳ್* |

ಹೀಗೆ ಬೇರೆ ಬೇರೆ ದಾರಿಗಳಾಗ ಸಮೀಪತೋರುಗವು ವಿವಿದ ರೂಪಗಳನ್ನ ಪಡೆದು ಬೆಳೆದಿದೆ. *-ಇ/*-ಈ ಇದರ ಬೆಳೆದ ರೂಪಗಳ ಪಟ್ಟಿಯನ್ನ ಇಲ್ಲಿ ಕೊಟ್ಟಿದೆ.

**ಪಟ್ಟಿ ೨: *-ಇ/*-ಈ ಇದರ ಬೆಳೆದ ರೂಪಗಳು:**

| | |
|---|---|
| **-ಇ* | **-ಇಲ್* |
| **-ಇನ್* | *-ಇಲ್ಲಿ* |
| *-ಇನ* | |

೬. ಕನ್ನಡದಾಗ ಅದರಂತೆ ದ್ರಾವಿಡದಾಗ ಎರಡು ಇಲ್ಲವೆ ಹೆಚ್ಚಿನ ವಿಬಕ್ತಿ ರೂಪಗಳು ಪರಸ್ಪರ ಸೇರಿ ಒಂದು ರೂಪವಾಗಿ ಕಾರಕ ಸಂಬಂದಗಳನ್ನ ಹೇಳುವುದಕ್ಕೆ

ಬಳಕೆಯಾಗುತ್ತವೆ. ಇವುಗಳಿಗೆ 'ಕೂಡೊಟ್ಟುಗಳು' ಎಂದು ಕರೆಯಬಹುದು. ಈ ಕೂಡೊಟ್ಟುಗಳಾಗ ಮೊದಲು ಇರುವ ರೂಪವನ್ನ ಅಂದರೆ ಬೇರೆ ರೂಪಗಳು ಬಂದು ಯಾವ ರೂಪವನ್ನು ಸೇರುತ್ತವೆಯೊ ಆ ರೂಪವನ್ನ 'ಮೇಲ್ರೂಪ' ಎಂದು ಕರೆಯಬಹುದು. ಅದೆ ರೀತಿ ನಂತರದ ರೂಪಗಳನ್ನ ಅಂದರೆ ಯಾವ ರೂಪಗಳು ಬಂದು ಇನ್ನೊಂದು ರೂಪಕ್ಕೆ ಸೇರಿಕೊಳ್ಳುತ್ತವೆಂಯೊ ಅವುಗಳನ್ನು 'ಒಳರೂಪ'ಗಳೆನ್ನಬಹುದು. ಕುರಿತಿರುವ ರೂಪವು ಮೇಲ್ರೂಪವಾಗಿರುವ ಕೂಡೊಟ್ಟುಗಳನ್ನ ಆ ರೂಪದೊಂದಿಗೆ ನೋಡುವುದು ಉಚಿತ. ಇದೆ ಬಗೆಯನ್ನ ಇಲ್ಲಿ ಅಳವಡಿಸಿಕೊಂಡಿದೆ. ನಡುತೋರುಗದ ಬೆಳೆದ ರೂಪಗಳು ಹೆಚ್ಚು ಹೆಚ್ಚು ರೂಪಗಳನ್ನ ಪಡೆದುಕೊಂಡು ಕೂಡೊಟ್ಟುಗಳಾಗಿವೆ. ಅದೆ ರೀತಿ ಈ ರೂಪಗಳು ಬೇರೆ ರೂಪಗಳಿಗೆ ಸೇರಿಯೂ ಕೂಡೊಟ್ಟುಗಳಾಗಿವೆ. ಆದರೆ ಈ ಮೇಲೆ ಹೇಳಿದಂತೆ ನಡುತೋರುಗದ ಬೆಳೆದ ರೂಪಗಳು ಮೇಲ್ರೂಪಗಳಾಗಿರುವವುಗಳನ್ನು ಮಾತ್ರ ಇಲ್ಲಿ ವಿವರಿಸಲಾಗಿದೆ.

**ಪಟ್ಟಿ ೩: **-ಇ/*-ಈ* ಇದರ ಬೆಳೆದ ರೂಪಗಳು ಮೇಲ್ರೂಪಗಳಾಗಿರುವ ಕೂಡೊಟ್ಟುಗಳು**

*-ಇನ್ಕ*
*-ಇನ್ಕೆ*
*-ಇನ್ಗೆ*
**-ಇನ್ದನ್*
*-ಇನ್ದ*
*-ಇನ್ದೆ*
*-ಇನ್ದಲಿ*
*-ಇನ್ದಲು*
*-ಇನ್ದಿನ್*
*-ಇವದ*
*-ಇವದುಳ್*

೭. ಕನ್ನಡದ ವಿಬಕ್ತಿ ರೂಪಗಳ ಮೂಲ ಮತ್ತು ಬೆಳವಣಿಗೆಯನ್ನ ಅರ್ತ ಮಾಡಿಕೊಳ್ಳುವುದಕ್ಕೆ ಮೂಲಕನ್ನಡಕ್ಕೆ ಮತ್ತೆ ಕಟ್ಟಿರುವ ರೂಪಗಳ ಪರಿಚಯ ಬೇಕಾಗುತ್ತದೆ. ಆದ್ದರಿಂದ ಮೂಲ ಕನ್ನಡಕ್ಕೆ ಮತ್ತೆ ಕಟ್ಟಿರುವ ಎಲ್ಲ ವಿಬಕ್ತಿ ರೂಪಗಳನ್ನು ಇಲ್ಲಿ ಕೊಡಲಾಗಿದೆ.

**ಪಟ್ಟಿ ೪: ಮೂಲಕನ್ನಡಕ್ಕೆ ಮತ್ತೆ ಕಟ್ಟಿದ ವಿಬಕ್ತಿ ರೂಪಗಳು:**

**೧. ತೋರುಗ ಮೂಲ:**

**ದೂರ ತೋರುಗ:** **-ಅ/*-ಆ > *-ಆನ್/*-ಆಲ್/*-ಆಳ್, *-ಅನ್/*-ಅಲ್/*-ಅಳ್*

**ದೂರ ತೋರುಗದಿಂದ ಬೆಳೆದ ಕೂಡೊಟ್ಟು:** **-ಆನ್ತನ್*

**ನಡುತೋರುಗ:** **-ಉ/*-ಊ> *-ಊನ್/*-ಊಲ್/*-ಊಳ್, *-ಉನ್/*-ಉಲ್/*-ಉಳ್*

**ಸಮೀಪ ತೋರುಗ:** **-ಇ/*-ಈ> *-ಇನ್/*-ಇಲ್*

**ಸಮೀಪ ತೋರುಗದಿಂದ ಬೆಳೆದ ಕೂಡೊಟ್ಟು:** **-ಇನ್ತನ್*

**೨. ನೆಲೆವಾಚಿ ಹೆಸರ್ಪದ:** **-ಅಕನ್, *ತಾವು, *ವಟಿಮೊ.*

**೩. ಕ್ರಿಯಾಪದ:** **ಪಾಯ್*

ವಿಬಕ್ತಿ ರೂಪಗಳಿಗೆ ಸಂಬಂದಪಟ್ಟ ಕೆಲವು ಮಹತ್ವದ ವಿಚಾರಗಳ ಅರಿವು ಇಲ್ಲಿ ಅವಶ್ಯ. ವಿಬಕ್ತಿ ರೂಪಗಳ ಬೆಳವಣಿಗೆಯನ್ನ ನಿಯಂತ್ರಿಸುವ ಕೆಲಸವನ್ನ ಇವು ಮಾಡುತ್ತಿವೆ. ಹಾಗಾಗಿ ಅವುಗಳನ್ನ ಇಲ್ಲಿ ಎತ್ತಿ ಹೇಳಲಾಗಿದೆ.

೧. ದ್ರಾವಿಡದಾಗ ಎಲ್ಲ ವಿಬಕ್ತಿಗಳು ಮೊದಲು ನೆಲೆಯನ್ನ ಹೇಳುವುದಕ್ಕೆ ಬಳಕೆಯಾಗುತ್ತಿದ್ದವು

೨. ಮೊದಲು ನೆಲೆಯೊಟ್ಟಾಗಿದ್ದವುಗಳು ಮುಂದೆ ಬೇರೆ ಕಾರಕಗಳನ್ನ ಹೇಳಲು ವಲಸೆ ಬಂದಿವೆ

೩. ದ್ರಾವಿಡದಾಗ ಎರಡು ಇಲ್ಲವೆ ಹೆಚ್ಚು ವಿಬಕ್ತಿ ಒಟ್ಟುಗಳು ಸೇರಿ ಕೂಡೊಟ್ಟುಗಳಾಗಬಹುದು

(ವಿಬಕ್ತಿಗಳ ಮೂಲ ಮತ್ತು ಬೆಳವಣಿಗೆ ಮತ್ತು ಕಾರಕಗಳ ಬೆಳವಣಿಗೆ ಮೊದಲಾದ ಮಾತುಕತೆಗೆ ನೋ. ಕನ್ನಡ ವಿಬಕ್ತಿ ರೂಪಗಳ ಅಯ್ತಿಹಾಸಿಕ ಬೆಳವಣಿಗೆ,ಕೋಡಗುಂಟಿ,ಬಂಡಾರ ಪ್ರಕಾಶನ, ಮಸ್ಕಿ,೨೦೧೦).

ಕೆಲವು ರೂಪಗಳು ಎರಡು ಹಂತದಾಗ ಬೆಳೆದಿರುವ ಸಾದ್ಯತೆಯನ್ನ ಹೊಂದಿವೆ. ಈಗಿನ ಬರಿಗೆಯಾಗ ಅವುಗಳ ಬೆಳವಣಿಗೆಯನ್ನ ಮೊದಲ ಮತ್ತು ಎರಡನೆಯ ಹಂತದ ಬೆಳವಣಿಗೆ ಎಂದೆ ತೋರಿಸಿದೆ. ಅದೇ ರೀತಿ ಕೆಲವು ರೂಪಗಳು ಎರಡು ಬಗೆಯಾಗಿ ಬೆಳೆದಿರುವ ಸಾದ್ಯತೆಯನ್ನ ಹೊಂದಿವೆ. ಅಂತಾ ಹೊತ್ತಿನಾಗ ಎರಡೂ ಸಾದ್ಯ ಬೆಳವಣಿಗೆಗಳನ್ನ ತೋರಿಸಲಾಗಿದೆ.

ವಿಬಕ್ತಿ ರೂಪವನ್ನ ವಿವರಿಸಿರುವ ಬಗೆ ಹೀಗಿದೆ. ಮೊದಲು ರೂಪವನ್ನ ಕೊಟ್ಟು ಅದರ ಮೂಲ ರೂಪ ಮತ್ತು ಬೆಳವಣಿಗೆಯನ್ನ ತೋರಿಸಿದೆ, ಅದು ರಚನೆಯಾಗಿದ್ದರೆ ಆ ರಚನೆಯನ್ನ ಒಡೆದು ತೋರಿಸಿ ಅದರೊಳಗಿನ ಒಟ್ಟುಗಳ ಬೆಳವಣಿಗೆಯನ್ನ ಬಿಡಿಸಿದೆ. ಆ ರೂಪ ಯಾವ ಕಾರಕಕ್ಕೆ ಬಳಕೆಯಾಗುತ್ತದೆ ಮತ್ತು ಯಾವ ಒಳನುಡಿಯಾಗ/ಒಳನುಡಿಗಳಾಗ ಬಳಕೆಯಲ್ಲಿದೆ ಎಂದು ಹೇಳಿದೆ. ನಂತರ ಆ ರೂಪವು ಬಳಕೆಯಲ್ಲಿರುವ ಒಳನುಡಿಯಿಂದ ಬಳಕೆಯನ್ನ ಕೊಟ್ಟಿದೆ. ಹೆಚ್ಚಿನ ಒಳನುಡಿಗಳಾಗ

ಆ ರೂಪವು ಬಳಕೆಯಲ್ಲಿದ್ದರೆ ಅವಶ್ಯಕತೆಯನ್ನ ಗಮನಿಸಿ ಹೆಚ್ಚಿನ ಒಳನುಡಿಗಳಿಂದ ಬಳಕೆಗಳನ್ನ ಕೊಟ್ಟಿದೆ. ಈ ಬರಿಗೆಂಯಾಗ ಕಾರಕಗಳನ್ನ ಈ ಕೆಳಗಿನಂತೆ ಹೊಂದಿಸಿಕೊಳ್ಳಲಾಗಿದೆ.

**ಪಟ್ಟಿ ೫: ಕಾರಕ ಸಂಬಂದಗಳ ಹೊಂದಿಕೆ:**

| | |
|---|---|
| ಮಾಡುಗ | (ಕರ್ತೃ) |
| ನೆಲೆ | (ಅದಿಕರಣ) |
| ಗುರಿ | (ಸಂಪ್ರದಾನ) |
| ಆಗುಗ | (ಕರ್ಮ) |
| ಸಾದನ | (ಕರಣ) |
| ಮೂಲ | (ಅಪಾದಾನ) |

೮. ಇನ್ನು ಒಂದೊಂದು ರೂಪಗಳನ್ನ ಮಾತುಕತೆಗೆ ಎತ್ತಿಕೊಳ್ಳಬಹುದು.

೮.೧ **–ಇ/*–ಈ* ಇದರ ಬೆಳೆದ ರೂಪಗಳು.

೮.೧.೧.೧ **–ಇ. *–ಇ*

ರೂಪ, ರಚನೆ ಮತ್ತು ಬೆಳವಣಿಗೆ: ಇದು ಮೂಲ ರೂಪವಾಗಿದೆ.

ಬಳಕೆ: ನೆಲೆ ಕಾರಕಕ್ಕೆ ಪೂರ್ವದ ಹಳೆಗನ್ನಡ, ಹಳೆಗನ್ನಡ ಮತ್ತು ಹೊಸಗನ್ನಡಗಳಾಗ.

ಉದಾ.:

ಪೂರ್ವದ ಹಳೆಗನ್ನಡ > *ಆ ಕೆಳಗೆ ನೆಲದಿ ಮಾನದಾ ಸದ್ ದಮ್ಮದಾ* (ಶಾಸನ ಸಂ. ೩೭)
> ಆ ಕೆಳಗೆ ನೆಲದಲ್ಲಿ ಮಾನದ ಸದ್ದರ್ಮದ

ಹಳೆಗನ್ನಡ > *ಇ ಬಿಜಗವುಂಡ ತುರುಗಾಳಗದಿ ಕಾದಿ ಸತ್ತಂ*(ಶಾಸನ ಸಂ.೧೦೧೮)
> ಈ ಬಿಜಗವುಡ ತುರುಕಾಳಗದಲ್ಲಿ ಹೋರಾಡಿ ಸತ್ತನು

ಹೊಸಗನ್ನಡ > *ಹರುಶದಿ ಕುಣಿಕುಣಿದಾಡಿದರು*

೮.೧.೨.೧ **–ಇನ್:*

ರೂಪ, ರಚನೆ ಮತ್ತು ಬೆಳವಣಿಗೆ: **–ಇ/*–ಈ> *–ಇನ್*

ಬಳಕೆ: ನೆಲೆ ಕಾರಕಕ್ಕೆ ಸಾದನ ಕಾರಕಕ್ಕೆ ಮತ್ತು ಮೂಲ ಕಾರಕಕ್ಕೆ ಪೂರ್ವದ ಹಳೆಗನ್ನಡದಿಂದ ನಡುಗನ್ನಡಗಳವರೆಗೆ, ಅದೆ ರೀತಿ ಸಂಬಂದವನ್ನ ಹೇಳುವುದಕ್ಕೆ ಬಡಗನ್ನಡಗಳಾಗ.

ಉದಾ.:

ನೆಲೆ ಕಾರಕಕ್ಕೆ,

ಪೂರ್ವದ ಹಳೆಗನ್ನಡ > *ಕಮಲೋಪಮಂಗ ಸುಬಮುಮ್ ಸ್ವಲ್ಲೋಕದಿಂ ನಿಶ್ಚಿತಮ್* (ಶಾಸನ ಸಂ. ೪೫)
> ಕಮಲೋಪಮಂಗ ಶುಬವನ್ನು ತನ್ನ ಲೋಕದಲ್ಲಿ ನಿಶ್ಚಿತನು (?)

ಹಳೆಗನ್ನಡ > *ಸುಕರವಪುದಾಗಿರೆ ಕರ್ಣಾಟಕದಿಂ ಕಾವ್ಯಲೋಕವಮಂ ವಿರಚಿಸುವೆಂ* (ನಾಗವರ್ಮ.೧೯೬)
> ಸುಕರವದಾಗಿರಲು ಕರ್ನಾಟಕದಲ್ಲಿ (ಕನ್ನಡದಲ್ಲಿ) ಕಾವ್ಯಾವಲೋಕವನ್ನು ಬರೆಯುವೆನು

ನಡುಗನ್ನಡ > *ಕೋಕನದಗರ್ಭನಿಂ* (೧.೭.೧), ಜಗನ್ನಾತ ವಿಜಯಂ
> ಕೋಕನದ ಹೊಟ್ಟೆಯಲ್ಲಿ

ಸಾದನ ಕಾರಕಕ್ಕೆ
ಪೂರ್ವದ ಹಳೆಗನ್ನಡ > *ಕ್ರಮದಿನ್* (೩.೩), ಗಂಗ – ಅವಿನೀತನ ಶಾಸನ.
> ಕ್ರಮದಿಂದ
ಹಳೆಗನ್ನಡ > *ಜಲದಿಂ* (೨.೪.೨), ಗದಾಯುದ್ಧ ಸಂಗ್ರಹಂ
> ಜಲದಿಂದ
ನಡುಗನ್ನಡ > *ನಲದಿಂ* (೧.೮.೪), ನೇಮಿನಾತ ಪುರಾಣಂ
> ನಲವಿನಿಂದ

ಮೂಲ ಕಾರಕಕ್ಕೆ,
ಪೂರ್ವದ ಹಳೆಗನ್ನಡ > *ಅದುದಿಂ* (೭.೯), ಪುನ್ನಾಡಿನ ಸಾಮಂತ ರಾಜ – ರವಿದತ್ತ
> ಅದರಿಂದ
ಹಳೆಗನ್ನಡ > *ಬಾಲಕಾಲದಿಂ* (೨.೨.ಗ.೧.೨), ಕರ್ನಾಟಕ ಪಂಚತಂತ್ರಂ
> ಬಾಲಕಾಲದಿಂದ
ನಡುಗನ್ನಡ > *ಶಬ್ದದಿನಾನಾವಿಂದ್ರಿಯದ ವಿಶಯಮಂ* (೧.೧), ಶಬ್ದಮಣಿದರ್ಪಣ
> ಶಬ್ದದಿಂದ ಆ ಆ ಇಂದ್ರಿಯದ

ಸಂಬಂದಕ್ಕೆ
ಮಸ್ಕಿ ಕನ್ನಡ > *ಬುಕ್ಕಿನ್ ಕವರು*
> ಪುಸ್ತಕದ ಹೊದಿಕೆ

### ೮.೧.೨.೨ –ಇನ

ರೂಪ, ರಚನೆ ಮತ್ತು ಬೆಳವಣಿಗೆ: *-ಇ/*-ಈ>*-ಇನ್>-ಇನ

ಬಳಕೆ: ಸಂಬಂದವನ್ನ ಹೇಳುವುದಕ್ಕೆ ಹೊಸಗನ್ನಡದಾಗ ಅದೇ ರೀತಿ ಬಡಗನ್ನಡಗಳಾಗ.

ಉದಾ.: ಸಂಬಂದಕ್ಕೆ,
ಹೊಸಗನ್ನಡ > *ಕಾರಿನ ಬಾಗಿಲು*
ಮಸ್ಕಿ ಕನ್ನಡ > *ಪೇಪರಿನ ಬಂಡಲ್ಲು*
> ಹಾಳೆಯ ಕಟ್ಟು

### ೮.೧.೩.೧ *-ಇಲ್

ರೂಪ, ರಚನೆ ಮತ್ತು ಬೆಳವಣಿಗೆ: *-ಇ/*-ಈ>*-ಇಲ್

ಬಳಕೆ: ಮೂಲ ಕಾರಕಕ್ಕೆ ಹಳೆಗನ್ನಡದಾಗ.

ಉದಾ.:
ಹಳೆಗನ್ನಡ > *ನಲ್ವತ್ತುನಾಳ ಶ್ರೀಗೋಯಿಲ್ ತಿರುಮುತ್ತಿ[ಯಿಲ್]* . . . *ದಿಕ್ಕ* (ಶಾಸನ ಸಂ. ೯೨೦)
> ನಲವತ್ತುನಾಳ (ನಾಲ್ಕು?) ಶ್ರೀಗುಡಿ ತಿರುಮುತ್ತಿಯಲ್ಲಿ

### ೮.೧.೩.೨ –ಇಲ್ಲಿ

ರೂಪ, ರಚನೆ ಮತ್ತು ಬೆಳವಣಿಗೆ: *-ಇ/*-ಈ>*-ಇಲ್>-ಇಲ್ಲಿ

ಬಳಕೆ: ಮೂಲ ಕಾರಕಕ್ಕೆ ಹಳೆಗನ್ನಡದಾಗ.

ಹಳೆಗನ್ನಡ > *ಹರಾದ್ರಿಯ ತಟಿಪ್ಪಲಲ್ಲಿ* (೩.೨೦.೧), ಕರ್ನಾಟಕ ಕಾದಂಬರಿ
> ಹರಾದ್ರಿಯ ತಪ್ಪಲಲ್ಲಿ

೮.೨ *-ಇ/*-ಈ ಇದರ ಬೆಳೆದ ರೂಪಗಳು ಮೇಲ್ರೂಪಗಳಾಗಿರುವ ಕೂಡೊಟ್ಟುಗಳು.

**೮.೨.೧.೧ -ಇನ್ತ:**

ರೂಪ, ರಚನೆ ಮತ್ತು ಬೆಳವಣಿಗೆ: **-ಇ/*-ಈ>*-ಇನ್+*-ಅಕನ್=*-ಇನ್ಕನ್>-ಇನ್ಕ*

ಬಳಕೆ: ಮೂಲ ಕಾರಕಕ್ಕೆ ಕೋಲಾರ ಕನ್ನಡದಾಗ.

ಉದಾ.:

ಕೋಲಾರ ಕನ್ನಡ > *ಊರ್ನಿನ್ತ ಬಂದವ್ರೆ*
> ಊರಿನಿಂದ ಬಂದಿದ್ದಾರೆ

**೮.೨.೧.೨ -ಇನ್ಕೆ:**

ರೂಪ, ರಚನೆ ಮತ್ತು ಬೆಳವಣಿಗೆ: **-ಇ/*-ಈ>*-ಇನ್+*-ಅಕನ್=*-ಇನ್ಕನ್>-ಇನ್ಕೆ*

ಬಳಕೆ: ಗುರಿ ಕಾರಕಕ್ಕೆ ನಡುಗನ್ನಡದಾಗ.

ಉದಾ.:

ನಡುಗನ್ನಡ > *ಒಳಯಿನ್ತ* (ಸವದತ್ತಿಮಟ.೧೯೮೮.೪೮)
> ಒಳಗೆ

**೮.೨.೧.೩. -ಇನ್ಗೆ:**

ರೂಪ, ರಚನೆ ಮತ್ತು ಬೆಳವಣಿಗೆ: **-ಇ/*-ಈ>*-ಇನ್+*-ಅಕನ್=*-ಇನ್ಕನ್>-ಇನ್ಕೆ*

ಬಳಕೆ: ಗುರಿ ಕಾರಕಕ್ಕೆ ಹಳೆಗನ್ನಡದಾಗ.

ಉದಾ.:

ಹಳೆಗನ್ನಡ > *ಪೆಂಪಿಂಗಿನಿತರ್ಕ್ಕಾಗರಮಿದೆನ್ದು* (೩೭/೮), (ಶಾಸನ ಸಂ. ೯೬೩)
> ಪೆಂಪಿಗೆ ಇಶ್ಟಕ್ಕೆ ಆಗರವು ಇದೆಂದು

**೮.೨.೨.೧ *-ಇನ್ದನ್:**

ರೂಪ, ರಚನೆ ಮತ್ತು ಬೆಳವಣಿಗೆ: **-ಇ/*-ಈ>*-ಇನ್+*-ಅತನ್=*-ಇನ್ತನ್>-ಇನ್ದನ್*

ಬಳಕೆ: ಸಾದನ ಕಾರಕಕ್ಕೆ ಹಳೆಗನ್ನಡ ಮತ್ತು ನಡುಗನ್ನಡಗಳಾಗ ಮತ್ತು ಮೂಲ ಕಾರಕಕ್ಕೆ ಹಳೆಗನ್ನಡದಾಗ.

ಉದಾ.:

ಸಾದನ ಕಾರಕಕ್ಕೆ,

ಹಳೆಗನ್ನಡ > ***ಕಲಿಕಾಳೋದ್ರೇಕದಿಂದಂ*** (೭) ಕೋಗಳಿ ಶಾಸನ
> ಕಲಿಕಾಳೋದ್ರೇಕದಿಂದ

ನಡುಗನ್ನಡ > *ನಟ್ಟಕಲ್ಲಿಂದಂ* (೭), ಕಟ್ಟಿನಹೊಳೆ ತಾಮ್ರಶಾಸನ
> ನೆಟ್ಟ ಕಲ್ಲಿನಿಂದ

ಮೂಲ ಕಾರಕಕ್ಕೆ,

ಹಳೆಗನ್ನಡ > *ದುರ್ವಿನೀತನಿಂದಂ* (೧೫), ಕೋಗಳಿ ಶಾಸನ
> ದುರ್ವಿನೀತನಿಂದ

**೮.೨.೨.೨ –ಇನ್ದ**

ರೂಪ, ರಚನೆ ಮತ್ತು ಬೆಳವಣಿಗೆ: **–ಇ/*–ಈ>*–ಇನ್+*–ಅತನ್=*–ಇನ್ತನ್>–ಇನ್ದನ್>–ಇನ್ದ*

ಬಳಕೆ: ಸಾದನ ಕಾರಕ ಮತ್ತು ಮೂಲ ಕಾರಕಕ್ಕೆ ಪೂರ್ವದ ಹಳೆಗನ್ನಡದಿಂದ ಹೊಸಗನ್ನಡದವರೆಗೆ.

ಉದಾ.:

ಸಾದನ ಕಾರಕಕ್ಕೆ,

ಪೂರ್ವದ ಹಳೆಗನ್ನಡ > *ದೇವದಂಡದಿಂದ* (ನರಸಿಂಹಯ್ಯ.೧೯೪೧.ಪು.೧೪೦).
> ದೇವದಂಡದಿಂದ

ಹಳೆಗನ್ನಡ > *ಬಲ್ಲಾಳ್ತನದಿನ್ದಾಹವಮಲ್ಲನ* (೮), ಲಕ್ಕುಂಡಿ ಶಾಸನ
> ಬಲ್ಲಾಳ್ತನದಿಂದ ಆಹವಮಲ್ಲನ

ನಡುಗನ್ನಡ > *ತೆರೆಯಿಂದಂ (೧.೧೮.೧),* ಹಾಲಾಸ್ಯ ಪುರಾಣಂ
> ತೆರೆಯಿಂದ

ಹೊಸಗನ್ನಡ > *ಉಳಿಯಿನ್ದ ಕೆತ್ತಿದರು.*

ಮೂಲ ಕಾರಕಕ್ಕೆ,

ಪೂರ್ವದ ಹಳೆಗನ್ನಡ > *ತತ್ಪ್ರಸಾದದಿನ್ದ* (೬.೨), (ಶಾಸನ ಸಂ. ೬೯೮)
> ಆ ಪ್ರಸಾದದಿಂದ

ಹಳೆಗನ್ನಡ > *ಪೂರ್ವಪುರುಶರಿಂದಾದ* (೨.೩.ಗ.೧೬.೧೧), ಕರ್ನಾಟಕ ಪಂಚತಂತ್ರಂ
> ಹಿಂದಿನ ಪುರುಶರಿಂದ ಆದ

ನಡುಗನ್ನಡ > *ಜಂಗಮಮುಖದಿಂದ* (೧.೮.೧೮.೫),ಬಸವಣ್ಣನವರ ವಚನ ಸಂಪುಟ
> ಜಂಗಮ ಮುಖದಿಂದ

ಹೊಸಗನ್ನಡ> *ದಾರವಾಡದಿಂದ ಹೊರಟೆ*

**೮.೨.೨.೩ –ಇನ್ದೆ**

ರೂಪ, ರಚನೆ ಮತ್ತು ಬೆಳವಣಿಗೆ: **–ಇ/*–ಈ>*–ಇನ್+*–ಅತನ್=*–ಇನ್ತನ್>–ಇನ್ದನ್>–ಇನ್ದೆ*

ಬಳಕೆ: ಸಾದನ ಕಾರಕಕ್ಕೆ ನಡುಗನ್ನಡದಾಗ ಮತ್ತು ಮೂಲ ಕಾರಕಕ್ಕೆ ಹಳೆಗನ್ನಡದಾಗ.

ಉದಾ.:

ಸಾದನ ಕಾರಕಕ್ಕೆ,

ನಡುಗನ್ನಡ > *ತಂಡುಲದಿಂದ* (೪),
ಮೂಲ ಕಾರಕಕ್ಕೆ,
ಹಳೆಗನ್ನಡ > *ವಿಕ್ರಮದಿಂದ* (೧.೨೬.೨), ಪಂಪಬಾರತಂ
> ವಿಕ್ರಮದಿಂದ

**೮.೨.೩.೧ -ಇನ್ದಲಿ**

ರೂಪ, ರಚನೆ ಮತ್ತು ಬೆಳವಣಿಗೆ: **-ಇ/*-ಈ>*-ಇನ್+*-ಅತನ್=*-ಇನ್ತನ್>-ಇನ್ದನ್>-ಇನ್ದ+-ಅಲಿ(<*-ಅಲ್<*-ಅ/*-ಆ)*

ಬಳಕೆ: ಸಾದನ ಮತ್ತು ಮೂಲ ಕಾರಕಗಳಿಗೆ ನಡುಗನ್ನಡದಾಗ.

ಉದಾ.:

ಸಾದನ ಕಾರಕ್ಕೆ

ನಡುಗನ್ನಡ > *ಲೀಲೆಯಿಂದಲಿ* (೧.೨೦.೫) ಪ್ರಬುಲಿಂಗಲೀಲೆ
> ಲೀಲೆಯಿಂದ

ಮೂಲ ಕಾರಕಕ್ಕೆ,
ನಡುಗನ್ನಡ > *ಲಾಗಿನಿಂದಲಿ* (೧.೯.೪) ಪ್ರಬುಲಿಂಗಲೀಲೆ
> ಲಾಗಿನಿಂದ

**೮.೨.೩.೨ -ಇನ್ದಲು**

ರೂಪ, ರಚನೆ ಮತ್ತು ಬೆಳವಣಿಗೆ: **-ಇ/*-ಈ>*-ಇನ್+*-ಅತನ್=*-ಇನ್ತನ್>-ಇನ್ದನ್>-ಇನ್ದ+-ಅಲು(<*-ಅಲ್<*-ಅ/*-ಆ)*

ಬಳಕೆ: ಸಾದನ ಮತ್ತು ಮೂಲ ಕಾರಕಗಳಿಗೆ ನಡುಗನ್ನಡದಾಗ.

ಉದಾ.:

ನಡುಗನ್ನಡ > *ಗದ್ದೆಯಿಂದಲು*
> ಗದ್ದೆಯಿಂದ

**೮.೨.೪.೧ -ಇನ್ದಿನ್**

ರೂಪ, ರಚನೆ ಮತ್ತು ಬೆಳವಣಿಗೆ: **-ಇ/*-ಈ>*-ಇನ್+*-ಅತನ್=*-ಇನ್ತನ್>-ಇನ್ದನ್>-ಇನ್ದ+*-ಇನ್(<*-ಇ/*-ಈ)*

ಬಳಕೆ: ಸಾದನ ಕಾರಕಕ್ಕೆ ನಡುಗನ್ನಡದಾಗ.

ಉದಾ.:

ಹಳೆಗನ್ನಡ > *ಗುಣದಿಂದಿಮ್* (ಗಾಯಿ.೧೯೪೬.೪೯)
> ಗುಣದಿಂದ

**೮.೨.೫.೧ -ಇವದ**

ರೂಪ,ರಚನೆ ಮತ್ತು ಬೆಳವಣಿಗೆ:*ಇ/*ಈ>ಇವ(?)+ಅದ(<ಅಕ್<*-ಅತನ್)

ಬಳಕೆ: ನೆಲೆ ಕಾರಕಕ್ಕೆ ಪೂರ್ವದ ಹಳೆಗನ್ನಡದಾಗ.

ಉದಾ.:

ಪೂರ್ವದ ಹಳೆಗನ್ನಡ > *ಬಾರಣಸಿವದ ಸಾಸಿರ ಕವಿಲೆಯಂ ಕೊನ್ದೊನಕ್ಕುಂ* (ಶಾಸನಸಂ.೩೩೨)
> ಬಾರಣಾಸಿಯಲ್ಲಿ ಸಾವಿರ ಆಕಳನ್ನು ಕೊಂದವನಾಗುವನು

**೮.೨.೫.೨ –*ಇವದುಳ್.***

ರೂಪ,ರಚನೆ ಮತ್ತು ಬೆಳವಣಿಗೆ:*ಇ/*–ಈ>ಇವೆ(?)+ಅದ(<ಅತ್<*ಅತನ್)=–ಇವದ+*ಆಳ್(<*–ಉ/*–ಊ)

ಬಳಕೆ: ನೆಲೆ ಕಾರಕಕ್ಕೆ ಪೂರ್ವದ ಹಳೆಗನ್ನಡದಾಗ.


ಉದಾ.:

ಪೂರ್ವದ ಹಳೆಗನ್ನಡ > *ಬಾರಣಾಸಿವದುಳ್ ಸಾಸಿರ್ಬ್ಬರ್ ಪ್ಪಾ[ರ್ವ್ವರ]ನ್ ಅ]ನಿ[ತು ಕವಿಲೆ]ಯುಮಾನ್ ಕೊನ್ದೋರ ಲೋಕಕ್ಕೆ*
(ಶಾಸನ ಸಂ. ೪೩೭)
> ವಾರಣಾಸಿಯಲ್ಲಿ ಸಾವಿರ ಮಂದಿ ಬ್ರಾಹ್ಮಣರನ್ನೂ ಅಷ್ಟು ಆಕಳುಗಳನ್ನೂ ಕೊಂದವರ ಲೋಕಕ್ಕೆ

# ೩. ತುಳುನಾಡಿನ ನಾಗಕೋಲ

–ಡಾ. ಲಕ್ಷ್ಮೀ ಜಿ. ಪ್ರಸಾದ

ನಾಗಾರಾಧನೆ ಜಗತ್ತಿನ ಎಲ್ಲೆಡೆ ಪ್ರಚಲಿತವಿರುವ ಆರಾಧನಾ ಪದ್ಧತಿ, ನಾಗನನ್ನು ಬೇರೆ ಬೇರೆ ರೂಪದಲ್ಲಿ ನಾನಾ ರೀತಿಯಲ್ಲಿ ಆರಾಧಿಸುತ್ತಾರೆ. ಕ್ರಿಸ್ತ ಪೂರ್ವದಿಂದಲೇ ನಾಗಾರಾಧನೆ ನಡೆಯುತ್ತಾ ಬಂದಿರುವುದಕ್ಕೆ ಅನೇಕ ಪುರಾವೆಗಳು ಸಿಗುತ್ತವೆ. ಒಂದೆಡೆ ಪಶ್ಚಿಮ ಘಟ್ಟ ಹಾಗೂ ಇನ್ನೊಂದೆಡೆ ಸಮುದ್ರದಿಂದ ಆವರಿಸಲ್ಪಟ್ಟ ತುಳುನಾಡೆಂದು ಪ್ರಸಿದ್ಧವಾಗಿರುವ ತುಳು ಭಾಷಿಗರು ಇರುವ ಉಡುಪಿ ಕಾಸರಗೋಡು ಸೇರಿದಂತೆ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೂಡ ನಾನಾ ರೀತಿಯ ನಾಗಾರಾಧನಾ ಪದ್ಧತಿಗಳು ಪ್ರಚಲಿತವಿದೆ. ತುಳುನಾಡಿನಲ್ಲಿ ವೈದಿಕ ಮೂಲ, ತಾಂತ್ರಿಕ ಮೂಲ ಹಾಗೂ ಜನಪದ ಮೂಲ ನಾಗಾರಾಧನಾ ಪದ್ಧತಿಗಳು ಪ್ರಚಲಿತವಿದೆ.



ನಾಗ ಮತ್ತು ಬೆರ್ಮೆರ್ ಭೂತ, ಅರಿಬೈವಿ, ಮಂಜೆಪ್ಪರ ಕಾಸರಗೋಡು (ಚಿತ್ರ : ೧)

ಸರ್ಪ ಸಂಸ್ಕಾರ, ಬ್ರಹ್ಮಚಾರಿ ಆರಾಧನೆ, ನಾಗ ಪ್ರತಿಷ್ಠೆ ಮೊದಲಾದವುಗಳು ವೈದಿಕ ಮೂಲ ನಾಗಾರಾಧನೆಗಳು. ನಾಗ ಮಂಡಲ, ಢಕ್ಕೆ ಬಲಿ, ನಾಗದರ್ಶನ, ಆಶ್ಲೇಷಾ ಬಲಿ ಮೊದಲಾದವು ತಾಂತ್ರಿಕ ಮೂಲ ಆರಾಧನೆಗಳು, ತನುಎರೆಯುವುದು, ನಾಗಾರ್ಪಣೆ, ಕಾಡ್ಯನಾಟ, ಪಾಣಾರಾಟ, ನಾಗ ಕೋಲಗಳು ಜನಪದ ಮೂಲ ಆರಾಧನೆಗಳಾಗಿವೆ.

ನಾಗನನ್ನು ಭೂತತ್ವಕ್ಕೇರಿಸಿ, ಭೂತದ ನೆಲೆಯಲ್ಲಿ ಆರಾಧಿಸುವುದು ನಾಗಕೋಲದಲ್ಲಿ ಕಂಡುಬರುತ್ತದೆ. ತುಳುನಾಡಿನಲ್ಲಿ ನಾಗನನ್ನು ಬೆರ್ಮೆರೊಂದಿಗೆ ಸಮೀಕರಿಸಿ "ನಾಗ ಬೆರ್ಮೆರ್" ಎಂದು ಆರಾಧಿಸುವುದು ಹೆಚ್ಚಾಗಿ ಕಂಡುಬರುತ್ತದೆ. ಕೆಲವೆಡೆಗಳಲ್ಲಿ ನಾಗ ಮತ್ತು ಬೆರ್ಮೆರನ್ನು ಬೇರೆ ಬೇರೆಯಾಗಿ ಆರಾಧಿಸುತ್ತಾರೆ. ಬೆರ್ಮೆರ್ ತುಳುನಾಡಿನ ಅಧಿದೈವವಾಗಿದ್ದು ಅರಸು ದೈವವಾಗಿದೆ. ಅರಸು ದೈವಗಳಂತೆ ಈ ಭೂತಕ್ಕೆ ದೊಡ್ಡದಾದ ಮೀಸೆ, ಹಣೆಯಲ್ಲಿ ನಾಮ ಹಾಗೂ ಕೈಯಲ್ಲಿ ಬಿಲ್ಲು ಬಾಣಗಳ ಅಲಂಕಾರವಿರುತ್ತದೆ. ಆದರೆ ನಾಗಭೂತದ ಅಲಂಕಾರ ಬಹಳ ಸರಳವಾದುದು. ಇತರ ಭೂತಗಳಂತೆ ನಾಗ ಭೂತಕ್ಕೆ ತೆಂಗಿನ ತಿರಿಯ ಅಲಂಕಾರವಿರುವುದಿಲ್ಲ. ಒಂದು ಬಿಳಿಯ ಬಟ್ಟೆಯನ್ನು ಸೊಂಟಕ್ಕೆ ಸುತ್ತಿಕೊಳ್ಳುತ್ತಾರೆ. ಕಾಲಿಗೆ ಕಾರ್ಪಾಳೆ ಮತ್ತು ಗಗ್ಗರ ಇರುತ್ತದೆ. ಮುಖಕ್ಕೆ ಅರದಳ ಹಚ್ಚಿಕೊಳ್ಳುವುದಿಲ್ಲ. ಬದಲಿಗೆ ಕಪ್ಪು ಬಣ್ಣದಲ್ಲಿ ಹಳದಿ ರೇಖೆಗಳನ್ನು ರೇಖಿಸುತ್ತಾರೆ. ಈ ಹಳದಿ ರೇಖೆಗಳು ನಾಗನನ್ನು ಸಂಕೇತಿಸುತ್ತವೆ. ಇತರ ಭೂತಗಳಂತೆ ನಾಗ ಭೂತಕ್ಕೆ ಅಣಿ ಇರುವುದಿಲ್ಲ.

ತಲೆಗೆ ಮುಡಿ ಇರುವುದಾದರೂ ಇದನ್ನು ಕಟ್ಟಿಕೊಳ್ಳುವುದಿಲ್ಲ. ಬದಲಿಗೆ ಹಿಡಿಯುತ್ತಾರೆ. ಅಡಿಕೆಯ ಹಾಳೆಯನ್ನು ನಾಗಾಕಾರದಲ್ಲಿ ಕತ್ತರಿಸಿ, ಕಪ್ಪು ಬಣ್ಣದಲ್ಲಿ ಸರ್ಪಾಕೃತಿಯನ್ನು ರೇಖಿಸಿ ಮುಡಿಯನ್ನು ರಚಿಸುತ್ತಾರೆ. ಇದನ್ನು ನಾಗಮುಡಿ ಎಂದು ಕರೆಯುತ್ತಾರೆ. ಸುಗ್ಗಿ ಬೇಸಾಯದಲ್ಲಿ ಕಂಬಳ ಕೋರಿಯೆಂದು ನಾಗಕೋಲ ಇರುತ್ತದೆ. ಇತರ ಭೂತಗಳ ಕೋಲದಲ್ಲಿರುವಂತೆ



ಪೂಕರೆ ಕಂಬ ನೆಡುತ್ತಿರುವುದು–ಅರಿಬೈಲು, ಮಂಜೆಪ್ಪರ, ಕಾಸರಗೋಡು (ಚಿತ್ರ–೨)

ನಾಗಕೋಲಕ್ಕೆ ಗಗ್ಗರದೆಚ್ಚಿಯಾಗಲೀ ಪಾಡ್ದನವಾಗಲೀ ಇರುವುದಿಲ್ಲ. ಆರಂಭದಲ್ಲಿ ಯಜಮಾನನಿಂದ ಎಣ್ಣೆ ಬೂಳ್ಯ ಪಡೆದು ಸ್ನಾನ ಮಾಡಿ ಬಂದು ಭೂತವನ್ನು ಕಟ್ಟುವ ವ್ಯಕ್ತಿ ಮುಖಕ್ಕೆ ಅಲಂಕಾರ ಮಾಡಿ ಕಾಲಿಗೆ ಗಗ್ಗರ ಕಟ್ಟಿ ಸಿದ್ಧನಾಗುತ್ತಾನೆ. ಅನಂತರ ಅವರು ನಾಗ ಮುಡಿಯನ್ನು ಹಿಡಿದುಕೊಂಡು ಗದ್ದೆಗೆ ಮೂರು ಸುತ್ತು ಬರುತ್ತಾರೆ. ಇತರರು ತೆಂಬರೆ ಬಡಿಯುತ್ತಾ ಹಿಂಬಾಲಿಸುತ್ತಾರೆ. ಇದಕ್ಕೆ ನಾಗ ಬಲಿ ಎನ್ನುತ್ತಾರೆ. ನಾಗ ಬಲಿಯನ್ನು ನಾಗ ಭೂತದೊಂದಿಗೆ ಬೆರ್ಮೆರ್ ಭೂತ ಕೂಡ

ಗದ್ದೆಗೆ ಸುತ್ತು ಬರುತ್ತದೆ. ನಂತರ ಗದ್ದೆಯ ಮಧ್ಯದಲ್ಲಿ ಇರುವ ಹೊಡದಲ್ಲಿ ನಾಗಧ್ವಜವೆಂದು ಪರಿಗಣಿಸಲ್ಪಟ್ಟಿರುವ ಪೂಕರೆ ಕಂಬವನ್ನು ಹುಗಿಯುತ್ತಾರೆ (ಚಿತ್ರ-೩). ಈ ಸಂದರ್ಭದಲ್ಲಿ ನಾಗಭೂತ ಹಾಗೂ ಬೆರ್ಮೆರ್ ಭೂತಗಳು ತೆಂಬೆರೆಯ ಪೆಟ್ಟಿಗೆ ಹೆಜ್ಜೆ ಹಾಕುತ್ತಾ ನರ್ತಿಸುತ್ತವೆ. (ಚಿತ್ರ-೧) ಯುದ್ಧದ ಅಭಿನಯವನ್ನು ಮಾಡುತ್ತಾರೆ. ಕಂಬಳ ಕೋರಿಯೆಂದು ನಾಗಭೂತದ ಆರಾಧನೆ ಕಾಸರಗೋಡು ಜಿಲ್ಲೆಗೆ ಸೇರಿದ ಅರಿಬೈಲು ಹಾಗೂ ಚೌಕಾರು ಗುತ್ತು ಕಂಬಳಗಳಲ್ಲಿ ಪ್ರಚಲಿತವಿದೆ.

ಕಂಬಳ ಕೋರಿ ಸಂದರ್ಭದ ಹೊರತಾಗಿಯೂ ಕಾಸರಗೋಡು ಪರಿಸರದ ಬಾಕುಡ ಸಮುದಾಯದವರು "ನಾಗ ನಲಿಕೆ" ಎಂಬ ಹೆಸರಿನಲ್ಲಿ ನಾಗನನ್ನು ಭೂತದ ರೂಪದಲ್ಲಿ ಆರಾಧಿಸುತ್ತಾರೆ. ಇದನ್ನು "ಸರ್ಪಕೋಲ" ಎಂದೂ ಕರೆಯುತ್ತಾರೆ. ನಾಗ ನಲಿಕೆ ಎಂಬುದು ಸಮೂಹ ಆರಾಧನೆಯಾಗಿದ್ದು ಇದರಲ್ಲಿ ನಾಲ್ಕು ಭೂತಗಳಿಗೆ ಆರಾಧನೆ ಇರುತ್ತದೆ.

**ನೇಲ್ಯಕ್ಕೇರ್** : ನೇಲ್ಯಕ್ಕೇರ್ ಎಂದರೆ 'ದೊಡ್ಡ ಅಕ್ಕ' ಎಂದರ್ಥ. 'ದೊಡ್ಡ ಉಳ್ಳಾಳಿ' ಎಂದು ಕೂಡ ಕರೆಯುತ್ತಾರೆ. ಕಾಸರಗೋಡು ಜಿಲ್ಲೆಗೆ ಸೇರಿದ ಕೊಡೆಂಚಿರ್ ಎಂಬಲ್ಲಿ ಬೈಲ ಬಾಕುಡ ದಂಪತಿಗಳು ಒಂದು ದಿನ ತಮ್ಮ ಗದ್ದೆಯ ಬಳಿಗೆ ಹೋದಾಗ ಅಲ್ಲಿ ಸಮೀಪದಲ್ಲಿ ಒಂದು ಹೆಣ್ಣು ಮಗು ಅಳುವುದು ಕೇಳಿಸುತ್ತದೆ. ಮಕ್ಕಳಿಲ್ಲದ ಆ ದಂಪತಿಗಳು ಆ ಹೆಣ್ಣು ಮಗುವನ್ನು ತಂದು ಸಾಕುತ್ತಾರೆ. ಮುಂದೆ ಆ ಹುಡುಗಿ ಸತ್ಯದಿಂದ ಗರ್ಭಧರಿಸಿ ಕರಿಯ ಸಂಕಪಾಲ, ಬಿಳಿಯ ಸಂಕಪಾಲರೆಂಬ ಇಬ್ಬರು ನಾಗರಾಜರಿಗೆ ಜನ್ಮವೀಯುತ್ತಾಳೆ. ಹೀಗೆ ನಾಗರಾಜರಿಗೆ ಜನ್ಮವಿತ್ತ ತಾಯಿಯನ್ನು "ನೇಲ್ಯಕ್ಕೇರ್" ಎಂದು ಆರಾಧಿಸುತ್ತಾರೆ. ನೇಲ್ಯಕ್ಕೇರ್ ಅನ್ನು 'ನಾಗಯಕ್ಷಿ' ಎಂದು ಕೂಡಾ ಕರೆಯುತ್ತಾರೆ.

**ಎಲ್ಯಕ್ಕೇರ್** : ಎಲ್ಯಕ್ಕೇರ್ ಎಂದರೆ ಸಣ್ಣಕ್ಕ ಎಂದರ್ಥ. ಎಲ್ಯಕ್ಕೇರ್ ಅನ್ನು ಸಣ್ಣ ಉಳ್ಳಾಳ್ತಿ ಎಂದೂ 'ನಾಗಯಕ್ಷಿ' ಎಂದೂ ಕರೆಯುತ್ತಾರೆ. ಎಲ್ಯಕ್ಕೇರ್ ನಾಗ ಸೇರಿಗೆಗೆ ಸಂದ ದೈವ. ಮೂಲತಃ ಈಕೆ ಬಾಕುಡ ಜನಾಂಗದ ಓರ್ವ ಸ್ತ್ರೀ. ತಾರಿಪಡ್ಪಿನ ನೇಲ್ಯ ಸಂಕರಮೆ ಹಾಗೂ ಎಲ್ಯ ಸಂಕರಮೆ ಎಂಬವರ ತಂಗಿ ಪಳ್ಳಿತೋಕುರು ಬಾಕುಡೆತಿ. ತಾರಿಪಡ್ಪಿನಲ್ಲಿ ಉದ್ಭವವಾದ ಕರಿಯ ಸಂಕಪಾಲ ಹಾಗೂ ಬಿಳಿಯ ಸಂಕಪಾಲ ಎಂಬ ನಾಗರಾಜರನ್ನು ಆರಾಧಿಸುತ್ತಾ ಇರುತ್ತಾಳೆ. ಪಳ್ಳಿ ತೋಕುರು ಬಾಕುಡೆತಿ ಒಂದು ದಿನ ಚಾಪೆ ಹೆಣೆಯುವಾಗ ಚಾಪೆಯ ಒಂದು ತುದಿ ನಾಗನ ಆಕಾರವನ್ನು ಪಡೆಯುತ್ತದೆ. ನಾಗಾಕಾರವಿರುವ ಚಾಪೆಯನ್ನು ಯಾರೂ ಖರೀದಿಸುವುದಿಲ್ಲ. ಆಗ ಅವಳು ಮಾವು ಹಾಗೂ ಗೋಳಿಯ ಗೆಲ್ಲು ಕಡಿದು ನೆಲದಲ್ಲಿ ಊರಿ ಚಾಪೆಯನ್ನು ಅದರಲ್ಲಿ ಹಾಕಿ, ತಾನು ಹೊಳೆಗೆ ಹಾರಿ ಮಾಯವಾಗಿ ನಾಗರಾಜರ ಸನ್ನಿಧಿಯನ್ನು ಸೇರಿ 'ಎಲ್ಯಕ್ಕೇರ್' ಎಂದು ಆರಾಧಿಸಲ್ಪಡುತ್ತಾಳೆ. ನೇಲ್ಯಕ್ಕೇರ್ ಹಾಗೂ ಎಲ್ಯಕ್ಕೇರ್

ಭೂತಗಳಿಗೆ ಇತರ ಭೂತಗಳಂತೆ ಮುಖಕ್ಕೆ ಅರದಳ ಹಾಗೂ ಬಿಳಿ ಕೆಂಪು ಚುಕ್ಕಿಯ ಅಲಂಕಾರ ಇರುತ್ತದೆ. ಸೊಂಟಕ್ಕೆ ಜಕ್ಕೆರ್ಲಗೆ, ತಲೆಗೆ ಸಾವಿರದೊಂದು ಹಾಳೆಯಿಂದ ತಯಾರಿಸಿದ ಸುಮಾರು ಮೂವತ್ತು ಅಡಿ ಎತ್ತರದ ಮುಡಿಯ ಅಲಂಕಾರವಿರುತ್ತದೆ. ತೆಂಗಿನ ತಿರಿಯ ಅಲಂಕಾರ ಇರುತ್ತದೆ.



ಮೂವ/ಮುವ್ವೆ/ಮೂವಿಗೆ ವಾತೆ-ಕಿರ್ಲಾಯ,
ಉತ್ತರ ಕೊಡಗು ತಾಲ್ಲೂಕು, ಕೊಡಗು ಜಿಲ್ಲೆ (ಚಿತ್ರ-೨)

**ನೇಲ್ಯಣ್ಣೇರ್ ಮತ್ತು ಎಲ್ಯಣ್ಣೇರ್** : ಕರಿಯ ಸಂಕಪಾಲ ಮತ್ತು ಬಿಳಿಯ ಸಂಕಪಾಲ ಎಂಬ ಈರ್ವರು ನಾಗರಾಜರನ್ನು 'ನೇಲ್ಯಣ್ಣೇರ್' (ದೊಡ್ಡಣ್ಣ) ಮತ್ತು 'ಎಲ್ಯಣ್ಣೇರ್' (ಚಿಕ್ಕಣ್ಣ) ಎಂದು ಆರಾಧಿಸುತ್ತಾರೆ. ಇತರ ಅರಸುಭೂತಗಳಂತೆ ಅಲಂಕಾರವಿರುವ ಈ ನಾಗ ಭೂತಗಳಿಗೆ ತಲೆಗೆ ಸಾವಿರದೊಂದು ಅಡಿಕೆಯ ಹಾಳೆಗಳಿಂದ ತಯಾರಿಸಿದ ಸರ್ಪಾಕೃತಿಯುಳ್ಳ ಮುಡಿಯನ್ನು ಹಿಡಿಯು ತ್ತಾರೆ.

ನಾಗ ನಲಿಕೆಯು ಕೊನೆಯಲ್ಲಿ ಈ ನಾಲ್ಕು ಭೂತಗಳಿಗೆ ಆರಾಧನೆ ಯಾದ ನಂತರ "ಮರಿಕ್ಕಳ ಗಾವುನೆ" ಎಂಬ ಹೆಡೆಯ ಸರ್ಪವನ್ನು ದ್ಯೋತಿಸುವ ಅಡಿಕೆ ಹಾಳೆಯ ಮುಖವಾಡವನ್ನು ಧರಿಸಿಕೊಂಡು ಹಾವಿನಂತೆ ತೆವಳುತ್ತಾ ಬಂದು ಕುಕ್ಕಂಬಿಲ ಏರುತ್ತಾನೆ. ಅಲ್ಲಿ ಮಂತ್ರವಾದಿಯಂತೆ ಅಭಿನಯಿಸುವ ಓರ್ವ ಭೂತ ಮಾಧ್ಯಮನು ಈ ಸರ್ಪವನ್ನು ವಶಪಡಿಸಿಕೊಳ್ಳುವ ಅಭಿನಯವನ್ನು ಮಾಡುತ್ತಾರೆ. ಇದನ್ನು 'ಕೃಷ್ಣ ಸರ್ಪದ ಕೋಲ' ಎಂದು ಕೂಡಾ ಕರೆಯುತ್ತಾರೆ.

ಉತ್ತರ ಕೊಡಗು ಜಿಲ್ಲೆಗೆ ಸೇರಿದ ಕುಂಬಳಟ್ಟೇರಿ, ಪುತ್ಯ, ಕಿರ್ಲಾಯ ಮೊದಲಾದೆಡೆಗಳಲ್ಲಿ ನಾಗಚಾಮುಂಡಿ ಮತ್ತು ಮಾವ ಎಂಬ ಎರಡು ವಿಶಿಷ್ಟ ಭೂತಗಳಿಗೆ

ಆರಾಧನೆ ಇದೆ. ಪಂಚಪಾಂಡವರು ಅಡಿಗೆ ಸರಿದಾಗ ಮೇಲಕ್ಕೆ ನೆಗೆದ ದೈವಗಳಿವು ಎಂದು ಪಾಡ್ದನದಲ್ಲಿ ಹೇಳಿರುವುದಾದರೂ ಈ ಭೂತಗಳ ಕುರಿತಾದ ಪೂರ್ಣ ಮಾಹಿತಿ ದೊರೆಯುವುದಿಲ್ಲ. "ಮೂವ/ಮುವ್ವೆ/ಮೂವಿಗೆವಾತೆ" ಭೂತಕ್ಕೆ ಅಡಿಕೆ ಹಾಳೆಯಿಂದ ಮಾಡಿದ ವಿಶಿಷ್ಟ ಮುಖವಾಡ ಇರುತ್ತದೆ. ಮಾವ ಭೂತವು ಹಾವಿನಂತೆ ತೆವಳುತ್ತಾ, ನರ್ತಿಸುತ್ತಾ, ಹಾವಿನಂತೆ ಅಭಿನಯಿಸುತ್ತಾ ಬಂದು ಹೊಸ ಮಡಿಕೆಯಲ್ಲಿ ಅಕ್ಕಿ ತುಂಬಿ ಅದರ ಮೇಲಿರಿಸಿದ ಮೊಟ್ಟೆಯನ್ನು ತಿನ್ನುತ್ತದೆ. 'ಮೂವ' ಭೂತವನ್ನು 'ನಾಗ' ಎಂದೇ ಪರಿಗಣಿಸುತ್ತಾರೆ. ನಾಗಚಾಮುಂಡಿಯುನ್ನು 'ನಾಗಯಕ್ಷಿ' ಎಂದು ಪರಿಗಣಿಸುತ್ತಾರೆ. (ಚಿತ್ರ–೨).

ಹೀಗೆ ನಾಗನನ್ನು ಭೂತದ ನೆಲೆಯಲ್ಲಿ ಭೂತಾರಾಧನೆಯ ರೂಪದಲ್ಲಿ ಆರಾಧಿಸುವುದು ತುಳುನಾಡಿನಲ್ಲಿ ಮಾತ್ರ ಕಂಡುಬರುತ್ತದೆ. ತುಳುನಾಡಿನಲ್ಲಿ ಪ್ರಚಲಿತವಿರುವ ಭೂತಾರಾಧನೆಯ ಪ್ರಭಾವದಿಂದಾಗಿ ನಾಗನಿಗೆ ಕೋಲ ಕೊಟ್ಟು ಆರಾಧಿಸುವ ಪದ್ಧತಿ ಬಂದಿರಬಹುದು.

**ಟಿಪ್ಪಣಿಗಳು :**

೧. ಭೂತ–ತುಳುವಿನ ಭೂತ ಪದಕ್ಕೆ ಕನ್ನಡದ ಭೂತದ ಅರ್ಥವಿಲ್ಲ. ಪೂತಂ ಎಂದರೆ ಪವಿತ್ರವಾದುದು ಎಂಬ ಪದವೇ ಕಾಲಂತರದಲ್ಲಿ ಬೂತೊ ಆಗಿ ಸಂಸ್ಕೃತೀಕರಣಗೊಂಡು ಭೂತ ಆಗಿರುವ ಸಾಧ್ಯತೆ ಇದೆ. ಗತಕಾಲದಲ್ಲಿ ಇದ್ದವರು ಎಂಬರ್ಥದಲ್ಲಿಯೂ ಭೂತ ಪದ ಬಳಕೆಗೆ ಬಂದಿರಬಹುದು. ಏನೇ ಆದರು ಭೂತಗಳು ದುಷ್ಟ ಶಿಕ್ಷಕ ಶಕ್ತಿಗಳು.

೨. ಕಾರ್ಪಾಳೆ ಮತ್ತು ಗಗ್ಗರ–ಭೂತರಾಧನೆಯ ಸಂದರ್ಭದಲ್ಲಿ ಭೂತ ಮಾಧ್ಯವನು ಕಾಲಿಗೆ ಕಟ್ಟಿಕೊಳ್ಳುವ ಅಡಿಕೆಯ ಹಾಳೆಯನ್ನು ಕಾರ್ಪಾಳೆ ಎನ್ನುತ್ತಾರೆ. ಕಾಲಿಗೆ ಕಟ್ಟಿಕೊಳ್ಳುವ ಲೋಹದಿಂದ ತಂತೂರು ಮಾಡಿದ ಕಡಗವನ್ನು ಹೋಲುವ ಗೆಜ್ಜೆಯಂತೆ ಸದ್ದು ಮಾಡುವ ಆಭರಣ.

೩. ಅರದಳ–ಮುಖಕ್ಕೆ ಅರಸಿನ ಬಣ್ಣವನ್ನು ಹಚ್ಚಿಕೊಳ್ಳುವುದು.

೪. ಅಣಿ–ತೆಂಗಿನ ತಿರಿಯಿಂದ ಮಾಡಿದ ಅಲಂಕಾರ ಸಾಧನ.

೫. ಮುಡಿ–ತಲೆಯ ಮೇಲ್ಭಾಗ ಬರುವಂತೆ ಬೆನ್ನಿನ ಮೂಲಕ ಕಟ್ಟುವ, ಅಡಿಕೆ ಹಾಳೆಯಿಂದ ತಯಾರಿಸುವ ಅಲಂಕಾರ ಸಾಧನ.

೬. ಕಂಬಳ ಕೋರಿ–ಗದ್ದೆಯನ್ನು ಉತ್ತು ಬಿತ್ತನೆಗೆ ಸಿದ್ಧ ಮಾಡುವುದು.

೭. ಕುಕ್ಕಂಬಿಲ–ಮಾವು ಹಾಗೂ ಗೋಳಿಯ ಗೆಲ್ಲನ್ನು ನೆಟ್ಟು ಕೃತಕವಾಗಿ ತಯಾರಿಸಿದ ಮರ.

# ೪. ಪಂಪಭಾರತದಲ್ಲಿ ಮಿಂಚಿದ ಜೀವನ ದರ್ಶನ 'ನೂಱಿಯ್ವರಾವಲ್ಲವೇ'

-ಡಾ. ಪ್ರಮೀಳ ಮಾಧವ್

ಹತ್ತನೆಯ ಶತಮಾನದ ಕವಿಪಂಪ ಕನ್ನಡ ಕುಲಗುರು, ನಾಡೋಜ, ಆದಿಮಹಾಕವಿ ಇತ್ಯಾದಿ ಹೆಗ್ಗಳಿಕೆಗೆ ಪಾತ್ರನಾದವನು. ಅವನ ಕಾವ್ಯಗಳನ್ನು ಕನ್ನಡ ಶಾರದೆಯ ಕೊರಳಲ್ಲಿ ವಿಜೃಂಭಿಸುವ ರತ್ನಹಾರಗಳೆಂದು ಸಹೃದಯಲೋಕ ಕೊಂಡಾಡಿದೆ. ಈ ಕಾವ್ಯರತ್ನಹಾರದೊಳಗೆ ಪಂಪ ಜೀವನ ಮೌಲ್ಯಗಳ ಅನೇಕ ಅಮೂಲ್ಯರತ್ನಗಳನ್ನು ಕಂಡರಿಸಿದ್ದಾನೆ. ಅಂಥ ಒಂದು ಅನರ್ಘ್ಯ ರತ್ನವನ್ನು ಪರಿಚಯಿಸುವುದೇ ಪ್ರಸ್ತುತ ಲೇಖನದ ಉದ್ದೇಶ.

'ಬೆಳಗುವೆನಿಲ್ಲಿ ಲೌಕಿಕಮನಲ್ಲಿ ಜಿನಾಗಮಮಂ' ಎಂದ ಪಂಪ ತನ್ನ ಲೌಕಿಕಕಾವ್ಯ ಪಂಪ ಭಾರತದ ಸಪ್ತಮಾಶ್ವಾಸದಲ್ಲಿ ಬೆಳಗಿದ ಒಂದು ಅಪೂರ್ವ ಪ್ರಸಂಗವೇ 'ನೂಱಿಯ್ವರಾವಲ್ಲವೇ ?' ಶಕುನಿಯ ಕುತಂತ್ರದಿಂದ ಕೌರವನೊಂದಿಗಿನ ಮೋಸದಾಟದಲ್ಲಿ ಪರಾಜಿತನಾಗಿ ಸರ್ವಸ್ವವನ್ನೂ ಕಳೆದುಕೊಂಡ ಧರ್ಮರಾಯ ಜೂಜಿನ ಪಣದಂತೆ ಪತ್ನೀ ಸೋದರ ಸಮೇತನಾಗಿ ೧೨ ವರ್ಷಗಳ ವನವಾಸವನ್ನು ಅನುಭವಿಸುತ್ತಿದ್ದ ಕಾಲ. ಪಾಂಡವರನ್ನು ಕಾಡಿಗಟ್ಟಿದರೂ ಕೌರವನ ದಾಯಾದಿ ಮತ್ಸರದ ಬೆಂಕಿ ಆರಿರಲಿಲ್ಲ. ಸೋತುಹಿಮ್ಮೆಟ್ಟಿದವರನ್ನು ಬೆನ್ನಟ್ಟಿ ಕಾಡಬೇಕೆಂಬ ವಿಕೃತಬುದ್ಧಿಯ ಕೆಟ್ಟ ಕುತೂಹಲ ಅವನಲ್ಲಿ ಉತ್ಪನ್ನವಾಗುತ್ತದೆ. ಪಾಂಡವರು ದ್ವೈತವನದಲ್ಲಿ ವಾಸಿಸುತ್ತಿದ್ದ ವಿಷಯವನ್ನು ತಿಳಿದ ಆತ ಕಾಡಿನ ಕಷ್ಟದ ಬದುಕಿನಿಂದ 'ಕಂದಿಕುಂದಿದ' ಅವರ ಮುಖಗಳನ್ನು ನೋಡಿ ಆನಂದಿಸುವುದೂ ಅರಮನೆಯ ಸುಖದ ಸುಪ್ಪತ್ತಿಗೆಯಲ್ಲಿ ಬದುಕುವ ತಮ್ಮ ವೈಭೋಗವನ್ನು ಅವರ ಮುಂದೆ ತೋರಿ ಮೆರೆಯುವುದೂ ಉದ್ದೇಶವಾಗಿ ಪರಿವಾರ ಸಮೇತನಾಗಿ ಕಾಡಿನತ್ತ ಪ್ರಯಾಣ ಬೆಳೆಸುತ್ತಾನೆ. ದ್ವೈತವನದ ಸಮೀಪದ ನಂದನವನದಲ್ಲಿ ಬೀಡುಬಿಟ್ಟು ಸಮಸ್ತ ಆಮೋದಪ್ರಮೋದಗಳಲ್ಲಿ ಮೈಮರೆಯುತ್ತಿದ್ದ ಆತನಿಗೆ ಆಪತ್ತಿನ ಬಲೆಯೊಳಗೆ ತಾನೇ

ಸಿಲುಕಿದ್ದೇನೆಂಬುದು ಗಮನಕ್ಕೆ ಬರಲಿಲ್ಲ. ದೈಸಂಕಲ್ಪವೆಂಬುದು ಮನುಷ್ಯನಿಗಿಂತ ಮಿಗಿಲಾದ ಶಕ್ತಿವಿಶೇಷ. ಅದರಲ್ಲೂ ಅನ್ಯಾಯವಾಗಿ ಇನ್ನೊಬ್ಬರಿಗೆ ದ್ರೋಹಬಗೆದರೆ? ಜೀವಸಂಕುಲದ ಕರ್ಮಾನುಸಾರವಾಗಿ ಪ್ರತಿಫಲವನ್ನು ಕೊಡಲು ಆ ಶಕ್ತಿ ಎಲ್ಲೋ ಕಾದಿರುತ್ತದೆ. ಪಾಂಡವರನ್ನು ಕಾಡಿ ಅವರ ಕಂದಿದ ಮುಖವನ್ನು ಕಾಣುವ ದುರ್ಯೋಧನನ ಹಂಚಿಕೆ ತಲೆಕೆಳಗಾಗುತ್ತದೆ. ದುರ್ಯೋಧನನ ಮೇಲಿನ ಯಾವುದೋ ಪೂರ್ವಜನ್ಮದ ಸೇಡನ್ನು ತೀರಿಸಲು ತಕ್ಕ ಸಂದರ್ಭವನ್ನು ಹೊಂಚುಹಾಕುತ್ತಿದ್ದ ಚಿತ್ರಾಂಗದನೆಂಬ ಗಂಧರ್ವನ ಅನಿರೀಕ್ಷಿತ ಆಕ್ರಮಣಕ್ಕೆ ತುತ್ತಾಗಿ ಅವನ ಸೆರೆಯೊಳಗೆ ಬಂಧಿಯಾಗುವ ದುರ್ದೆಶೆ ಪ್ರಾಪ್ತವಾಗುತ್ತದೆ. ಮನುಷ್ಯ ತಾನೊಂದು ಬಗೆದರೆ ದೈವವಿನ್ನೊಂದು ಬಗೆಯುತ್ತದೆ. 'ಹಗೆಗಳನ್ನು ಕೊಲ್ಲಲುಬಂದವನ ಮೂಗೇ ಕತ್ತರಿಸಿದಂತೆ' ಎನ್ನುವ ಸೊಗಸಾದ ನಾಡನುಡಿಯ ಮೂಲಕ ಪಂಪ ಈ ಸನ್ನಿವೇಶದ ಅರ್ಥಭಾವಗಳನ್ನು ಅತ್ಯಂತ ಆಪ್ತಗೊಳಿಸುತ್ತಾನೆ. ಮೂಗು ಕತ್ತರಿಸುವ ಸನ್ನಿವೇಶಗಳು ನಮ್ಮ ಕಾವ್ಯಲೋಕದಲ್ಲಿ ಅನೇಕ ಕಡೆಗಳಲ್ಲಿ ಬಂದಿವೆ. ಮನುಷ್ಯನ ಮುಖಕ್ಕೆ ಅಂದವನ್ನು ಕೊಡುವುದು ಮೂಗು. ವ್ಯಕ್ತಿತ್ವಕ್ಕೆ ಅಂದವನ್ನು ಕೊಡುವುದು ಮಾನ. ಮಾನವಿಲ್ಲದವನು ಶ್ವಾನಕ್ಕೆ ಸಮ ಅನ್ನುವುದು ನಿಜ. ದುರ್ಯೋಧನನ ಮಾನದ ಮೂಗನ್ನು ಗಂಧರ್ವ ಕತ್ತರಿಸುತ್ತಾನೆ. ಅದ್ನು ಉಳಿಸುವವರು ಯಾರು ? ಭೀಷ್ಮ, ದ್ರೋಣ, ವಿದುರ, ಶಕುನಿ, ಕರ್ಣರೇ ಮೊದಲಾದ ಅತಿರಥ ಮಹಾರಥರು, ವೀರಾಧಿವೀರರಾದ ತಮ್ಮಂದಿರು, ಪತ್ನಿಯರು–ಎಲ್ಲರೂ ಇದ್ದರು. ಯಾರಿದ್ದರೇನು ? ಇದ್ದವರೆಲ್ಲ ಮಿಳಮಿಳನೆ ಬಾಯಿಬಾಯಿಬಿಟ್ಟು ನೋಡುತ್ತಿದ್ದಂತೆ ತನ್ನ ಅರುವತ್ತುಕೋಟಿ ಬಲದೊಡನೆ ಬಂದ ಗಂಧರ್ವ ಎಲ್ಲರನ್ನೂ ಬೆದರಿಸಿ ಅಣ್ಣತಮ್ಮಂದಿರಿಬ್ಬರನ್ನೂ ಕೋಡಗ ಕಟ್ಟುಕಟ್ಟಿ ಆಕಾಶ ಮಾರ್ಗದಲ್ಲಿ ಎತ್ತೊಯ್ಯುತ್ತಾನೆ. ಬಡವರ ಪಿತರರಂತೆ, ಎಂಜಿಲು ಉಂಡವರಂತೆ ಉಪಯೋಗಕ್ಕೆ ಬಾರದ ಬಿಲ್ಲುಗಳನ್ನು ಮುಂದಿಟ್ಟುಕೊಂಡು ತಲೆಬಾಗಿ ದಿಗ್ಭ್ರಾಂತರಾಗಿ ಕುಳಿತುಕೊಂಡರಲ್ಲದೆ ಅವರಿಂದ ಬೇರೇನನ್ನೂ ಮಾಡಲಾಗಲಿಲ್ಲ. ಪರಿವಾರದ ಅಸಹಾಯಕತೆಯನ್ನು ಕವಿ ಅತ್ಯುಚಿತವಾದ ಉಪಮೆಯ ಮೂಲಕ ನಿರೂಪಿಸುತ್ತಾನೆ. ಪತಿಯನ್ನು ಕಳೆದುಕೊಂಡ ದುರ್ಯೋಧನನ ಪತ್ನಿ ಭಾನುಮತಿ ಗೋಳಿಡುತ್ತ ಧರ್ಮರಾಯನ ಬಳಿಗೆ ಬರುತ್ತಾಳೆ. ಯುಧಿಷ್ಠಿರನ ಕಾಲಮೇಲೆ ಕುಸಿದು ಪತಿಭಿಕ್ಷೆಯನ್ನು ನೀಡು ಎಂದು ಮೊರೆಯಿಡುತ್ತಾಳೆ. ಶೋಷಕರೇ ಶೋಷಿತರ ಮೊರೆಹೋಗುವ ವಿಚಿತ್ರ ಸ್ಥಿತಿ ಇದು. ನಾಚಿಕೆ, ಸಂಕಟ, ಪಶ್ಚಾತ್ತಾಪಗಳಿಂದ ಕೊರಗಿ ಕರಗಿದ ಆಕೆ 'ನೋಂತರ ಪಗೆವರನೆಳ್ತಿರಿದಂತಾಯ್ತೆಂದು ಭಾವಿಸದೆ ಪುರುಷಾಕಾರದ ಪೆಂಪಂ ಚಿಂತಿಸಿ'ಎನ್ನುತ್ತಾಳೆ. ಇಲ್ಲೂ ಕವಿ ಬಳಸಿದ್ದು ಲೋಲರೂಢಿಯ ಮಾತನ್ನೇ. ಆದರೆ ಅದರ ಮೂಲಕ ಎಂಥ ದಾರ್ಶನಿಕ ಸಿದ್ಧಾಂತವನ್ನು ಅಭಿವ್ಯಕ್ತಿಸಿದ್ದಾನೆನ್ನುವುದನ್ನು ಪರಿಭಾವಿಸಬೇಕು. ಪಾಂಡವರ ಬಗ್ಗೆ ಮಾಡಬಾರದ್ದನ್ನು ಮಾಡಿ ಈಗ ಆಗಬಾರದ ಅಪಾಯಕ್ಕೆ ಸಿಲುಕಿದ್ದಾನೆ ದುರ್ಯೋಧನ. ಒಂದು ರೀತಿಯಲ್ಲಿ ಇದು ಪಾಂಡವರಿಗೆ

ಪ್ರಿಯವಾಗಬಹುದಾದ ಸಂಗತಿ. Tit for tat. (ಸೇರಿಗೆ ಸವ್ವಾಸೇರು) ಸಾಮಾನ್ಯ ಲೌಕಿಕ ಸ್ಥಿತಿಯಲ್ಲಿ ಅನ್ಯಾಯಕ್ಕೊಳಗಾದವರ ಮನಸ್ಸು ಅನ್ಯಾಯ ಮಾಡಿದವರ ಬಗ್ಗೆ ಸುಲಭವಾಗಿ ಆರ್ದ್ರವಾಗುವುದಿಲ್ಲ. ಅವರು ಉತ್ತಮರಾಗಿದ್ದರೆ ಕೇಡುಮಾಡಿದವರ ಬಗ್ಗೆ ಪ್ರತೀಕಾರ ತೋರದಿರಬಹುದು. ಆದರೆ ಮೂರನೆಯ ವ್ಯಕ್ತಿಯಿಂದ ಕೇಡಿಗೊಳಗಾದರೆ ನಿರ್ಲಿಪ್ತವಾಗಿರುತ್ತಾರೆ. ಇದು ಮನುಷ್ಯ ಸಹಜ ಗುಣ. ಅದನ್ನೇ ಕವಿ 'ನೋಂತರ ಪಗೆವರನೆಳ್ತಿರಿದಂತೆ' ಎಂಬ ಮಾತಿನಲ್ಲಿ ವ್ಯಕ್ತಪಡಿಸಿದ್ದು. ದ್ರೋಹಿಗಳಿಗೆ ಮನುಷ್ಯರಿಂದಲ್ಲವಾದರೆ ಭಗವಂತನಿಂದಾದರೂ ಶಿಕ್ಷೆ ದೊರಕುವುದು ಖಂಡಿತ ಎಂಬ ಸಾಮಾನ್ಯ ನಂಬಿಕೆ ಇದು. ಆದರೆ ಭಾನುಮತಿ ಧರ್ಮರಾಯನಲ್ಲಿ ಬೇಡಿದ್ದು 'ಪುರುಷಾಕಾರ'ದ ಪೆಂಪನ್ನು ಭಾವಿಸು ಎಂದು. ಯಾವುದು ಪುರುಷಾಕಾರ ? ನೊಂದವರ ನೋವನ್ನು ಪರಿಹರಿಸುವಂಥ ಮಾನವೀಯ ಅನುಕಂಪ. ತನ್ನ ಗಂಡ ಸಾಮಾನ್ಯರಲ್ಲಿ ಸಾಮಾನ್ಯ. ಆದರೆ ಧರ್ಮರಾಯ ಅಸಾಮಾನ್ಯ.

ಈ ಪ್ರಸಂಗದ ಇನ್ನೊಂದು ಚಿತ್ರ ಭಾನುಮತಿಯ ಕಣ್ಣೀರಿಗೆ ಧರ್ಮರಾಯ ಸ್ಪಂದಿಸಿದ ಬಗೆಯಲ್ಲಿದೆ. ಪಾಂಡವರು ಅದರಲ್ಲೂ ಯುಧಿಷ್ಠಿರ ತನ್ನ ಗಂಡನಂತಲ್ಲವೆಂದು ಅವಳಿಗೆ ಗೊತ್ತು. ಆತ ಧರ್ಮರಾಯ. ಅವನಿಂದ ಮಾತ್ರವೇ ತನಗೆ ಪತಿಭಿಕ್ಷೆ ದೊರಕಲು ಸಾಧ್ಯ. ಆದ್ದರಿಂದಲೇ ಅವಳು ಧರ್ಮರಾಯನ ಪಾದಮೂಲಗಳಲ್ಲಿ ಕುಸಿದು ತನ್ನ ಬೇಡಿಕೆಯನ್ನು ನಿವೇದಿಸುತ್ತಾಳೆ. ಭಾನುಮತಿಯ ನಿರೀಕ್ಷೆ ನಿಜವಾಗುವಂತೆ ಆಕೆಯ ಪರಿಸ್ಥಿತಿಯನ್ನು ಅರ್ಥಮಾಡಿದ ಯುಧಿಷ್ಠಿರನ ಮನಸ್ಸು ಆರ್ದ್ರವಾಗುತ್ತದೆ. ಅವಳಿಗಾದ ಅನ್ಯಾಯವನ್ನು ಬಗೆಹರಿಸಲು ನಿರ್ಧರಿಸಿದ ಆತನಿಗೆ ಅದಕ್ಕೆ ಯಾರ ಸಮಾಲೋಚನೆಯೂ ಬೇಕಾಗಿಲ್ಲ. ಯಾವ ಸ್ಥಿತಿಯಲ್ಲಿದ್ದರೂ ತನ್ನ ಮಾತನ್ನು ತಮ್ಮಂದಿರು ಕಡೆಗಣಿಸಲಾರರೆಂಬುದು ಈವರೆಗಿನ ಅನುಭವ ಅವನಿಗೆ ತಿಳಿಸಿದೆ. ಆದ್ದರಿಂದಲೇ ಆತ ಹಿಂದುಮುಂದು ಯೋಚಿಸದೆ ಭಾನುಮತಿಗೆ ಮಾತುಕೊಡುತ್ತಾನೆ. ಯುಧಿಷ್ಠಿರ ಭಾನುಮಾತಿಗೆ ನೀಡಿದ ಅಭಯದಲ್ಲಿ ಲೋಕೋತ್ತರವಾದ ಸಂಸ್ಕೃತಿಯ ಜೀವನಾಡಿ ಹೇಗೆ ಮಿಡಿದಿದೆ ಎಂಬುದನ್ನು ಕವಿಮಾತುಗಳಲ್ಲೇ ಅವಲೋಕಿಸುವುದು ಸೂಕ್ತ. 'ಸುರಿಯಲ್ವೇಡಮದರ್ಕೆ ಬಾಷ್ಪಜಳಮಂ ನಿನ್ನಾಣ್ಮನಂ ನಿನ್ನೊಳಿಂದಿರದೆ ಆಂ ಕೊಡುವೆವು ಎಮ್ಮೊಳಾದ ಕಲಹಕ್ಕೆ ಎಂತಾದೊಡಂ ಕೇಳ ನೂರ್ವರೆ ದಲ್ ಕೌರವರ್ ಆಮುಮ್ ಅಯ್ವರೆ ವಲಂ ಮತ್ತೊರ್ವರೊಳ್ ತೊಟ್ಟ ಸಂಗರರಂಗಕ್ಕೆ ಜಸಕ್ಕೆ ಕೂಡುವೆಡೆಯೊಳ್ ನೂಱಯ್ವರಾವಲ್ಲವೇ ?' (ಎಲೈ, ಭಾನುಮತಿಯೇ, ಇದಕ್ಕಾಗಿ (ಗಂಡ ಅಪಹರಿಸಲ್ಪಟ್ಟ ಎಂಬುದಕ್ಕಾಗಿ) ನೀನು ಕಣ್ಣೀರು ಸುರಿಸಬೇಡ. ನಿನ್ನ ಗಂಡನನ್ನು ಖಂಡಿತವಾಗಿಯೂ ನಾವು ಇಂದೇ ನಿನಗೊಪ್ಪಿಸುತ್ತೇವೆ. ನಾವು ನಾವೇ ಜಗಳವಾಡುವಾಗ ಮಾತ್ರ ಕೌರವರು ನೂರು ಜನ ನಾವು ಐದು ಜನ. ಆದರೆ ಮೂರನೆಯವರೊಬ್ಬರು ನಮ್ಮ ಜತೆ ಜಗಳಕ್ಕೆ ನಿಂತರೆ ನಾವು ನೂರೈದು ಜನರಲ್ಲವೇ? ಇದು ಯುದ್ಧಕ್ಕಾಗಲೀ ಕೀರ್ತಿಗಾಗಲೀ ಒಂದೇ.) ಎಂಥ ಅಮೋಘವಾದ ಜೀವನ

ಸಂದೇಶವಿದು ! ಇದಲ್ಲವೇ ಲೌಕಿಕ ವಿಚಕ್ಷಣತೆ ! ಪಂಪಭಾರತದ ಅತ್ಯುಜ್ವಲ ಜೀವನ ಮೌಲ್ಯಗಳಲ್ಲಿ ಈ ಪ್ರಸಂಗವೂ ಒಂದು ಎಂಬುದನ್ನು ಗಮನಿಸಬೇಕು. ಚಿತ್ರಾಂಗದನೊಂದಿಗೆ ಹೋರಾಡಿ ದುರ್ಯೋಧನನನ್ನು ಬಿಡಿಸಿ ತರುವವನು ಧರ್ಮರಾಯನಲ್ಲ. ಆದರೆ ಅವನ ಆತ್ಮವಿಶ್ವಾಸ, ತಮ್ಮಂದಿರ ಮೇಲಿನ ನಂಬಿಕೆ ಅಮೋಘವಾದುದು. ಹಾಗೆಯೇ ಶತ್ರುಸ್ವರೂಪನಾದ ಕೌರವನ ಮೇಲೆ ಅವನು ತೋರಿದ ಸೋದರ ವಾತ್ಸಲ್ಯ ಕೂಡ ಅತ್ಯುತ್ತಮ ಆದರ್ಶ ಚಿತ್ರವನ್ನು ಕಂಡರಿಸುತ್ತದೆ!

ಮುಂದೆ ದುರ್ಯೋಧನ ಅರ್ಜುನನಿಂದ ಬಿಡುಗಡೆಗೊಂಡು ದ್ರೌಪದಿಯ ಮೂದಲಿಕೆಗೊಳಗಾಗುವ ದೃಶ್ಯವನ್ನೂ ಒಂದು ಅಪೂರ್ವ ರಮಣೀಯ ಸನ್ನಿವೇಶವಾಗಿ ಪಂಪ ಚಿತ್ರಿಸಿದ್ದಾನೆ. ದುರ್ಯೋಧನನಂಥ ವೀರ, ಅಹಂಕಾರಿ, ಗರ್ವಿಷ್ಠನಿಗೂ ಆಪತ್ಕಾಲ ತಪ್ಪಲಿಲ್ಲ. ಇನ್ನೊಬ್ಬರಿಗೆ ತೋಡಿದ ಹಳ್ಳ ತನಗೇ ಗೋರಿಯಾಗಬಹುದೆಂಬ ಕಲ್ಪನೆಯಿಲ್ಲದೆ ಆತ ವಿಜೃಂಭಿಸಿದ. ಆದರೆ ಏನಾಯ್ತು ? ಯಾವ ಶತ್ರುವನ್ನು ಕೆಣಕಬಂದನೋ ಅದೇ ಶತ್ರುವಿನ ಕರುಣೆ, ಮೂದಲಿಕೆಗೆ ಒಳಗಾದ. ಇದಕ್ಕಿಂತ ಅವಮಾನ ಬೇರೇನಿದೆ? ದ್ರೌಪದಿಯ ಮೂದಲಿಕೆಯ ಮಾತುಗಳಾದರೂ ಹೇಗಿದ್ದುದು ? 'ಎಮ್ಮಂ ಪಿಡಿದೆಳೆವಂದಿನ ನಿಮ್ಮ ಅದಟುಗಳ್ ಈಗಳೆತ್ತವೋದುವೋ ಪಿಡಿವಟ್ಟು ಅಮ್ಮ ಬಳಲ್ದಿರೆ ಕಂಡಿರೆ ನಿಮ್ಮ ಅಳವಂ ನಿಮಗಮ್ ಈಗಳ್ ಈ ಎಡರಾಯ್ತೇ ?' (ತುಂಬಿದ ರಾಜಸಭೆಯಲ್ಲಿ ದುಶ್ಶಾಸನನಿಂದ ತನಗಾದ ಮಾನಭಂಗದ ಪ್ರಸಂಗವನ್ನು ದ್ರೌಪದಿ ನೆನಪು ಮಾಡುತ್ತಾಳೆ. ನಮ್ಮನ್ನು ಹಿಡಿದು ಎಳೆಯುವಾಗ ನಿಮಗಿದ್ದ ಸಾಮರ್ಥ್ಯಗಳೆಲ್ಲ ಈಗ ಎಲ್ಲಿ ಮಾಯವಾದುವು ? ಈಗ ನೀವೇ ಚಿತ್ರಾಂಗದನ ಸೆರೆಯಾಳಾಗಿ ಚೆನ್ನಾಗಿ ನೋವು ಅನುಭವಿಸಿದಿರಲ್ಲ ? ನೋಡಿದರಾ ನಿಮ್ಮ ಸಾಮರ್ಥ್ಯ ? ನಿಮ್ಮಂಥವರಿಗೂ ಈ ಕಷ್ಟ ಬಂತೇ) ನಿಮ್ಮಂಥವರಿಗೂ ಎಂಬುದರಲ್ಲಿ ಎಂಥ ವಿಡಂಬನೆಯ ಭಾವವಿದೆ ಎಂಬುದನ್ನು ಊಹಿಸಬೇಕು. ಬಹುಶಃ ಚೆನ್ನಾಗಿ ಒತ್ತುಕೊಟ್ಟೇ ಅದನ್ನಾಕೆ ಹೇಳಿರಬೇಕು. ಏಕೆಂದರೆ ಆ ಮಾತು ಕೇಳಿ ದುರ್ಯೋಧನನಿಗೆ ಸತ್ತಷ್ಟು ಅವಮಾನವಾಯ್ತೆಂದು ಕವಿ ಹೇಳುತ್ತಾನೆ. ಹೆಂಡತಿಯ ಸಮಕ್ಷಮದಲ್ಲೇ ಹೀಗೆ ಮರ್ಮಾಘಾತವಾಗುವಂಥ ರೀತಿಯಲ್ಲಿ ಅಣಕಿಸಿದರೆ ಗಂಡನಾದವನಿಗೆ ಹೇಗೆ ತಾನೆ ಸಹಿಸಲು ಸಾಧ್ಯ ? ಅವಮಾನಿಸಿದ ಬಳಿಕ ತಾನೇ ಅವರ ಕಟ್ಟುಗಳನ್ನು ಬಿಡಿಸಿದ ದ್ರೌಪದಿ ಭಾನುಮತಿಯನ್ನು ಕುರಿತು 'ನಿನ್ನ ಗಂಡ, ಮೈದುನನನ್ನು ಒಪ್ಪಿಸಿಕೋ' ಎಂದಾಗ ದುರ್ಯೋಧನನ ಸ್ಥಿತಿ ಏನಾಗಿರಬಹುದು ! ಬಹುಶಃ ಚಿತ್ರಾಂಗದನಿಂದ ಸೆರೆಯಾದಾಗಲೂ ಇಷ್ಟು ಅವಮಾನದ ನೋವನ್ನು ಅನುಭವಿಸಿರಲಾರ. ಕವಿ ಆತನಿಗಾದ ಅವಮಾನ, ಮುಖಭಂಗದ ತೀವ್ರತೆಯನ್ನು ಕೆಲವು ಸಾರ್ಥಕ ಉಪಮೆಗಳ ಮೂಲಕ ಮನದಟ್ಟು ಮಾಡುತ್ತಾನೆ. 'ದಾಡೆಗಳೆದ ಕುಳಿಕನಂತೆ, ಕೋಡುಡಿದ ಮದಹಸ್ತಿಯಂತೆ, ನಖಮುಡಿದ ಸಿಂಹದಂತೆ' ಅವನ ಗರ್ವ ಸೋರಿಹೋಯಿತಂತೆ. ವಿಷದ ಹಲ್ಲುಗಳು ಕಳಚಿಹೋದ ಕಾರ್ಕೋಟಕ, ದಂತಭಗ್ನಗೊಂಡ ಮದ್ದಾನೆ, ಉಗುರುಗಳು ಕಿತ್ತುಹೋದ ಮೃಗರಾಜ–ಬದುಕಿನಲ್ಲಿ

ಯಾವುದು ತಮಗೆ ಹೆಗ್ಗಳಿಕೆಯ ಪ್ರತೀಕವಾಗಿತ್ತೋ ಅವನ್ನೇ ಕಳಕೊಂಡ ಮೇಲೆ ಜೀವನಕ್ಕೆ ಏನಿದೆ ಅರ್ಥ ? ಜೀವನಪರ್ಯಂತ ತಲೆಯೆತ್ತಿ ನಿಲ್ಲುವಂತಿಲ್ಲ. ಕವಿ ಪಂಪ ಮನುಷ್ಯ ಸ್ವಭಾವದ ಎಳೆ ಎಳೆಯನ್ನೂ ಅತ್ಯಂತ ನವಿರಾಗಿ, ಸೂಕ್ಷ್ಮವಾಗಿ ಬಿಡಿಸಿತೋರುತ್ತಾನೆ ಎಂಬುದಕ್ಕೆ ಈ ವರ್ಣನೆಯೇ ಸಾಕ್ಷಿ.

ಈ ಎರಡು ಅಂಶಗಳ ಮೂಲಕ ಪಂಪ ಲೌಕಿಕ ಜೀವನದ ಒಳಿತು ಕೆಡುಕುಗಳೆರಡಕ್ಕೂ ಬೆಳಕು ಚೆಲ್ಲಿದ್ದಾನೆಂಬುದನ್ನು ಪರಿಭಾವಿಸಬಹುದು. ಮನುಷ್ಯ ಸ್ವಭಾವಗಳಲ್ಲಿ ತಾಮಸ, ರಾಜಸ ಮತ್ತು ಸಾತ್ವಿಕ ಗುಣಗಳಿರುತ್ತವೆಂದು ತಿಳಿದವರು ಹೇಳುತ್ತಾರೆ. ಇನ್ನೊಬ್ಬರಿಂದ ತನಗೇನೂ ತೊಂದರೆಯಾಗದಿದ್ದರೂ ಅವರಿಗೆ ಕೇಡು ಬಯಸುವವರು ತಾಮಸ ಪ್ರವೃತ್ತಿಯವರೆಂದೂ ತೊಂದರೆ ಮಾಡಿದವರಿಗೆ ತೊಂದರೆ ಮಾಡುವವರನ್ನು ರಾಜಸರೆಂದೂ ತನಗೆ ತೊಂದರೆ ಮಾಡಿದವರಿಗೂ ಒಳ್ಳೆಯದಾಗಲೆಂದು ಹಾರೈಸಿ ಅದರಂತೆ ನಡೆಯುವವರನ್ನು ಸಾತ್ವಿಕರೆಂದೂ ಪರಿಗಣಿಸುತ್ತಾರೆ. ಪುರಂದರದಾಸರು ಹೇಳಿದಂತೆ 'ವಿಷವನುಣಿಸಿದವಗೆ ಷಡ್ರಸವನುಣಿಸಲು ಬೇಕು' ಎನ್ನುವುದು ಸಾತ್ವಿಕತೆ. ಪಂಪ ಈ ಅಪೂರ್ವ ಸನ್ನಿವೇಶವನ್ನು ಚಿತ್ರಿಸಿ ಈ ಮೂರು ಗುಣಗಳಿಗೂ ಭಾಷ್ಯ ಬರೆದಿದ್ದಾನೆ. ದುರ್ಯೋಧನ ಪಾಂಡವರಿಗೆ ಕೆಡಕನ್ನುಂಟುಮಾಡಲು ಬಯಸುವುದು, ದ್ರೌಪದಿ ದುರ್ಯೋಧನನನ್ನು ನಿಂದಿಸುವುದು, ಯುಧಿಷ್ಠಿರ ದುರ್ಯೋಧನನನ್ನು ಬಿಡಿಸಲು ಆದೇಶಿಸುವುದು–ಮನುಷ್ಯನಲ್ಲಿರುವ ತಾಮಸ, ರಾಜಸ, ಸಾತ್ವಿಕ ಪ್ರವೃತ್ತಿಗೆ ದ್ಯೋತಕವಾಗುತ್ತದೆ. ಲಕ್ಷ್ಯಲಕ್ಷಣ ಸಮನ್ವಯದೊಂದಿಗೆ ಪಂಪ ಆಯ್ಕೆಯನ್ನು ನಮ್ಮ ಮುಂದಿಟ್ಟಿದ್ದಾನೆ.

ಕಾಲ, ದೇಶ, ಜನಾಂಗ ಯಾವುದೇ ಆಗಿರಲಿ ಮನುಷ್ಯಸ್ವಭಾವಗಳು ವ್ಯತ್ಯಾಸವಿಲ್ಲದೆ ನಿತ್ಯನಿರಂತರವಾಗಿ ಸಾಗುತ್ತಿರುತ್ತವೆ. ಇವುಗಳಲ್ಲಿ ಯಾವುದನ್ನು ಆಯ್ಕೆ ಮಾಡಬೇಕು? ಅದನ್ನು ನಿರ್ಧರಿಸತಕ್ಕವರು ನಾವೇ. ಜೀವನ ಸಂಸ್ಕೃತಿಯ ಅಣಿಮುತ್ತುಗಳಾದ ಇವು ಬದುಕನ್ನು ಮುನ್ನಡೆಸುವ ದಾರಿದೀವಿಗೆಗಳು. ಪಂಪಭಾರತದುದ್ದಕ್ಕೂ ಈ ಬಗೆಯ ಮೈನವಿರೇಳಿಸುವ ಜೀವನಮೌಲ್ಯಗಳ ಮೈಲಿಗಲ್ಲುಗಳನ್ನು ದರ್ಶಿಸುವುದಕ್ಕೆ ಸಾಧ್ಯವಿದೆ. ಕನ್ನಡ ಕವಿರತ್ನನಾದ ಪಂಪ ಹಾಗಲ್ಲದೆ ಸುಮ್ಮನೆ ನಾಡೋಜನಾದನೇ ?

■

## ೫. ಡಂಬಳ : ಸರ್ವಧರ್ಮಗಳ ಸಮನ್ವಯ ಕೇಂದ್ರ

–ಡಾ. ಅಪ್ಪಣ್ಣ ಎನ್. ಹಂಜೆ

### ೧. ಪೀಠಿಕೆ

ಕನ್ನಡನಾಡು ಪ್ರಾಚೀನ ಕಾಲದಿಂದ ಇಂದಿಗೂ ವಿವಿಧ ಜನಾಂಗಗಳು, ಭಾಷೆಗಳು, ಸಂಸ್ಕೃತಿಗಳು, ಧರ್ಮಗಳ ಆಡುಂಬೊಲವಾಗಿ ವೈವಿಧ್ಯತೆಯಲ್ಲಿ ಏಕತೆಯನ್ನು ಮೆರೆಯುತ್ತಿದೆ. ಈ ನಾಡಿನಲ್ಲಿ ಆಳ್ವಿಕೆ ಕೈಗೊಂಡಿದ್ದ ಮತ್ತು ತಮ್ಮ ಆಳ್ವಿಕೆಯ ಪ್ರಭಾವವನ್ನು ಹೊಂದಿದ್ದ ಬಹುತೇಕ ಅರಸರು, ರಾಣಿಯರು, ಅಧಿಕಾರಿಗಳು ಲೌಕಿಕ ಹಾಗೂ ಧಾರ್ಮಿಕ ಕಾರ್ಯಗಳೆರಡಕ್ಕೂ ಸಮಾನ ಪ್ರಾಧಾನ್ಯತೆ ಕೊಟ್ಟಿದ್ದರು. ಆ ಕಾರ್ಯಗಳು ಹರಳುಗೊಂಡಿರುವ ಅನೇಕ ಶಾಸನಗಳು ನಾಡಿನಾದ್ಯಂತ ಗೋಚರಿಸುತ್ತವೆ.

ಕೆಱೆ ಬಾವಿ ಬಸದಿ ದೇಗುಲ ಮಱವಂಟಿಗೆ ತೀರ್ತ್ಥಶತ್ರಮಾರವೆ
ದೊದಲಾಗಱಿಕೆಯ ಧರ್ಮ್ಮಾದಿಗಳಂ
ನೆಱೆಮಾಡಿಸಿ ನೋಳ್ತಳೆಸಕೆ ಚಟ್ಟಲದೇವಿ ॥
ಕೆಱೆ ಬಾವಿ ಬಸದಿ ದೇಗುಲ ಮಱವಂಟಿಗೆ
ಸತ್ರಮೆಂಬ ಧರ್ಮ್ಮಮವಿನಿತುಂ ನೆಱೆದವು ಮುಗುಂದ
ಮೂವತ್ತರ ವಿಭು ಚಾವುಣ್ಡರಾಯನಿಂದಂ ಜಗದೊಳ್ ॥
ಕೆಱೆಯಂ ಕಟ್ಟಿಸು ಬಾವಿಯಂ ಸವೆಸು ದೇವಾಗಾರಮಂ ಮಾಡಿಸ
ಜ್ಜೆಱೆಯೊಳ್ ಸಲ್ಕಿದನಾಥರಂ ಬಿಡಿಸು ಮಿತ್ರರ್ಗ್ಗಿಂಬುಕೆಯ್ ನಂಬಿದ
ರ್ಗೆಱೆವೆಟ್ಟಾಗಿರು ಶಿಷ್ಟರಂ ಪೊರೆಯೆನುತ್ತಿಂತೆಲ್ಲವಂ ಪಿಂದೆ ತಾ
ಯೆಱೆದಳ್ಪಾಲಱೆವಂದು ತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನಾ ॥

ಎಂದು ಅಂದಿನ ಆಳರಸರು ಮತ್ತು ಅಧಿಕಾರಿಗಳು ಕಾಯ ಪೋಷಣೆಗೆ ಕೆರೆ, ಬಾವಿ, ಅರವಂಟಿಗೆ, ಛತ್ರ ಮೊದಲಾದ ಲೋಕೋಪಕಾರಿ ಹಾಗೂ ಧರ್ಮ ಸಮನ್ವಯತೆಗೆ ದೇವಾಲಯ, ಬಸದಿ, ಮಠ, ಮಸೀದೆ ಮೊದಲಾದ ಧಾರ್ಮಿಕ ಚಟುವಟಿಕೆಗಳನ್ನು ಕೈಗೊಂಡು ಉದಾರವಾಗಿ ದಾನ-ದತ್ತಿಗಳನ್ನು ಕೊಡುತ್ತಿದ್ದರು.

ಅವರ ಧರ್ಮ ಸಮನ್ವಯತೆಯ ಧೋರಣೆಯು ಸಮಕಾಲೀನ ಸರ್ವಧರ್ಮೀಯರಲ್ಲಿ ಪರಸ್ಪರ ಅನ್ಯೋನ್ಯತೆಯನ್ನು ಕಲ್ಪಿಸುವುದಾಗಿತ್ತು.

ಜಯಂತಿ ಯಸ್ಯಾವದತೋಪಿ ಭಾರತೀ
ವಿಭೂತಯಸ್ತೀರ್ಥ ಕೃತೋಪಿ ನೈಹ್ರಿತೇ
ಶಿವಾಯ ಧಾತ್ರೇ ಸುಗಡಾಯ ವಿಷ್ಣವೇ
ಜಿನಾಯ ತಸ್ಮೈಸಕಳಾತ್ಮನೇ ನಮಃ ॥
ಯಂ ಶೈವಾಸ್ಸಮುಪಾಸತೇ ಶಿವ ಇತಿ ಬ್ರಹ್ಮೇತವೇದಾಂತಿನೋ
ಬೌದ್ಧಾ ಬುದ್ಧ ಇತಿ ಪ್ರಮಾಣಪಟವಃ ಕರ್ತೇತಿ ನೈಯ್ಯಾಇಕಾಃ
ಅರ್ಹಶ್ಚೇತಿ ಹ ಜೈನಶಾಸನಮತಿ ಕಂರ್ಮೇತಿ ಮೀಮಾಂಸಕಾಃ
ಸೋಯಂ ವೋ ವಿದಧಾತು ವಾಂ ಛಿತಫಲಂ ಶ್ರೀಕೇಶವೇಶಸ್ಸದಾ ॥

ಇಂತಹ ಹಲವು ಶಾಸನ ವರ್ಣನೆಗಳು ಮತ್ತು ಅರಸರು ಹೊಂದಿದ್ದ ಚತುಸ್ಸಮಯ ಸಮುದ್ಧರಣರ್ ಎಂಬ ಪ್ರಶಸ್ತಿಗಳು ಅವರ ಧಾರ್ಮಿಕ ಧೋರಣೆ ಮತ್ತು ಧರ್ಮ ಸಮನ್ವಯತೆಗೆ ನಿದರ್ಶನಗಳಾಗಿವೆ. ಅಂದಿನ ಆಳರಸರ ಸರ್ವಧರ್ಮ ಸಮನ್ವಯತೆಯ ನಿಲುವುಗಳಿಂದ ಕನ್ನಡ ನಾಡಿನಲ್ಲಿ ಹಲವು ಗ್ರಾಮಗಳು ಬೌದ್ಧ, ಶೈವ, ಜೈನ, ವೈಷ್ಣವ, ಶ್ರೀವೈಷ್ಣವ, ವೀರಶೈವ, ಇಸ್ಲಾಂ ಧರ್ಮಗಳ ಸಮನ್ವಯ ಕೇಂದ್ರಗಳಾಗಿ ಮೆರೆದಿವೆ. ಅಂತಹ ಕೇಂದ್ರಗಳಲ್ಲಿ ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ಡಂಬಳ ಗ್ರಾಮವೂ ಒಂದಾಗಿದೆ.

ಡಂಬಳವು ಮುಂಡರಗಿಯಿಂದ ವಾಯವ್ಯಕ್ಕೆ ೧೭ ಕಿ.ಮೀ. ಮತ್ತು ಗದಗದಿಂದ ಆಗ್ನೇಯಕ್ಕೆ ೨೧ ಕಿ.ಮೀ. ಅಂತರದಲ್ಲಿದೆ. ಈ ಗ್ರಾಮದ ಪರಿಸರದಲ್ಲಿ ಇದುವರೆಗೆ ಬೆಳಕಿಗೆ ಬಂದಿರುವ ಪುರಾತತ್ವ ಅವಶೇಷಗಳ ಹಿನ್ನೆಲೆಯಲ್ಲಿ ಇದರ ಪ್ರಾಚೀನತೆಯು ಕ್ರಿ.ಶ. ಸುಮಾರು ೧೦ನೆಯ ಶತಮಾನದಷ್ಟು ಹಿಂದಕ್ಕೋಗುತ್ತದೆ. ಸ್ಥಳೀಯ ಮತ್ತು ಇತರೆಡೆಯ ಶಾಸನಗಳಲ್ಲಿ ಧಮ್ಮವೊಳಲ್, ಧರ್ಮ್ಮಪುರ, ಮಹಾಪಟ್ಟಣ, ಮಹಾನಗರ ಎಂದಿತ್ಯಾಗಿ ಉಲ್ಲೇಖಿತವಾಗಿದೆ. ಇದು ಕಲ್ಯಾಣದ ಚಾಳುಕ್ಯ ಮನೆತನದ ಆಳ್ವಿಕೆಯ ಕಾಲದಲ್ಲಿ ಪ್ರಸಿದ್ಧವಾಗಿದ್ದ ಮಾಸವಾಡಿ-೧೪೦ ಆಡಳಿತ ಪ್ರಾಂತದಲ್ಲಿ ಅಂತರ್ಗತವಾಗಿತ್ತು. ಈ ಗ್ರಾಮವು ಅಂದು ಮಾಸವಾಡಿ ನಾಡಿಗೆ ಕಟ್ಟಿದ ಪಟ್ಟದಂತೆ, ಹಣೆಯಲ್ಲಿಟ್ಟ ಕುಂಕುಮದಂತೆ, ಶಿರೋಭಾಗದ ಕಳಶದಂತೆ ಕಂಗೊಳಿಸುತ್ತಿತ್ತು. ಜೊತೆಗೆ ಕಮಲಗಳಿಂದ ತುಂಬಿದ ಸರೋವರಗಳಿಂದ, ಸಮೃದ್ಧವಾಗಿ ಬೆಳೆದ ವನಗಳಿಂದ, ಸುಗಂಧ ಬೀರುವ ಭತ್ತದ ಗದ್ದೆಗಳಿಂದ, ಹರಿಯುವ ಕಾಲುವೆಗಳಿಂದ, ಆಡುವ ಹಂಸಗಳಿಂದ, ಕೇಕೆ ಹಾಕುವ ನವಿಲುಗಳಿಂದ, ಗಳಪುವ ಅರಗಿಣಿಗಳಿಂದ ಶೋಭಾಯಮಾನವಾಗಿತ್ತು. ತೆಂಗು, ಕೌಂಗು, ನೇರಲ, ಮಾವು, ಸೀರ, ಈಳೆ, ಸುಪಾಟಳಿ, ನಾರಂಗ, ಮಾತುಳಂಗ ಇತ್ಯಾದಿ ಹಲವಾರು ಫಲಪುಷ್ಪಗಳಿಂದ

ಶೋಭಿಸುತ್ತಿತ್ತು. ಇಲ್ಲಿ ಅನೇಕ ಜಲ, ಸುಫಲ, ಪ್ರಾಕಾರ, ಕೂಟ, ಸುಂದರವಾದ ಕಟ್ಟಡಗಳು, ರಮ್ಯವಾದ ಜನವಸತಿಗಳಿದ್ದವೆಂದು ಈ ಗ್ರಾಮದ ನೆಲ, ಜಲ, ಸಂಸ್ಕೃತಿ, ದೇವಾಲಯ, ಧರ್ಮಗಳ ಚಿತ್ರಣವು ಶಾಸನಗಳಲ್ಲಿ ಸೊಗಸಾಗಿ ನಿರೂಪಿತವಾಗಿದೆ.

ಡಂಬಳ ಪರಿಸರವು ಕನ್ನಡ ನಾಡನ್ನಾಳಿದ ನಂದರು, ಮೌರ್ಯರು, ಸಾತವಾಹನರು, ಬನವಾಸಿ ಕದಂಬರು, ಬಾದಾಮಿ ಚಾಲುಕ್ಯರು, ಮಳಖೇಡದ ರಾಷ್ಟ್ರಕೂಟರು, ಕಲ್ಯಾಣದ ಚಾಳುಕ್ಯರು, ಲಕ್ಕುಂಡಿಯ ವಾಜಿವಂಶ, ಕಲ್ಯಾಣದ ಕಲಚೂರಿಯರು, ದೇವಗಿರಿ ಸೇವುಣರು, ದೋರಸಮುದ್ರ ಹೊಯ್ಸಳರು, ವಿಜಯನಗರ ಅರಸರು, ವಿಜಾಪುರ ಆದಿಲ್‌ಷಾಹಿಗಳು, ಸವಣೂರು ನವಾಬರು, ಮೈಸೂರು ಒಡೆಯರು, ಮರಾಠರು ಮೊದಲಾದವರ ಆಳ್ವಿಕೆಯ ಪ್ರಭಾವದಲ್ಲಿತ್ತು. ಅವುಗಳಲ್ಲಿ ಕಲ್ಯಾಣದ ಚಾಳುಕ್ಯ ಮತ್ತು ದೇವಗಿರಿ ಸೇವುಣ ಮನೆತನಗಳನ್ನು ಹೊರತುಪಡಿಸಿ ಉಳಿದ ಮನೆತನಗಳಿಗೆ ಸಂಬಂಧಿಸಿದಂತೆ ಯಾವುದೇ ಅವಶೇಷಗಳು ಇದುವರೆಗೆ ಬೆಳಕಿಗೆ ಬಂದಿಲ್ಲ. ಈವರೆಗೆ ಈ ಗ್ರಾಮದಲ್ಲಿ ಇಪ್ಪತ್ತು ಶಾಸನಗಳು ದೊರೆತಿವೆ. ಅವುಗಳಲ್ಲಿ ಕ್ರಿ.ಶ. ೧೦೫೯ರ ಶಾಸನವು ಕಲ್ಯಾಣದ ಚಾಳುಕ್ಯ ಮನೆತನದ ೧ನೆಯ ಸೋಮೇಶ್ವರ, ಕ್ರಿ.ಶ. ೧೦೫೯ರ, ೧೯೮ರ, ಮತ್ತು ೧೧೨೪ರ ಶಾಸನಗಳು ೬ನೆಯ ವಿಕ್ರಮಾದಿತ್ಯ, ಕ್ರಿ.ಶ. ೧೧೮೪ರ ಮತ್ತು ೧೧೮೬ರ ಶಾಸನಗಳು ೪ನೆಯ ಸೋಮೇಶ್ವರ ಹಾಗೂ ಕ್ರಿ.ಶ. ೧೨೮೩ರ ಮತ್ತು ೧೨೮೮ರ ಶಾಸನಗಳು ದೇವಗಿರಿ ಸೇವುಣ ಮನೆತನದ ವೀರರಾಮದೇವನ ಆಳ್ವಿಕೆಯ ಕುರಿತು ನಿರೂಪಿಸಿವೆ. ಕ್ರಿ.ಶ. ೧೯೫ರ ಶಾಸನದಲ್ಲಿ ೬ನೆಯ ವಿಕ್ರಮಾದಿತ್ಯನ ಪಿರಿಯರಸಿ ಲಕ್ಷ್ಮಾದೇವಿಯು ಧರ್ಮಪುರವನ್ನೊಳಗೊಂಡಂತೆ ಹದಿನೆಂಟು ಅಗ್ರಹಾರಗಳನ್ನು ಆಳುತ್ತಿದ್ದಳೆಂದು ನಿರೂಪಣೆಯಿದೆ. ಕ್ರಿ.ಶ. ೧೧೨೪ ಶಾಸನವು ಪೇರ್ಮಭೂಪಾಲಕ, ರೆಬ್ಬರಸ, ಅಜ್ಜಯ್ಯ ನಾಯಕ, ಬಮ್ಮಣ, ಕ್ರಿ.ಶ. ೧೧೮೪ರ ಶಾಸನವು ಕೇಶವ, ನಾರಸಿಂಹ, ರಾಮದೇವ, ಸೋಮ, ತೇಜಿಮಯ್ಯ, ಬಾಕಣ, ರೇವಣ, ಎಂಬ ದಂಡನಾಯಕರನ್ನು ಉಲ್ಲೇಖಿಸಿವೆ. ಈ ದಂಡನಾಯಕರು ಡಂಬಳ ಪರಿಸರದಲ್ಲಿ ಕಾರ್ಯನಿರ್ವಹಿಸಿದ್ದಾರೆ. ಕ್ರಿ.ಶ. ೧೧೮೪ರ ಶಾಸನವು ಹೆಗ್ಗಡೆ ಕಾಳಿಮರಸ, ಅತಿಸೇವ್ಯ, ಕುಪ್ಪಭೂಪತಿ, ಹರಿಹರ, ಮಲ್ಲಿದೇವ ಎಂಬ ಅಧಿಕಾರಿಗಳನ್ನು ಪ್ರಸ್ತಾಪಿಸಿದೆ. ಕ್ರಿ.ಶ. ೧೧೮೪ರ ಶಾಸನವು ಡಂಬಳದ ಮಹಾಪ್ರಭುಗಳಾಗಿದ್ದ ಪದಿನರುವರು ಸೆಟ್ಟಿಯರನ್ನು ಉಲ್ಲೇಖಿಸಿದೆ.

ಈ ಮೇಲಿನ ಅರಸರು, ರಾಣಿಯರು, ದಂಡನಾಯಕರು, ಅಧಿಕಾರಿಗಳು, ಪ್ರಭುಗಳು ಡಂಬಳ ಪರಿಸರದಲ್ಲಿ ವಿಶಾಲವಾದ ತಳಹದಿಯಲ್ಲಿ ಆಳ್ವಿಕೆ–ಆಡಳಿತವನ್ನು ನಿರ್ವಹಿಸುತ್ತ, ಸಮಕಾಲೀನ ಸರ್ವಧರ್ಮಗಳ ಧಾರ್ಮಿಕ ಮತ್ತು ಸಾಮಾಜಿಕ ಚಟುವಟಿಕೆಗಳನ್ನು ಉದಾರವಾಗಿ ಪ್ರೋತ್ಸಾಹಿಸಿ ಆಯಾ ಧರ್ಮಗಳ ಚೌಕಟ್ಟಿನಲ್ಲಿಯೇ ಆ ಧರ್ಮಗಳನ್ನು ರಕ್ಷಿಸಿ ಸಮನ್ವಯತೆ ಮತ್ತು ಭಾವೈಕ್ಯತೆಯನ್ನು ಮೆರೆದಿದ್ದಾರೆ.

ಇಲ್ಲಿಯ ತೈಲ್ಲಿಗರೈವತ್ತೊಕ್ಕಲು, ಉಗುರ ಮುನ್ನೂರ್ವರು, ಐಯ್ಯಾವೊಳೆ ಐನ್ನೂರ್ವರು, ನಖರರು, ಮುಮ್ಮುರಿದಂಡರು, ಎಂಟುಹಿಟ್ಟುಗಳು, ವಡ್ಡವ್ಯವಹಾರಿಗಳು, ಉಭಯ ನಾನಾದೇಶಿಯರು, ಪದಿನರುವರು ಸೆಟ್ಟಿಯರು ಎಂಬ ವರ್ತಕ, ಕೃಷಿ, ಉದ್ಯಮ ಸಂಘಗಳ ಸದಸ್ಯರು ವಿವಿಧ ಲೋಕೋಪಯೋಗಿ ಕಾರ್ಯಗಳನ್ನು ಕೈಗೊಳ್ಳುವುದರೊಂದಿಗೆ ಸಮಕಾಲೀನ ಸರ್ವಧರ್ಮಗಳಿಗೂ ದಾನ-ದತ್ತಿಗಳನ್ನು ಕೊಡಮಾಡಿದ್ದಾರೆ. ಹಾಗಾಗಿ ಡಂಬಳವು ಮಧ್ಯಯುಗೀನ ಕಾಲದಲ್ಲಿ ವಿವಿಧ ಧರ್ಮಗಳ ಸಮನ್ವಯ ಪ್ರಸಿದ್ಧ ಕೇಂದ್ರವಾಗಿ ಮೆರೆದಿದೆ.

### ೨. ಬೌದ್ಧಧರ್ಮ

ಕನ್ನಡ ನಾಡಿನಲ್ಲಿ ಬೌದ್ಧ ಧರ್ಮವನ್ನು ಪ್ರಸಾರ ಮಾಡಿದ ಕೀರ್ತಿ ಮೌರ್ಯ ಮನೆತನದ ಅಶೋಕ ಚಕ್ರವರ್ತಿಗೆ ಸಲ್ಲುತ್ತದೆ. ಈ ನಾಡಿನಲ್ಲಿ ಸಾತವಾಹನರು, ಬಾದಾಮಿ ಚಾಲುಕ್ಯರು, ಗಂಗರು, ರಾಷ್ಟ್ರಕೂಟರು, ಕಲ್ಯಾಣದ ಚಾಳುಕ್ಯರು, ಹೊಯ್ಸಳರು ಬೌದ್ಧ ಧರ್ಮಕ್ಕೂ ರಾಜಾಶ್ರಯ ನೀಡಿ ಪೋಷಿಸಿರುವುದು ಸಮಾಕಾಲೀನ ಶಾಸನ, ಶಿಲ್ಪ, ಸಾಹಿತ್ಯಿಕ ಕುರುಹುಗಳಿಂದ ಸ್ಪಷ್ಟವಾಗುತ್ತದೆ. ಹಾಗಾಗಿ ಈ ನಾಡಿನಲ್ಲಿ ಸನ್ನತಿ, ಕೋಳಿವಾಡ, ರಾಜಘಟ್ಟ, ಬನವಾಸಿ, ಕಾರ್ತಿ, ಹೈಗುಂದ, ಬಬ್ರುವಾಡ, ತೋರ್ಕೆ ಕಾಡಗೋಡು, ಹೊನ್ನಾವರ, ಗೋಕರ್ಣ, ಕೊಪ್ಪಳ, ಮುಳಗುಂದ, ಬಾದಾಮಿ, ಐಹೊಳೆ, ಕಾಡಿಯೂರು, ಬೆಳಗಾವಿ ಮೊದಲಾದ ಅನೇಕ ನೆಲೆಗಳು ಬೌದ್ಧ ಧರ್ಮದ ಪ್ರಸಿದ್ಧ ಕೇಂದ್ರಗಳಾಗಿ ಮೆರೆದಿವೆ. ಡಂಬಳವು ಕ್ರಿ.ಶ. ಸುಮಾರು ೧೧ನೆಯ ಶತಮಾನದಿಂದ ೧೩ನೆಯ ಶತಮಾನದವರೆಗೂ ಬೌದ್ಧ ಧರ್ಮದ ಪ್ರಸಿದ್ಧ ಕೇಂದ್ರವಾಗಿತ್ತು. ಕಲ್ಯಾಣದ ಚಾಣುಕ್ಯ ಮನೆತನದ ೬ನೆಯ ವಿಕ್ರಮಾದಿತ್ಯನ ಪಿರಿಯರಸಿ ಲಕ್ಷ್ಮಾದೇವಿಯು ಹದಿನೆಂಟು ಅಗ್ರಹಾರಗಳು ಮತ್ತು ಧರ್ಮಪುರಕ್ಕೆ ಒಡತಿಯಾಗಿದ್ದ ಸಂದರ್ಭದಲ್ಲಿ ಹದಿನಾರು ಜನ ವರ್ತಕರು ವೌದ್ಧ ವಿಹಾರವನ್ನು ನಿರ್ಮಿಸಿ ದಾದತ್ತಿಗಳನ್ನು ಕೊಟ್ಟಿರುವುದನ್ನು ಕ್ರಿ.ಶ. ೧೦೯೫ರ ಶಾಸನವು ಉಲ್ಲೇಖಿಸಿದೆ. ಆ ವಿಹಾರದ ಪಕ್ಕದಲ್ಲಿ ಲಕ್ಕುಂಡಿಯ ವಡ್ಡವ್ಯವಹಾರಿ ಸಂಗವಯ್ಯ ಸೆಟ್ಟಿಯು ತಾರಾಭಗವತಿ ದೇವಿಯ ದೊಡ್ಡ ಪ್ರಮಾಣದ ವಿಹಾರವನ್ನು ನಿರ್ಮಿಸಿದನು. ಈ ತಾರಾಭಗವತಿ ವಿಹಾರಕ್ಕೆ, ಬುದ್ಧದೇವರ ಪೂಜಾರ್ಚನೆಗೆ ಮತ್ತು ಬೌದ್ಧ ಭಿಕ್ಷುಗಳಿಗೆ ದಾನ ಕೊಡಲಾದ ವಿವರಗಳು ಅದೇ ಶಾಸನದಲ್ಲಿವೆ. ಆ ಬೌದ್ಧ ವಿಹಾರಗಳ ನಂದಾದೀವಿಗೆಗಾಗಿ ಸೊಳಸಿಯ ಪ್ರಮಾಣದಲ್ಲಿ ಒಂದು ಸೌಟು, ಪ್ರತಿ ಗಾಣಕ್ಕೊಂದರಂತೆ ಸೊಂಟಿಗೆಯ ಎಣ್ಣೆಯನ್ನು ತೈಲ್ಲಿಗರೈವತ್ತೊಕ್ಕಲರು ದಾನ ಮಾಡಿದರೆಂದು ಕ್ರಿ.ಶ. ೧೦೯೮ರ ಮತ್ತು ೧೨೮೩ರ ಶಾಸನಗಳು ಪ್ರಸ್ತಾಪಿಸಿವೆ.

ಈ ಮೇಲಿನ ಎರಡೂ ಶಾಸನಗಳಿಂದ ಡಂಬಳದಲ್ಲಿ ಬೌದ್ಧ ಧರ್ಮದ ಎರಡು ವಿಹಾರಗಳಿದ್ದವೆಂಬುದು ಮನದಟ್ಟಾಗುತ್ತದೆ. ಇಲ್ಲಿ ತಾರಾಭಗವತಿ ದೇವಿಯ ಬೃಹತ್ತಾದ

ಶಿಲ್ಪ ಪ್ರತಿಷ್ಠಾಪಿತವಾಗಿತ್ತು. ಆದರೆ ಅವು ಇಂದು ಉಳಿದುಬಂದಿಲ್ಲ. ಸ್ಥಳೀಯ ಕೋಟೆಯ ಆವರಣದಲ್ಲಿ ಬೌದ್ಧ ವಿಹಾರದ ದ್ವಾರಬಂಧದ ಬಿಡಿ ವಾಸ್ತು ಅವಶೇಷವಿದೆ. ಇದೇ ಸ್ಥಳದಲ್ಲಿ ೧೮ ಸೆಂ.ಮೀ. ಎತ್ತರದ ಬೌದ್ಧ ಯಕ್ಷನ ಕುಬ್ಜ ಶಿಲ್ಪವಿದೆ. ಈ ಶಾಸನ, ವಾಸ್ತು, ಶಿಲ್ಪಾವಶೇಷಗಳಿಂದ ಡಂಬಳ ಪರಿಸರದಲ್ಲಿ ಕ್ರಿ.ಶ. ಸುಮಾರು ೧೩ನೆಯ ಶತಮಾನದವರೆಗೂ ಬೌದ್ಧ ಧರ್ಮದ ವಜ್ರಯಾನ ಪಂಥದ ಆಚರಣೆಗಳು ಪ್ರಚಲಿತದಲ್ಲಿದ್ದವೆಂಬುದು ಸ್ಪಷ್ಟವಾಗುತ್ತದೆ. ಕನ್ನಡ ನಾಡಿನ ಇತರೆಡೆಗಳಲ್ಲಿದ್ದಂತೆ ಈ ಪರಿಸರದಲ್ಲಿಯೂ ತಾರಾಭಗವತಿ ದೇವಿಯ ಆರಾಧನೆಗೆ ವಿಶೇಷ ಮನ್ನಣೆಯಿತ್ತು.

### ೩. ಶೈವಧರ್ಮ

ಕನ್ನಡನಾಡಿನಲ್ಲಿ ಶೈವ ಧರ್ಮದ ಅತೀ ಪ್ರಾಚೀನತಮ ಉಲ್ಲೇಖಗಳು ಸಾತವಾಹನ ಮನೆತನದ ವಾಸಿಷ್ಠಿಪುತ್ರ ಪುಳುಮಾವಿಯ ನರಗುಂದ ತಾಲ್ಲೂಕಿನ ವಾಸನ ಹಾಗೂ ವಿಣ್ಹುಕಡ ಚುಟುಕುಲಾನಂದ ಸಾತಕರ್ಣಿಯ ಶಿಕಾರಿಪುರ ತಾಲ್ಲೂಕಿನ ಮಳವಳ್ಳಿಯ ಕ್ರಿ.ಶ. ಸುಮಾರು ೩ನೆಯ ಶತಮಾನದ ಶಾಸನಗಳಲ್ಲಿ ದೊರೆಯುತ್ತವೆ. ತರುವಾಯ ಬನವಾಸಿ ಕದಂಬರು, ತಲಕಾಡಿನ ಗಂಗರು, ಬಾದಾಮಿ ಚಾಲುಕ್ಯರ ಕಾಲದಲ್ಲಿ ಅಲ್ಲಲ್ಲಿ ಈ ಧರ್ಮದ ಚಟುವಟಿಕೆಗಳು ಜರುಗಿವೆ. ಮುಂದಣ ಮಳಖೇಡದ ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ದೋರಸಮುದ್ರದ ಹೊಯ್ಸಳರು, ವಿಜಯನಗರ ಮತ್ತು ಸಮಕಾಲೀನ ಮನೆತನಗಳ ಆಳ್ವಿಕೆಯ ಕಾಲದಲ್ಲಿ ನಾಡಿನಾದ್ಯಂತ ಈ ಧರ್ಮದ ಚಟುವಟಿಕೆಗಳು ವಿಸ್ತರಿಸಿದವು. ಶೈವ ಧರ್ಮದ ವಿವಿಧ ಪಂಥಗಳಲ್ಲಿ (ಕೌಳ, ಕಾಳಾಮುಖ, ಲಕುಲೀಶ, ಪಾಶುಪತ, ಕಾಪಾಲಿಕ) ಕಾಳಾಮುಖ ಮತ್ತು ಪಾಶುಪತ ಪಂಥಗಳು ಈ ನಾಡಿನ ಧಾರ್ಮಿಕ ಇತಿಹಾಸದಲ್ಲಿ ಪ್ರಮುಖ ಪಾತ್ರವಹಿಸಿವೆ. ಆ ಗ್ರಂಥಗಳ ಆಚಾರ್ಯರು ಸ್ಥಾವರ ಲಿಂಗಗಳನ್ನು ಸ್ಥಾಪಿಸುವ ಮೂಲಕ ಶೈವ ಕೇಂದ್ರಗಳಿಗೆ ಚಾಲನೆ ನೀಡಿದರು. ಆ ಕೇಂದ್ರಗಳೆಡೆಗೆ ಆಳರಸಾದಿ ಜನಸಾಮಾನ್ಯರನ್ನೂ ಆಕರ್ಷಿಸುವುದರೊಂದಿಗೆ ಅವರನ್ನು ದೇವಾಲಯ ಮತ್ತು ಮಠಗಳ ನಿರ್ಮಾಣಕ್ಕೆ ಪ್ರೇರೇಪಿಸಿ ಉದಾರವಾಗಿ ದಾನ-ದತ್ತಿಗಳನ್ನು ಪಡೆದರು. ಹಾಗಾಗಿ ಈ ನಾಡಿನುದ್ದಕ್ಕೂ ಶೈವ ಧರ್ಮದ ದೇವಾಲಯಗಳು ಮತ್ತು ಕಾಳಾಮುಖ ಪಂಥದ ಮಠಗಳು ಅತ್ಯಧಿಕವಾಗಿ ಗೋಚರಿಸುತ್ತವೆ. ಅಂತಹ ಶೈವ ಕೇಂದ್ರಗಳಲ್ಲಿ ಡಂಬಳವೂ ಒಂದಾಗಿದೆ. ಈ ಗ್ರಾಮದ ಪರಿಸರದಲ್ಲಿ ಆಳ್ವಿಕೆ ಕೈಗೊಂಡಿದ್ದ ಅರಸರು ಮತ್ತು ಅಧಿಕಾರಿಗಳು ಶೈವ ಧರ್ಮಕ್ಕೂ ರಾಜಾಶ್ರಯ ನೀಡಿ ಪೋಷಿಸಿದ್ದಾರೆ.

ಕ್ರಿ.ಶ. ೧೧೨೪ರ ಶಾಸನದಲ್ಲಿ ನಿರ್ವಾಣಶಕ್ತಿ ಪಂಡಿತದೇವ, ೧೧೮೭ರ ಶಾಸನದಲ್ಲಿ ಧರ್ಮಣಿದೇವ, ಕಳೇಶ್ವರದೇವ, ೧೨ನೆಯ ಶತಮಾನದ ಶಾಸನದಲ್ಲಿ ನೀಲಕಂಠದೇವ, ೧೨೮೩ರ ಶಾಸನದಲ್ಲಿ ಭೋಗದೇವ ಆಚಾರ್ಯರ ಉಲ್ಲೇಖಗಳಿವೆ. ಆ ಆಚಾರ್ಯರ ಪಾಂಡಿತ್ಯ, ಗಂಭೀರತೆ, ತರ್ಕ, ಚತುರತೆ, ಪ್ರಬುದ್ಧತೆ, ಚಾರಿತ್ರ್ಯ, ಜ್ಞಾನ, ಶೀಲ, ವ್ರತ,

ದಾನ ಹಾಗೂ ಯಮ, ನಿಯಮ ಸ್ವಾಧ್ಯಾಯ, ಧ್ಯಾನ, ಧಾರಣ, ಜಪ, ತಪಗಳಲ್ಲಿ ಅವರಿಗಿದ್ದ ಶ್ರದ್ಧೆ ಮೊದಲಾದವುಗಳ ವರ್ಣನೆಗಳು ಗಮನಾರ್ಹವಾಗಿವೆ. ಆ ಎಲ್ಲ ಶೈವಾಚಾರ್ಯರ ಪ್ರೇರಣೆ, ಸ್ಫೂರ್ತಿ, ಉಪದೇಶಗಳಿಂದ ಡಂಬಳದಲ್ಲಿ ಅನೇಕ ಶೈವ ದೇವಾಲಯಗಳು ನಿರ್ಮಾಣವಾಗಿವೆ. ಕ್ರಿ.ಶ. ೧೧೨೫ರ ಶಾಸನದಲ್ಲಿ ಅಜ್ಜಮೇಶ್ವರ, ೧೧೮೪ರ ಶಾಸನದಲ್ಲಿ ಮೈಳಬೇಶ್ವರ, ಸ್ವಯಂಭುದೇವ, ೧೧೮೬ರ ಶಾಸನದಲ್ಲಿ ಸ್ವಯಂಭು ಬಿಜ್ಜೇಶ್ವರದೇವ, ಮಾಣಿಕೇಶ್ವರ, ೧೨ನೆಯ ಶತಮಾನದ ಎರಡು ಶಾಸನಗಳಲ್ಲಿ ಧರ್ಮೇಶ್ವರ, ನೀಲಕಂಠ, ಸೂರ್ಯ ದೇವಾಲಯಗಳ ಪ್ರಸ್ತಾಪಗಳಿವೆ.

ಇಂದಿನ ದೊಡ್ಡಬಸಪ್ಪ ದೇವಾಲಯವೇ ಶಾಸನೋಕ್ತ ಅಜ್ಜಮೇಶ್ವರ ದೇವಾಲಯವಾಗಿದೆ. ಕಲ್ಯಾಣದ ಚಾಳುಕ್ಯ ಮನೆತನದ ೬ನೆಯ ವಿಕ್ರಮಾದಿತ್ಯನ ಅಧೀನದಲ್ಲಿ ಪೆರ್ಮಭೂಪನು (ಹೆರ್ಮ್ಮಾಡಿದೇವ) ಮಾಸವಾಡಿ ನಾಡಿನಲ್ಲಿ ಮಹಾಮಂಡಳೇಶ್ವರ ಗೈಯುತ್ತಿದ್ದನು. ಆ ಸಂದರ್ಭದಲ್ಲಿ ಡಂಬಳ ಪರಿಸರದಲ್ಲಿ ಕಾರ್ಯನಿರ್ವಹಿಸಿತ್ತಿದ್ದ ರೆಬ್ಬರಸ ಮತ್ತು ಬಾವಿಕಬ್ಬೆ ದಂಪತಿಗಳ ಪುತ್ರ ದಂಡನಾಯಕ ಅಜ್ಜಯ್ಯ ನಾಯಕನು ಕ್ರಿ.ಶ. ೧೧೨೫ ರಲ್ಲಿ ಈ ದೇವಾಲಯವನ್ನು ನಿರ್ಮಿಸಿದ್ದಾನೆ. ಇದಕ್ಕೆ ಹೆರ್ಮ್ಮಾಡಿದೇವ ಮತ್ತು ಹದಿನಾರು ಸೆಟ್ಟಿಯರು ನಾಗರಸನಿಂದ ಭೂಮಿಯನ್ನು ಖರೀದಿಸಿ ಸ್ಥಾನಾಚಾರ್ಯ ನಿರ್ವಾಣಶಕ್ತಿ ಪಂಡಿತದೇವನ ಸನ್ನಿಧಿಯಲ್ಲಿ ದ್ರವ್ಯದಾನ ಮತ್ತು ಭೂದಾನ ಮಾಡಿದ್ದಾರೆ. ಕನ್ನಡ ನಾಡಿನಲ್ಲಿ ದೇವಾಲಯಗಳನ್ನು ಹೆಸರಿಸುವಾಗ ಅವುಗಳನ್ನು ನಿರ್ಮಿಸಿದ ವ್ಯಕ್ತಿಗಳು ತಮ್ಮ ಇಲ್ಲವೇ ತಮ್ಮ ಪೂರ್ವಜರ ಹೆಸರುಗಳನ್ನು ಪೂರ್ವವಾಚಿವಾಗಿಟ್ಟು ಮುಂದೆ ಈಶ್ವರ ಎಂದು ಸೇರಿಸುವ ವಾಡಿಕೆ ಸಾಮಾನ್ಯವಾಗಿತ್ತು. ಆ ಹಿನ್ನೆಲೆಯಲ್ಲಿ ಪ್ರಸ್ತುತ ದೇವಾಲಯವನ್ನು ಅಜ್ಜಮೇಶ್ವರ ಎಂದು ಕರೆಯಲಾಗಿದೆ. ಈ ದೇವಾಲಯದ ನವರಂಗದಲ್ಲಿ ಬೃಹತ್ತಾದ ಆಕರ್ಷಕ ನಂದಿ ಶಿಲ್ಪವಿದೆ. ಹಾಗಾಗಿ ಇದನ್ನು ದೊಡ್ಡ ಬಸಪ್ಪ ಎಂದು ಕರೆಯುವುದು ರೂಢಿಯಲ್ಲಿದೆ. ಕನ್ನಡನಾಡಿನ ಸಂದರ್ಭದಲ್ಲಿ ಕ್ರಿ.ಶ. ಸುಮಾರು ೧೦ ರಿಂದ ೧೩ನೆಯ ಶತಮಾನಗಳ ಅವಧಿಯಲ್ಲಿ ದೇವಾಲಯಗಳ ತಲವಿನ್ಯಾಸ ಮತ್ತು ಶಿಖರಗಳ ರಚನೆಗಳಲ್ಲಿ ಹೊಸ ಹೊಸ ಪ್ರಯೋಗಗಳು ಶಾಸ್ತ್ರೋಕ್ತವಾಗಿ ಅಭಿವೃದ್ಧಿ ಹೊಂದಿದವು. ಅಂತಹ ಒಂದು ಪ್ರಯೋಗದ ಫಲವಾಗಿಯೇ ದೊಡ್ಡ ಬಸಪ್ಪ ದೇವಾಲಯ ರಚನೆಯಾಗಿದೆ. ಇದರ ವಾಸ್ತು ವಿನ್ಯಾಸದ ಸಂರಚನೆಯಲ್ಲಿ ಸಮಕಾಲೀನ ವಾಸ್ತು ಪ್ರಬುದ್ಧತೆ ಸ್ಪಷ್ಟವಾಗಿ ಮೂಡಿಬಂದಿದೆ.

ಪೂರ್ವಾಭಿಮುಖವಾಗಿರುವ ಈ ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಮತ್ತು ಎರಡು ಮುಖಮಂಟಪಗಳಿವೆ. ಗರ್ಭಗೃಹ ಮತ್ತು ಅಂತರಾಳಗಳ ನಾಲ್ಕೂ ಮೂಲೆಗಳಲ್ಲಿ ಭಿತ್ತಿಗಂಬಗಳಿವೆ. ಗರ್ಭಗೃಹದಲ್ಲಿ ಪ್ರತಿಷ್ಠಾಪಿತ ಸೋಮಸೂತ್ರವುಳ್ಳ ಶಿವಲಿಂಗವು ಗಮನೀಯವಾಗಿದೆ. ಅಂತರಾಳದ ಮುಂಬದಿಯಲ್ಲಿ ಪ್ರತ್ಯೇಕವಾಗಿ ಎರಡು ಸ್ತಂಭಗಳನ್ನು ನಿಲ್ಲಿಸಿ ಅವುಗಳ ಮೇಲೆ ಮಕರತೋರಣವನ್ನು

ನಿರ್ಮಿಸಲಾಗಿದೆ. ಈ ತೋರಣದ ಮಧ್ಯದಲ್ಲಿ ಶಿವನ ಶಿಲ್ಪವಿದೆ. ನವರಂಗದಲ್ಲಿರುವ ರುದ್ರಕಾಂತ ಪ್ರಕಾರದ ನಾಲ್ಕು ಸ್ತಂಭಗಳು ಆಕರ್ಷಕವಾಗಿವೆ. ಈ ಸ್ತಂಭಗಳ ಕೆಳಗಿನ ಪೀಠಗಳ ನಾಲ್ಕೂ ಮುಖಗಳಲ್ಲಿ ಭೈರವ, ಶಿವ, ವಿಷ್ಣು, ನರ್ತನ ಸ್ತ್ರೀ ಇತ್ಯಾದಿ ಉಬ್ಬು ಶಿಲ್ಪಗಳಿವೆ. ನವರಂಗದ ದಕ್ಷಿಣ ಮತ್ತು ಪೂರ್ವಕ್ಕೆ ಮುಖಮಂಟಪಗಳಿವೆ. ಕಾಲಾಂತರದಲ್ಲಿ ಪೂರ್ವದ ಮುಖಮಂಟಪವನ್ನು ವಿಸ್ತರಿಸಿ ನಂದಿ ಮಂಟಪವನ್ನಾಗಿ ಪರಿವರ್ತಿಸಲಾಗಿದೆ. ಪ್ರಸ್ತುತ ಈ ಮಂಟಪವೇ ಪ್ರವೇಶದ್ವಾರವಾಗಿದೆ. ಇದರಲ್ಲಿ ಆಕರ್ಷಕ ಕೆತ್ತನೆಗಳುಳ್ಳ ಸ್ತಂಭಗಳಿವೆ. ಗರ್ಭಗೃಹ, ನವರಂಗ ಮತ್ತು ಪೂರ್ವದ ಮುಖಮಂಟಪಗಳ ದ್ವಾರಬಂಧಗಳು ರತ್ನ, ಬಳ್ಳಿ, ಯಕ್ಷ, ಸ್ತಂಭ, ಗಂಧರ್ವ ದಂಪತಿ, ವ್ಯಾಳ, ಸಿಂಹಗಳಿಂದ ಅಲಂಕೃತ ಸಪ್ತಶಾಖೆಗಳನ್ನು ಹೊಂದಿವೆ. ಈ ಶಾಖೆಗಳ ಪೇದ್ಯಾ (ಕೆಳ) ಭಾಗದಲ್ಲಿರುವ ವಾದ್ಯಗಾರರು, ಮಿಥುನ ದಂಪತಿಗಳು, ದ್ವಾರಪಾಲಕರ ಉಬ್ಬುಶಿಲ್ಪಗಳು ಮನಸೆಳೆಯುತ್ತವೆ. ಲಲಾಟ ಪಟ್ಟಿಕೆಗಳಲ್ಲಿ ಗಜಲಕ್ಷ್ಮಿಯ ಶಿಲ್ಪಗಳವೆ.

ಈ ದೇವಾಲಯದ ಊರ್ಧ್ವಮುಖ (ಹೊರವಿನ್ಯಾಸ) ರಚನೆಯಲ್ಲಿ ಅಧಿಷ್ಠಾನ ಭಿತ್ತಿ, ಕಪೋತ, ಗ್ರೀವ, ಶಿಖರ, ಸ್ತೂಪಿಗಳಿವೆ. ನಕ್ಷತ್ರಾಕಾರದ ತಲವಿನ್ಯಾಸಕ್ಕೆ ಪೂರಕವಾಗಿ ರಚನೆಯಾಗಿರುವ ಅಧಿಷ್ಠಾನದಲ್ಲಿ ಉಪಾನ, ಜಗತಿ, ಕಂಠ, ವ್ಯಾಳ ಪಟ್ಟಿಕೆ, ಜಗತಿ, ಕುಮುದ ಭಾಗಗಳಿವೆ. ಇವು ಕೀರ್ತಿಮುಖ, ಮಕರತೋರಣ, ಸ್ತಂಭಪಂಜರಗಳಿಂದ ಅಲಂಕಾರವಾಗಿವೆ. ಮೂಲತಃ ಅಧಿಷ್ಠಾನದ ಹೊರಚಾಚುಗಳಲ್ಲಿ ಸುತ್ತಲೂ ತಲಾ ಒಂದೊಂದು ಶಿಲ್ಪಗಳಿದ್ದವು. ಪ್ರಸ್ತುತ ಈ ಹೊರಚಾಚುಗಳಲ್ಲಿರುವ ಚೌಕಾಕಾರದ ಅರೆರಂಧ್ರಗಲ್ಲಿ ಆ ಶಿಲ್ಪಗಳ ಅಡಿಗೂಟಗಳನ್ನು ಕೂಡಿಸಲಾಗಿತ್ತು. ಭಿತ್ತಿಯಲ್ಲಿ ಭದ್ರ, ಪ್ರತಿಭದ್ರ, ಕೋಷ್ಠಪಂಜರ, ಸ್ತಂಭಪಂಜರ, ಮಕರತೋರಣ, ಆನೆಗಳು, ಗಂಧರ್ವ ದಂಪತಿಗಳ ನೃತ್ಯ ಶಿಲ್ಪಗಳ ನಿರೂಪಣೆಗಳಿವೆ. ನವರಂಗದ ಹೊರಭಿತ್ತಿಯು ಮೇಲೆ ದಕ್ಷಿಣದ ಮುಖಮಂಟಪಕ್ಕೆ ಹೊಂದಿಕೊಂಡಂತೆ ಎರಡೂ ಪಾರ್ಶ್ವಗಳಲ್ಲಿ ದೇವಕೋಷ್ಠಗಳನ್ನು ರಚಿಸಿರುವುದು ಗಮನಾರ್ಹವಾಗಿದೆ.ಇವುಗಳ ಮೇಲೆ ಫಾಂಸನಾ ಶೈಲಿಯ ಶಿಖರಗಳ ಮಾದರಿಗಳಿವೆ. ಗರ್ಭಗೃಹದ ಮೇಲಿರುವ ಶಿಖರವು ದ್ರಾವಿಡ ಶೈಲಿಯಲ್ಲಿದ್ದು ಏಳು ತಲಗಳನ್ನು ಹೊಂದಿದೆ. ಇದರ ಭದ್ರಗಳ ಹೊರಚಾಚುಗಳ ಮೇಲೆ ಪಂಜರಗಳ ರಚನೆಗಳಿವೆ. ಶಿಖರದ ಮೇಲಿದ್ದ ಸ್ತೂಪಿ ನಾಶವಾಗಿದೆ.

ಈ ದೇವಾಲಯದ ಸ್ತಪತಿಯು ಗರ್ಭಗೃಹ ಮತ್ತು ನವರಂಗದ ಹೊರವಿನ್ಯಾಸಗಳೆರಡನ್ನೂ ನಕ್ಷತ್ರಾಕಾರದಲ್ಲಿ ನಿರ್ಮಿಸಿ ಹೊಸದೊಂದು ದೇವಾಲಯ ಮಾದರಿಗೆ ಅಡಿಪಾಯ ಹಾಕಿದ್ದಾನೆ. ಗರ್ಭಗೃಹವು ಇಪ್ಪತ್ನಾಲ್ಕು ಮತ್ತು ನವರಂಗವು ಮೂವತ್ತೆರಡು ಹೊರಚಾಚುಗಳನ್ನು ಹೊಂದಿವೆ. ಸಾಮಾನ್ಯವಾಗಿ ಚತುರಸ್ರ ದೇವಾಲಯಗಳಿಗೆ ಮಾತ್ರ ಮೀಸಲಿದ್ದ ದ್ರಾವಿಡ ಶೈಲಿಯ ಶಿಖರವನ್ನು ನಕ್ಷತ್ರಾಕಾರದ ದೇವಾಲಯಕ್ಕೂ ಅನ್ವಯಿಸಿರುವುದು ಅಂದಿನ ತಾಂತ್ರಿಕ ಪರಿಣತಿಯ ಸೋಜಿಗವಾಗಿದೆ.

ಅಪರಾಜಿತಪೃಚ್ಛ ಇತ್ಯಾದಿ ಪ್ರಾಚೀನ ವಾಸ್ತು ಕೃತಿಗಳಲ್ಲಿ ಇಪತ್ನಾಲ್ಕು ಹೊರಚಾಚುಗಳನ್ನು ಹೊಂದಿರುವ ಗರ್ಭಗೃಹದ ದೇವಾಲಯಗಳನ್ನು ಕೈಲಾಸ ಎಂದು ಹೆಸರಿಸಲಾಗಿದೆ. ಆ ಹಿನ್ನೆಲೆಯಲ್ಲಿ ಈ ದೇವಾಲಯವು ಶಿವನ ಕೈಲಾಸ ಪರ್ವತದ ಪ್ರತಿನಿಧಿಯಾಗಿ ಮೂಡಿಬಂದಿದೆ. (ಶಿವನ ಕೈಲಾಸ ಪರ್ವತದ ಪ್ರತಿನಿಧಿಯಾಗಿ ನಿರ್ಮಾಣವಾಗಿರುವ ಅನೇಕ ದೇವಾಲಯಗಳ ಉಲ್ಲೇಖಗಳು ಶಾಸನಗಳಲ್ಲಿ ದೊರೆಯುತ್ತವೆ. ಇಂಡಿ ತಾಲ್ಲೂಕಿನ ಅಗರಖೇಡದ ಕ್ರಿ.ಶ. ೧೧೭೦ರ ಶಾಸನದಲ್ಲಿ ಕೈಲಾಸ ದೇವಾಲಯದ ನಿರೂಪಣೆಯಿದೆ.) ಸಾಮಾನ್ಯವಾಗಿ ಕಾಳಾಮುಖ ಪಂಥದ ಆಚಾರ್ಯರ ಮಠಗಳು ಶೈವ ದೇವಾಲಯಗಳ ದಕ್ಷಿಣಕ್ಕಿರುತ್ತಿದ್ದವು. ನವರಂಗದ ದಕ್ಷಿಣ ದ್ವಾರಬಂಧಗಳು ಆ ಮಠಗಳನ್ನು ಸಂಪರ್ಕಿಸುತ್ತಿದ್ದವು. ಪ್ರಸ್ತುತ ದೇವಾಲಯದ ದಕ್ಷಿಣಕ್ಕಿರುವ ದ್ವಾರಬಂಧವು ಈ ದೇವಾಲಯದ ದಕ್ಷಿಣ ಬದಿಯಲ್ಲಿ ಕಾಳಮುಖ ಪಂಥದ ಆಚಾರ್ಯರ ಮಠವಿತ್ತೆಂದು ಸ್ಪಷ್ಟಪಡಿಸುತ್ತದೆ. ಭಾರತದಾದ್ಯಂತ ಕೈಲಾಸ ಪರ್ವತದ ಪ್ರತಿರೂಪದಲ್ಲಿ ನಿಮಾಣವಾಗಿರುವ ದೇವಾಲಯ ಇದೊಂದೆಯಾಗಿದೆ. ಹಾಗಾಗಿ ಇದು ಹೆನ್ರಿ ಕಜಿನ್ಸ್, ಪರ್ಸಿಬ್ರೌನ್, ಆಡಮ್ ಹಾರ್ಡಿ, ಗೆರಾರ್ಡ್ ಫೋಕೆಮಾ, ಎಂ. ಎ. ಢಾಕಿ, ಕೆ. ವಿ. ಸೌಂದರರಾಜನ್, ಅ. ಸುಂದರ, ಎಸ್. ರಾಜಶೇಖರ, ಶ್ರೀನಿವಾಸ ಪಾಡಿಗಾರ ಮೊದಲಾದ ಪ್ರಸಿದ್ಧ ವಾಸ್ತುಕಲಾ ವಿದ್ವಾಂಸರನ್ನು ಆಕರ್ಷಿಸಿ ಜಗತ್ಪ್ರಸಿದ್ಧವಾಗಿದೆ.

ಇಂದಿನ ಸೋಮೇಶ್ವರ ದೇವಾಲಯವೇ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನೋಕ್ತ ಧರ್ಮೇಶ್ವರ ದೇವಾಲಯವಾಗಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯವು ಪ್ರಾಯಶಃ ಧರ್ಮರಸ ಅಥವಾ ಧರ್ಮರಾಜನ ಹೆಸರಿನಲ್ಲಿ ನಿರ್ಮಾಣವಾಗಿದೆ. ನಿರ್ಮಾಣದಲ್ಲಿ ಮರಳು ಶಿಲೆಗಳನ್ನು ಬಳಸಲಾಗಿದೆ. ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ತೆರೆದ ಸಭಾಮಂಟಪಗಳಿವೆ. ದ್ರಾವಿಡ ಮಾದರಿಯ ಈ ದೇವಾಲಯವು ಚಪ್ಪಟೆ ಮಾಳಿಗೆಯನ್ನು ಹೊಂದಿದೆ. ಇದರ ದ್ವಾರಬಂಧಗಳು, ಸ್ತಂಭಗಳು, ಹೊರಭಿತ್ತಿಯ ವಿನ್ಯಾಸಗಳೆಲ್ಲವೂ ಸರಳವಾಗಿವೆ. ಅಧಿಷ್ಠಾನದಲ್ಲಿ ಉಪಾನ, ಜಗತಿ, ಗಳ ತ್ರಿಪಟ್ಟ ಕುಮುದ, ಕಪೋತ ಭಾಗಗಳಿವೆ ಡಂಬಳದಿಂದ ಪೇಠಾಲೂರಕ್ಕೆ ಹೋಗುವ ಮಾರ್ಗದ ಎಡಗಡೆಯಲ್ಲಿ ಹನುಮಾನ ದೇವಾಲಯದ ಹಿಂಭಾಗದಲ್ಲಿರುವ ಇಂದಿನ ಕಲ್ಮೇಶ್ವರ ದೇವಾಲಯವೇ ಶಾಸನೋಕ್ತ ಸ್ವಯಂಭು ಬಿಬ್ಬೇಶ್ವರ ದೇವಾಲಯವಾಗಿದೆ. ಈ ದೇವಾಲಯವು ಪ್ರಾಯಶಃ ಬಿಬ್ಬರಸ ಅಥವಾ ಬಿಬ್ಬಯ್ಯನ ಹೆಸರಿನಲ್ಲಿ ನಿರ್ಮಾಣವಾಗಿದೆ. ಈ ದೇವಾಲಯದ ವಿವಿಧ ಧಾರ್ಮಿಕ ಮತ್ತು ಸಾಮಾಜಿಕ ಚಟುವಟಿಕೆಗಳಿಗೆ ಕ್ರಿ.ಶ. ೧೧೮೬ ರಲ್ಲಿ ಎಲೆಯ ಬೊಜಂಗರು, ಉಗುರ ಮೂನೂರ್ವ್ವರು, ಹೆರ್ಜುಂಕದ ಹೆಗ್ಗಡೆ ಕಾಳಿಮರಸ ಕೂಡಿಕೊಂಡು ಸ್ಥಾನಾಚಾರ್ಯ ಧರ್ಮಣಿದೇವನ ಶಿಷ್ಯ ಕಳೇಶ್ವರದೇವನ ಪಾದಗಳನ್ನು ತೊಳೆದು ಧಾರಾಪೂರ್ವಕವಾಗಿ ಸುಂಕಗಳು ಮತ್ತು ಭೂಮಿಯನ್ನು ದಾನ ಕೊಟ್ಟಿದ್ದಾರೆ. ದ್ರಾವಿಡ ಮಾದರಿಯ ಸರಳ ವಿನ್ಯಾಸದಲ್ಲಿ ನಿರ್ಮಾಣವಾಗಿರುವ ಈ ದೇವಾಲಯವು

ಪೂರ್ವಾಭಿಮುಖವಾಗಿದೆ. ಇದರ ನಿರ್ಮಾಣದಲ್ಲಿ ಮರಳು ಶಿಲೆಗಳನ್ನು ಬಳಸಲಾಗಿದೆ. ತಲವಿನ್ಯಾಸದಲ್ಲಿ ಗರ್ಭಗೃಹ ಮತ್ತು ಅಂತರಾಳ ಮಂಟಪಗಳು ಮಾತ್ರ ಉಳಿದಿವೆ. ಇವುಗಳ ದ್ವಾರಬಂಧಗಳ ಪಾರ್ಶ್ವಗಳಲ್ಲಿರುವ ಜಾಲಂಧ್ರಗಳು ಆಕರ್ಷಕವಾಗಿವೆ.

ಸ್ಥಳೀಯ ಶ್ರೀ ಪಟ್ಟಣಶೆಟ್ಟಿ ಅವರ ಹೊಲದಲ್ಲಿರುವ ಇಂದಿನ ಸಿದ್ದೇಶ್ವರ ದೇವಾಲಯವೇ ಶಾಸನೋಕ್ತ ಮೈಳಬೇಶ್ವರ ದೇವಾಲಯವಾಗಿದೆ. ಈ ದೇವಾಲಯವು ಪ್ರಾಯಶಃ ಕಲ್ಯಾಣದ ಚಾಳುಕ್ಯ ಮನೆತನದ ೧ನೆಯ ಸೋಮೇಶ್ವರನ ಪಟ್ಟದರಸಿ ಮೈಳಲದೇವಿಯ ಹೆಸರಿನಲ್ಲಿ ನಿರ್ಮಾಣವಾಗಿದೆ. ಈ ದೇವಾಲಯದ ವಿವಿಧ ಧಾರ್ಮಿಕ ಮತ್ತು ಸ್ಥಳೀಯ ಲೋಕೋಪಕಾರ ಚಟುವಟಿಕೆಗಳಿಗೆ ಮಹಾಪ್ರಧಾನ ಸೇನಾಧಿಪತಿ ದಂಡನಾಯಕ ತೇಜಿಮಯ್ಯ ಹಾಗೂ ಆತನ ಅಧಿಕಾರಿಗಳಾಗಿದ್ದ ಬಾಕಣದಂಡನಾಯಕ ಮತ್ತು ದೇವರಸರು ಕ್ರಿಶ. ೧೧೮೪ ರಲ್ಲಿ ಸರ್ವಮಾನ್ಯದ ತೋಟಗಳನ್ನು ಹೊರತುಪಡಿಸಿ ಉಳಿದ ಎಲ್ಲ ತೋಟಗಳ ಮೇಲೆ ಹಾಕುವ ಪನ್ನಾಯ ತೆರಿಗೆಯಿಂದ ಬರುವ ಆದಾಯವನ್ನು ಧರ್ಮಪುರದ ಸ್ವಯಂಭು ದೇವರ ಸನ್ನಿಧಿಯಲ್ಲಿ ದಾನ ಮಾಡಿದ್ದಾರೆ. ಇದರ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಮಂಟಪಗಳಿವೆ. ಗರ್ಭಗಹದ ವಿತಾನದಲ್ಲಿರುವ ಪದ್ಮಮಂಡಲ,ದ್ವಾರಬಂಧದ ಇಕ್ಕೆಲಗಳಲ್ಲಿರುವ ಜಾಲಂಧ್ರ ನವರಂಗದಲ್ಲಿರುವ ರುದ್ರಕಾಂತ ಪ್ರಕಾರದ ಸ್ತಂಭಗಳು ಗಮನಾರ್ಹವಾಗಿವೆ. ನವರಂಗಕ್ಕೆ ದಕ್ಷಿಣ ಮತ್ತು ಉತ್ತರ ದಿಕ್ಕುಗಳಿಗೂ ಪ್ರವೇಶದ್ವಾರಗಳಿವೆ. ಪೂರ್ವದ ದ್ವಾರಬಂಧವು ರತ್ನ, ನಾಗಿಣಿ, ಲತಾ, ಸ್ಥಂಭ, ಪತ್ರಗಳಿಂದ ಅಲಂಕೃತ ಪಂಚಶಾಖೆಗಳಿಂದ ಕೂಡಿದೆ. ಈ ಶಾಖೆಗಳ ಕೆಳಭಾಗದಲ್ಲಿ ನಂದಿ, ರತಿ, ಮನ್ಮಥ, ಶೈವ ದ್ವಾರಪಲಕರ ಉಬ್ಬು ಶಿಲ್ಪಗಳಿವೆ. ಕೋಟೆ ಆವರಣದಲ್ಲಿ ಸಂಪೂರ್ಣ ನಾಶವಾಗಿರುವ ಈಶ್ವರ ದೇವಾಲಯವಿದೆ. ಇದುವೇ ಶಾಸನೋಕ್ತ ಮಾಣಿಕೇಶ್ವರ ದೇವಾಲಯುವಾಗಿದೆ. ಸ್ಥಳೀಯ ಕೆರೆಯ ದಂಡೆಯ ಮೇಲಿರುವ ಕಾಳಮ್ಮನ ದೇವಾಲಯದ ಪರಿಸರದಲ್ಲಿಯೇ ಶಾಸನೋಕ್ತ ನೀಲಕಂಠ ದೇವಾಲಯವಿತ್ತು. ಆ ದೇವಾಲಯದ ವಾಸ್ತು-ಶಿಲ್ಪಾವಶೇಷಗಳು ಈ ಪರಿಸರದಲ್ಲಿ ಹರಡಿಕೊಂಡಿವೆ. ಉಳಿದಂತೆ ಸ್ವಯಂಭುದೇವ ದೇವಾಲಯವು ಯಾವುದೋ ಒಂದು ಕಾಲಘಟ್ಟದಲ್ಲಿ ಸಮೂಲನಾಶವಾಗಿದೆ. ಈ ಮೇಲಿನ ಎಲ್ಲ ದೇವಾಲಯಗಳಲ್ಲಿ ಮತ್ತು ಗ್ರಾಮದ ವಿವಿದೆಡೆಗಳಲ್ಲಿರುವ ಸಪ್ತಮಾತೃಕೆಯರು, ಮಹಿಷಮರ್ದಿನಿ, ಕಾರ್ತಿಕೇಯ, ಗಣೇಶ, ನಂದಿ, ಶಿವಲಿಂಗ ಇತ್ಯಾದಿ ಪ್ರಾಚೀನ ಶಿಲ್ಪಗಳೂ ಪ್ರತೀಮಾ ಲಕ್ಷಣಗಳ ದೃಷ್ಟಿಯಿಂದ ಗಮನಾರ್ಹವಾಗಿವೆ.

**೪. ಜೈನಧರ್ಮ**

ಜೈನ ಪರಂಪರೆಯ ೧ನೆಯ ತೀರ್ಥಂಕರ ಆದಿನಾಥನ ಕಾಲದಿಂದಲೂ ಕನ್ನಡ ನಾಡಿನಲ್ಲಿ ಜೈನ ಧರ್ಮದ ಅಸ್ತಿತ್ವ ಗೋಚರಿಸುತ್ತದೆ. ಆದರೆ ಇದು ಕ್ರಿಪೂ. ಸುಮಾರು ೪ನೆಯ ಶತಮಾನದಿಂದೀಚೆಗೆ ಪ್ರಸಿದ್ಧಿಗೆ ಬಂದಿದೆ. ಅಂದು ಉತ್ತರ ಭಾರತದಲ್ಲಿ

ಬರಗಾಲವುಂಟಾದ ನಿಮಿತ್ತ ಉಜ್ಜೈನಿಯಿಂದ ದಕ್ಷಿಣ ಭಾರತದ ಶ್ರವಣಬೆಳಗೊಳಕ್ಕೆ ಭದ್ರಬಾಹು ಭಟ್ಟಾರಕರು, ಅವರ ಪ್ರಧಾನ ಶಿಷ್ಯ ನಂದ ಮನೆತನದ ಚಂದ್ರಗುಪ್ತ ಮತ್ತು ಹನ್ನೆರಡು ಸಾವಿರ ಮುನಿಗಳು ಈ ನಾಡಿಗೆ ಆಗಮಿಸಿದರು. ಆ ಮುನಿಗಳು ಕ್ರಮೇಣ ನಾಡಿನುದ್ದಗಲ್ಲಕ್ಕೂ ಸಂಚರಿಸಿ ಧರ್ಮ ಪ್ರಸಾರದೊಂದಿಗೆ ಸಮಾಜವನ್ನು ಜಾಗೃತಗೊಳಿಸಿದರು. ಆ ಪರಂಪರೆಯನ್ನು ತರುವಾಯದ ಸಾವಿರಾರು ಮುನಿಗಳು, ಆರ್ಯಿಕೆಯರು, ಭಟ್ಟಾರಕರು ಮುಂದುವರೆಸಿಕೊಂಡು ಬಂದರು. ಹಾಗಾಗಿ ಜೈನ ಧರ್ಮವು ಕ್ರಿ.ಶ. ಸುಮಾರು ೧೨ನೆಯ ಶತಮಾನದವರೆಗೂ ಈ ನಾಡಿನ ರಾಜ್ಯಧರ್ಮವಾಗಿ ಮೆರೆದಿದೆ. ಈ ನಾಡನ್ನಾಳಿದ ಅರಸರು ಮತ್ತು ಅಧಿಕಾರಿಗಳೆಲ್ಲರೂ ಒಂದಿಲ್ಲೊಂದು ರೀತಿಯಲ್ಲಿ ಜೈನ ಧರ್ಮದ ತತ್ವ-ಸಿದ್ಧಾಂತಗಳು, ಆಚಾರ-ವಿಚಾರಗಳು, ಮುನಿಗಳ ಉಪದೇಶಗಳ ಪ್ರಭಾವಕ್ಕೊಳಗಾಗಿದ್ದಾರೆ. ಆಳರಸರಾದಿ ಜನಸಾಮಾನ್ಯರ ಉದಾರವಾದ ಪ್ರೋತ್ಸಾಹದಡಿಯಲ್ಲಿ ನಾಡಿನಾದ್ಯಂತ ಸಾವಿರಾರು ಜೈನ ಕೇಂದ್ರಗಳು ಸ್ಥಾಪನೆಯಾದವು. ಆ ಕೇಂದ್ರಗಳಪರಿಸರದಲ್ಲಿ ಮೂಲಸಂಘ (ದಿಗಂಬರ), ಕಾಷ್ಠಸಂಘ (ಶ್ವೇತಾಂಬರ), ಯಾಪನೀಯ ಸಂಘ ಪರಂಪರೆಯ ಜಿನಾಲಯಗಳ ನಿರ್ಮಾಣ, ಶಿಲ್ಪಗಳ ಪ್ರತಿಷ್ಠಾಪನೆ, ಸಾಹಿತ್ಯಿಕ ಚಟುವಟಿಕೆಗಳು ಅವಿಚ್ಛಿನ್ನವಾಗಿ ಬೆಳೆದುಬಂದಿವೆ. ಅಂತಹ ಪ್ರಸಿದ್ಧ ಕೇಂದ್ರಗಳಲ್ಲಿ ಡಂಬಳವೂ ಒಂದಾಗಿದೆ.

ಕ್ರಿ.ಶ. ೧೦೫೯ರ ಶಾಸನದಲ್ಲಿ ಬಾಚಯ್ಯ ಸೆಟ್ಟಿಯ ಅಳಿಯನಾದ ಬೀರಯ್ಯ ಸೆಟ್ಟಿಯು ಚತುಸ್ಸಮಯ ಸಮುದ್ಧರಣರೆನಿಸಿದ ಹದಿನಾರು ಮಹಾಜನ ಸೆಟ್ಟಿಗಳು ಮತ್ತು ಮಹಾನಗರದ ಸಮುದಾಯದ ಸಮ್ಮುಖದಲ್ಲಿ ನಗರ ಜಿನಾಲಯದ ಮುನಿಗಳ ಆಹಾರ ದಾನಕ್ಕೆ ಸುವರ್ಣ ದಾನವನ್ನು ಕೊಟ್ಟ ನಿರೂಪಣೆಯಿದೆ. ಆ ದಾನವನ್ನು ಸ್ಥಳೀಯ ಶ್ರಾವಕರು ಕಾಲಾಂತರದಲ್ಲಿ ಮುಂದುವರಿಸಿಕೊಂಡು ಬರಲು ಸೂಚಿಸಲಾಗಿದೆ. ಕ್ರಿ.ಶ. ೧೨೮೮ರ ಶಾಸನವು ನಗರ ಜಿನಾಲಯಕ್ಕೆ ಧರ್ಮ್ಮವೊಳಲಿನ ಎಂಟುನಾಡು, ಹದಿನೆಂಟು ಮಹಾನಾಡು ಮತ್ತು ಸಾಳ್ವ ಚಾವುಂಡನ ಸಹೋದರ ಸಪ್ತರಸರು ಸಂತೆಯ ತೆರಿಗೆಯ ಆದಾಯವನ್ನು, ಐವತ್ತೊಕ್ಕಲರು ನಂದಾದೀವಿಗೆಗಾಗಿ ಎಣ್ಣೆಯನ್ನು, ಉಗುರ ಮೂನೂರ್ವ್ವರು ಅಷ್ಟವಿಧಾರ್ಚ್ಚನೆಗೆ ಹಾಗವನ್ನು (ನಾಣ್ಯ) ದಾನ ಮಾಡಿರುವುದನ್ನು ಉಲ್ಲೇಖಿಸಿದೆ. ಕ್ರಿ.ಶ. ೧೧೮೪ ಶಾಸನದಲ್ಲಿ ಮೈಳಬೇಶ್ವರ ದೇವಾಲಯಕ್ಕೆ ದಾನ ಮಾಡಿದ ಭೂಮಿಯ ಮೇರೆಗಳನ್ನು ಸೂಚಿಸಿರುವ ವಿವರಗಳಲ್ಲಿ ಪಶ್ಚಿಮಕ್ಕೆ ದಾಳಿಸೆಟ್ಟಿಯ ಬಸದಿಯ ಕುಳಿಯ ತೋಟದ ಪ್ರಸ್ತಾಪವಿದೆ. ಕ್ರಿ.ಶ. ಸುಮಾರು ೧೨ನೆಯ ಶತಮಾನದ ಪಾದಪೀಠ ಶಾಸನದಲ್ಲಿ ಎಕ್ಕಟಿಗರ ಕಲ್ಲಿಸೆಟ್ಟಿಯ ಮೊಮ್ಮಗಳೂ ಮಹದೇವಸೆಟ್ಟಿಯ ಮಗಳೂ ಆದ ಮಲ್ಲಿಯಕ್ಕ ಬಸದಿಯನ್ನು ಕಟ್ಟಿಸಿ ಅದರಲ್ಲಿ ಪಾರ್ಶ್ವನಾಥ ತೀರ್ಥಂಕರನ ಶಿಲ್ಪವನ್ನು ಪ್ರತಿಷ್ಠಾಪಿಸಿದ ಉಲ್ಲೇಖವಿದೆ. ಈ ನಾಲ್ಕೂ ಶಾಸನಗಳ ನಿರೂಪಣೆಗಳಿಂದ ಡಂಬಳದಲ್ಲಿ ಮೂರು ಬಸದಿಗಳಿದ್ದ ವಿಚಾರ ಸ್ಪಷ್ಟವಾಗುತ್ತದೆ. ಆದರೆ ಅವೆಲ್ಲವೂ ಯಾವುದೋ ಒಂದು ಕಾಲಘಟ್ಟದಲ್ಲಿ

ಸಮೂಲನಾಶವಾಗಿವೆ. ದಾನಚಿಂತಾಮಣಿ ಅತ್ತಿಮಬ್ಬೆ ಮಾಸವಾಡಿ-೧೪೦ ನಾಡನ್ನೊಳಗೊಂಡಂತೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ೧೫೦೧ ಬಸದಿಗಳನ್ನು ನಿರ್ಮಿಸಿದ ವಿಚಾರ ಶಾಸನ ಮತ್ತು ಸಾಹಿತ್ಯಿಕ ಕುರುಹುಗಳಿಂದ ಮನದಟ್ಟಾಗುತ್ತದೆ. ಆ ಬಸದಿಗಳಲ್ಲಿ ಲಕ್ಕುಂಡಿಯ ಬ್ರಹ್ಮ ಜಿನಾಲಯವೊಂದೇ ಉಳಿದು ಬಂದಿದೆ. ಆ ಮಹಾದಾನಿ ಡಂಬಳದಲ್ಲಿಯೂ ಜೈನ ಚಟುವಟಿಕೆಗಳನ್ನು ಕೈಗೊಂಡಿರುವುದನ್ನು ಅಲ್ಲಗಳೆಯುವಂತಿಲ್ಲ.

ಡಂಬಳದ ಪಾರ್ಶ್ವನಾಥ ಬಸದಿಯಲ್ಲಿ ಮಲ್ಲಿಯಕ್ಕ ಪ್ರತಿಷ್ಠಾಪಿಸಿದ್ದ ಪಾರ್ಶ್ವನಾಥ ಹಾಗೂ ವ್ಯಾಪಾರಿಗಳು ನಿರ್ಮಿಸಿದ್ದ ನಗರ ಜಿನಾಲಯದಲ್ಲಿ ಪ್ರತಿಷ್ಠಾಪಿತ ಪ್ರಥಮೋಪದೇಶ ತೀರ್ಥಂಕರ ಶಿಲ್ಪಗಳು ಇಂದಿಗೂ ಸುರಕ್ಷಿತವಾಗಿ ಉಳಿದುಬಂದಿವೆ. ಇವುಗಳನ್ನು ಗದಗ ನಗರದಲ್ಲಿರುವ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯದ ವಸ್ತುಸಂಗ್ರಹಾಲಯದಲ್ಲಿ ತಂದಿಡಲಾಗಿದೆ. ಕಪ್ಪುಮಿಶ್ರಿತ ನೀಲಿಛಾಯೆಯ ಬಳಪದ ಶಿಲೆಯಲ್ಲಿ ಕಂಡರಿಸಲ್ಪಟ್ಟಿರುವ ಪಾರ್ಶ್ವನಾಥ ತೀರ್ಥಂಕರನ ಶಿಲ್ಪವು ೪೦ ಸೆಂ.ಮೀ. ಎತ್ತರ ಮತ್ತು ೨೪ ಸೆಂ.ಮೀ. ಅಗಲವಾಗಿದೆ. ಕಾಯೋತ್ಸರ್ಗದಲ್ಲಿರುವ ಪಾರ್ಶ್ವನಾಥನ ಹಿಂಬದಿಯಲ್ಲಿ ಬಲಪಾದದಡಿಯಿಂದ ಮುಡಿಯವರೆಗೂ ಅಂಕುಡೊಂಕಾಗಿ ಸುರುಳಿಗೊಂಡಿರುವ ಸರ್ಪವು ಈತನ ಶಿರದ ಮೇಲೆ ತನ್ನ ಏಳು ಹೆಡೆಗಳನ್ನು ಕೊಡೆಯಾಗಿ ಹಿಡಿದ ಹಾಗೆ ಬಿಚ್ಚಿಕೊಂಡಿದೆ. ಸರ್ಪದ ಮೇಲೆ ರತ್ನತ್ರಯದ ಪ್ರತೀಕವಾಗಿರುವ ಮುಕ್ಕೊಡೆಯಿದೆ. ಶಿರದ ಹಿಂಭಾಗದಲ್ಲಿ ಪ್ರಭಾಮಂಡಲವಿದೆ. ಭುಜದ ಪಾರ್ಶ್ವಗಳಲ್ಲಿ ಚಾಮರಗಳಿವೆ. ಕಾಲುಗಳ ಬಲಬದಿಯಲ್ಲಿ ಧರಣೇಂದ್ರ ಯಕ್ಷ ಮತ್ತು ಎಡಬದಿಯಲ್ಲಿ ಪದ್ಮಾವತಿ ಯಕ್ಷಿ ದ್ವಿಭಂಗಿಯಲ್ಲಿ ನಿಂತಿದ್ದಾರೆ. ಚತುರ್ಭುಜರಾಗಿರುವ ಇವರ ಕೈಗಳಲ್ಲಿ ಕ್ರಮವಾಗಿ ಪದ್ಮ, ಅಂಕುಶ, ಪಾಶ, ಫಲಗಳಿವೆ. ಇಬ್ಬರೂ ಕಿರೀಟಮುಕುಟ, ಕರ್ಣಮಂಡಲ, ಕೆಯೂರ, ಕಂಠಹಾರ, ಮಣಿಸರ, ಮೇಖಲೆ, ತೋಳಬಂದಿ, ಕೈಗಡಗ, ಬೆರಳುಂಗುರ, ಕಟಿವಸ್ತ್ರ, ಕಾಲ್ಗಡಗ ಮೊದಲಾದ ವಸ್ತ್ರಾಭರಣಗಳಿಂದ ಅಲಂಕೃತರಾಗಿದ್ದಾರೆ. ಚಾಮರಗಳ ಇಕ್ಕೆಲಗಳಲ್ಲಿ ಎರಡು ಮತ್ತು ಪಾರ್ಶ್ವನಾಥನ ಮಣಿಗಂಟಿನ ಇಕ್ಕೆಲಗಳಲ್ಲಿ ಎರಡು ಪರ್ಯಂಕಾಸನದಲ್ಲಿರುವ ಮುಕ್ಕೊಡೆಸಹಿತ ತೀರ್ಥಂಕರರ ನಾಲ್ಕು ಚಿಕಣಿ ಶಿಲ್ಪಗಳಿವೆ. ಹೀಗಾಗಿ ಈ ಶಿಲ್ಪವು ಪಂಚತೀರ್ಥಿ ಪಾರ್ಶ್ವನಾಥನ ಶಿಲ್ಪವೆನಿಸುತ್ತದೆ. ಪಾರ್ಶ್ವನಾಥ ತೀರ್ಥಂಕರನ ಅಂಗೋಪಾಂಗಗಳು ಮತ್ತು ಯಕ್ಷ-ಯಕ್ಷಿಯ ವಸ್ತ್ರಾಭರಣಗಳನ್ನು ನೈಜವಾಗಿ ತೋರಿಸಲು ಅಂದಿನ ಶಿಲ್ಪಿಯ ಪ್ರಯತ್ನ ಯಶಸ್ವಿಯಾಗಿದೆ. ಈ ಶಿಲ್ಪವು ಪಾರ್ಶ್ವನಾಥ ತೀರ್ಥಂಕರನು ಕೇವಲಜ್ಞಾನ ಕಲ್ಯಾಣದಲ್ಲಿರುವ ಪರಿಕಲ್ಪನೆಯಲ್ಲಿ ಮೂಡಿಬಂದಿದೆ. ಕ್ರಿ.ಶ. ಸುಮಾರು ೧೧ನೆಯ ಶತಮಾನದ ಪ್ರಥಮೋಪದೇಶ ತೀರ್ಥಂಕರನ ಶಿಲ್ಪವು ಕಪ್ಪುಮಿಶ್ರಿತ ನೀಲಿಛಾಯೆಯ ಬಳಪದ ಶಿಲೆಯಲ್ಲಿ ಕಂಡರಿಸಲ್ಪಟ್ಟಿದೆ. ೧೦೫ ಸೆಂ.ಮೀ. ಎತ್ತರ ಮತ್ತು ೭೫ ಸೆಂ.ಮೀ. ಅಗಲವಾಗಿದೆ. ಪರ್ಯಂಕಾಸನದಲ್ಲಿರುವ ತೀರ್ಥಂಕರನ

ಶಿರದ ಹಿಂಬದಿಯಲ್ಲಿ ಪ್ರಭಾಮಂಡಲವಿದೆ. ಮೇಲ್ಭಾಗದಲ್ಲಿ ಮುಕ್ಕೂಡೆಯಿದೆ. ಮುಕ್ಕೂಡೆಯ ಮೇಲೆ ಬಳ್ಳಿಯ ಅಲಂಕಾರವಿದೆ. ಭುಜದ ಪಾರ್ಶ್ವಗಳಲ್ಲಿ ದ್ವಿಭುಜ ಚಾಮರಧಾರರಿದ್ದಾರೆ. ತೀರ್ಥಂಕರನು ಆಸೀನವಾಗಿರುವ ಸಿಂಹಾಸನವು ದಿಂಬು, ಸಿಂಹ, ಮಕರಗಳಿಂದ ಅಲಂಕಾರವಾಗಿದೆ. ಈ ಶಿಲ್ಪವು ಪ್ರಸ್ತುತ ತೀರ್ಥಂಕರನು ಸಮವಸರಣ ಮಂಟಪದಲ್ಲಿ ಸಕಲ ಜೀವಿಗಳನ್ನುದ್ದೇಶಿಸಿ ಪ್ರಥಮೋಪದೇಶ ಮಾಡುತ್ತಿರುವುದನ್ನು ಪ್ರತಿನಿಧಿಸುತ್ತದೆ.

**೫. ವೈಷ್ಣವ ಧರ್ಮ**

ವೈಷ್ಣವ ಧರ್ಮದಲ್ಲಿ ವಿಷ್ಣುವನ್ನೇ ಪರಮೋಚ್ಛ ದೈವವೆಂದು ಪರಿಗಣಿಸಿ ಆತನನ್ನು ವಿವಿಧ ರೂಪ ಮತ್ತು ಅವತಾರಗಳಲ್ಲಿ ಆರಾಧಿಸುತ್ತಿದ್ದ ಹಾಗೂ ಪ್ರತ್ಯೇಕವಾದ ತತ್ವ-ಸಿದ್ಧಾಂತವನ್ನು ಹೊಂದಿದ್ದ ಭಾಗವತ ಮತ್ತು ವೈಖಾನಸಾಗಮ ಎಂಬೆರಡು ಪಂಥಗಳಿದ್ದವು. ಅವು ಬದಲಾದ ಪರಿಸ್ಥಿತಿಗನುಗುಣವಾಗಿ ತಮ್ಮ ಆಚಾರ-ವಿಚಾರಗಳಲ್ಲಿ ಕೆಲವು ಬದಲಾವಣೆಗಳೊಂದಿಗೆ ಇಂದಿಗೂ ಅಸ್ತಿತ್ವದಲ್ಲಿವೆ. ಕನ್ನಡ ನಾಡಿನಲ್ಲಿ ಕ್ರಿಸ್ತಶಕಾರಂಭದಿಂದಲೂ ಆ ಪಂಥಗಳ ಚಟುವಟಿಕೆಗಳು ಗೋಚರಿಸುತ್ತವೆ. ಈ ಧರ್ಮವು ಪ್ರಾರಂಭದಿಂದಲೂ ಶೈವ ಧರ್ಮದೊಂದಿಗೆ ಸಾಮರಸ್ಯದಿಂದ ಬೆಳೆದು ಬಂದಿದೆ. ಈ ನಾಡನ್ನಾಳಿದ ಅರಸು ಮನೆತನಗಳೆಲ್ಲವೂ ವೈಷ್ಣವ ಧರ್ಮದ ದೇವಾಲಯಗಳು, ಆಚಾರ್ಯರು, ವಿದ್ವಾಂಸರು ಮಹಾಜನರಿಗೆ ದಾನ-ದತ್ತಿಗಳನ್ನು ಕೊಟ್ಟು ವಿಶೇಷವಾಗಿ ಗೌರವಿಸಿವೆ. ಹಾಗಾಗಿ ಈ ನಾಡಿನಲ್ಲಿದ್ದ ಬಹತೇಕ ಅಗ್ರಹಾರಗಳು, ಬ್ರಹ್ಮದೇಯಗಳು, ಘಟಿಕಾಸ್ಥಾನಗಳು ವೈಷ್ಣವ ಧರ್ಮದ ಆಡಳಿತ, ಧಾರ್ಮಿಕ, ಶೈಕ್ಷಣಿಕ ಕೇಂದ್ರಗಳಾಗಿದ್ದವು. ಅಂತಹ ಕೇಂದ್ರಗಳಲ್ಲಿ ಡಂಬಳವೂ ಒಂದಾಗಿದೆ.

ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನವು ಬಳಗಾರ ಕುಲದ ಲೆಂಕ ನಾಗದೇವನು ನಿರ್ಮಿಸಿದ ಸೂರ್ಯ ದೇವಾಲಯವನ್ನು ಉಲ್ಲೇಖಿಸಿದೆ. ಪ್ರಸ್ತುತ ಶಾಸನವು ಆ ಕಲ್ಲಿನ ದೇವಾಲಯವು ಅತ್ಯುತ್ತುಂಗವಾಗಿತ್ತು, ಮೇರುಪರ್ವತದಂತೆ ಶ್ರೇಷ್ಠತೆಯನ್ನು ಹೊಂದಿತ್ತು, ಹೊನ್ನ ಬೆಟ್ಟದಂತೆ ಮಹೋನ್ನತವಾಗಿತ್ತು, ಧರ್ಮವೊಳಲ್ ಪಟ್ಟಣಕ್ಕೆ ತಿಲಕಪ್ರಾಯವಾಗಿತ್ತು. ಲೆಂಕ ನಾಗದೇವನ ಕೀರ್ತಿಯ ಮೂರ್ತಿಯಂತೆ ಚೆಲುವಾಗಿತ್ತೆಂದು ವರ್ಣಿಸಿದೆ. ಆ ದೇವಾಲಯವು ಇಂದು ಉಳಿದು ಬಂದಿಲ್ಲ. ಡಂಬಳ ಪರಿಸರದಲ್ಲಿ ವೈಷ್ಣವ ಧರ್ಮವು ಸಮಕಾಲೀನ ಇತರ ಧರ್ಮಗಳೊಂದಿಗೆ ಸಾಮರಸ್ಯ ಸಂಬಂಧವನ್ನು ಹೊಂದಿತ್ತೆಂಬುದು ದೊಡ್ಡ ಬಸಪ್ಪ ಇತ್ಯಾದಿ ದೇವಾಲಯಗಳ ಭಿತ್ತಿಗಳ ಮೇಲಿರುವ ವೈಷ್ಣವ ಧರ್ಮದ ವಿಷ್ಣು ಮೊದಲಾದ ದೇವತಾ ಶಿಲ್ಪಗಳು ಸ್ಪಷ್ಟಪಡಿಸುತ್ತವೆ. ವೈಷ್ಣವ ಧರ್ಮದ ಕೆಲವರು ಇತರ ಧರ್ಮಗಳ ದೇವಾಲಯಗಳಿಗೆ ದಾನ-ದತ್ತಿಗಳನ್ನು ಕೊಟ್ಟಿದ್ದಾರೆ. ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನವು ನೀಲಕಂಠ ದೇವರ ಭಕ್ತನಾದ ಶ್ರೀರಾಮಭಟ್ಟನು ತನ್ನ ಸ್ವಂತ ಭೂಮಿಯನ್ನು ಸತ್ರಕ್ಕಾಗಿ

ದಾನ ಕೊಟ್ಟನೆಂದು ನಿರೂಪಿಸಿದೆ. ಕ್ರಿ.ಶ. ೧೧೮೪ರ ಶಾಸನದಲ್ಲಿ ಕೇಶವ, ಅಚ್ಯುತ, ನಾರಸಿಂಹ, ವನಜಾಕ್ಷ, ಬ್ರಹ್ಮ, ಪಂಕಜಭವ, ವರುಣ, ಧನೇಶ, ಸೂರ್ಯ, ಅಗಸ್ತ್ಯ, ಜಮದಗ್ನಿ, ಪುರುಷೋತ್ತಮ, ಧಾತ್ರಿ, ಮನು, ವಾಶಿಷ್ಠನ್ವಯ, ಅತಿಸೇವ್ಯ, ರಾಮದೇವ, ಅಗಸ್ತ್ಯಗೋತ್ರ, ಬಾದರಾಯಣಗೋತ್ರ, ರೇವಣ ಇತ್ಯಾದಿ ವೈಷ್ಣವಪರ ದೇವತೆಗಳು, ಆಚಾರ್ಯರು, ವ್ಯಕ್ತಿಗಳು, ಗೋತ್ರಗಳ ಉಲ್ಲೇಖಗಳಿವೆ.

**೬. ವೀರಶೈವ ಧರ್ಮ**

ಜಗದ್ಗುರು ಬಸವಣ್ಣನವರು ಕ್ರಿ.ಶ. ೧೧೦೫-೧೧೬೭) ಶೈವ ಧರ್ಮದ ವಿವಿಧ ಪಂಥಗಳ ಕೆಲವು ಉದಾರ ಅಂಶಗಳನ್ನು ಒಂದೆಡೆಗೆ ಕ್ರೋಢೀಕರಿಸಿ ಅದಕ್ಕೊಂದು ವ್ಯವಸ್ಥೆ, ಆಚಾರ, ದರ್ಶನ ಕಲ್ಪಿಸಿದರು. ಅದುವೇ ವೀರಶೈವ ಧರ್ಮವೆಂದು ಪ್ರಸಿದ್ಧವಾಯಿತು. ಬಸವಣ್ಣನವರಿಗೆ ಆ ಕಾರ್ಯದಲ್ಲಿ ಸಮಕಾಲೀನ ಅಲ್ಲಮಪ್ರಭು, ಚೆನ್ನಬಸಣ್ಣ, ಅಕ್ಕಮಹಾದೇವಿ, ಸಿದ್ಧರಾಮ ಮೊದಲಾದ ಅನೇಕ ಶರಣ-ಶರಣೆಯರೂ ಬೆಂಬಲ ನೀಡಿದರು. ವೀರಶೈವ ಧರ್ಮವನ್ನು ಲಿಂಗಾಯತ ಧರ್ಮವೆಂದೂ ಕರೆಯಲಾಗಿದೆ. ಬೀದರ ಜಿಲ್ಲೆಯ ಇಂದಿನ ಬಸವಕಲ್ಯಾಣವು ಆ ಧರ್ಮದ ಪ್ರಧಾನ ಕೇಂದ್ರವಾಗಿತ್ತು. ಅಂದಿನ ಅಮಾಜದಲ್ಲಿ ಬೇರೂರಿದ್ದ ಅಜ್ಞಾನ, ಅಂಧಕಾರ, ಮೌಢ್ಯ, ಕಂದಾಚಾರ, ಜಾತೀಯತೆ, ಮತಾಂಧತೆ, ಶೋಷಣೆ ಮೊದಲಾದವುಗಳನ್ನು ಹೋಗಲಾಡಿಸಲು ಜರುಗಿದ ಕಲ್ಯಾಣದ ಧಾರ್ಮಿಕ ಕ್ರಾಂತಿಯ ತರುವಾಯ ಅಲ್ಲಿಂದ ಸಾವಿರಾರು ಶರಣ-ಶರಣೆಯರು ನಾಡಿನುದ್ದಗಲಕ್ಕೂ ಪ್ರಸರಿಸಿ ಗುರುಮಠಗಳನ್ನು ಪ್ರಾರಂಭಿಸಿದರು. ಅಂತಹ ಗುರುಮನೆಗಳನ್ನು ಸಮಕಾಲೀನ ಅರಮನೆಗಳು ಪೋಷಿಸಿ ಬೆಳೆಸಿದವು. ಆ ಮಠಗಳ ಕಾರ್ಯಚಟುವಟಿಕೆಗಳ ಹಿನ್ನೆಲೆಯಲ್ಲಿ ಅವುಗಳನ್ನು ಪಟ್ಟದ ಮಠಗಳು, ವಿರಕ್ತ ಮಠಗಳು, ವಿದ್ಯಾ ಮಠಗಳು, ಸಾಲಿ ಮಠಗಳು, ದಾಸೋಹ ಮಠಗಳು, ಸಮಯಾಚಾರದ ಮಠಗಳು ಎಂಬಿತ್ಯಾದಿ ವರ್ಗೀಕರಿಸಲಾಗಿದೆ. ಇಂದಿಗೂ ಆ ಮಠಗಳು ತಮ್ಮ ತಮ್ಮ ಪ್ರದೇಶಗಳಲ್ಲಿ ಧಾರ್ಮಿಕ, ಸಾಹಿತ್ಯಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಬೆಳವಣಿಗೆಗೆ ಮಹತ್ತರವಾದ ಸೇವೆಯನ್ನು ಸಲ್ಲಿಸುತ್ತಿವೆ. ಡಂಬಳವು ಕ್ರಿ.ಶ. ಸುಮಾರು ೧೨ನೆಯ ಶತಮಾನದಿಂದ ಇಂದಿಗೂ ವೀರಶೈವ ಧರ್ಮದ ಸಾಂಸ್ಕೃತಿಕ ಕೇಂದ್ರವಾಗಿ ಮೆರೆಯುತ್ತಿದೆ.

ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನವು, ವ್ಯಾಪಾರಿ ಸಂಸ್ಥೆಯೊಂದು ಸಂಸ್ಕೃತ ಪಾಠಶಾಲೆಯ ನಿರ್ವಹಣೆಗಾಗಿ ಸುವ್ಯವಸ್ಥೆಯನ್ನು ಏರ್ಪಡಿಸಿದುದನ್ನು ಉಲ್ಲೇಖಿಸಿದೆ. ಇದರಿಂದ ಡಂಬಳದಲ್ಲಿ ವಿದ್ಯಾ ಮಠವೊಂದಿದ್ದು ಅದು ಕಾಲಕ್ರಮೇಣ ಸಂಸ್ಕೃತ ಪಾಠಶಾಲೆಯಾದ ವಿಚಾರ ಪರೋಕ್ಷವಾಗಿ ದೃಢಪಡುತ್ತದೆ. ಡಂಬಳದಲ್ಲಿ ಅರ್ಧನಾರೀಶ್ವರ ಮಹಾಸ್ವಾಮಿಗಳು (ಕ್ರಿ.ಶ. ೧೬೭೫-೧೭೭೫) ಸ್ಥಾಪಿಸಿದ ತೋಂಟದಾರ್ಯ ಸಂಸ್ಥಾನಮಠವು ಅಲ್ಲಮಪ್ರಭು ಸಮಪ್ರದಾಯದ ಎಡೆಯೂರ

ಸಿದ್ಧಲಿಂಗೇಶ್ವ ಪರಂಪರೆಗೆ ಸೇರಿದೆ. ಅರ್ಧನಾರೀಶ್ವರ ಮಹಾಸ್ವಾಮಿಗಳಿಂದ ಹಿಡಿದು ಇಂದಿನ ೧೯ನೆಯ ಪೀಠಾಧೀಶರಾದ ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳವರೆಗೆ ಸಾಗಿಬಂದಿರುವ ಈ ಮಠದ ಗುರು ಪರಂಪರೆಯು ಧಾರ್ಮಿಕ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಸಾಹಿತ್ಯಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಲ್ಲಿಸುತ್ತಿರುವ ಕೊಡುಗೆ ಅಪಾರವಾಗಿದೆ. ಶ್ರೀಮಠದ ಪ್ರಭಾವಕ್ಕೊಳಗಾದ ಕೆಳದಿ, ಇಕ್ಕೇರಿ, ಹರಪನಹಳ್ಳಿ ಮೊದಲಾದೆಡೆಯ ಅವನಿಪಾಲಕರು ಡಂಬಳಕ್ಕೆ ಆಗಮಿಸಿ ಅನೇಕ ಉಂಬಳಿಗಳನ್ನು, ದಾನ–ದತ್ತಿಗಳನ್ನು ಕೊಟ್ಟಿದ್ದಾರೆ. ಕೆಳದಿ ಮನೆತನದ ೧ನೆಯ ಬಸವಪ್ಪ ನಾಯಕನು ಕ್ರಿ.ಶ. ಸುಮಾರು ೧೮ನೆಯ ಶತಮಾನದಲ್ಲಿ ಶ್ರೀಮಠದ ಗದ್ದಿಗೆಯ ತೇರಿನ ಕಳಸವನ್ನು ಮಾಡಿಸಿ ಕೊಟ್ಟಿದ್ದಾನೆ. ಜೊತೆಗೆ ತೋಂಟದ ಮಹಾಸ್ವಾಮಿಗಳವರಿಗೆ ತನ್ನ ಪುತ್ರ ವೀರಭದ್ರ ನಾಯಕ ಮತ್ತು ಆತನ ೨ನೆಯ ಪತ್ನಿ ಮಲ್ಲಮ್ಮಾಜಿ ಹೆಸರಿನಲ್ಲಿ ಬಂಗಾರದ ಪಾದುಕೆಗಳನ್ನು ಅರ್ಪಿಸಿದ್ದಾನೆ. ಇಂದು ನಾಡಿನುದ್ದಗಲಕ್ಕೂ ತನ್ನ ಸಾಂಸ್ಕೃತಿಕ ವ್ಯಾಪ್ತಿಯನ್ನು ವಿಸ್ತರಿಸಿರುವ ಶ್ರೀಮಠವು ಕನ್ನಡನಾಡಿನ ಬಹು ದೊಡ್ಡ ಶೈಕ್ಷಣಿಕ ಮಠ ಎಂಬ ಕೀರ್ತಿಗೆ ಪಾತ್ರವಾಗಿದೆ. ಜಗವೆಲ್ಲ ನಗುತ್ತಿರಲಿ, ಜಗದಳಲು ನನಗಿರಲಿ ಎಂಬ ಪ್ರಗತಿಪರ ಧೋರಣೆಯನ್ನು ಮೈಗೂಡಿಸಿಕೊಂಡಿರುವ ಇಂದಿನ ಶ್ರೀಗಳು ಕೋಮು ಸೌಹಾರ್ದದ ರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದಿದ್ದಾರೆ.

**೭. ಇಸ್ಲಾಂ ಧರ್ಮ**

ದೆಹಲಿಯ ಸುಲ್ತಾನ ಅಲ್ಲಾವುದ್ದೀನ್ ಖಿಲ್ಜಿಯು ದಕ್ಷಿಣ ಭಾರತದ ಮೇಲೆ ಕೈಗೊಂಡ ದಂಡಯಾತ್ರೆಯ ಮೂಲಕ ಇಸ್ಲಾಂ ಧರ್ಮವು ಕನ್ನಡ ನಾಡನ್ನು ಪ್ರವೇಶಿಸಿತು. ತರುವಾಯ ಈ ನಾಡಿನಲ್ಲಿ ಗುಲಬರ್ಗಾ, ಬೀದರ, ವಿಜಾಪುರ, ಮೈಸೂರು, ಸವಣೂರು ಮೊದಲಾದೆಡೆಗಳಲ್ಲಿ ರಾಜ್ಯವನ್ನು ಸ್ಥಾಪಿಸಿ ಆಳ್ವಿಕೆ ಪ್ರಾರಂಭಿಸಿದ ಬಹಮನಿ, ಬರೀದ್‌ಷಾಹಿ, ಆದಿಲ್‌ಷಾಹಿ, ಹೈದರಲಿ–ಟೀಪು ಸುಲ್ತಾನ, ನವಾಬ ಮನೆತನಗಳ ಅರಸರು ಇಸ್ಲಾಂ ಧರ್ಮವನ್ನು ಪೋಷಿಸಿ ಬೆಳೆಸಿದರು. ಆಳರಸಾದಿ ಪ್ರಜೆಗಳು ಸಮಕಾಲೀನ ಮುಸ್ಲಿಂ ಸಂತರು, ಕವಿಗಳ ಧರ್ಮಪ್ರಸಾರ ಮತ್ತು ಪ್ರೇರಣೆಯಿಂದ ನಾಡಿನ ವಿವಿಧೆಡೆಗಳಲ್ಲಿ ಮಸೀದೆ, ಈದ್ಗಾ, ದರ್ಗಾ, ಮದರಾಸಾ, ಮಹಲ್, ಗುಂಬಜ, ಗೋರಿಗಳನ್ನು ನಿರ್ಮಿಸಿ ಉದ್ಧಾರವಾಗಿ ದಾನ–ದತ್ತಿಗಳನ್ನು ಕೊಡುವುದರ ಮೂಲಕ ಧಾರ್ಮಿಕ ಮನೋಭಾವನೆಯನ್ನು ವೃದ್ಧಿಸಿದರು. ಡಂಬಳದಲ್ಲಿಯೂ ಕ್ರಿ.ಶ. ಸುಮಾರು ೧೬ನೆಯ ಶತಮಾನದಿಂದ ಇಸ್ಲಾಂ ಧರ್ಮದ ಚಟುವಟಿಕೆಗಳು ಜರುಗುತ್ತ ಬಂದಿವೆ. ಇಲ್ಲಿ ಅಬ್ದುಲಶಾವಲೀ, ಜಮಾಲಶಾವಲೀ, ಮಾಬುಸುಬಾನಿ ದರ್ಗಾಗಳು, ಜಾಮೀಯಾ ಮಸೀದೆ, ಅಸಾರಖಾನಗಳು, ಕಾಶೀಮ ಪೀರಾ ಮೊದಲಾದ ಇಸ್ಲಾಂ ಧರ್ಮದ ನಿರ್ಮಾಣಗಳಿವೆ. ಇವು ಸ್ಥಳೀಯ ಹಿಂದೂ–ಮುಸ್ಲಿಂ ದೈವ ಕೇಂದ್ರಗಳಾಗಿವೆ.

ಜಮಾಲಶಾವಲೀ ಡಂಬಳದಲ್ಲಿ ತೋಂಟದಾರ್ಯ ಮಠದ ಸಂಸ್ಥಾಪಕರಾದ ಅರ್ಧನಾರೀಶ್ವರರ ಪ್ರೀತಿಯ ಶಿಷ್ಯನಾಗಿದ್ದನು. ಹಾಗಾಗಿ ಆತನ ಗದ್ದುಗೆಯನ್ನು (ಗೋರಿ) ಶ್ರೀಮಠದ ಪಕ್ಕದಲ್ಲಿಯೇ (ಎಡಬದಿ) ನಿರ್ಮಿಸಲಾಗಿದೆ. ಶ್ರೀಮಠದ ರಥೋತ್ಸವದ ಮಾರನೇ ದಿನವೇ ಜಮಾಲಶಾವಲೀಯ ಹೆಸರಿನಲ್ಲಿ ಉರುಸ್ ಜರುಗುತ್ತದೆ. ಶ್ರೀಗಳು ಪ್ರಾರಂಭಿಸಿದ ಸಂಪ್ರದಾಯದಂತೆ ಆ ಉರುಸಿಗೆ ಶ್ರೀಮಠದಿಂದಲೇ ಎಡೆಯಾಗುತ್ತ (ನೈವೇದ್ಯ) ಕೋಮು ಸೌಹಾರ್ದತೆಗೆ ಸಾಕ್ಷಿಯಾಗಿದೆ. ಹಜರತ್ ಇಬ್ರಾಹಿಂ, ಹಜರತ್ ಇಸ್ಮಾಯಿಲ್‌ರವರ ತ್ಯಾಗ ಮತ್ತು ಸಹಿಷ್ಣುತೆಯ ಹಿನ್ನೆಲೆಯಲ್ಲಿ ಪ್ರಾರಂಭವಾದ ಬಕ್ರೀದ್ ಹಾಗೂ ಸಮೃದ್ಧಿಯ ಸಂಕೇತವಾದ ರಂಜಾನ್ ಹಬ್ಬಗಳನ್ನು ಸ್ಥಳೀಯ ಮುಸ್ಲಿಂ ಬಾಂಧವರು ವಿಜೃಂಭಣೆಯಿಂದ ಆಚರಿಸುತ್ತಿದ್ದಾರೆ. ಅನ್ಯಾಯ, ಅತ್ಯಾಚಾರ, ಅನೀತಿ, ಅನಾಗರಿಕತೆಯ ಜೀವಂತ ನಾಯಕನಾಗಿದ್ದ ಧರ್ಮದ್ರೋಹಿ ಯಜೀದ್‌ನಿಂದ ಬಲಿಯಾದ ಇಮಾಮ್ ಹಸನ್, ಇಮಾಮ್ ಹುಸೇನ್ ಮತ್ತು ಅವರ ಕುಟುಂಬದವರ ಸ್ಮರಣೆಗಾಗಿ ಪ್ರತಿವರ್ಷ ಮೊಹರಂ ಹಬ್ಬವನ್ನು ಆಚರಿಸಲಾಗುತ್ತದೆ. ಈ ಹಬ್ಬವನ್ನು ಇಲ್ಲಿ ಹಿಂದೂ–ಮುಸ್ಲಿಂ ಭೇದಭಾವಿಲ್ಲದೆ ಎಲ್ಲರೂ ಒಗ್ಗಟ್ಟಾಗಿ ವೈವಿಧ್ಯಮಯದಿಂದ ಆಚರಿಸುತ್ತಿರುವುದು ಗಮನಾರ್ಹವಾಗಿದೆ.

ಹೀಗೆ ಸರ್ವಧರ್ಮಗಳ ಸಮನ್ವಯದ ಆಡುಂಬೊಲವಾಗಿ ಮೆರೆದ ಮತ್ತು ಮೆರೆಯುತ್ತಿರುವ ಡಂಬಳವು ಇಂದು ಮಡಿವಾಳ, ಕಟುಕ, ಗಾಣಿಗ, ಪಾಂಚಾಳ, ಬ್ರಾಹ್ಮಣ, ಲಿಂಗಾಯತ, ಬಣಜಿಗ, ಸಮಗಾರ, ಬೇಡ, ವಡ್ಡ, ಡೋಹರ, ಚಲವಾದಿ, ಸಿಂಪಿಗ, ಕುರುಬ, ಉಪ್ಪಾರ, ಮರಾಠಾ, ಕುಂಬಾರ, ಕೊರಚ, ಮುಸ್ಲಿಂ ಸಮುದಾಯಗಳ ನೆಲೆವೀಡಾಗಿದೆ. ಇವರೆಲ್ಲರೂ ಒಗ್ಗಟ್ಟಾಗಿ ಒಂದಾಗಿ ಬಾಳುತ್ತ ತಮ್ಮ ಪೂರ್ವಜರ ಧರ್ಮ ಸಮನ್ವಯ ಪರಂಪರೆಯನ್ನು ಮುಂದುವರೆಸಿರುವುದು ಇಲ್ಲಿಯ ವಿಶೇಷವಾಗಿದೆ. ಈ ಸಮುದಾಯಗಳು ಪ್ರತ್ಯೇಕವಾಗಿ ಕರಿಸಿದ್ಧೇಶ್ವರ, ಮಲ್ಲಿಯಮ್ಮ, ಮಾಯಮ್ಮ, ಅಕ್ಕಮ್ಮ, ಬೀರಪ್ಪ, ಕೆಂಚಮ್ಮ, ಸತ್ಯಮ್ಮ, ಎಲ್ಲಮ್ಮ, ದಂಡಿನ ದುರಗಮ್ಮ, ಮರಗವ್ವ, ದ್ಯಾಮವ್ವ, ಮಾಳಿಂಗರಾಯ, ಹುಲಿಕಟ್ಟಿ ರಂಗನಾಥ, ಹನುಮಾನ, ಈರಣ್ಣ ಮೊದಲಾದ ದೇವಾಲಯಗಳನ್ನು ನಿರ್ಮಿಸಿಕೊಂಡಿದ್ದರೂ ಇವುಗಳ ಧಾರ್ಮಿಕ ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ಪರಸ್ಪರರು ಸಕ್ರೀಯವಾಗಿ ಭಾಗವಹಿಸುತ್ತಿರುವುದು ಗಮನಾರ್ಹವಾಗಿದೆ. ಇಂತಹ ಧರ್ಮ ಸಮನ್ವಯ ಕೇಂದ್ರಗಳು ನಾಡಿನಾದ್ಯಂತ ಸಾಕಷ್ಟಿವೆ.  ಅವುಗಳ ಕುರಿತು ತಲಸ್ಪರ್ಶಿ ಅಧ್ಯಯನಗಳು ನಡೆದು ಮುಂದಣ ಪೀಳಿಗೆಗೆ ಸಮನ್ವಯ ಜೀವನವನ್ನು ಬಾಳುತ್ತ ರಾಷ್ಟ್ರಾಭಿಮಾನವನ್ನು ಮೈಗೂಡಿಸಿಕೊಳ್ಳಲು ಪ್ರೇರೇಪಿಸುವುದು ತುಂಬಾ ಅವಶ್ಯವಿದೆ.

## ಆಧಾರ ಗ್ರಂಥಗಳು

೧. ರಘುನಾಥಭಟ್ ಎಚ್. ಆರ್., "ಡಂಬಳದಲ್ಲಿ ಬೌದ್ಧಾವಶೇಷಗಳ ಶೋಧನೆ", ಇತಿಹಾಸ ದರ್ಶನ ಸಂ. ೬ (೧೯೯೨), ಕರ್ನಾಟಕ ಇತಿಹಾಸ ಅಕಾದೆಮಿ ಬೆಂಗಳೂರು.

೨. ಕಾಮತ್ ಸೂರ್ಯನಾಥ (ಸಂ.) ಧಾರವಾಡ ಜಿಲ್ಲೆಯ ಗೆಜೆಟಿಯರ್ (೧೯೯೫), ಬೆಂಗಳೂರು.

೩. ಹಂಪ ನಾಗರಾಜಯ್ಯ, ಚಂದ್ರಕೊಡೆ (೧೯೯೭), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ಕಲಬುರ್ಗಿ ಎಂ. ಎಂ., ಮಾರ್ಗ ಸಂ. ೩ (೧೯೯೮), ಬೆಂಗಳೂರು.

೫. ಕೆರಿಮನಿ ಸಿ. ವಿ., ಕಣಜ (ವಿವಿಧ ಲೇಖನಗಳ ಸಂಕಲನ–೨೦೦೦), ಲಕ್ಷ್ಮೇಶ್ವರ.

೬. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (೨೦೦೨–ಪುನರ್ಮುದ್ರಣ), ಬೆಂಗಳೂರು.

೭. ಗೋಪಾಲ್ ಆರ್. (ಸಂ.), ಗದಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೦೬), ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ ಮೈಸೂರು.

೮. ಬಾಲಸುಬ್ರಹ್ಮಣ್ಯ, ವಾಸುದೇವನ್ ಸಿ. ಎಸ್., ನಾಯಕ ರಮೇಶ, ಕರ್ನಾಟಕ ದೇವಾಲಯ ಕೋಶ : ಗದಗ ಜಿಲ್ಲೆ (೨೦೦೭), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯. ಕಡಪಟ್ಟಿ ಎಮ್. ಎನ್., ಪ್ರಾಚೀನ ಕರ್ನಾಟಕದಲ್ಲಿ ಶೈವಧರ್ಮ (೨೦೦೮), ಕರ್ನಾಟಕ ಇತಿಹಾಸ ಸಂಶೋಧನ ಮಂಡಳ ಧಾರವಾಡ.

೧೦. ಗೋಗಿ ಹನುಮಾಕ್ಷಿ ಮತ್ತು ರಾಠೋಡ ಪಿ. ಕೆ., ಡಂಬಳ : ಸಾಂಸ್ಕೃತಿ ಅಧ್ಯಯನ (೨೦೦೮), ಲಿಂಗಾಯತ ಅಧ್ಯಯನ ಸಂಸ್ಥೆ, ಗದಗ.

೧೧. ಹಂಜೆ ಅಪ್ಪಣ್ಣ ಎನ್., ಧಾರವಾಡ ಪರಿಸರದಲ್ಲಿ ಜೈನಧರ್ಮ (೨೦೦೮), ಭಾರತೀಯ ಜೈನ ಮಿಲನ, ಬಾಣಸವಾಡಿ ಶಾಖೆ, ಬೆಂಗಳೂರು.

೧೨. ಕ್ಷೇತ್ರಕಾರ್ಯ ವರದಿ.

■

# ೬. ಹಿರಿಯೂರು ತಾಲ್ಲೂಕು ಗೌಡನಹಳ್ಳಿಯ ಪ್ರಾಚೀನ ವೀರ-ಮಾಸ್ತಿ ಸ್ಮಾರಕಗಳು : ಒಂದು ಹೊಸ ಶೋಧನೆ


-ಡಾ. ಮುತ್ತುರಾಜು

ಗೌಡನಹಳ್ಳಿಯು ಹಿರಿಯೂರು ತಾಲ್ಲೂಕಿನಲ್ಲಿರುವ ಒಂದು ಪ್ರಾಚೀನ ಗ್ರಾಮ. ಹಿಂದೆ ಕೋಟೆಯೊಂದು ಇದ್ದುದಕ್ಕೆ ಕುರಹಾಗಿ ಈಗಲೂ ಊರಿನ ಅಗಸೆ ಬಾಗಿಲು ಹಾಗೂ ಆಂಜನೇಯ ಗುಡಿಗಳು ಉಳಿದುಬಂದಿದೆ. ಊರಿನ ಹೆಸರೇ ತಿಳಿಸುವಂತೆ ಇದನ್ನು ಗೌಡನೊಬ್ಬನ ಹೆಸರಿನಿಂದ ಕರೆಯಲಾಗಿದೆ. ಆದರೆ ಈತನ ಪೂರ್ಣ ಹೆಸರು ಲಭ್ಯವಾಗಿಲ್ಲ. ಜನರ ಬಾಯಲ್ಲಿ ಗೌಡನಹಳ್ಳಿ ಹಾಗೂ ಗೌನಹಳ್ಳಿ ಎಂದು ಕರೆಯಲಾಗುತ್ತಿದೆ. ಹುಳಿಯೂರು ರಸ್ತೆಯಿಂದ ಉಲಗನಕುಂಟೆ ಸೋಮೇರಹಳ್ಳಿ



ಗೌಡನಹಳ್ಳಿಯ ವೀರ-ಮಾಸ್ತಿ ಕಲ್ಲು, ಹಿರಿಯೂರು ತಾಲ್ಲೂಕು
ಕಾಲ : ಕ್ರಿ.ಶ.ಸು. ೧೨ನೇ ಶತಮಾನ


ಮೂಲಕ ಇಲ್ಲಿಗೆ ತಲುಪುವ ರಸ್ತೆ ಇದೆ ಹಾಗೂ ಆದಿವಾಲದ ಬಳಿ ಇರುವ ಪಟ್ರೆಹಳ್ಳಿ ದಿಂಡಾವರ ರಸ್ತೆಯಿಂದಲೂ ತಲುಪಬಹುದಾಗಿದೆ. ಊರಿನ ರಂಗಪ್ಪ ದೇವಾಲಯದ ಗೋಡೆಗೆ ತಾಕಿಸಿ ನಿಲ್ಲಿಸಿರುವ ಕಲಾತ್ಮಕ ಗ್ರಾನೈಟ್ ಶಿಲ್ಪವು ೪ ಅಡಿ ಅಗಲ ಮತ್ತು ೩ ಅಡಿ ಎತ್ತರವನ್ನು ಹೊಂದಿದೆ ಇದು ಪ್ರಾಚೀನ. ವೀರ-ಮಾಸ್ತಿಕಲ್ಲು ಆಗಿದ್ದು ಹೊಯ್ಸಳರ ಕಾಲದ ಲಕ್ಷಣವನ್ನು ಇಲ್ಲಿ ಗುರುತಿಸಬಹುದಾಗಿದೆ.



ಗೌಡನಹಳ್ಳಿಯ ವೀರ-ಮಾಸ್ತಿ ಕಲ್ಲು, ಹಿರಿಯೂರು ತಾಲ್ಲೂಕು
ಕಾಲ : ಕ್ರಿ.ಶ.ಸು. ೧೬ನೇ ಶತಮಾನ

ಎಡಮುಖವಾಗಿ ಚಲಿಸುತ್ತಿರುವ ಅಶ್ವದ ಮೇಲೆ ಕುಳಿತಿರುವ ವೀರನು ಬಲದ ಕೈನಲ್ಲಿ ಪರಶುವನ್ನು ಎತ್ತಿಹಿಡಿದು ಯುದ್ಧದಲ್ಲಿ ನಿರತನಾಗಿದ್ದಾನೆ. ಎಡದ ಕೈನಲ್ಲಿ ಅಶ್ವದ ಜೀನ್ ಅನ್ನು ಹಿಡಿದುಕೊಂಡಿದ್ದಾನೆ. ಶಿರದಲ್ಲಿ ಕಟ್ಟಿದ ತುರುಬು ಅದರಿಂದ ಇಳಿಬಿದ್ದ ಜಡೆಯುನ್ನು ಗಮನಿಸಿದರೆ ಬುಡಕಟ್ಟಿನ ವೀರ ಈತ ಎಂದು ನಿರ್ಧರಿಸಬಹುದಾಗಿದೆ. ವೀರೋಚಿತ ಮುಖಭಾವ ಸ್ಪಷ್ಟವಾಗಿದೆ. ಕರ್ಣಗಳಲ್ಲಿ ಕುಂಡಲಗಳು ಮುಂಗೈ ಮತ್ತು ತೋಳುಗಳಲ್ಲಿ ಬಂಧಿಗಳು ಎದೆಯ ಮೇಲೆ ಮೂರು ಸ್ಥರಗಳ ಮಣಿ ಸರಗಳು ನಡುವಿನಲ್ಲಿ ಬಿಚ್ಚುಗತ್ತಿ ಮತ್ತು ಕಾಲಿನಲ್ಲಿ ಕಡಗಗಳು ಇವೆ. ವೀರಗಚ್ಚೆಯ ವಸ್ತ್ರ ಈತನಿಗೆ ಇದೆ. ಈತನ ಬೆನ್ನು ಹಿಂದೆ ಸೇವಕನೊಬ್ಬ ಎತ್ತರದ ಛತ್ರಿಯೊಂದನ್ನು ಹಿಡಿದಿದ್ದಾನೆ. ವೀರ ಕುಳಿತಿರುವ ಅಶ್ವವೂ ಸಹ ವಸ್ತ್ರ ಆಭರಣಗಳಿಂದ ಅಲಂಕೃತವಾಗಿದೆ.

ಈ ವೀರನ ಸಾವನ್ನು ಹಿಂಭಾಲಿಸಿರುವ ಈತನ ಇಬ್ಬರು ಮಡದಿಯರು ಚಿತೆ ಏರಿ ಅಗ್ನಿಪ್ರವೇಶ ಮಾಡಿದ್ದಾರೆ. ಅತ್ಯಂತ ಅಲಂಕೃತವಾಗಿ ಇವರಿಬ್ಬರ ಚಿತ್ರಣವನ್ನು



ಗೌಡನಹಳ್ಳಿಯ ವೀರಗಲ್ಲು,
ಹಿರಿಯೂರು ತಾಲ್ಲೂಕು
ಕಾಲ : ಕ್ರಿ.ಶ.ಸು. ೧೪ನೇ ಶತಮಾನ

ಶಿಲ್ಪಿ ಕುಶಲತೆಯಿಂದ ಮೂಡಿಸಿದ್ದಾನೆ. ಇಬ್ಬರಿಗೂ ಶಿರದಲ್ಲಿ ಹಿರಿದಾದ ತುರುಬುಗಂಟು, ಅದರಿಂದ ಬಲಗಡೆಗೆ ಇಳಿಬಿದ್ದ ಜಡೆಗಳು, ಕರ್ಣಗಳಲ್ಲಿ ಕುಂಡಲಗಳು, ಮುಖದಲ್ಲಿ ನರ್ತನಾಭಾವ, ಕೊರಳಲ್ಲಿ ಆಭರಣಗಳು, ಎದೆಯ ಪದಕಗಳು, ತೋಳು ಬಂಧಿಗಳು, ಮುಂಗೈ ಬಳೆಗಳು ಇವೆ. ಮೊದಲ ಸತಿಯ ತೋಳಿನ ಬಂಧಿಯಿಂದ ಇಳೆಬಿದ್ದ ಗಂಟೆಯಾಕಾರದ ಅಲಂಕಾರವಿದೆ. ಇಬ್ಬರಿಗೂ ಭರತನಾಟ್ಯದಲ್ಲಿ ಧರಿಸುವಂತ ಕೆಳಭಾಗದ ಪೋಷಾಕು ಇದು ನಾಭಿಯಿಂದ ಇಳೆಬಿಟ್ಟಿರುವ ನೆರಿಗೆಯ ಅಲಂಕಾರಗಳೇ ಅಲ್ಲದೇ, ಕಾಲಿನ ಮಂಡಿಭಾಗದವರೆಗೂ ಎರಡೆರಡು ಅಡ್ಡಪಟ್ಟಿಕೆಗಳು ಇವೆ. ಇವರಿಬ್ಬರೂ ಸಹ ಭರತನಾಟ್ಯ ಭಂಗಿಯಾದ ಅಡವಿನ ಭಂಗಿಯಲ್ಲಿದ್ದು ಬಲದ ಕೈಗಳಲ್ಲಿ ನಿಂಬೆಹಣ್ಣುಗಳನ್ನು ಎತ್ತಿಹಿಡಿದು ಎಡದ ಕೈಗಳಲ್ಲಿ ಕನ್ನಡಿಗಳನ್ನು ಹಿಡಿದು ನರ್ತಿಸುತ್ತಿದ್ದಾರೆ.

ವೀರಗಲ್ಲಿನ ಬಲ ಮತ್ತು ಎಡ ಪಾರ್ಶ್ವಗಳಲ್ಲಿ ಸೂರ್ಯ ಚಂದ್ರರ ಚಿತ್ರಗಳಿದ್ದು ನಡುವೆ ಸ್ಪಷ್ಟ ಮತ್ತು ಅಲಂಕೃತವಾದ ಬಸವ ಮತ್ತು ಶಿವಲಿಂಗದ ಚಿತ್ರಣಗಳಿವೆ. ಈ ವೈಭವ ಪೂರಿತವಾದ ಅಲಂಕಾರಗಳನ್ನು ಗಮನಿಸಿದರೆ, ಈ ಊರಿನಲ್ಲಿ ಒಂದು ಪುಟ್ಟ ಅರಮನೆ ಇದ್ದಿರಬೇಕೆಂದು ನಿರ್ಧರಿಸಬಹುದು. ಮಡಿದ ಈ ವೀರ ಹೆಸರಾಂತ ಪಾಳೆಯಗಾರನಾಗಿರಬಹುದು. ಯಾವುದೋ ರಾಜಕೀಯ ಕಾರಣಕ್ಕೆ ಈತ ತನ್ನ ಶತೃಗಳ ಜೊತೆ ಅಶ್ವದ ಮೇಲೆ ಕುಳಿತು ಪರಶುವಿನಿಂದ ಹೋರಾಡಿ ಹತನಾಗಿದ್ದಾನೆ. ಈತನ ಮಡದಿಯರು ಇಬ್ಬರೂ ಸಹ ಅಂದಿನ ನಂಬಿಕೆಯಂತೆ ಚಿತೆ ಏರಿ ಅಗ್ನಿಪ್ರವೇಶ ಮಾಡಿದ್ದಾರೆ. ಈತನ ಶತೃತಗಳ ವಿವರಗಳಾಗಲಿ ಯುದ್ಧದ ಇನ್ನಿತರ ವಿವರಗಳಾಗಲಿ ಸ್ಮಾರಕ ಶಿಲೆಯಲ್ಲಿ ಲಭ್ಯವಿಲ್ಲ. ಈತ ವೀರಶೈವ ಭಕ್ತನಾಗಿದ್ದನೆಂಬುದಕ್ಕೆ ಬಸವ ಮತ್ತು

ಶಿವಲಿಂಗದ ಚಿತ್ರಣಗಳು ಸಾಕ್ಷಿಯಾಗಿವೆ. ಕ್ರಿ.ಶ. ಸು. ೧೨ನೇ ಶತಮಾನಕ್ಕೆ ಸೇರುವ ಹೊಯ್ಸಳರ ಕಾಲಕ್ಕೆ ಈ ವೀರಗಲ್ಲು ಸೇರುತ್ತದೆ.

ಈ ಊರಿನ ಈಶ್ವರ ದೇವಾಲಯದ ಹಿಂಭಾಗದಲ್ಲಿ ಹುಣಸೇ ಮರದ ಕೆಳಗೆ ಕೊಂಡಪ್ಪ ಎಂದು ಕರೆಯುವ ವೀರ-ಮಾಸ್ತಿಯ ಮತ್ತೊಂದು ಸ್ಮಾರಕವಿದ್ದು ಇದು ೩ ಅಡಿ ಅಗಲ ಮತ್ತು ೨ ಅಡಿ ಎತ್ತರವನ್ನು ಹೊಂದಿದ ಗ್ರಾನೈಟ್ ಶಿಲ್ಪವಾಗಿದೆ. ಇದರಲ್ಲಿ ಶಿಲ್ಪಿಯು ಅತ್ಯಂತ ಕಠಿಣ ಪರಿಶ್ರಮದಿಂದ ಶಿಲ್ಪವನ್ನು ಕಡೆದಿದ್ದಾನೆ. ಈ ಸ್ಮಾರಕ ಶಿಲೆಯ ಬಲಗಡೆ ವೀರನು ತನ್ನ ಬಲದ ಕೈನಲ್ಲಿ ಖಡ್ಗವನ್ನು ಎತ್ತಿ ಹಿಡಿದು ನಿಂತಿದ್ದಾನೆ. ಖಡ್ಗದಿಂದ ಅಲಂಕೃತ ವಸ್ತ್ರದ ಇಳಿಕೆ ಇಳೆಬಿದ್ದಿದೆ. ಎಡದ ಕೈಯನ್ನು ಕಟಿಹಸ್ತವನ್ನಾಗಿ ಮಾಡಿಕೊಂಡು ನಿಂತಿದ್ದಾನೆ. ಶಿರದಲ್ಲಿ ತುರುಬು ಕರ್ಣಕುಂಡಲಗಳಿದ್ದು ಉದ್ದನೆಯ ಮುಖದ ಚಿತ್ರಣ ಮೂಡಿ ಬಂದಿದೆ. ಕಣಕಾಲಿನವರೆಗೂ ಧರಿಸಿರುವ ತುಂಬು ವಸ್ತ್ರ ಅಡ್ಡ ಪಟ್ಟಿಕೆಗಳಿಂದ ಅಲಂಕೃತವಾಗಿದೆ. ಕೊರಳಲ್ಲಿ ಆಭರಣದ ಅಲಂಕಾರವಿದೆ. ಈ ವೀರನ ಎಡ ಭಾಗದಲ್ಲಿ ಸತಿಹೋಗಿರುವ ಈತನ ಮಡದಿಯ ಚಿತ್ರಣವಿದ್ದು, ಈಕೆಯು ತನ್ನೆರಡು ಕೈಗಳನ್ನು ಮೇಲೆ ಎತ್ತಿ ಹಿಡಿದಿದ್ದು ನಿಂಬೆಹಣ್ಣು ಮತ್ತು ಕನ್ನಡಿಯನ್ನು ಹಿಡಿದಿದ್ದಾಳೆ. ಈಕೆಯ ಮುಖದ ಚಿತ್ರಣವು ತ್ರಿಕೋನಾಕಾರವಾಗಿದೆ. ಕಣಕಾಲಿನವರೆಗೂ ಧರಿಸಿರುವ ತುಂಬು ವಸ್ತ್ರವನ್ನು ಈಕೆ ಧರಿಸಿದ್ದು ಅಲಂಕೃತವಾಗಿದೆ. ಈ ಸ್ಮಾರಕದ ವೀರನು ಶತೃಗಳ ಜೊತೆ ಕಾದಾಡಿ ಮಡಿಯಲಾಗಿ ಈತನ ಮಡದಿ ಚಿತೆ ಏರಿ ಅಗ್ನಿಪ್ರವೇಶ ಮಾಡಿದ್ದಾಳೆ. ಯುದ್ಧದ ಕಾರಣಗಳು ಮತ್ತು ವಿವರಗಳು ಈ ಸ್ಮಾರಕ ಶಿಲೆಯಲ್ಲಿ ಲಭ್ಯವಾಗಿಲ್ಲವಾದರೂ, ರಾಜಕೀಯ ಕಾರಣಗಳಿಂದಾಗಿ ವೀರ ತನ್ನ ಶತೃಗಳ ಜೊತೆ ಹೋರಾಡಿ ಮಡಿದಿದ್ದಾನೆ ಎಂದು ನಿರ್ಧರಿಸಬಹುದಾಗಿದೆ. ಕ್ರಿ.ಶ.ಸು. ೧೬ನೇ ಶತಮಾನಕ್ಕೆ ಈ ವೀರಗಲ್ಲು ಸರಿಹೊಂದುತ್ತದೆ.

ಇಲ್ಲಿನ ಮುಖ್ಯರಸ್ತೆಯ ಬದಿಯಲ್ಲಿ ೩ ಅಡಿ ಎತ್ತರ ಮತ್ತು ಅಷ್ಟೇ ಅಗಲದ ವೀರಗಲ್ಲು ಒಂದಿದ್ದು, ಇದನ್ನು ಗ್ರಾನೈಟ್ ಕಲ್ಲಿನಿಂದ ಮಾಡಿದುದಾಗಿದೆ. ತ್ರಿಕೋನಾಕೃತಿಯ ಕೆತ್ತನೆ ಇದಾಗಿದ್ದು ವೀರನೊಬ್ಬನ ಚಿತ್ರಣ ಮಾತ್ರ ಇದರಲ್ಲಿ ಇದೆ. ಬಲದ ಕೈನಲ್ಲಿ ಖಡ್ಗವನ್ನು ಹಿಡಿದಿರುವ ವೀರನ ದೇಹ ಪ್ರಮಾಣಬದ್ಧವಾಗಿಲ್ಲ. ಈತ ಇಳಿಬಿಟ್ಟ ತನ್ನ ಎಡಕೈನಿಂದ ತನ್ನ ಬಿಚ್ಚುಗತ್ತಿ ಹಿಡಿದಿದ್ದಾನೆ. ಈತನು ಸಹ ತನ್ನ ಎದುರಾಳಿಗಳ ಜೊತೆ ಖಡ್ಗದಿಂದ ಹೋರಾಡಿ ಹತನಾಗಿದ್ದಾನೆ. ಈ ವೀರಗಲ್ಲುವಿನ ಕಾಲಮಾನ ಕ್ರಿ.ಶ.ಸು. ೧೫ನೆಯ ಶತಮಾನವಾಗಿದೆ.

ಈ ಗ್ರಾಮದ ಹೆಬ್ಬಾಗಿಲ ವೃತ್ತದಲ್ಲಿ ಪೂರ್ವಾಭಿಮುಖವಾಗಿ ನಿಲ್ಲಿಸಿರುವ ವೀರಗಲ್ಲುವೊಂದು ಕರಿಯ ಗ್ರಾನೈಟ್ ಶಿಲೆ ಆಗಿದೆ. ಮೂರುವರೆ ಅಡಿ ಎತ್ತರ ಮತ್ತು ಮೂರು ಅಡಿ ಅಗಲವನ್ನುಳ್ಳ ಈ ವೀರಗಲ್ಲು ವೀರನೊಬ್ಬನ ಚಿತ್ರಣವನ್ನು ಮಾತ್ರ ಹೊಂದಿದೆ. ವೀರನು ತನ್ನ ಎಡದ ಕೈನಲ್ಲಿ ಬಿಲ್ಲು ಹಿಡಿದಿದ್ದು ಬಲದ ಕೈನಲ್ಲಿ

ಹಿಂಬದಿಯಿಂದ ಬಾಣಗಳನ್ನು ಹಿಡಿದಿದ್ದಾನೆ. ನಡುವಿನಲ್ಲಿ ಬಿಚ್ಚುಗತ್ತಿಯಿದೆ. ಬಲಿಷ್ಠ ದೇಹ, ಬಲಿಷ್ಠ ತೊಡೆ ಭಾಗಗಳು ಇದ್ದು ಕುಬ್ಜಮುಖ ಈ ವೀರನಿಗೆ ಇದೆ. ಶಿರದಲ್ಲಿ ಮೇಲೆ ಎತ್ತಿಕಟ್ಟಿದ ತುರುಬು ಇದ್ದು ಕರ್ಣಕುಂಡಲ, ಕೊರಳ ಪದಕ, ತೋಳು ಬಂದಿಗಳು. ಕಾಲುಕಡಗಗಳ ಆ ಭೂಷಣಗಳಿದ್ದು ವೀರಗಚ್ಚೆ ಧರಿಸಿದ್ದಾನೆ. ಬಿಲ್ವಿದ್ಯೆ ಪ್ರವೀಣನಾದ ಈತ ಶತೃಗಳ ಜೊತೆಯಾವುದೋ ಕಾರಣಕ್ಕೆ ಹೋರಾಡಿ ಹತನಾಗಿದ್ದಾನೆ. ಕಾಲ ಕ್ರಿ.ಶ. ಸು. ೧೪ನೆಯ ಶತಮಾನವಾಗಿದೆ.

ಇಲ್ಲಿಯೇ ೧/೪ ಅಡಿ ಎತ್ತರದ ಶಿರವೊಂದರ ಶಿಲಾಮೂರ್ತಿಯಿದ್ದು ಶರೀರ ಭಾಗ ಕಾಣೆಯಾಗಿರುವುದನ್ನು ಗಮನಿಸಿದರೆ ಈ ಗ್ರಾಮದಲ್ಲಿದ್ದ ಮತ್ತಷ್ಟು ಶಿಲ್ಪಕೃತಿಗಳು ನಾಶವಾಗಿರುವುದನ್ನು ಊಹಿಸಬಹುದು. ಜೊತೆಗೆ ಚೌಕಾಕಾರದ ಪೀಠವೂ ಇಲ್ಲಿದೆ.

ಕ್ರಿ.ಶ.ಸು. ೧೨ನೇ ಶತಮಾನಗಳಿಂದ ಕ್ರಿ.ಶ.ಸು. ೧೬ನೇ ಶತಮಾನದವರೆಗಿನ ಈ ಪ್ರಾಚೀನ ಸ್ಮಾರಕಗಳಿಂದಾಗಿ ಗೌಡನಹಳ್ಳಿಯ ಈ ನೆಲೆಯು ಯುದ್ಧ ಮತ್ತು ತ್ಯಾಗದ ಸ್ಥಳವಾಗಿದ್ದಿತು ಎಂದು ನಿರ್ಧರಿಸಬಹುದಾಗಿದೆ.

ಹಿರಿಯೂರು ತಾಲ್ಲೂಕಿನ ಸೂಕ್ತ ಇತಿಹಾಸವನ್ನು ಕಟ್ಟುವಲ್ಲಿ ಈ ಸ್ಮಾರಕ ಶಿಲೆಗಳು ಹೊಸಬೆಳಕನ್ನು ನೀಡುತ್ತಿವೆ.

■

# ೭. ದಾಸರ ಕೀರ್ತನೆಗಳ ಭಾಷಿಕ ಅಭಿವ್ಯಕ್ತಿ

-ಪ್ರೊ. ಜಿ. ಅಬ್ದುಲ್ ಬಷೀರ್

ಜಗತ್ತಿನ ಸಾಂಸ್ಕೃತಿಕ ಹಾಗೂ ಸಾಹಿತ್ಯದ ಇತಿಹಾಸದಲ್ಲಿ ಶಿವಶರಣರು ರಚಿಸಿದ 'ವಚನ ಸಾಹಿತ್ಯ', ಹಾಗೂ ಹರಿದಾಸರು ರಚಿಸಿದ 'ಕೀರ್ತನ ಸಾಹಿತ್ಯ'ಗಳು ಅಪರೂಪದ ಪ್ರಕಾರಗಳಾಗಿ ಕಾಣಿಸಿಕೊಂಡಿವೆ. ಇವು ಕನ್ನಡ ಸಾಹಿತ್ಯದ ಎರಡು ಕಣ್ಣುಗಳು ; ಅಕ್ಷಯ ನಿಧಿಗಳು ಎಂದು ಹೊಗಳಲ್ಪಟ್ಟಿವೆ. ಉನ್ನತ ಸಂಸ್ಕೃತಿಯ ಶರಣರು ಮತ್ತು ದಾಸರು ಕವಿ ಹೃದಯವುಳ್ಳವರಾಗಿದ್ದುದರಿಂದ ಅವರ ನೈತಿಕ ಮೌಲ್ಯಗಳ ಬೋಧನೆ ಸಾಹಿತ್ಯವಾಗಿ ಮಾರ್ಪಟ್ಟಿದ್ದು ಒಂದು ಪವಾಡವೇ ಸರಿ.

ಶುದ್ಧ ವೈದಿಕರಾಗಿದ್ದ ಅನುಭಾವಿ ಹರಿದಾಸರು ಹನ್ನೆರಡನೆಯ ಶತಮಾನದ ಉತ್ತರಾರ್ಧದಿಂದ ಹೃದಯಂಗಮ ಶೈಲಿಯಲ್ಲಿ ಸಾಹಿತ್ಯವನ್ನು ರಚಿಸಲು ತೊಡಗಿದರು. ಶ್ರೀಪಾದರಾಜರು, ವ್ಯಾಸರಾಯರು, ಪುರಂದರದಾಸರು, ಕನಕದಾಸರು, ವಾದಿರಾಜರು, ವಿಜಯದಾಸರು, ಗೋಪಾಲದಾಸರು, ಜಗನ್ನಾಥದಾಸರು, ಮಹಿಪತಿದಾಸರು, ರಾಮದಾಸರು, ಹೆಳವನಕಟ್ಟೆ ಗಿರಿಯಮ್ಮ ಮುಂತಾದ ನೂರಾರು ಹರಿದಾಸರನ್ನು ಹೆಸರಿಸಬಹುದು. ಭಾಗವತ ವಾಙ್ಮಯದ ವಿಶಿಷ್ಟ ಶಾಖೆಯಾದ ಹರಿದಾಸ ಸಾಹಿತ್ಯ ೧೫-೧೬ನೆಯ ಶತಮಾನಗಳಲ್ಲಿ ಉಚ್ಛ್ರಾಯ ಹಂತವನ್ನು ತಲುಪಿತು.

ರಾಮಾಯಣ , ಮಹಾಭಾರತ, ಭಾಗವತ, ವೇದೋಪನಿಷತ್ತು ಪುರಾಣಾಮಗಳನ್ನೂ, ಸಂಸ್ಕೃತ ಭಾಷೆಯನ್ನೂ ಚೆನ್ನಾಗಿ ಬಲ್ಲ ಹರಿದಾಸರು, ಸಂಗೀತ ಸಾಹಚರ್ಯವನ್ನು ಒಳಗೊಂಡ ಸರಳ ಕನ್ನಡದ ಮುಖಾಂತರ ಧಾರ್ಮಿಕ, ಮಾಧ್ವ ಮತದ ಆಚಾರ ವಿಚಾರ, ಹರಿಭಕ್ತಿ ಸುಧೆಯ ಪ್ರಚಾರ, ಆರ್ಥಿಕ, ಸಾಮಾಜಿಕ, ತಾತ್ವಿಕ, ನೈತಿಕ ಹಾಗೂ ಆಧ್ಯಾತ್ಮಿಕ ಮೌಲ್ಯಗಳನ್ನು ಅಭಿವ್ಯಕ್ತಿಸಿದರು. ಸಮಕಾಲೀನ ಸಮಾಜ ವ್ಯವಸ್ಥೆಯಲ್ಲಿ ಬೇರುಬಿಟ್ಟಿದ್ದ ಹೆಣ್ಣು-ಗಂಡು, ಬಡವ-ಬಲ್ಲಿದ, ಉಚ್ಚ-ನೀಚಗಳೆಂಬ ಮನೋಧರ್ಮಗಳನ್ನು ಕಂಡು ಮರುಗಿದರು ; ವಿಶ್ಲೇಷಿಸಿದರು ; ಪ್ರಶ್ನಿಸಿದರು ; ಟೀಕಿಸಿದರು ; ವಿಮರ್ಶಿಸಿದರು. ಆದರೆ ಬದುಕನ್ನು ಪೂರ್ಣವಾಗಿ

ತಿರಸ್ಕರಿಸಲಿಲ್ಲ. ವೈಧವ್ಯದ ಕ್ಲೇಶಗಳನ್ನೂ, ವ್ಯರ್ಥ ಕರ್ಮಕಾಂಡಗಳನ್ನೂ, ಕ್ಷುದ್ರದೈವಗಳನ್ನೂ, ಅಜ್ಞಾನ, ಮೂಢ ನಂಬಿಕೆಗಳನ್ನೂ ತ್ಯಜಿಸುವಂತೆ ಕರೆಕೊಟ್ಟು ಆದರ್ಶ ಸಮಾಜ ಸೃಷ್ಟಿಯೊಂದರ ಕನಸನ್ನು ಕಂಡರು. ಕರ್ಮಮಾರ್ಗ ಹಾಗೂ ಜ್ಞಾನಮಾರ್ಗಗಳ ಮೂಲಕ ನಡೆದರೆ ಹರಿದರ್ಶನವಾಗುತ್ತದೆ ಎಂಬ ಕನಸಿನ ಗೋಪುರವನ್ನೊಡೆದು ಸುಲಭವಾದ ಭಕ್ತಿಮಾರ್ಗದಲ್ಲಿ ಕ್ರಮಿಸಿದರೆ ಏನೆಲ್ಲ ಸಾಧಿಸಬಹುದೆಂಬುದನ್ನು ಲೋಕಕ್ಕೆ ತೋರಿಸಿಕೊಟ್ಟವರು ದಾಸರು.

ಚಂಪೂ ಕಾವ್ಯಪದ್ಧತಿಯಲ್ಲಿದ್ದ ಸಂಸ್ಕೃತ ವೃತ್ತಗಳು, ಪ್ರೌಢಭಾಷಾ ಬಂಧ, ಸಿದ್ಧಪ್ರಸಿದ್ಧ ಕಥಾವಸ್ತು, ಸ್ವೀಕೃತ ಮೌಲ್ಯ ಮುಂತಾದವುಗಳತ್ತ ಬೆನ್ನು ತಿರುಗಿಸಿ, ಅಚ್ಚಗನ್ನಡದ ಸ್ವತಂತ್ರ ಕಾವ್ಯ ಪ್ರಕಾರಗಳೊಂದಿಗೆ ನಡುಗನ್ನಡ–ಹೊಸಗನ್ನಡ ದೇಸಿಯಲ್ಲಿ ನಡೆದದ್ದು, ನುಡಿದದ್ದು ದಾಸರ ವೈಶಿಷ್ಟ್ಯ. "Works of imferior quality of the local languages have had greater influence on the life and the literature of the people" (Studies in Bengali poetry : Humayun Kabir).

ಮಧ್ವಾಚಾರ್ಯರ ದ್ವೈತ ತತ್ತ್ವ ವಿಚಾರ–ಪ್ರಚಾರ ಸಂಸ್ಕೃತ ಭಾಷೆಯ ಮಾಧ್ಯಮದಲ್ಲಿದ್ದುದರಿಂದ ಜನಮನವನ್ನು ತಟ್ಟಲಿಲ್ಲ. "ಜಗತ್ತು ಸತ್ಯ. ಜೀವ ಪರಮಾತ್ಮನ ವಶ ಮತ್ತು ತಾರತಮ್ಯದಿಂದ ನೀಚ–ಉಚ್ಚಭಾವಗಳನ್ನುಳ್ಳವಾಗಿವೆ. ನೈಜ ಸುಖದ ಅನುಭೂತಿಯೇ ಮುಕ್ತಿ. ಅಮಲವಾದ ಭಕ್ತಿಯೇ ಅದಕ್ಕೆ ಸಾಧನ. ಪ್ರತ್ಯಕ್ಷ, ಅನುಮಾನ ಮತ್ತು ಶಬ್ದ–ಇವೇ ಪ್ರಮಾಣಗಳು. ಅಖಿಲ ವೇದಗಳ ಸಹಾಯದಿಂದಲೇ ಹರಿಯು ಜ್ಞೇಯ" ಎಂಬುದು ಅವರ ವಿಚಾರ.

ರಾಜ ಮಹಾರಾಜರ, ಶ್ರೀಮಂತರ ಮೆಚ್ಚುಗೆಗಾಗಿ ಹಾಡದೆ ವ್ಯಕ್ತಿತ್ವ ಪರಿಣತಿ, ಜೀವನ ಸಿದ್ಧಿಗಳ ಸ್ಫೂರ್ತಿಯಿಂದ ಹಾಡಿದ ಆಶು ಕವಿಗಳು ಹರಿದಾಸರು. ಜನಪದ ಸಾಹಿತ್ಯದಂತೆ ಜನಪರ ನಿಲುವನ್ನೊಳಗೊಂಡ ಜೀವನ ಸಾಹಿತ್ಯ ; ದೈನಂದಿನ ಸಾಹಿತ್ಯ; ಉನ್ನತ ಸಂಸ್ಕೃತಿಯನ್ನು ಜನರಲ್ಲಿ ಹರಡಲು ಕಟಿಬದ್ಧವಾಗಿ ನಿಂತ ಸಾಹಿತ್ಯವಿದು. ಇಂತಹ ಸಾಹಿತ್ಯ ಸರಳ ಕನ್ನಡವನ್ನೂ ದೇಸೀ ಛಂದೋರೂಪಗಳನ್ನೂ ತನ್ನ ಅಭಿವ್ಯಕ್ತಿ ಮಾಧ್ಯಮವನ್ನಾಗಿ ಮಾಡಿಕೊಂಡದ್ದು ಕ್ರಾಂತಿಕಾರಕ ವಿಚಾರವೆ !

ಹರಿದಾಸರು ರಚಿಸಿರುವ ಕೀರ್ತನೆಗಳಲ್ಲಿ ರಾಗ, ತಾಳ ಬದ್ಧ ಪಲ್ಲವಿ, (ಹರಳೀಕೃತಗೊಂಡ ಭಾವ ಇಲ್ಲಿ ಇರುತ್ತದೆ ಅನುಪಲ್ಲವಿ ಆ ಭಾವವನ್ನು ಪುಷ್ಟೀಕರಿಸುತ್ತದೆ. ಮುಂದಿನ ನುಡಿಗಳು ಆ ಭಾವವನ್ನು ನಿದರ್ಶನಗಳ ಮುಖಾಂತರ ಸಮರ್ಥಿಸುತ್ತಾಹೋಗುತ್ತವೆ. ಆದಿಪ್ರಾಸ, ಅಂತ್ಯಪ್ರಾಸ, ಒಳಪ್ರಾಸ, ಶಬ್ದಾಲಂಕಾರಗಳು ಬಂದಿರುತ್ತವೆ). ಅನುಪಲ್ಲವಿ ನುಡಿಗಳ ಸಂಯೋಜನೆ ಇರುತ್ತದೆ ; ಅಂತ್ಯದ ನುಡಿಯಲ್ಲಿ ದಾಸರ ಅಂಕಿತವಿರುತ್ತದೆ. ಇಲ್ಲಿ ಮಾತ್ರೆಗಳಿಗಿಂತ ಲಯಕ್ಕೆ ಹೆಚ್ಚು ಪ್ರಾಧಾನ್ಯ ; ಆದ್ದರಿಂದಲೇ ಅಂಶಗಣಗಳು ಬಳಕೆಯಾಗುತ್ತವೆ. ಹರಿಗುರುಸ್ತುತಿ, ಭಗವಂತನ ಲೀಲೆಗಳ

ನಿರೂಪಣೆ ಪ್ರಧಾನವಾಗಿ ಕಾಣಿಸಿಕೊಳ್ಳುತ್ತಿದ್ದುದರಿಂದ ಇದಕ್ಕೆ 'ಕೀರ್ತನೆ' ಎಂಬ ಹೆಸರು ಚಲಾವಣೆಗೆ ಬಂದಿತು.

ಹರಿದಾಸರು ಸಂಸ್ಕೃತ ಮಿಶ್ರಿತ ಗ್ರಾಂಥಿಕ ನಡುಗನ್ನಡ ಹಾಗೂ ಹೊಸಗನ್ನಡ ಭಾಷೆಯನ್ನೂ, ಉಪಭಾಷೆಯಂತೆ ಕಂಡುಬರುವ ಆಡು ಭಾಷೆಯನ್ನೂ ತಮ್ಮ ಕೀರ್ತನೆಗಳಲ್ಲಿ ಬಳಸಿರುವುದು ಅವರ ಪರಿಸರ ಪ್ರಜ್ಞೆಗೆ ಉನ್ನತವಾದ ಉದಾಹರಣೆಯಾಗಿದೆ. ದಾಸರ ಭಾಷಿಕ ಅಭಿವ್ಯಕ್ತಿ, ಪರಿಚಯಕ್ಕೆ ಕನಕದಾಸರ 'ದೇವಿ ನಮ್ಮ ದ್ಯಾವರು ಬಂದರು', ಪುರಂದರದಾಸರ 'ಗಿಳಿಯು ಪಂಜರದೊಳಗಿಲ್ಲ', ವಾದಿರಾಜರ 'ತಾಳುವಿಕೆಗಿಂತ ತಪವು ಇಲ್ಲ' ಎಂಬ ಕೃತಿಗಳನ್ನು ಎತ್ತಿಕೊಳ್ಳಬಹುದು.

"ದೇವಿ ನಮ್ಮ ದ್ಯಾವರು ಬಂದರು ಬನ್ನಿರೆ ನೋಡ ಬನ್ನಿರೆ ॥ ಪ ॥

ಕೆಂಗಣ್ಣ ಮೀನನಾಗಿ । ನಮರಂಗ
ಗುಂಗಾಡಿ ಸೋಮನ ಕೊಂದಾನ್ಮ್ಯಾ
ಗುಂಗಾಡಿ ಸೋಮನ ಕೊಂದು ವೇದವ
ಭಂಗಾರದೊಡಲಿನಿಗಿತಾನ್ಮ್ಯಾ ॥ ೧ ॥

ದೊಡ್ಡ ಮಡುವಿನೊಳಗೆ । ನಮರಂಗ
ಗುಡ್ಡವ ಹೊತ್ತುಕೊಂಡು ನಿಂತಾನ್ಮ್ಯಾ
ಗುಡ್ಡವ ಹೊತ್ತುಕೊಂಡು ನಿಂತು ಸುರರನು
ದೊಡ್ಡವರನ್ನು ಮಾಡ್ಯಾನ್ಮ್ಯಾ ॥ ೨ ॥

ಚನ್ನ ಕಾಡಿನ ಹಂದಿಯಾಗಿ । ನಮರಂಗ
ಚಿನ್ನದ ಕಣ್ಣಿನ ಕೊಂದನ್ಮ್ಯಾ
ಚಿನ್ನದ ಕಣ್ಣಿನ ಕೊಂದು ಭೂಮಿಯ
ವನಜಸಂಭವನಿಗಿತ್ತಾನ್ಮ್ಯಾ ॥ ೩ ॥

ಸಿಟ್ಟಿಲಿ ಸಿಂಹನಾಗಿ । ನಮರಂಗ
ಹೊಟ್ಟೆಯ ಕರುಳ ಬಗಿದಾನ್ಮ್ಯಾ
ಹೊಟ್ಟೆಯ ಕರುಳ ಹಾರವ ಮಾಡಿ
ಪುಟ್ಟಗೆ ವರವ ಕೊಟ್ಟಾನ್ಮ್ಯಾ ॥ ೪ ॥

ಹುಡುಗ ಹಾರುವನಾಗಿ । ನಮರಂಗ
ಬೆಡಗಲಿ ಮುಗಿಲಿಗೆ ಬೆಳೆದಾನ್ಮ್ಯಾ
ಬೆಡಗಲಿ ಮುಗಿಲಿಗೆ ಬೆಳೆದು ಬಲಿಯನ್ನು
ಅಡಿಯಿಂದ ಪಾತಾಳಕೊತ್ತಾನ್ಮ್ಯಾ ॥ ೫ ॥

ತಾಯ ಮಾತನು ಕೇಳಿ ಸಾಸಿರ ತೋಳಿನ
ಆವಿನ ಕಳ್ಳನ ಕೊಂದಾನ್ಮಾ
ಆವಿನ ಕಳ್ಳನ ಕೊಂದು ಭೂಮಿಯ
ಅವನಿಸುರರಿಗೆ ಇತ್ತಾನ್ಮಾ ॥ ೬ ॥

ಕೆಂಗ್ಯಾಳೆ ಕಣ್ಣಿನ ಕೊಂಗಗಳ ಕೂಡಿ
ಜಂಘೇಲಿ ಲಂಕೆಗೆ ಪೋದನ್ಮಾ
ಜಂಘೇಲಿ ಲಂಕೆಗೆ ಪೋಗಿ । ನಮರಂಗ
ಹೆಂಗಸು ಕಳ್ಳನ ಕೊಂದಾನ್ಮಾ ॥ ೭ ॥

ಕರಿಯ ಹೊಳೆಯಲ್ಲಿ ತುರುಗಳ ಕಾಯುತ
ಉರಗನ ಮಡುವ ಧುಮುಕ್ಯಾನ್ಮಾ
ಉರಗನ ಹೆಡೆ ಮೇಲೆ ಹಾರ್ಹಾರಿ ಕುಣಿವ್ಯಾಗ
ಯಾರ್ಯಾರಿಗೇನೇನು ಇತ್ತಾನ್ಮಾ ॥ ೮ ॥

ಬಿಂಕದ ಗೋವಳನಾಗಿ । ನಮರಂಗ
ಡೊಂಕಾದ ಮುದುಕಿಯ ಕೂಡ್ಯಾನ್ಮಾ
ಡೊಂಕಾದ ಮುದುಕಿಯ ಕೂಡಿ ಮಾವನ
ಬಿಂಕವ ಮುರಿದು ಕುಣಿದಾನ್ಮಾ ॥ ೯ ॥

ಭಂಡನಂದದಿ ಪುಂಡರೀಕಾಕ್ಷನು
ಕಂಡ ಕಂಡಲ್ಲಿಗೆ ತಿರುಗ್ಯಾನ್ಮಾ
ಕಂಡಕಂಡಲ್ಲಿಗೆ ತಿರುಗಿ ತ್ರಿಪುರರ
ಹೆಂಡಿರನೆಲ್ಲ ಕೆಡಿಸ್ಯಾನ್ಮಾ ॥ ೧೦ ॥

ಚೆಲುವೆ ಹೆಂಡತಿ ಕುದುರೆಯಮಾಡಿ
ಒಳ್ಳೆ ರಾವುತನಾದಾನ್ಮಾ
ಒಳ್ಳೆ ರಾವುತನಾಗಿ ನಮರಂಗ
ಡೊಳ್ಳು ಹೊಟ್ಟೆಯ ಮೇಲೊದ್ದಾನ್ಮಾ ॥ ೧೧ ॥

ಡೋಳಿನ ಮೇಲ್ ಕೈ ಬರಮಪ್ಪ ಹಾಕ್ಯಾನು
ತಾಳವ ಶಿವನಪ್ಪ ತಟ್ಟಾನ್ಮಾ
ಒಳ್ಳೊಳ್ಳೆ ಪದಗಳು ಹನುಮಪ್ಪ ಹಾಡ್ಯಾನು
ಚೆಲುವ ಕನಕಪ್ಪ ಕುಣಿದಾನ್ಮಾ ॥ ೧೨ ॥

ಜನಪ್ರಿಯ ಕನಕ ಸಂಪುಟ : ಪ್ರ : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶಕರು, ಕರ್ನಾಟಕ ಸರ್ಕಾರ, ಬೆಂಗಳೂರು-೨, ಪುಟ-೨೭, ದ್ವಿಮು-೧೯೮೯). ದೇಸೀ ನುಡಿ ಹಾಗೂ ದೇಸೀ ಛಂದಸ್ಸಿನಲ್ಲಿ (ತ್ರಿಪದಿ) ವಿಷ್ಣುವಿನ ದಶಾವತಾರಗಳನ್ನು ಕನಕದಾಸರು ವರ್ಣಿಸಿದ್ದಾರೆ ; ಈ ಹಾಡು ದೇಶಿರಾಗ, ಛಾಪು ತಾಳದಲ್ಲಿದೆ.

ಇಲ್ಲಿನ ಲಯ, ಲವಲವಿಕೆ, ನಿಸ್ಸಂಕೋಚ, ಸಮೃದ್ಧ ಗ್ರಾಮ್ಯ ಮಾತುಗಳು (ದ್ಯಾವರು, ಭಂಗಾರ, ಒಡಲು, ಪುಟ್ಟಗೆ, ಅವು, ಕೊಂಗ, ಹೆಂಗಸು, ಕಳ್ಳ, ಡೊಂಕು, ಕೂಡು, ಕೆಡಿಸು, ಡೊಳ್ಳು), ಎರಡು ಮತ್ತು ನಾಲ್ಕನೆಯ ಸಾಲುಗಳ ಅಂತ್ಯದಲ್ಲಿ ತಾಳದಂತೆ ಬರುವ 'ಕೊಂದಾನ್ಯ್ಯಾ', ಇತ್ತಾನ್ಯ್ಯಾ', ಎಂಬ ಶಬ್ದಗಳು, ಉಪಭಾಷೆಯ ಗತ್ತು, ಗಮ್ಮತ್ತುಗಳನ್ನು ಎತ್ತಿ ತೋರುತ್ತವೆ. ವಿಷ್ಣುವಿನ ದಶಾವತಾರಗಳ ಕಥೆ ಕಲಾತ್ಮಕವಾಗಿ ಬಿಚ್ಚಿಕೊಳ್ಳುತ್ತಾ ಹೋಗುವ ವಿಧಾನ ಜಾನಪದ ಪರಿಸರವೊಂದರ ನಿರ್ಮಾಣದಂತಿದೆ. 'ಉರಗನ ಹೆಡೆ ಮೇಲೆ ಹಾರ್ಹಾರಿ ಕುಣಿವಾಗ ಎಂಬಲ್ಲಿನ ಭಾವಾಭಿನಯ, ಬರಮಪ್ಪ (<ಬ್ರಹ್ಮ), ಶಿವನಪ್ಪ (<ಶಿವ), ಹನುಮಪ್ಪ (<ಹನುಮಂತ), ಹಿಮ್ಮೇಳವಾಗುವ ಕನಕಪ್ಪ ಕುಣಿದಾಡುವ ಚಿತ್ರಗಳು, ಹಳ್ಳಿಯ ಶಬ್ದರೂಪಗಳು, ಜನಪದ ನಂಬಿಕೆ ಪದ್ಧತಿಗಳು, ಹಾಡಿನ ಧಾಟಿ ಮುಂತಾದ ಅಂಶಗಳಿಂದ ಇದೊಂದು ಶ್ರೇಷ್ಠ ಕಲಾಕೃತಿಯಾಗಿದೆ. ದಲಿತ ವರ್ಗದಿಂದ ಬಂದ ಕವಿ ಮಾತ್ರ ಇಂಥ ಕೃತಿಯನ್ನು ನಿರ್ಮಿಸಲು ಸಾಧ್ಯ. ದಾಸರ ದೇಸೀಪದ ನಿರ್ಮಾಣ ಸ್ವಾರಸ್ಯಕರವಾದ ವಿಚಾರವಾಗಿದೆ. ಕಮಲನಾಭ> ಹೊಕ್ಕೊಳ ಹೂವಿನವನು, ಕಾಮ>ಕಮ್ಮಗೋಲ.

ಗಿಳಿಯು ಪಂಜರದೊಳಿಲ್ಲ । ಹರಿ ಹರಿಯೆ (ರಾಮರಾಮ)
ಬರಿ ಪಂಜರವಾಯಿತಲ್ಲ ‖ ಪ ‖

ಅಕ್ಕ ಕೇಳೆ ಎನ್ನ ಮಾತು
ಚಿಕ್ಕದೊಂದು ಗಿಳಿಯ ಸಾಕಿದೆ
ಅಕ್ಕ ನಾನಿಲ್ಲದ ವೇಳೆ
ಬೆಕ್ಕು ಕೊಂಡು ಹೋಯಿತಯ್ಯೊ ‖ ೧ ‖

ಅರ್ತಿಲೊಂದು ಗಿಳಿಯ ಸಾಕಿ
ಮುತ್ತಿನ್ಹಾರವನ್ನು ಹಾಕಿದೆ
ಮುತ್ತಿನ್ಹಾರಕೊಂಡು ಗಿಳಿಯು
ಎತ್ತಲ್ಹಾರಿ ಹೋಯಿತಯ್ಯೊ ‖ ೨ ‖

ಹಸುರು ಬಣ್ಣದ ಗಿಳಿಯು
ಕುಶಲಬುದ್ಧಿಯ ಗಿಳಿಯು
ಅಸುವುಗುಂದಿ ಮರಿಯು ತಾನು

ಹಸನುಗೆಡಿಸಿ ಹೋಯಿತಯ್ಯೊ ॥ ೩ ॥

ರಾಮ ರಾಮ ಎಂಬ ಗಿಳಿ
ಕೋಮಲಕಾಯದ ಗಿಳಿ
ಸಾಮಜ ಪೋಷಕ ತನ್ನ
ಪ್ರೇಮದಿ ಸಾಕಿದ ಗಿಳಿ ॥ ೪ ॥

ಒಂಬತ್ತು ಬಾಗಿಲ ಮನೆಯೊಳ್
ತುಂಬಿದ ಸಂದಣಿ ಇರಲು
ಕಂಬ ಮುರಿದು ಡಿಂಬ ಬಿದ್ದು
ಅಂಬರಕೆ ಹಾರಿಹೋಯಿತು ॥ ೫ ॥

ಮುಪ್ಪಾಗದ ಬೆಣ್ಣೆ ತಿಂದು
ತಪ್ಪದೆ ಹಾಕಿದ ಹಾಲ
ಒಪ್ಪದಿಂದ ಕುಡಿದ ಕೈ
ತಪ್ಪಿ ಹಾರಿಹೋಯಿತಯ್ಯೊ ॥ ೬ ॥

ಅಂಗೈಲಾಡುವ ಗಿಳಿ
ಮುಂಗೈಯ ಮೇಲಣ ಗಿಳಿ
ರಂಗಪುರಂದರ ವಿಠಲನ್ನ
ಅಂಗಣದೊಳಾಡುವ ಗಿಳಿ ॥ ೭ ॥

ಪುರಂದರದಾಸರ ಈ ಕೀರ್ತನೆ ಆನಂದ ಭೈರವಿ ರಾಗ ಮತ್ತು ಅಟ್ಟತಾಳದಲ್ಲಿದೆ. ಈ ಕೃತಿಯನ್ನು ಪುರಂದರದಾಸರು ತಮ್ಮ ಮಗನ ಸಾವಿನ ಸಂದರ್ಭದಲ್ಲಿ ರಚಿಸಿರಬಹುದು ಎಂಬ ಒಂದು ಹೇಳಿಕೆಯಿದೆ. ಈ ಕೃತಿಯಲ್ಲಿ ದುಃಖ, ಅಸಹಾಯಕತೆ ಹಾಗೂ ಸಾವಿನ ಸ್ವರೂಪವನ್ನು ಕುರಿತ ವಿಸ್ಮಯವಿದೆ. ಹೀಗಾಗಿ ಇದೊಂದು ಸುಂದರ ಶೋಕಗೀತೆಯಾಗಿ ಪರಿಣಮಿಸಿದೆ. ಒಬ್ಬ ವ್ಯಕ್ತಿ ತನ್ನ ನೋವನ್ನು ಆತ್ಮೀಯರೊಬ್ಬರೊಡನೆ ('ಅಕ್ಕ')ತೋಡಿಕೊಳ್ಳುವ ನಡೆ ಇಲ್ಲಿದೆ. ಮೂರು ಮಾತ್ರೆಗಳ ವೇಗದ ಲಯ ಸಣ್ಣ ಪಾದಗಳ ಬಳಕೆ ಗಮನಾರ್ಹ. ಕಾಲದ ಅಮೂರ್ತತ್ವವನ್ನು ಮೂರ್ತಗೊಳಿಸಲು ಬಂದಿರುವ 'ಬೆಕ್ಕು', ಮೋಸ, ನಿಶ್ಶಬ್ದ ಸನ್ನಿವೇಶ, ಹೊಂಚು ಹಾಕುವಿಕೆ ಅನಿರೀಕ್ಷಿತವಾಗಿ ಆಕ್ರಮಿಸುವುದನ್ನು ಧ್ವನಿಸುತ್ತದೆ. ಗಿಳಿಯ ರೂಪ ವರ್ಣನೆ, ಗಿಳಿಗೂ ದಾಸರಿಗೂ ಇದ್ದ ಹತ್ತಿರದ ಸಂಬಂಧ, ಈ ಜೀವಿಗಳೆರಡಕ್ಕೂ ಹಾಸುಹೊಕ್ಕಾಗಿರುವಂಥದ್ದು 'ದೈವಭಕ್ತಿ' ಈಗ ಅದು ಬೇರೆಯಾದುದರಿಂದ ತನ್ನ ಬದುಕು ಹಸನುಗೆಟ್ಟಿತು.

'ಹಸನುಗೆಡಿಸಿ', 'ಮುಪ್ಪಾಗ', 'ಬಪ್ಪ', 'ತೆಪ್ಪನೆ' ಎಂಬ ಗ್ರಾಮ್ಯ ರೀತಿಯ ಅಚ್ಚಗನ್ನಡ ಪ್ರಯೋಗಗಳು ಕಾಲದ ನಿರಂತರತೆ, ನಿಶ್ಶಬ್ದದೊಳಗಿನ ವೇದನೆ, ಹಾಗೂ

ಅಸಹಾಯಕತೆಗಳನ್ನು ಧ್ವನಿಸುತ್ತವೆ. 'ಸಾಮಜ ಪೋಷಕ ಗಿಳಿ' ವಿಷ್ಣುವಿನ ಮಹಿಮೆಯನ್ನು ತಿಳಿಸುತ್ತದೆ. 'ಅಂಗೈ', 'ಮುಂಗೈ', 'ಅಂಗಣ' ಎಂಬ ಶಬ್ದಗಳು ಸಾಮೀಪ್ಯವನ್ನೂ ಆತ್ಮೀಯತೆಯನ್ನೂ ಸೂಚಿಸುತ್ತವೆ. ಭಾವಗೀತೆಯ ಸಮಸ್ತ ಲಕ್ಷಣಗಳನ್ನೊಳಗೊಂಡಿರುವ ಈ ಗೀತೆ ಕವಿ ಪ್ರತಿಭೆಯ ಪವಾಡದ ಫಲವಾಗಿದೆ.

ತಾಳುವಿಕೆಗಿಂತ ತಪವು ಇಲ್ಲ
ಕೇಳಬಲ್ಲವರಿಗೆ ಹೇಳುವೆನು ಸೊಲ್ಲ ॥ ಪ ॥

ದುಷ್ಟ ಮನುಜರು ಪೇಳ್ವ ನಿಷ್ಠುರದ ನುಡಿ ತಾಳು
ಕಷ್ಟಬಂದರೆ ತಾಳು ಕಂಗೆಡದೆ ತಾಳು
ನೆಟ್ಟ ಸಸಿ ಫಲ ಬರುವ ತನಕ ಶಾಂತಿಯ ತಾಳು
ಕುಟ್ಟು ಬುತ್ತಿಯ ಮುಂದೆ ಉಣಲುಂಟು ತಾಳು ॥ ೧ ॥

ಹಳಿದು ಹಂಗಿಸುವಂಥ ಹಗೆಯ ಮಾತನು ತಾಳು
ಸುಳಿ ನುಡಿ ಕುಹಕ ಕುಮಂತ್ರವನು ತಾಳು
ಅಳುಕದಲೆ ಬರಿಸು ಬಿಂಕದನುಡಿಯ ತಾಳು
ಹಲಧರಾನುಜನನ್ನು ಹೃದಯದಲಿ ತಾಳು ॥ ೨ ॥

ನಕ್ಕು ನುಡಿವರ ಮುಂದೆ ಮುಕ್ಕುರಿಸದೆ ತಾಳು
ಅಕ್ಕಸವ ಮಾಡುವರ ಅಕ್ಕರದಿ ತಾಳು
ಉಕ್ಕೊ ಹಾಲಿಗೆ ನೀರನಿಕ್ಕುವಂದದಿ ತಾಳು
ಪಕ್ಷೀಶ ಹಯವದನ ಶರಣೆಂದು ಬಾಳು ॥ ೩ ॥

ವಾದಿರಾಜರ ಈ ಕೀರ್ತನೆ ತಪಸ್ಸಿನ ಸರಳವಾದ ವ್ಯಾಖ್ಯಾನವಾಗಿದೆ. ದೇಹದಂಡನೆ ತಪಸ್ಸೆ ? ದೇಹವನ್ನು ದಂಡಿಸಿ ತಾಳ್ಮೆಯನ್ನು ಅಳವಡಿಸಿಕೊಳ್ಳದಿದ್ದರೆ ಅದು ತಪಸ್ಸು ಹೇಗಾದೀತು ! ಅದನ್ನು ತಿಳಿಸಲು ದಾಸರು ನೀಡಿರುವ ದೃಷ್ಟಾಂತಗಳು ಅರ್ಥಪೂರ್ಣವೂ ಸ್ವಾರಸ್ಯಕರವೂ ಆಗಿವೆ. ಇಲ್ಲಿನ ಸರಳ ಮಾತುಗಳು ಜನಸಾಮಾನ್ಯರ ಮನಸ್ಸನ್ನು ಹೇಗೆ ಗೆಲ್ಲುತ್ತವೆ ಎಂಬುದನ್ನು ಪರಿಭಾವಿಸಬೇಕು. 'ಉಕ್ಕೊ ಹಾಲಿಗೆ ನೀರನಿಕ್ಕುವಂದದಿ ತಾಳು' ಎಂಬ ಮಾತು 'ದೇಸೀ ನುಡಿಗೆ' ಉಜ್ವಲ ನಿದರ್ಶನದಂತಿದೆ.

ಧ್ವನಿ ಪ್ರಾಚುರ್ಯ, ಪಲ್ಲವಿ-ಅನುಪಲ್ಲವಿಗಳ ಮಾಧುರ್ಯ, ತಾತ್ತ್ವಿಕ ಸಂದೇಶ, ಆತ್ಮೀಯತೆ, ಪ್ರಾಸಾನು ಪ್ರಾಸಗಳ ಬಳಕೆ, ಚಿತ್ರಕ ಶಕ್ತಿ, ಅಪೂರ್ವ ಪದ ಬಂಧ, ಶೈಲಿಯ ನಿರರ್ಗಳತೆ, ಅರ್ಥಗಾಂಭೀರ್ಯ, ಬಗೆ ಬಗೆಯ ಛಂದೋರೂಪಗಳ ಬಳಕೆ (ತ್ರಿಪದಿ, ಸಾಂಗತ್ಯ, ಷಟ್ಪದಿ, ಚೌಪದಿ....) ಹಾಡಿನ ಗುಣ, ಜೀವಂತ ಪ್ರಾಮಾಣಿಕ

ಅನುಭವ ; ರಾಗಿ, ಕಲ್ಲುಸಕ್ಕರೆ, ಜ್ಞಾನ, ದಾರಿ, ಕೂಸು, ಹುಚ್ಚು, ಹಣ್ಣು, ಆನೆ, ಬುತ್ತಿಕಟ್ಟು, ಮಿಠಾಯಿ, ಪಾಯಸ, ಯಂತ್ರ, ರೆಪ್ಪೆ, ತುಪ್ಪ, ಜೋಡು ಹೆಂಡಿರು, ಗೋಡೆ, ಗೂಡು, ಕತ್ತಲೆ, ಅಲ್ಲಿದೆ ನಮ್ಮ ಮನೆ, ಗೂಡಿನ ಜಾಡು, ಕಾಗದ ಬಂದಿದೆ, ಮುತ್ತು, ಮುಸುರೆ ತೊಳೆ ಎಂಬಿವೇ ಮುಂತಾದ ದೈನಂದಿನ ಸವಕಲು ಶಬ್ದಗಳಲ್ಲಿಯೂ ಆಧ್ಯಾತ್ಮಿಕಾರ್ಥವನ್ನು ಕಾಣುವ ನವೀನತೆ ಕೆಲವು ಕೀರ್ತನೆಗಳನ್ನು ಭಾವಗೀತೆಯನ್ನಾಗಿಸಿವೆ. ಆತ್ಮನಿವೇದನೆ, ವಾತ್ಸಲ್ಯ, ವಿಷಾದ, ವಿಹ್ವಲತೆ, ಕಾತರ, ಗೋಪಿಯರ ಪ್ರಣಯಭಯ, ಅನುಕಂಪದಂಥ ಬಗೆ ಬಗೆಯ ಭಾವಗಳನ್ನು ಕೀರ್ತನೆಗಳಲ್ಲಿ ಕಾಣಬಹುದು. ಜನ ಭಾಷೆ ಅನುಭವದ ಅಭಿವ್ಯಕ್ತಿಗೆ ಎಂತಹ ಪರಿಣಾಮಕಾರಿ ಮಾಧ್ಯಮವಾಗಬಲ್ಲದು ಎಂಬುದನ್ನು ಶಿವಶರಣರಾದ ಮೇಲೆ ಹರಿದಾಸರು ತೋರಿಸಿಕೊಟ್ಟರು.

ಆತ್ಮೀಯ ಶಬ್ದಬಳಕೆ, ಸರಸ ಸಂಭಾಷಣಾ ರೀತಿ, ತದ್ಭವ ರೂಪಗಳ ಬಳಕೆ (ಸ್ತುತಿ>ತುತಿ>ತುತಿಸು, ಮೂರ್ತಿ>ಮೂರುತಿ, ಶ್ರೀ>ಸಿರಿ), ಮೊನಚು ಮಾತುಗಳು, ಯಕ್ಷಗಾನದ ನಡೆ, ಶಿಷ್ಟ ಭಾಷಾ ಬಳಕೆಯ ಅನನ್ಯತೆಗೆ ಕನಕದಾಸರ 'ನಾವು ಕುರುಬರು' ಎಂಬ ಕೃತಿಯನ್ನು ಉದಾಹರಿಸಬಹುದು.

ಗುಮ್ಮನ ಕರೆಯದಿರೆ ಅಮ್ಮ ನೀನು ಸುಮ್ಮನೆ ಇದ್ದೇನು, ಅಮ್ಮಿಯ ಬೇಡೆನು, 'ಲೊಳಲೊಟ್ಟೆ' ಎಲ್ಲಾ ಲೊಳಲೊಟ್ಟೆ, (ಎಲ್ಲವೂ ವ್ಯರ್ಥ) 'ಬೆಳ್ಳಿ ಬಂಗಾರಿಟ್ಟುಕೊಂಡು, ಒಳ್ಳೆ ವಸ್ತ್ರ ಹೊದ್ದುಕೊಂಡು, ಚಳ್ಳಪಿಳ್ಳೆ ಗೊಂಬೆಯಂತೆ ಆಡಿ ಹೋಯಿತು; ಹಳ್ಳ ಹರಿದು ಹೋಗುವಾಗ, ಗುಳ್ಳೆ ಬಂದು ಒಡೆಯುವಂತೆ, ಉಳ್ಳೆ ಪೊರೆಯಂತೆ ನೋಡೊ ಸಂಸಾರದಾಟವು, 'ಎಲ್ಲಾರು ಮಾಡುವುದು ಹೊಟ್ಟೆಗಾಗಿ', 'ದುರ್ಜನರ ಸಂಗ ಎಂದಿಗೊಲೆನು ಹರಿಯೆ, ಎಂಬಿವೇ ಮುಂತಾದ ಕೃತಿಗಳಲ್ಲಿ ಶಬ್ದಾಲಂಕಾರ, ಅರ್ಥಾಲಂಕಾರ, ಧ್ವನಿಗಳ ಸೊಗಸೂ ತತ್ವದ ಗಾಂಭೀರ್ಯಗಳ ವೈಸಾದೃಶ್ಯವೂ ಪರಿಣಾಮಕಾರಿಯಾಗಿ ಮೂಡಿದೆ. 'ಜೀವನ ನಶ್ವರ' ಎಂಬುದು ಇಲ್ಲಿನ ಒಳಾರ್ಥ.

'ತಲ್ಲಣಿಸದಿರು ಕಂಡ್ಯ ತಾಳು ಮನವೆ' ಎಂಬಲ್ಲಿ ಪ್ರಯೋಗವಾಗಿರುವ ಶಬ್ದಗಳು ಧ್ವನಿಪೂರ್ಣವಾಗಿವೆ. 'ತಲ್ಲಣ' ಎಂಬ ಶಬ್ದ ದೇವರಲ್ಲಿ ಮೊರೆಹೋಗುವವನ ಮನಸ್ಸಿನ ತಾಕಲಾಟವನ್ನೂ; 'ಕಂಡ ತಾಳು ಮನವೆ' ಎಂಬುದು ತಟಕ್ಕನೆ ಆತ್ಮೀಯ ಸ್ಪರ್ಶವುಳ್ಳ ಸಮಾಧಾನವನ್ನೂ ನೀಡುತ್ತದೆ. ಆಧುನಿಕ ಮನಸ್ಸಿನ ಹೊಯ್ದಾಟದ ವಿಶಿಷ್ಟಾನುಭವವನ್ನು 'ತಲ್ಲಣ' ಎಂಬ ಶಬ್ದ ಸೂಚಿಸುತ್ತದೆ. 'ಗುಮ್ಮ', 'ಅಮ್ಮಿ', ಎತ್ತೋದೆಯಮ್ಮ ನಂಗನ್ನೆತ್ತಿಕೋ ಅಮ್ಮಾ ಬಲುವತ್ತು ಅತ್ತು ಬಂದೀನೆ, ಎಂಬಿವು ಮಕ್ಕಳ ಪರಿಭಾಷೆ. ಕೀರ್ತನೆಗಳ ಭಾಷೆ, ಗೀತ ರೂಪ, ಕುಣಿತಗಳು ಆ ಕಾಲದ ಸಮಾಜದ ಅಷ್ಟೇ ಅಲ್ಲ, ಸಾರ್ವಕಾಲಿಕ ಸಮಾಜದ ವ್ಯಕ್ತಿತ್ವದ ಅಭಿವ್ಯಕ್ತಿಯ ಕ್ರಮವಾಗಿ ಬಂದಿರುವಂತೆ ತೋರುತ್ತದೆ.

ದಾರಿಯ । ನಡೆವಾಗಿ । ಭಾರವ । ಹೊರುವಾಗ ।
೪ ೫ ೪ ೫
ಕೃಷ್ಣ । ಎನ । ಬಾರದೆ ।
೩ ೨ ೪
ದುರಿತ । ರಾಶಿ । ಗಳನು । ತರಿದು । ಬಿಸಾಡುವ ।
೩ ೩ ೩ ೩ ೫
ಕೃಷ್ಣ । ಎನ । ಬಾರದೆ ।
೩ ೨ ೪

ಪುರಂದರದಾಸರ ಮೇಲಿನ ಗೀತೆಯಲ್ಲಿನ 'ಕೃಷ್ಣ ಎನಬಾರದೆ' ಎಂಬ ಪುನರುಕ್ತಿ ೪/೫ ಮಾತ್ರೆಗಳ ಲಲಿತಲಯದ ನಡುವೆ ಇದ್ದಕ್ಕಿದ್ದಂತೆ ಧುಮುಕುಮ ೩/೩ ಮಾತ್ರೆಗಳ ಬೀಸುನಡೆ ಎಂಥ ವೈವಿಧ್ಯವನ್ನು ತಂದಿದೆ ಎಂಬುದನ್ನು ಪರಿಭಾವಿಸಬೇಕು. ರಸಾನುಭವದ ಹಂತದಲ್ಲಿದ್ದಾಗ ತಟಕ್ಕನೆ 'ದುರಿತ ರಾಶಿಗಳನು' ತರಿದು ಬಿಸಾಡುವ ಎಂಬ ಸಾಲು ವಿಮಾನ ವೇಗದಲ್ಲಿ ಬಂದು ನಮ್ಮನ್ನು ಅಪ್ಪಳಿಸುತ್ತದೆ; ಗರುಡಗಮನದ ವೇಗದ ಸಾಲುಗಳು ಭೂಮಿಗಂಟಿದ ಮಾನವನನ್ನು ದೈವತ್ವಕ್ಕೇರಿಸುವುದನ್ನು ಧ್ವನಿಸುತ್ತವೆ. 'ತರಿದು ಬಿಸಾಡುವ' ಎಂಬ ದೇಸೀ ಶಬ್ದಪುಂಜ ಎಂಥ ಅರ್ಥವಂತಿಕೆಯನ್ನು ಸಾಧಿಸಿದೆ ಎಂಬುದನ್ನು ಪರಿಭಾವಿಸಬೇಕು.

'ಹೊಲೆಯ ಹೊರಗಿಹನೆ, ಊರೊಳಗಿಲ್ಲವೆ' ಎಂಬ ರಚನೆಯಲ್ಲಿ ಪುನರುಕ್ತವಾಗು 'ಹೊಲೆಯ' ಎಂಬ ಶಬ್ದ ಮನಃಪಟಲದ ಮೇಲೆ ಕೊಡಲೆಯಿಂದ ಚಚ್ಚಿದಂತೆ 'ಯಾವುದು ಹೊಲೆತನ ?' ಉತ್ತಮ ಜಾತಿಯಲ್ಲಿ ಹುಟ್ಟಿ ನೀಚರೀತಿಯಲ್ಲಿ ನಡೆದುಕೊಂಡರೆ ಅದು ಹೊಲೆತನ ಎಂದು ಸ್ಪಷ್ಟಪಡಿಸುವ ದೃಷ್ಟಾಂತದ ರೀತಿ ತುಂಬ ಮೆಚ್ಚುಗೆಯಾಗುತ್ತದೆ.

ಸಮಾಜ ವಿಮರ್ಶೆ, ನೀತಿ ನಿಷ್ಠೆಯ ಬೋಧೆ ಬಂದಾಗ ದಾಸರ ಭಾಷೆ ದೇಸಿಯತ್ತ ಹೊರಳುತ್ತದೆ. ಒರಟು, ಅಶುದ್ಧ, ಗ್ರಾಮ್ಯ, ಶಿಷ್ಟ, ದೋಷಪೂರ್ಣ ಶಬ್ದ ಬಳಕೆ ನಿರ್ದಿಷ್ಟ ಕವಿಯ ಅಭಿವ್ಯಕ್ತಿ ಶಕ್ತಿಗೆ ಹಿಡಿದ ಕೈಗನ್ನಡಿಯಂತಿದೆ. 'ಹ್ಯಾಂಗೆ, ತೀರ್ಥವಿನ್ಯಾತಕೆ, ತಿಳಿಯದ್ಹೋದೆ, ಮೂಗ್ಹಿಡಿದು, ದ್ಯಾವರು, ಬ್ಯಾರೆ' ಎಂಬೀ ಶಬ್ದಗಳಿಗೆ ಶಿಷ್ಟ ಭಾಷೆಯ ವ್ಯಾಕರಣ ನಿಯಮಗಳು ಅನ್ವಯಿಸುವುದಿಲ್ಲ. 'ಕೂಸನು ಕಂಡೀರಾ?'

---

* ಹೆಚ್ಚಿನ ವಿವರಗಳನ್ನು ಬಯಸುವವರು ನನ್ನ 'ಹರಿದಾಸ ಸಾಹಿತ್ಯ' ಎಂಬ ಗ್ರಂಥವನ್ನು ನೋಡಬಹುದು. ಪ್ರಕಾಶಕರು : ವಸಂತ ಸಾಹಿತ್ಯ ಪ್ರಕಾಶನ, ನಂ. ೧೦, ತುಳಸೀ ವನಂ, ಬೆಂಗಳೂರು–೫೬೦ ೦೫೩, ೨೦೦೧. ಈ ಗ್ರಂಥದಲ್ಲಿ ಮೂರು ದೀರ್ಘ ಲೇಖನಗಳಿವೆ. 'ಹರಿದಾಸ ಸಾಹಿತ್ಯ : ಉಗಮ–ವಿಕಾಸ–ವೈಶಿಷ್ಟ್ಯಗಳು, ಹರಿದಾಸ ಸಾಹಿತ್ಯ : ಭಾಷೆ–ಬಂಧ–ಸಮಕಾಲೀನತೆ; ಶ್ರೀರಾಮದಾಸರು.

'ಹ್ಯಾಂಗೆ ನೀ ದಾಸನಾದೆ ಪ್ರಾಣಿ, ಎಂಬೀ ಶಬ್ದ ಬಳಕೆ ಉತ್ತರ ಕರ್ನಾಟಕದ ಉಪಭಾಷೆಯತ್ತ ಬೆರಳು ತೋರಿಸುತ್ತದೆ.'

ತನುವ ನೀರೊಳಗದ್ದಿ ಫಲವೇನು, ತನ್ನ
ಮನದಲ್ಲಿ ದೃಢಭಕ್ತಿಯಿಲ್ಲದ ಮನುಜನು ॥ ಪ ॥

ದಾನಧರ್ಮಗಳನ್ನು ಮಾಡುವುದೆ ಸ್ನಾನ
ಜ್ಞಾನ ತತ್ತ್ವಗಳ ತಿಳಿವುದೆ ಸ್ನಾನ
ಹೀನ ಪಾಶಂಗಳ ಹರಿವುದೆ ಸ್ನಾನ
ಧ್ಯಾನದಿ ಮಾಧವನ ನೋಡುವುದೆ ಸ್ನಾನ (ಪುರಂದರದಾಸರು)

ಅಕಟಕಟ ಸಂಸಾರವನು ನೆಚ್ಚಿಕೆಡಬ್ಯಾಡ
ವಿಕಟದಲಿ ಮಾನವರು ಕೆಟ್ಟರೆಲ್ಲರು ನಿಜ (ಶ್ರೀಪಾದರಾಯರು)

ಕಾಳ ಬೆಳದಿಂಗಳು ಈ ಸಂಸಾರ
ಕತ್ತಲೆ ಬೆಳದಿಂಗಳು
ಉಂಟಾದ ಕಾಲಕ್ಕೆ ನೆಂಟರು ಇಷ್ಟರು
ಬಂಟರಾಗಿ ಬಾಗಿಲು ಕಾಯ್ವರು
ಉಂಟಾದತನಕ ತಪ್ಪಿ ಬಡತನ ಬಂದರೆ
ಒಂಟೆಯಂತೆ ಗೋಣ ಮೇಲೆತ್ತುವರು (ಶ್ರೀಪಾದರಾಯರು) ■

ಇಲ್ಲಿನ ಜನ ಬಳಕೆಯ ಭಾಷೆ, ಸಮಾಜ ವಿಮರ್ಶೆ, ನೀತಿ ನಿಷ್ಠೆ, ವಿಸ್ಮಯ, ನಿರ್ಧಾರ, ಕೀರ್ತನೆಗಳ ಸಾರ[೧]

೧. ಮಂಗಳೂರಿನಲ್ಲಿ ನಡೆದ ದಾಸ ಸಾಹಿತ್ಯ ವಿಚಾರಗೋಷ್ಠಿಯಲ್ಲಿ ಮಂಡಿಸಿದ ಪ್ರಬಂಧ.

# ೮. 'ಯೋಗ' ವಿಷಯಕ್ಕೆ ಜೈನ ಕವಿ ಶಾಂತರಸನ ಅಪೂರ್ವ ಕೊಡುಗೆ – 'ಯೋಗರತ್ನಾಕರ'

– ಪವಿತ್ರ

ಸ.ಗ೧೬೦೦ರಲ್ಲಿ ಬಾಳಿದ್ದ ಶಾಂತರಸನೆಂಬ ಜೈನ ಕವಿಯು 'ಯೋಗರತ್ನಾಕರ' ಎಂಬ ಯೋಗ ವಿಷಯದ ಕೃತಿಯನ್ನು ರಚಿಸಿದ್ದಾನೆ. ಈ ಕೃತಿಯು ಅಷ್ಟಾಂಗ ಯೋಗದ ಎಂಟು ಹಂತಗಳಾದ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ ವಿಧಾನಗಳು, ಧ್ಯಾನ ಮತ್ತು ಸಮಾಧಿಯ ಸಂಪೂರ್ಣ ವಿವರಗಳನ್ನೊಳಗೊಂಡಿದೆ. ಅಷ್ಟಾಂಗ(ಎಂಟು ಅಂಗ) ಯೋಗದ ವಿವಿಧ ಹಂತಗಳು ಮತ್ತು ಅವುಗಳ ವಿಧಿ–ನಿಯಮಗಳು ಯೋಗಾಕಾಂಕ್ಷಿಗಳಿಗೆ ಮಾತ್ರವಲ್ಲದೆ ಸಮಾಜದ ಸಾಮಾನ್ಯ ಜನರಿಗೂ ಬಹಳ ಉಪಯುಕ್ತವಾಗಿವೆ. ಯೋಗದ ಯಮ–ನಿಯಮಗಳು ವ್ಯಕ್ತಿಯ ಜೀವನಕ್ಕೆ ನೈತಿಕ ತಳಹದಿಯನ್ನೂ ಆಸನ–ಪ್ರಾಣಾಯಾಮಗಳು ಉತ್ತಮ ಆರೋಗ್ಯವನ್ನೂ ನೀಡಿದರೆ, ಪ್ರತ್ಯಾಹಾರ–ಧಾರಣಾಭ್ಯಾಸಗಳು ಮಾನಸಿಕ ಶಾಂತಿಯನ್ನೂ ಧ್ಯಾನ–ಸಮಾಧಿಗಳು ಮೋಕ್ಷವನ್ನೂ ನೀಡುತ್ತವೆ.

ನೇಮಿಜಿನ, ಸಿದ್ಧಾದಿಗಳು ಮತ್ತು ಸರಸ್ವತಿಯನ್ನು ಪ್ರಾರ್ಥಿಸಿ ಶಾಂತರಸನು ಯೋಗರತ್ನಾಕರವನ್ನು ಪ್ರಾರಂಭಿಸಿದ್ದಾನೆ. ಗಹನವಾದ ಯೋಗಶಾಸ್ತ್ರದ ವಿಷಯಗಳನ್ನು ಶಾಂತರಸನು ಸುಲಭವಾಗಿಯೂ ಸುಗಮವಾಗಿಯೂ ವಿವರಿಸಿದ್ದಾನೆ. ಯೋಗರತ್ನಾಕರದಲ್ಲಿ ೪೯೯ ಕಂದಪದ್ಯಗಳಿವೆ. ಕೃತಿಯು ನಡುಗನ್ನಡ ಭಾಷೆಯಲ್ಲಿದ್ದು ಶಾಸ್ತ್ರ ಮತ್ತು ಕಾವ್ಯಗಳ ಒಂದು ಸುಮಧುರ ಸಂಗಮವನ್ನು ಇಲ್ಲಿ ಕಾಣಬಹುದು. ಯೋಗಾಭ್ಯಾಸಕ್ಕೆ ಬೇಕಾದ ಅರ್ಹತೆ, ಯೋಗಕ್ಕೆ ಯೋಗ್ಯನಾದವನ ಲಕ್ಷಣಗಳು, ಯೋಗಾಧಿಕಾರಿ, ಯೋಗದ ಭೇದಗಳು, ಯೋಗಾಚಾರ್ಯನ ಲಕ್ಷಣಗಳು; ಬ್ರಹ್ಮಚರ್ಯ, ದಯೆ, ಕ್ಷಾಂತಿ, ದಾನ, ಸತ್ಯ, ಅಕಲ್ಪತಾ, ಅಹಿಂಸಾ, ಅಸ್ತೇಯ, ಮಾಧುರ್ಯ, ದಮ ಮೊದಲಾದ ಯಮದ ಹತ್ತುವಿಧಗಳು; ಆಸನಭೇದಗಳು ಮತ್ತು ಅವುಗಳನ್ನು ಅಭ್ಯಸಿಸುವುದರಿಂದ ದೂರವಾಗುವ ರೋಗಗಳು, ಮಾನವ

ದೇಹದಲ್ಲಿರುವ ಹದಿನಾಲ್ಕು ಪ್ರಮುಖ ನಾಡಿಗಳು; ಪ್ರಾಣ, ಅಪಾನ, ಸಮಾನ, ಉದಾನ ಮತ್ತು ವ್ಯಾನ ಎನ್ನುವ ಐದು ಪ್ರಾಣ ವಾಯುಗಳು; ನಾಗ, ಕೂರ್ಮವೇ ಮೊದಲಾದ ಐದು ಉಪವಾಯುಗಳು; ಪ್ರಾಣಾಯಾಮದ ವಿಧಗಳು ಮತ್ತು ಅವುಗಳನ್ನು ಅಭ್ಯಸಿಸುವುದರಿಂದಾಗುವ ವಾಯು (ಶ್ವಾಸ) ವಶ, ನಾಡೀಶುದ್ಧಿ, ದೇಹಶುದ್ಧಿ; ಷಣ್ಮುಖೀ, ಖೇಚರೀ, ಶಾಂಭವೀ ಮೊದಲಾದ ಮುದ್ರಾ ಭೇದಗಳು; ಪ್ರತ್ಯಾಹಾರ ವಿಧಾನಗಳು; ಮೂಲಾಧಾರವೇ ಮೊದಲಾದ ಷಟ್ಚಕ್ರಗಳು; ಧಾರಣಾ ವಿಧಿಗಳು; ಅಶುಭ ಧ್ಯಾನ ಮತ್ತು ಶುಭ ಧ್ಯಾನಗಳು; ಸಮಾಧಿ ಲಕ್ಷಣ; ದಶವಿಧ ಯೋಗವಿಘ್ನಗಳು; ಸರ್ವಯೋಗಾಂಗಗಳ ಫಲ; ಯೋಗೀಶ್ವರರ ಚಿಹ್ನೆಗಳು ಇತ್ಯಾದಿ ವಿಷಯಗಳನ್ನು ವಿವರಿಸಲಾಗಿದೆ.

'ಯೋಗರತ್ನಾಕರ'ದಲ್ಲಿ ನಿರೂಪಿತ ಅಷ್ಟಾಂಗ ಯೋಗದ ಸಂಕ್ಷಿಪ್ತ ವಿವರಣೆಯನ್ನು ಈ ಕೆಳಗೆ ನೀಡಲಾಗಿದೆ :

**೧. ಯಮ – ಸ್ವನಿಯಂತ್ರಣ**

ಯೋಗಾಭ್ಯಾಸಿಯು ಪಾಲಿಸಬೇಕಾದ ಮೂಲವ್ರತಗಳನ್ನು ಯಮ ಎಂದು ಕರೆಯುತ್ತಾರೆ. ಮೂಲವ್ರತಗಳೆಂದರೆ ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹ ಎಂಬ ಪಂಚಾಣುವ್ರತಗಳು. ಹಾಗೆಯೇ ಯೋಗಿಯು ದ್ವಾದಶಾನುಪ್ರೇಕ್ಷೆಗಳನ್ನು[೧] ಅರಿತು ನಡೆಯಬೇಕು. ದ್ವಾದಶಾನುಪ್ರೇಕ್ಷೆಗಳೆಂದರೆ ಅನಿತ್ಯಾಯಾನುಪ್ರೇಕ್ಷೆ, ಅಶರಣಾನುಪ್ರೇಕ್ಷೆ, ಸಂಸಾರಾನುಪ್ರೇಕ್ಷೆ, ಏಕತ್ವಾನುಪ್ರೇಕ್ಷೆ, ಅನ್ಯತ್ವಾನುಪ್ರೇಕ್ಷೆ, ಅಶುಚ್ಯಾನುಪ್ರೇಕ್ಷೆ, ಅಸ್ರವಾನುಪ್ರೇಕ್ಷೆ, ಸಂವರಾನುಪ್ರೇಕ್ಷೆ, ನಿರ್ಜರಾನುಪ್ರೇಕ್ಷೆ, ಲೋಕಾನುಪ್ರೇಕ್ಷೆ, ಬೋಧಿದುರ್ಲಭಾನುಪ್ರೇಕ್ಷೆ ಮತ್ತು ಧರ್ಮಾನುಪ್ರೇಕ್ಷೆ. ಅವನು ಕ್ಷಮೆಯಿಂದ ಕೂಡಿದವನಾಗಿರಬೇಕು. ಸಮತಾಭಾವವನ್ನು ಹೊಂದಿದವನಾಗಿರಬೇಕು. ಯೋಗಿಯಾದವನು ಸುಖ–ದುಃಖ, ಸ್ನೇಹ–ದ್ವೇಷ, ಪುಣ್ಯ–ಪಾಪಗಳಲ್ಲಿ ಸಮನಾಗಿರಬೇಕು. ಕ್ಷಮೆ, ದಯೆ, ಆರ್ಜವ, ಶೌಚ, ಆಚಾರಗಳನ್ನು ಹೊಂದಿರಬೇಕು.

"ಸಮತಾಭಾವನೆಯಿಂದಂ
ಸಮನಿಸುಗುಂ ಮುನಿಗೆ ಯೋಗಮಕ್ಕುಮಮೋಘಂ
ಸಮತೆಯೆ ಮುಖ್ಯಮದಕ್ಕುಂ
ಸಮತೆಯೊಳಂ ಸರ್ವಗುಣಮವೆಲ್ಲಂ ತೋರ್ಕುಂ"[೨]

"ಕೊಲೆ ಹುಸಿ ಕಳವಂ ತೊರ್ಯೆವುದು
ಸಲೆ ಕ್ಷಮೆ ದೃಢ ಬ್ರಹ್ಮಚರ್ಯ ದಯೆಯಾರ್ಜವಮುಂ
ಸಲೆ ಶೌಚಮುಂ ವಿಹಾರಂ
ಕೆಲಚರ್ಯಮ ದಶ ವಿಧಂಗಳಿಂತಿರೆ ಪೇಳ್ವೆ"[೩]

## ೨. ನಿಯಮ-ಉತ್ತಮ ಚಾರಿತ್ರ್ಯ ಪಾಲನೆ

ಶಾಂತರಸನು ಯೋಗಿಯು ಪಾಲಿಸಬೇಕಾದ ನಿಯಮಗಳು ಮತ್ತು ಯೋಗಕ್ಕೆ ಯೋಗ್ಯನಾದವನ ಲಕ್ಷಣಗಳನ್ನು ಈ ರೀತಿ ವಿವರಿಸಿದ್ದಾನೆ:

"ಪರಮಾಗಮದಿಚ್ಛೆಯೊಳಂ
ಗುರು ಪೇಳ್ದೋಜೆಯೊಳು ನಡೆಯೆ ಸಯ್ಯಮದಿಂದಂ
ಗುರು ಮತಮದೊಮ್ಮೆ ಬೇಳ್ಕುಂ
ಪರಮಾರ್ಥಮದೊಂದೆ ನೋಡೆ ನಿಯಮಮೆನಿಕ್ಕುಂ

ಯಮ ಸಹಿತಮಾಗಿ ನಿಯಮ
ಕ್ರಮದಿಂ ಗುರುಪೇಳ್ದ ಮಾಳ್ಕೆಯಿಂದಂ ನಡೆಯಲ್
ಸಮನಿಸುಗಂ ನಿಯಮಂ ಸ
ಯ್ಯಮಿಗಂತದು ಪೇಳ್ದ ಯೋಗರತ್ನಾಕರದೊಳ್

ನಂಬುವುದು ಜಿನರ ಮಾರ್ಗಮ
ನಿಂಬಾಗಿರೆ ಭವನೆನಿಪನಾಪ್ತಾಗಮಮಂ
ನಂಬುವುದು ಶುದ್ಧದರ್ಶನ
ಮೆಂಬುದು ತಾನರಿದು ನೆಗಳೆ ಸಯ್ಯಮಿಯೆನಿಕುಂ"[೪]

ಪರಮಾಗಮಗಳಿಗೆ ಅನುಗುಣವಾಗಿ, ಗುರು ಹೇಳಿದ ರೀತಿಯಲ್ಲಿ ಸಂಯಮದಿಂದ ನಡೆದುಕೊಳ್ಳುವುದೇ ನಿಯಮ. ಜಿನರು ತೋರಿಸಿದ ಮಾರ್ಗ(ಮನಸ್ಸು ಮತ್ತು ಇಂದ್ರಿಯಗಳನ್ನು ಗೆದ್ದ ಮಹಾತ್ಮನನ್ನು 'ಜಿನ' ಎನ್ನುತ್ತಾರೆ), ಆಪ್ತಾಗಮ ಮತ್ತು ಶುದ್ಧದರ್ಶನಗಳನ್ನು ತಿಳಿದು ನಡೆದರೆ ಸಾಧಕನು ಸಂಯಮಿಯಾಗುತ್ತಾನೆ. ಈ ರೀತಿ ಯಮಸಹಿತನಾಗಿ ನಿಯಮ ಕ್ರಮದಿಂದ ಸಂಯಮಿ ಯೋಗಸಾಧಕನು ನಡೆದರೆ ಯೋಗವು ಸಿದ್ಧಿಸುತ್ತದೆ. ಯೋಗಸಾಧಕನು ಸಕಲಗುಣಭರಿತನಾಗಿ ಸಕಲ-ನಿಷ್ಕಲಗಳನ್ನರಿತಿರಬೇಕು. ಪಂಚಾಸ್ತಿಕಾಯ, ಷಡ್ದ್ರವ್ಯ, ಸಪ್ತತತ್ವ, ನವಪದಾರ್ಥಗಳನ್ನು ತಿಳಿದು ಚರಿತ್ರೆ, ಪುರಾಣ, ತತ್ತ್ವಾರ್ಥಗಳು ಮತ್ತು ವೀತರಾಗ ರಚಿತಾಗಮವನ್ನು ಅರಿಯಬೇಕು. ಹೇಯ-ಉಪಾದೇಯಗಳನ್ನು ತಿಳಿದು ಮೋಹವರ್ಜಿತನಾಗಿ ಪರಮಾಗಮವನ್ನು ಸ್ವೀಕರಿಸಿ ಕ್ರೋಧಾದಿಗಳನ್ನು ಬಿಟ್ಟು ಮುಕ್ತಿಯ ಮಾರ್ಗವನ್ನು ಹಿಡಿಯಬೇಕು. ಹಿತವಾದುದನ್ನು ಚಿಂತಿಸಬೇಕು. ಈ ರೀತಿ ಮಾಡಿದವನ ಮನವು ನಿಯಮಿಸಲ್ಪಡುತ್ತದೆ.

**ಯೋಗಕ್ಕೆ ಯೋಗ್ಯನಾದವನ ಲಕ್ಷಣಗಳು** : ಯೋಗಾಭ್ಯಾಸಿಯು ದೇವ-ಗುರು ಭಕ್ತಿಯುತ, ಪಾಪಭೀರು ಮತ್ತು ಸತತಾಭ್ಯಾಸಿಯಾಗಿರಬೇಕು. ಭಾವುಕ, ನಿಪುಣ, ನಿಶ್ಕಾರ್ಯ ಮತ್ತು ಜೀವ ದಯಾಪರನಾಗಿರಬೇಕು. ಜಿನ, ಜಿನಮುನಿ, ಜಿನಭಾಷಿತ

ಆಗಮಗಳನ್ನು ನಂಬುವವನಾಗಿರಬೇಕು. ಸತ್ಯವನ್ನು ಹೇಳುವವನಾಗಿರಬೇಕು. ಸುಳ್ಳು ಹೇಳುವವನು, ವಂಚಕ, ದುರಾಸೆಯವ, ವ್ಯಸನಿ, ಪಾಪಿ, ಕೋಪಿ, ದೂಷಕ, ಅತಿಯಾಗಿ ಮಾತನಾಡುವವನು, ನಿಷ್ಠುರ, ನಿಂದ್ಯ ಇವರಿಗೆ ಯೋಗವನ್ನು ಕಲಿಸಬಾರದು. ಬುದ್ಧಿ ಇಲ್ಲದವನು, ಸೋಮಾರಿ, ದಡ್ಡ, ಪಾಪಿ, ಧರ್ಮದೂಷಕ, ಗುಣಹೀನ, ವ್ರತಹೀನ ಮತ್ತು ಮೂರ್ಖರಿಗೆ ಯೋಗವು ಸಿದ್ಧಿಸುವುದಿಲ್ಲ.

**೩. ಆಸನ**

"ನಿರುತಂ ಪದ್ಮಾಸನದಿಂ
ಪರಮಾತ್ಮಧ್ಯಾನದಿಂದ ಕರ್ಮಾಟವಿಯಂ
ಸ್ಥಿರಮುರಿಪಿ ಮೋಕ್ಷಲಕ್ಷ್ಮಿಯ
ನಿರದೆಯ್ದುವ ವೀತರಾಗನೀಗೆನಗೊಳ್ಪಂ

ಸ್ವಸ್ತಿಕ ಪದ್ಮ ವಜ್ರಂ
ಪಸ್ತುತಮೆನೆ ಕುಮುದಷಂಡ ಭದ್ರಾಸನಮಂ
ಶಾಸ್ತ್ರಕ್ರಮದಿಂ ಕುಕ್ಕುಟ
ವಸ್ತುವಿದಾ ಗರುಡಮೆಂಬುದಾಸನಮಿವರೊಳ್

ಆಸನಮಿವು ಮೊದಲಾಗಿರೆ
ಲೇಸಪ್ಪವು ಪಲವುಮೊಳವುಮವರೊಳ್ ಕೆಲವಂ
ಬೇಸರಿದಭ್ಯಾಸಿಸುತಿರ
ಲಾಸನ ಜಯಮಕ್ಕು ನಿನಗೆ ನಿಶ್ಚಯದಿಂದಂ

ಆಸನಜಯದಿಂದಕ್ಕುಂ
ಲೇಸಪ್ಪಾಹಾರ ಜಯಮುಮಾಹಾರ ಜಯಂ
ಲೇಸಾಗೆ ನಿನಗದಕ್ಕುಂ
ಬೇಸರಿದಿರು ನಿದ್ರೆ ಜಯಮುಮದು ನಿಶ್ಚಯದಿಂ"[೫]

ಸ್ವಸ್ತಿಕ, ಪದ್ಮ, ವಜ್ರ, ಕುಮುದ ಷಂಡ, ಭದ್ರ, ಕುಕ್ಕುಟ, ಗರುಡ ಮುಂತಾದುವು ಆಸನದ ಭೇದಗಳು. ಅವುಗಳನ್ನು ನಿತ್ಯವೂ ಅಭ್ಯಸಿಸುವುದರಿಂದ ಆಸನ ಜಯವಾಗುತ್ತದೆ. ಆಸನ ಜಯವೆಂದರೆ ಒಂದೇ ಆಸನದಲ್ಲಿ ಸಾಕಷ್ಟು ಹೊತ್ತು ಕುಳಿತುಕೊಳ್ಳುವ ಸಾಮರ್ಥ್ಯ. ಆಸನ ಜಯದಿಂದ ಆಹಾರಜಯ, ಆಹಾರ ಜಯದಿಂದ ನಿದ್ರಾಜಯವುಂಟಾಗುತ್ತದೆ. ಅಂದರೆ ಅತ್ಯಲ್ಪ ಆಹಾರ ಮತ್ತು ನಿದ್ರೆಯೇ ಸಾಕಾಗುವುದು. ಆಸನಗಳನ್ನು ಉತ್ತರ ಅಥವಾ ಪೂರ್ವಾಭಿಮುಖವಾಗಿ ಕುಳಿತು ಹಾಕಬೇಕು. ಹಳ್ಳ, ತಿಟ್ಟು, ಒದ್ದೆಯಾದ ಜಾಗ, ಗಾಳಿ, ಮಳೆ, ತಿಗುಣೆ, ಚಿಗಟ, ನೊರಜು, ಇರುವೆಯ ಗೂಡು, ಗುಂಗುರಿನ ಶಬ್ದ, ಚೇಳು–ಹಾವುಗಳಿರುವೆಡೆ, ಜೂಜಾಡುವ, ವಾದಮಾಡುವ, ವೇದವನ್ನೋದುವ,

ಗಾಣಿಗರ ಕೇರಿಯ ಹತ್ತಿರದ ಮನೆ, ಕಲಕರವಗಳಿರುವೆಡೆಗಳು ಯೋಗಕ್ಕೆ ಸಲ್ಲದ ಜಾಗಗಳು. ಹಿತವಾದ ಜಾಗದಲ್ಲಿ, ಸಮತಳವಾದ ನೆಲದಲ್ಲಿ, ಸಮಚಿತ್ತನಾಗಿ, ಸಿದ್ಧಾಸನದಲ್ಲಿ ಸಮದೇಹವಾಗಿ ಬೇರೆಯದನ್ನು ಚಿಂತಿಸದೆ ಕುಳಿತರೆ ಯೋಗವು ನಿಶ್ಚಯವಾಗಿ ಲಭಿಸುತ್ತದೆ.

ಶಾರೀರಿಕ ರೋಗಗಳನ್ನು ಹೋಗಲಾಡಿಸುವ ಆಸನಗಳನ್ನು ಶಾಂತರಸನು ಹೆಸರಿಸಿದ್ದಾನೆ. ರೋಗಾವರಾಹಕರಣಿಯು ಎಲ್ಲ ವಿಧವಾದ ಜ್ವರವನ್ನೂ, ಪ್ರೇತಂಕರಣಿಯು ವಾತಪ್ರಕೋಪವನ್ನೂ, ರಾವಣಬಂಧವು ಗುದದರ್ಶ, ಗುಲ್ಮ ಮತ್ತು ಪ್ರಮೇಹಗಳನ್ನು, ಗಜಕುಂಭ-ಬೆನ್ನು ನೋವು ಮತ್ತು ಇತರ ವಾಯುದೋಷವನ್ನು, ಮಯೂರಾಸನ ಹಲವು ರೀತಿಯ ಗುಲ್ಮಾದಿಗಳನ್ನು, ವರಾಹಕರಣಿ-ಚರಣತಳದ ನೋವನ್ನು, ವಜ್ರಾಸನವು ಗುಲ್ಮಾದಿ ದೋಷಗಳನ್ನು ಮತ್ತು ಗಜಕರಣವು ಶರೀರದ ಅನೇಕ ರೋಗಗಳನ್ನು ಪರಿಹರಿಸುತ್ತವೆ. ಆಸನ ಮತ್ತು ಕರಣಿಗಳನ್ನು ನಡೆಸುವುದರಿಂದ ಸ್ವಸ್ಥ ಶರೀರವು ನಮ್ಮದಾಗುತ್ತದೆ.

**೪. ಪ್ರಾಣಾಯಾಮ**

ಪ್ರಾಣಾಯಾಮ ಯೋಗಾಭ್ಯಾಸದ ನಾಲ್ಕನೆಯ ಹಂತ. ನಾಭೀಕೂಪದಲ್ಲಿ ವೃತ್ತ, ಚೌಕ, ಅರ್ಧಚಂದ್ರಾಕಾರದಿಂದ ಕೂಡಿದ ಅಗ್ನಿಮಂಡಲವಾದ ಕುಂಡಲಿಯಿದೆ. ಹೊಕ್ಕುಳ ಕಮಲದಿಂದ ಪ್ರಾರಂಭವಾಗುವ ಗಾಂಧಾರಿ, ಹಸ್ತಿಜಿಹ್ವಾ, ಪೂಷಾ, ಪಯಸ್ವಿನಿ, ಅಲಂಬುಷಾ, ಕುಹೂ, ಶಂಖಿನಿಗಳು ಮೊದಲಾದ ಹದಿನಾಲ್ಕು ನಾಡಿಗಳಿವೆ. ಅವುಗಳಲ್ಲಿ ಇಡಾ, ಪಿಂಗಳ ಮತ್ತು ಸುಷುಮ್ನ ಎಂಬ ಮೂರು ನಾಡಿಗಳು ಪ್ರಮುಖವಾದುವುಗಳು. ಇಡಾ(ಚಂದ್ರ) ನಾಡಿಯು ದೇಹದ ಎಡದಲ್ಲಿ ಮತ್ತು ಪಿಂಗಳ(ಸೂರ್ಯ)ನಾಡಿಯು ಬಲ ಭಾಗದಲ್ಲಿವೆ. ಸುಷುಮ್ನವು ಮಧ್ಯದಲ್ಲಿದ್ದು ಬ್ರಹ್ಮರಂಧ್ರದವರೆಗೆ ವ್ಯಾಪಿಸಿದೆ. ಇಡಾ-ಪಿಂಗಳವನ್ನು ನಿರೋಧಿಸಿ ಮಧ್ಯದಲ್ಲಿರುವ ಸುಷುಮ್ನಾ ನಾಡಿಯನ್ನು ಕ್ರಿಯಾಶೀಲಗೊಳಿಸಿದಾಗ ಸಾಧಕನು ಧ್ಯಾನಸುಖವನ್ನು ಪಡೆಯುತ್ತಾನೆ.

"ಈಳಾ ಪಿಂಗಳಿಯೆಂಬೀ
ನಾಳಿಗಳಂ ಕಟ್ಟಿ ನಡೆಸು ಮಧ್ಯ ಸುಷುಮ್ನಂ
ನಾಳಿಯದರಿಂದ ನಡೆಯಲು
ಕೇಳ್ ನಿನಗಂ ಧ್ಯಾನಮೆಯ್ದಿ ಸುಖಮಂ ಪಡೆವೈ"[೬]

ನಾಡಿ ಮತ್ತು ಪ್ರಾಣದ ಮೇಲೆ ಹಿಡಿತ ಸಾಧಿಸ ಬಯಸುವ ಯೋಗಿಯು ಮೊದಲು ನಾಡೀಶುದ್ಧಿ ಪ್ರಾಣಾಯಾಮವನ್ನು ಮಾಡಬೇಕು. ಅದರಿಂದ ವಾಯು ವಶವಾಗುತ್ತದೆ. ನಾಡೀಶುದ್ಧಿಯಾಗಿ ಕಾಂತಿ, ತುಷ್ಟಿ ಪುಷ್ಟಿಗಳು ದೊರೆಯುತ್ತವೆ. ನಾಡೀಚಾಲನೆಯಿಂದ ದೇಹಶುದ್ಧಿಯಾಗುತ್ತದೆ.

"ನಾಳಿಯ ಶುದ್ಧಿಯದಾಗಲು
ಕೇಳ್ ನಿನಗಂ ಕಾಂತಿ ತುಷ್ಟಿಪುಷ್ಟಿಯನೀಗುಂ
ಪೇಳರುಚಿಯೆನಿಸಲಾಗದು
ಪಾಳಿಸುಗುಂ ಕ್ಷುದೆಯು ತೃಷೆಯು ಮತಿವಿಕಸತೆಯಂ"[೭]

ನಮ್ಮ ದೇಹವು ಪ್ರಾಣಾನಿಲದ ಸಹಾಯದಿಂದ ಕೆಲಸ ಮಾಡುತ್ತದೆ. ಪ್ರಾಣ, ಅಪಾನ, ಸಮಾನ, ಉದಾನ ಮತ್ತು ವ್ಯಾನ ಎನ್ನುವ ಐದು ವಾಯುಗಳು ದೇಹದಲ್ಲಿವೆ. ಅಲ್ಲದೆ ನಾಗ, ಕೂರ್ಮ, ಕೃಕರ, ದೇವದತ್ತ, ಧನಂಜಯ ಎನ್ನುವ ಐದು ಉಪವಾಯುಗಳೂ ದೇಹದಲ್ಲಿರುತ್ತವೆ. ಶರೀರದಲ್ಲಿ ಜೀವ(ಆತ್ಮ)ನಿರುವಷ್ಟು ದಿನ ಮರುತವಿರುತ್ತದೆ. ಪ್ರಾಣಾಯಾಮದ ಅಭ್ಯಾಸದಿಂದ ಆಹಾರಜಯ, ಆಸನಜಯ, ನಿದ್ರಾಜಯಗಳು ಲಭಿಸುತ್ತವೆ. ಪೂರಕ, ಕುಂಭಕ, ರೇಚಕ, ಹಾರ, ಉತ್ತರ, ಅಧರ, ಶಾಂತ ಎಂಬ ಏಳು ರೀತಿಯ ಮಾರುತ ಗತಿಗಳಿವೆ. ಗಾಳಿಯನ್ನು ಒಳಗೆ ತೆಗೆದುಕೊಂಡರೆ ಪೂರಕ, ಅದನ್ನು ಅಲ್ಲಿಯೇ ಇಟ್ಟರೆ ಕುಂಭಕ, ಹೊರಗೆ ಬಿಟ್ಟರೆ ರೇಚಕ. ವಜ್ರಾಸನದಲ್ಲಿ ಕುಳಿತು ಪೂರಕ, ಕುಂಭಕ, ರೇಚಕಗಳನ್ನು ಸ್ವಲ್ಪ ಸ್ವಲ್ಪವಾಗಿ ಅಭ್ಯಾಸಮಾಡಬೇಕು. ಪೂರಕದಿಂದ ವಾಯುವನ್ನು ಕ್ರಮವಾಗಿ ಮೂವತ್ತು, ಅರವತ್ತು ಮತ್ತು ತೊಂಬತ್ತು ಮಾತ್ರೆಗಳ ಕಾಲ ಹಿಡಿದಿಟ್ಟರೆ ಮಾರುತ ಜಯವಾಗುತ್ತದೆ.

ಹಾಗೆಯೇ ಉಡ್ಯಾಣಬಂಧ, ಸಮರಸಕರಣಿ ಮೊದಲಾದ ಅಭ್ಯಾಸ ಕ್ರಮಗಳಿವೆ. ಉಡ್ಯಾಣಬಂಧವೆಂದರೆ ಪ್ರಾಣಾಪಾನಗಳನ್ನು ಕುಂಡಲಿಯ ಕೆಳಗೆ ಬಿಗಿಸುವುದು. ಇದರಿಂದ ದೇಹ ಸ್ಥಿರವಾಗುತ್ತದೆ. ರೋಗಗಳು ನಷ್ಟವಾಗುತ್ತವೆ. ಸಮರಸ ಕರಣಿಯಿಂದ ವಾಯು ವಶವಾಗುತ್ತದೆ. ನಾದ, ಪರಕಾಯ ಪ್ರವೇಶ, ಭೂಮಿತ್ಯಾಗ, ತನುರೋಮ ಭ್ರಮಣ, ಸಂತೋಷ, ಮತಿವಿಕಾಸಗಳುಂಟಾಗುತ್ತವೆ. ವಜ್ರವಡ್ಯಾಣದಿಂದ ಬ್ರಹ್ಮಾಂಬು ಒಸರುತ್ತದೆ. ಕೋದಂಡ ಕರಣಿಯಿಂದ ತಲೆಯ ನೋವು, ಕಿವುಡುಗಳು ದೂರವಾಗುತ್ತವೆ. ಬೇತಾಳದಂಡಿಯಿಂದ ಅನ್ನದೋಷ ಪರಿಹಾರ ಮತ್ತು ಕೂರ್ಮಕರಣಿಯಿಂದ ತಲೆನೋವು ಹೋಗುತ್ತದೆ. ಸರ್ಪೀಕರಣಿಯು ಶ್ಲೇಷ್ಮಾಪಹರ. ಮನಸ್ಸನ್ನು ಹಿಡಿತದಲ್ಲಿಡುವುದರಿಂದ ಮರುತವನ್ನು ಹಿಡಿತದಲ್ಲಿಡಬಹುದು. ಪ್ರಾಣಾನಿಲವನ್ನು ನಿರೋಧಿಸಿದರೆ ಶರೀರ ಮತ್ತು ಮನಸ್ಸಿನ ಸಕಲ ಕಾರ್ಯಗಳೂ ಹತೋಟಿಗೆ ಬರುತ್ತವೆ. ಪೂರಕ ಕುಂಭಕದಿಂದ ಪ್ರಾಣಾನಿಲ ನಿಂತರೆ ಧ್ಯಾನವು ಸ್ಥಿರವಾಗಿ, ಜ್ಞಾನೋದಯದಿಂದ ಕರ್ಮ ನಿರ್ಜರೆಯಾಗುತ್ತದೆ. ಆದುದರಿಂದ ಮಾರುತಗತಿಯನ್ನರಿತವನು ಶ್ರೇಷ್ಠಯೋಗಿ. ಪ್ರಾಣಾಯಾಮದಲ್ಲಿ ವಾಯುವನ್ನು ಮೂವತ್ತು ಮಾತ್ರೆ ಹಿಡಿದರೆ ಕನಿಷ್ಠ, ಅರವತ್ತು ಮಾತ್ರೆ ಹಿಡಿದರೆ ಮಧ್ಯ, ತೊಂಬತ್ತು ಮಾತ್ರೆ ಹಿಡಿದರೆ ಉತ್ತಮವೆನಿಸುತ್ತದೆ.

"ತಿಳಿದು ಮನದಿಂದ ಮರುತನ
ನಳವಡೆ ಪನ್ನೆರಡು ಮಾತ್ರೆಯಂ ಪೂರಿಸುತಂ

ಬಳಿಕ ಪಡೆಮಾತೊ ಮೂವ
ತ್ತಿಳಿಸದೆ ಬಿಡು ಮೆಲ್ಲಮೆಲ್ಲಗನುಕ್ರಮದಿಂದಂ

ಪಿಡಿಮಾತ್ರೆಯ ಮೂವತ್ತಂ
ಬಿಡುತಂ ಕ್ರಮದಿಂದ ಮರುತ ತಪ್ಪನ್ನೆವರಂ
ಪಿಡಿ ಮಾತ್ರೆಯ ತೊಂಬತ್ತಂ
ಬಿಡದದು ನಿಂದಂದು ವಾಯುಧಾರಣೆ ನಿಲ್ಕುಂ"[೨೮]

**೫. ಪ್ರತ್ಯಾಹಾರ**

ಶರೀರದ ನಿಗದಿತ ಪದೇಶಗಳಲ್ಲಿ ಮರುತವನ್ನು ನಿಲ್ಲಿಸಿ, ಇಂದ್ರಿಯ ಮತ್ತು ಮನಸ್ಸನ್ನು ನಿಗ್ರಹಿಸುವುದೇ ಪ್ರತ್ಯಾಹಾರ. ಕಾಲಿನ ಅಂಗುಷ್ಠದ ಮೊದಲಿನ ಬೆರಳಿನಿಂದ ನಾಲ್ಕು ಬೆರಳಿನವರೆಗೆ ಗುಲ್ಫ. ಗುಲ್ಫದ ಮೇಲೆ ಹನ್ನೊಂದು ಬೆರಳಿನಲ್ಲಿ ಜಂಘೆ. ಅಲ್ಲಿಂದ ಮೇಲೆ ಎದೆ. ಅಲ್ಲಿಂದ ಗುದ. ಗುದಿಂದ ಮೇಢ್ರ, ಅಲ್ಲಿಂದೆರಡು ಅಂಗುಲದಲ್ಲಿ ನಾಭಿ. ನಾಭಿಯ ಮೇಲಿಂದ ಹೃದಯ. ಅಲ್ಲಿಂದ ಮೂರಂಗುಲಕ್ಕೆ ಮೂಲ. ಅಲ್ಲಿಂದ ನಾಲ್ಕುಂಗುಲಕ್ಕೆ ಜಿಹ್ವಾಗ್ರ. ಅಲ್ಲಿಂದ ಕಣ್ಣು. ಕಣ್ಣಿನಿಂದ ಮೇಲುಗಡೆಗೆ ಮೂರ್ಧ್ನಿ. ಈ ಸ್ಥಳಗಳಲ್ಲಿ ಮನಸ್ಸು ಮತ್ತು ಪವನವನ್ನು ನಿಲ್ಲಿಸಿದರೆ ಶಾಂತಿ ದೊರೆಯುತ್ತದೆ. ಅದೇ ಪ್ರತ್ಯಾಹಾರ. ಎಲ್ಲೆಲ್ಲಿ ಮರುತ ಚಲಿಸುತ್ತದೆಯೊ ಅಲ್ಲಲ್ಲಿ ಅದನ್ನು ಮನಃಪೂರ್ವಕ ನಿಲ್ಲಿಸಿದರೆ ಅದು ಕಾಷ್ಠಿಯೆನಿಸುತ್ತದೆ.

ಎಲ್ಲೆಲ್ಲಿ ಮರುತ ಚರಿಯಿಕು
ಅಲ್ಲಲ್ಲಿಯೆ ಮನಸಮೇತಮೊತ್ತಿಯೆ ನಿಲಿಸಲ್
ಬಲ್ಲಡೆ ಕಾಷ್ಠಿಯೆನಿಕ್ಕುಂ
ತಲ್ಲಣಿಸದೆ ಕ್ರಮದಿ ಮಾಡುಗಭ್ಯಾಸಮುಮಂ

ಇದನ್ನು ಯೋಗಸಾಧಕರು ಕ್ರಮವಾಗಿ ಅಭ್ಯಸಿಸಬೇಕು. ತೊಂಬತ್ತು ಮಾತ್ರೆಗೆ ಕಾಷ್ಠಿ ಉಜ್ವಲಗೊಳ್ಳುತ್ತದೆ. ಇದರಿಂದ ಪರಮಕಾಯ, ಭೂಮಿತ್ಯಾಗವೇ ಮೊದಲಾದ ಹಲವು ವಿದ್ಯೆಗಳು ಸಿದ್ಧಿಸುತ್ತವೆ.

**೬.ಧ್ಯಾನ**

ಧ್ಯಾನದಲ್ಲಿ ಕರ್ಮಗಳು ನಿರ್ಜರೆಯಾಗುತ್ತದೆ. ಧ್ಯಾನದಿಂದ ಲೋಕವನ್ನೆಲ್ಲ ಕಾಣಬಹುದು. ಹುಚ್ಚ, ಹಾದರಿಗ, ದುಷ್ಟ, ಆತ್ಮತತ್ತ್ವವನ್ನು ಓದಿ ಮರೆಯುವಾತ ಮತ್ತು ಚಂಚಲ ಬುದ್ಧಿಯವರಿಗೆ ಧ್ಯಾನವು ಸಿದ್ಧಿಸುವುದಿಲ್ಲ. ಧ್ಯಾನದಲ್ಲಿ ಧರ್ಮ, ಶುಕ್ಲ, ಆರ್ತ, ರೌದ್ರ ಎಂದು ನಾಲ್ಕು ವಿಧಗಳಿವೆ. ಇವುಗಳಲ್ಲಿ ಆರ್ತ ಮತ್ತು ರೌದ್ರ ಧ್ಯಾನಗಳೆರಡು ಅಶುಭವಾಗಿವೆ. ಧರ್ಮ ಮತ್ತು ಶುಕ್ಲಗಳೆರಡು ಶುಭಧ್ಯಾನಗಳಾಗಿವೆ.

"ಧ್ಯಾನಮವು ನಾಲ್ಕುತೆರನೆನೆ
ತಾನಕ್ಕುಂ ಧರ್ಮ ಶುಕ್ಲವಾರ್ತಂ ರೌದ್ರಂ
ಧ್ಯಾನಮೆರಡಶುಭಮಕ್ಕುಂ
ಧ್ಯಾನಂ ಶುಭಮೆನಿಕುಮೆರಡು ಧರ್ಮ ಶುಕ್ಲಂ"[೧೦]

ವೃತ್ತಿ, ಶಿಷ್ಯ, ಪುತ್ರ, ಮಿತ್ರ, ಧನ, ಧಾನ್ಯ, ಬಂಧುಗಳ ಅಗಲಿಕೆ, ಮನದಳಲು, ತನುವೇದನೆ, ಮಂತ್ರ, ತಂತ್ರ ಹೀಗೆ ಅನೇಕ ಕಾರಣಗಳಿಂದ ಆರ್ತಧ್ಯಾನ ಉಂಟಾಗುತ್ತದೆ. ಹಗೆ, ದಾಯಾದಿ, ಜಾಲಗಾರ, ಅಳಲು, ಕ್ರೋಧದಿಂದ ರೌದ್ರಧ್ಯಾನ ಉಂಟಾಗುತ್ತದೆ. ಆರ್ತ ಮತ್ತು ರೌದ್ರ ಧ್ಯಾನಗಳಿಂದ ತಿರ್ಯಗ್ಗತಿ ಮತ್ತು ನರಕಗಳು ಕ್ರಮವಾಗಿ ದೊರೆಯುತ್ತವೆ. ಆದುದರಿಂದ ಅವುಗಳನ್ನು ತ್ಯಜಿಸಬೇಕು. ಧರ್ಮ ಮತ್ತು ಶುಕ್ಲ ಧ್ಯಾನಗಳನ್ನು ಅಭ್ಯಸಿಸಬೇಕು. ಮನ ವಚನ ಕಾರ್ಯ ಶುದ್ಧನಾಗಿ ಸದಾ ಜಿನಪತಿಯನ್ನು ಪೂಜಿಸುವ ಹೊಗಳುವ ಭವ್ಯನಿಗೆ ಧರ್ಮ ಧ್ಯಾನ ದೊರೆಯುತ್ತದೆ. ಹಗಲು ರಾತ್ರಿ ದ್ವಾದಶಾನುಪ್ರೇಕ್ಷೆಯನ್ನು ನೆನೆಯುತ್ತ ಜಿನ, ಜಿನರ ಆಗಮನವನ್ನು ನಂಬಿ ಜೀವದ್ರವ್ಯ, ಸಿದ್ಧಗತಿಯನ್ನು ಭಾವಿಸಿ ಹೇಯೋಪಾದೇಯಗಳನ್ನು ತಿಳಿದು ಬಾಹ್ಯಾಭ್ಯಂತರ ಪರಿಗ್ರಹಗಳನ್ನು ತೊಲಗಿಸುವುದೇ ಧರ್ಮ ಧ್ಯಾನ. ಲಿಂಗದಲ್ಲಿ ಮೂಲಾಧಾರ, ನಾಭಿಯಲ್ಲಿ ಮಣಿಪೂರ, ಹೃದಯದಲ್ಲಿ ಅನಾಹತ, ಕಂಠದಲ್ಲಿ ಸೂಕ್ಷ್ಮ ಎನ್ನುವ ಚಕ್ರಗಳಿವೆ. ಅವುಗಳ ಮೇಲೆ ಸಾಧಕರು ಧ್ಯಾನಾಭ್ಯಾಸವನ್ನು ಮಾಡಬೇಕು. ಧ್ಯಾನದಿಂದ ಮುಕ್ತಿಲಕ್ಷ್ಮಿ ಒಲಿಯುತ್ತಾಳೆ. ಧ್ಯಾನದಿಂದ ಅಕ್ಷಯ ಸುಖ ದೊರೆಯವುದು.

**೭. ಧಾರಣ**

ಮನಸ್ಸು ಎಲ್ಲೆಲ್ಲಿ ಹರಿಯುತ್ತದೋ ಅಲ್ಲಲ್ಲಿ ನೋಡುವುದೇ ಧ್ಯಾನ. ಧ್ಯಾನವನ್ನು ದೃಢದಿಂದ ನಿಲ್ಲಿಸುವುದೇ ಧಾರಣ. ಧಾರಣೆಯಿಂದ ಶರೀರವು ಸೂರ್ಯನ ಕಾಂತಿಯನ್ನು ಪಡೆಯುತ್ತದೆ. ಧಾರಣದಿಂದ ಎಂಟು ದೆಸೆಗಳಿಗೆ ದೇವನಾಗಬಹುದು. ಧಾರಣದಿಂದ ಇಷ್ಟಸಿದ್ಧಿಯಾಗುತ್ತದೆ. ಯೋಗಿಗೆ ಧ್ಯಾನ ಮತ್ತು ಧಾರಣೆಯಿಂದ ನಿಜಗುಣವು ಯಾವ ಸಂದೇಹವೂ ಇಲ್ಲದೆ ದೊರೆಯುತ್ತದೆ. ಅಂದರೆ ತನಾತ್ಮನ ಅರಿವಾಗುತ್ತದೆ.

"ಧ್ಯಾನದೊಳಂ ಧಾರಣೆಯೊಳು
ತಾನಿನಿಸುಂ ನೆನೆದು ನಿಂದ ಯೋಗಿಗದೆಂತುಂ
ತಾನೆ ದೊರೆಕೊಳು ನಿಜಗುಣ
ಮೇನಂ ಸಂದೇಹಮಿಲ ನಿಜಗುರುಮತದಿಂ"[೧೧]

**೮.ಸಮಾಧಿ**

"ಧ್ಯಾನಮದು ನೆನೆದ ನೆನವಿಯೆ
ತಾನದು ದೃಢಮಾಗೆ ಧಾರಣಂ ಧಾರಣೆಯಿಂ
ತಾನೆ ನಿಜಮಾಗಿ ನಿಂದಡೆ
ಏನದುವೆ ಸಮಾಧಿಯೆಂಬ ಪೆಸರಂ ಪಡೆಗುಂ"[೧೨]

ನೆನೆದ ನೆನಪೆ ಧ್ಯಾನ. ಧ್ಯಾನ ದೃಢವಾಗಿ ನಿಂತರೆ ಧಾರಣೆ. ಧಾರಣಾಭ್ಯಾಸವು ದೃಢವಾಗಿ ನಿಂತರೆ ಸಮಾಧಿಯು ಲಭಿಸುತ್ತದೆ. ಸಮಭಾವದಿಂದ ಸಮಚಿತ್ತ, ಸಮಚಿತ್ತದಿಂದ ಸಮವಾಯು, ಸಮವಾಯುವಿನಿಂದ ಸಮಾಧಿ ಕ್ರಮವಾಗಿ ಲಭಿಸುತ್ತದೆ. ಕಿವಿ ಕೇಳಿಸದಂತೆ ತನು ಶರೀರ ಅಲುಗಾಡಿಸದೆ ನೆಟ್ಟಗೆ ನಿಲ್ಲಬೇಕು. ಪರಿಗ್ರಹಗಳನ್ನು ತ್ಯಜಿಸಿ, ಮನ-ವಚನ ಕಾಯಗಳನ್ನು ಸ್ಥಿರಗೊಳಿಸಬೇಕು. ಕ್ರೋಧಾದಿ ದೋಷಗಳು, ಮೋಹಾದಿಗಳು, ಪಂಚಮಿಥ್ಯೆ, ಪಂಚೇಂದ್ರಿಯಗಳನ್ನು ಗೆಲ್ಲಬೇಕು. ಅಮರ ಶೈಲದಂತೆ ಶರೀರವಿದ್ದು, ನೊಸಲಿನಲ್ಲಿ ಮನಸ್ಸು, ಮೂಗಿನ ತುದಿಯಲ್ಲಿ ದೃಷ್ಟಿ ಮನಸ್ಸಿನ ಜೊತೆಯಲ್ಲಿ ಮರುತಗಳಿದ್ದು ಜಿನರನ್ನು ಹೋಲುತ್ತಾ ಇದ್ದರೆ ಅದೇ ಯೋಗವೆನಿಸುತ್ತದೆ. ತಾನು ಎನ್ನುವ ಗರ್ವವನ್ನು ಬಿಟ್ಟು ನಿಜಗುಣವನ್ನು ಧ್ಯಾನಿಸುವುದೇ ಸಮಾಧಿ. ಭೇರಿ, ಮೃದಂಗ, ಕಹಳೆಗಳನ್ನು ಬಾರಿಸುತ್ತಿದ್ದರೂ ಕೇಳದಿದ್ದರೆ ಅದು ನಿಜಸಮಾಧಿ. ಕಣ್ಣಿದ್ದೂ ಕಾಣದೆ, ಕಿವಿಯಿದ್ದೂ ಕೇಳದೆ, ಬಹಿರಂಗವನ್ನು ತೊರೆಯುವುದೇ ಯೋಗ. ನಡೆಸಿದರೆ ನಡೆಯಲರಿಯದ, ಮಾತಾಡಿಸಿದರೆ ಆಲಿಸಿ ಕೇಳಲಾರದ ಸ್ಥಿತಿಯೇ ಯೋಗ. ತನ್ನ ನಿಜಾತ್ಮನಲ್ಲೇ ನಿಲ್ಲುವ ಯೋಗದಿಂದ ಯೋಗಿ ಸಹಜಾನಂದದಲ್ಲಿರುತ್ತಾನೆ. ಸ್ಫಟಿಕದ ಶಿಲೆಯಲ್ಲಿ ಸೂರ್ಯ ಸ್ಫುಟವಾಗಿ ಬೆಳಗುವಂತೆ ನಿಜದೇಹವನ್ನು ಸ್ಫಟಿಕನಿಭವಾಗಿ ಭಾವಿಸುತ್ತಾ ಜಿನರನ್ನು ನೆನೆಯಬೇಕು. ಅದೇ ಸುಖರೂಪ. ಮಿಂಚಿನ ಬೆಳಗಿನಂತೆ ನಿಜದೇಹ(ಆತ್ಮ) ಬೆಳಗಿದರೆ ಕರ್ಮಗಳು ನಾಶವಾಗುತ್ತವೆ.

"ಶುದ್ಧ ಸ್ಫಟಿಕಾಕಾರದಿ
ನುದ್ಧರಿಸುಗೆ ತನ್ನ ದೇಹಮಂ ನಿಜಮೆನಿಸಲ್
ಸಿದ್ಧಮೆನಲದುವೆ ಬಸಿರೊಳು
ಶುದ್ಧಜ್ಞಾನದೊಳು ದೀಪ್ತಿಯಂ ನೀಂ ಬೆಳಗಾ

ಪಳುಕಿನ ಪಾಪೆಯ ಬಸಿರೊಳು
ಬೆಳಗು ಸೊಡರಂತೆ ನಿನ್ನ ನಿಜದೇಹದೊಳಂ
ಬೆಳಗುವ ಶುದ್ಧ ಜ್ಞಾನದ
ಬೆಳಗಂ ನೀಂ ಬೆಳಗುತಿರಲು ಕರ್ಮಂ ಕೆಡುಗುಂ"[೧೩]

"ಸಮ್ಯಗ್ದರ್ಶನ ಜ್ಞಾನಂ
ಸಮ್ಯಕ್ಚಾರಿತ್ರವೆನಿಪ ರತ್ನತ್ರಯಮುಂ
ಸಮ್ಯಗನೆ ಬೆಳಗುತಿರಲಿಕೆ
ಸಮ್ಯಕ್ತ್ವ ಸಮಾಧಿಯೆಂಬ ಪೆಸರಂ ಪಡೆಗುಂ

ದರ್ಪಣ ಮಲಿನಮದಾಗಲು
ನೋಳ್ಪದು ಲೇಸಾಗಿ ಬೆಳಗೆ ಕಾಣ್ಬುಂ ತನ್ನಂ
ನೋಳ್ಪದು ಕ್ರಿಯೆಯಿಂ ತನ್ನಂ
ದರ್ಪಣದೊಳ್ ಕಾಣ್ಬ ತೆರದಿ ಕಾಣ್ಬುಂ ತನ್ನಂ" [೧೪]

ನಮ್ಮೊಳಗೆ ಸಮ್ಯಗ್ಧರ್ಶನ, ಜ್ಞಾನ, ಚಾರಿತ್ರವೆನ್ನುವ ರತ್ನತ್ರಯಗಳು ಬೆಳಗುವುದೇ ಸಮ್ಯಕ್ತ್ವ ಸಮಾಧಿ. ರಾಗ ದ್ವೇಷವಿಲ್ಲದೆ, ಸಮ್ಯಕ್ತ್ವ ಪೂರ್ವಕವಾಗಿ ಸಂಯಮದಿಂದಿರುವುದೇ ಯೋಗ. ಯೋಗಾಭ್ಯಾಸವನ್ನು ಮಾಡುವಾಗ ಅಷ್ಟಾಂಗಯೋಗವನ್ನು ತಿಳಿದಿರಬೇಕು. ಕ್ರಮಕ್ರಮವಾಗಿ ಐಹಿಕ ರಾಗಗಳು ದೂರವಾಗಿ ಧ್ಯಾನವು ಸಿದ್ಧಿಸುತ್ತದೆ. ಅಷ್ಟಾಂಗ ಯೋಗವನ್ನು ಕಲಿತು ಅದರಂತೆ ನಡೆಯವ ಯೋಗಿಗೆ ಮುಕ್ತಿ ದೊರೆಯುತ್ತದೆ. ಶ್ರೇಷ್ಠವೆನಿಸುವ ಸುಖಭೋಗಗಳು ದೊರೆಯುತ್ತವೆ. ಯೋಗಾಭ್ಯಾಸವನ್ನು ಮಾಡುವವರು ಭ್ರಾಂತಳಿದು ಮುಕ್ತಿಯನ್ನು ಪಡೆಯುತ್ತಾರೆ.

"ಇಂತೀ ಯೋಗಾಷ್ಟಾಂಗಮ
ನೆಂತುಂ ನೆರೆ ಕಲ್ತುನೆಗಳ್ವ ಯೋಗಿಗಳೆಂತುಂ
ಭ್ರಾಂತಳಿದು ಮುಕ್ತಿಪಡೆವರು
ಶಾಂತರಸಂ ಪೇಳ್ದಯೋಗಮೆಂಟನೆಯಂಗಂ"[೧೫]

ಈ ರೀತಿ ಯೋಗದ ಅಭ್ಯಾಸ ಮಾಡಲಿಚ್ಛಿಸುವವರು ಯೋಗದ ಪ್ರಥಮಾಂಗಗಳಾದ ಯಮ-ನಿಯಮಗಳನ್ನು ನಿಷ್ಠೆಯಿಂದ ಪಾಲಿಸಿ, ಆಸನ-ಪ್ರಾಣಾಯಾಮ ಮತ್ತು ಇಂದ್ರಿಯ ನಿಗ್ರಹದ ವಿಧಾನಗಳನ್ನು ಅಳವಡಿಸಿಕೊಂಡು, ಗುರುವಿನ ಮಾರ್ಗದರ್ಶನದಂತೆ ಧಾರಣ-ಧ್ಯಾನ ಕ್ರಮಗಳನ್ನು ಅಭ್ಯಾಸ ಮಾಡುತ್ತಾ, ಸಮಾಧಿಯೆಡೆಗೆ ಸಾಗಬೇಕು. ಸಮಾಧಿ ಸ್ಥಿತಿಯಲ್ಲಿ ಆತ್ಮನ ದರ್ಶನವಾಗುತ್ತದೆ. ಆತ್ಮದರ್ಶನದಿಂದ ಅನಂತ ಜ್ಞಾನ ಮತ್ತು ಸುಖ ಶಾಂತಿಯು ಲಭಿಸುತ್ತದೆ. ಸಂಸ್ಕೃತ ಭಾಷೆಯಲ್ಲಿ ಮಾತ್ರ ಲಭ್ಯವಿರುವ ಯೋಗದ ಅಮೂಲ್ಯ ವಿಧಿ-ವಿಧಾನಗಳನ್ನು ಕನ್ನಡ ಭಾಷೆಯಲ್ಲಿ ಬರೆದ ಶಾಂತರಸನಿಗೆ ನಾವೆಲ್ಲರೂ ಅಭಾರಿಯಾಗಿದ್ದೇವೆ.

**ಅಡಿಟಿಪ್ಪಣಿ:**

೧. 'ದ್ವಾದಶಾನುಪ್ರೇಕ್ಷೆ' ಎಂದರೆ ಆಧ್ಯಾತ್ಮ ಸಾಧಕನು ಅನುದಿನವೂ ಚಿಂತನೆ ಮಾಡಬೇಕಾದ ವಿಚಾರಗಳು

೨. (ಅಧ್ಯಾಯ ೧, ಪದ್ಯ ೪೫)

೩. (ಅಧ್ಯಾಯ ೧, ಪದ್ಯ ೫೧)

೪. (ಅಧ್ಯಾಯ ೨, ಪದ್ಯ ೨, ೩, ೪ )

೫. (ಅಧ್ಯಾಯ ೩, ಪದ್ಯ ೧, ೨, ೩, ೪)

೬. (ಅಧ್ಯಾಯ ೪, ಪದ್ಯ ೧೪)

೭. (ಅಧ್ಯಾಯ ೪, ಪದ್ಯ ೨೭)

೮. (ಅಧ್ಯಾಯ ೪, ಪದ್ಯ ೧೬, ೧೭)

೯. (ಅಧ್ಯಾಯ ೫, ಪದ್ಯ ೧೨)

೧೦. (ಅಧ್ಯಾಯ ೬, ಪದ್ಯ ೩ )

೧೧. (ಅಧ್ಯಾಯ ೭, ಪದ್ಯ ೧೮)

೧೨. (ಅಧ್ಯಾಯ ೮, ಪದ್ಯ ೨)

೧೩. (ಅಧ್ಯಾಯ ೮, ಪದ್ಯ ೧೬, ೧೭ )

೧೪. (ಅಧ್ಯಾಯ ೮, ಪದ್ಯ ೨೨, ೩೨ )

೧೫. (ಅಧ್ಯಾಯ ೮, ಪದ್ಯ ೪೩)

**ಗ್ರಂಥ ಋಣ:**

ಶಾಂತರಸ ವಿರಚಿತ 'ಯೋಗರತ್ನಾಕರ'; ಸಂಪಾದಕರು– ಶ್ರೀ. ಜಿ.ಜಿ. ಮಂಜುನಾಥನ್; ಪ್ರಕಾಶಕರು– ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ; ಪ್ರಥಮ ಮುದ್ರಣ– ೧೯೭೬.

# ೯. ಧರ್ಮ ಮತ್ತು ಕಾವ್ಯಧರ್ಮ : ಎತ್ತು ಏರಿಗೆ, ಕೋಣ ನೀರಿಗೆ ?

– ಡಾ॥ ಕಾ. ವೆಂ. ಶ್ರೀನಿವಾಸಮೂರ್ತಿ

ಧರ್ಮ ಎಂಬುದಕ್ಕೆ ಅನೇಕ ವ್ಯಾಖ್ಯಾನಗಳಿವೆ. ಅವುಗಳಲ್ಲಿ ಒಂದು–ವಿಸ್ತಾರವಾದ ನೆಲೆಯಲ್ಲಿ ಮಾನವೀಯ ಮೌಲ್ಯಗಳನ್ನು ಆಚರಿಸುವುದೇ ಧರ್ಮ. ಇಂತಹ ವ್ಯಾಖ್ಯಾನಕ್ಕೆ ಪೂರಕವಾಗಿ ಡಿ.ವಿ.ಜಿ.ಯವರ 'ಮಂಕುತಿಮ್ಮನ ಕಗ್ಗ' ಹಾಗೂ 'ಮರುಳ ತಿಮ್ಮನ ಕಗ್ಗ'ದ ಚುಟುಕುಗಳಿವೆ. ಇಂತಹ ಧರ್ಮವು ಸ್ವೀಕಾರಾರ್ಹವೇ ಆಗಿದೆ. ಇದರ ತಿರುಳು ಮಾನವೀಯ ಮೌಲ್ಯಗಳೆಂಬುದನ್ನು ಪುನಃ ಗಮನಿಸಬೇಕಿದೆ. ಅಂತಹ ಮೌಲ್ಯಗಳಲ್ಲಿ ಅಹಿಂಸೆ, ತ್ಯಾಗ, ನಿರ್ವಂಚನೆ, ದಯೆ ಇತ್ಯಾದಿ ಸೇರುತ್ತವೆ.

ಇಲ್ಲಿ ಹುಟ್ಟಿಕೊಳ್ಳುವ ಪ್ರಶ್ನೆಯೆಂದರೆ ಈ ಮೌಲ್ಯಗಳಿರದ ಧರ್ಮ ಯಾವುದು? ಇವುಗಳನ್ನು ಯಾವುದೋ ಧರ್ಮವು ಪ್ರತಿಪಾದಿಸಿದ ಮಾತ್ರಕ್ಕೆ ಅವು ಆ ಧರ್ಮದ ಚೌಕಟ್ಟಿನೊಳಗಡೆ ಮಾತ್ರ ಕಾಣುವಂಥದ್ದೇ ? ಇಲ್ಲ. ಈ ಹಿನ್ನೆಲೆಯಲ್ಲಿ ಯಾವುದೇ ನಿರ್ದಿಷ್ಟ ಧರ್ಮವು ಪ್ರತಿಪಾದಿಸುವ ಯಾವುದೇ ಮಾನವೀಯ ಮೌಲ್ಯ ಮತ್ತು ಅದರ ಅಸ್ತಿತ್ವ ಅದರ ಆಚೆಗೂ ಇರುತ್ತದೆ. ಈ ನೆಲೆಯಲ್ಲಿ ಈ ಮೌಲ್ಯಗಳ ನೆಲೆ ವಿಶ್ವಾತ್ಮಕವಾದುದೇ ಆಗಿರುತ್ತದೆ.

ಇನ್ನೊಂದು ವ್ಯಾಖ್ಯಾನವಿದೆ ; ಧರ್ಮವನ್ನು ಕುರಿತು. ಅದು ರಾಜಕೀಯ ಪರಿಭಾಷೆಯದ್ದು. ಅದೇ ಇಂದು ವ್ಯಾಪಕವಾಗಿ ಬಳಕೆಯಾಗುತ್ತಿರುವುದು. ಅದರ ಪ್ರಕಾರ ಧರ್ಮವೆಂಬುದು ಸಾಂಸ್ಥಿಕ ಧರ್ಮವೇ ಆಗಿದೆ. ಇಂತಹ ಸಾಂಸ್ಥಿಕ ಧರ್ಮಗಳು ಹಲವು. ಕೆಲವು ಚಿಕ್ಕವು ; ಕೆಲವು ದೊಡ್ಡವು. ದೊಡ್ಡ ಧರ್ಮಗಳು ದೊಡ್ಡವಾಗಿರುವುದಕ್ಕೆ ಅದರ ತತ್ತ್ವ ದೊಡ್ಡದು ಎಂಬುದೇನೂ ಕಾರಣವಲ್ಲ. ಅದಕ್ಕೆ ಇತರ ಕಾರಣಗಳಿವೆ. ಅಂತಹ ಕಾರಣಗಳಲ್ಲಿ ಆ ಧರ್ಮ ಪಡೆದ ರಾಜಕೀಯ ಮತ್ತು ವಾಣಿಜ್ಯ ಶಕ್ತಿಗಳು ಸಹ ಪ್ರಮುಖವಾಗಿವೆ.

ಒಟ್ಟಾರೆ ಧರ್ಮ ಎಂಬುದು ಇವತ್ತಿನ ಪರಿಭಾಷೆಯಲ್ಲಿ ವಿಶೇಷವಾಗಿ 'ಸಾಂಸ್ಥಿಕ ಧರ್ಮವೇ' ಆಗಿದೆ. ಇದು ಜಡ ; ಅಂಕುಶ ಇದರ ವ್ಯಾಮೋಹ. ಯಥಾಸ್ಥಿತಿ ಪೋಷಣೆ ಇದಕ್ಕೆ ಬೇಕು. ವಿಜ್ಞಾನ-ವಿಚಾರವಾದ ಇದಕ್ಕೆ ಅಪಥ್ಯ. ಮುಂದುವರೆದು ಹೇಳುವುದಾದರೆ ವಿಜ್ಞಾನ-ವಿಚಾರಗಳು ಬೆಳೆದರೆ ಇದರ ಅಸ್ತಿತ್ವ ಮೂಲೆಗುಂಪಾಗುತ್ತದೆ. ಹಾಗಾಗಿ ಇದಕ್ಕೆ ಈ ಪ್ರಸ್ತಾವಿತ ವಿವಿಧ ವಾದಗಳೊಂದಿಗೆ ಎಣ್ಣೆ-ಸೀಗೆಕಾಯಿ ಸಂಬಂಧವಿದೆ.

ಇದು ಸಾಂಸ್ಥಿಕ ಧರ್ಮದ ಸ್ವರೂಪ. ಇದಕ್ಕಿಂತ ಭಿನ್ನ ಸ್ವರೂಪವನ್ನು ಹೊಂದಿರುವುದು ಕಾವ್ಯ, ಕಾವ್ಯಧರ್ಮ ಇತ್ಯಾದಿಗಳದ್ದಾಗಿದೆ.

ಕಾವ್ಯ ಸ್ವತಂತ್ರಪ್ರಿಯತೆಯಿಂದ ಕೂಡಿದೆ. ಇಂತಹ ಕಾವ್ಯವು ನೀರಿನಂತೆ. ಧರ್ಮ ಎಂಬುದು ಬಲೆಯಂತೆ. ಈ ಬಲೆ ನೀರಿಗೆ ಬೀಳಬಹುದು ; ಅದನ್ನು ತಬ್ಬಬಹುದು. ಆದರೆ ಅದನ್ನು ತನ್ನೊಳಗೆ ಹಿಡಿದಿಡಲು ಸಾಧ್ಯವೇ ? ಇಲ್ಲ. ಹೀಗೆ ಯಾವುದೇ ಸಾಂಸ್ಥಿಕ ಧರ್ಮವು ಒಂದು ಸೃಜನಶೀಲ ವ್ಯಕ್ತಿತ್ವವನ್ನು ಹಿಡಿದಿಡಲು ಸಾಧ್ಯವಿಲ್ಲ. ಹಾಗೊಮ್ಮೆ ಧರ್ಮ ಅಲ್ಲಿ ಯಶಸ್ವಿಯಾಗಿದೆಯೆಂದರೆ ಅಲ್ಲಿ ಕವಿ 'ಪ್ರಸೆಂಟ್' ಆಗಿರಬಹುದು; ಆದರೆ ಕಾವ್ಯ ಮಾತ್ರ ಆಬ್ಸೆಂಟ್ ಆಗಿರುತ್ತದೆ.

ಹೀಗೆ ಯಾವುದೇ ಕವಿ ಒಂದು ಜಾತಿಗೋ ಧರ್ಮಕ್ಕೋ ಮಠಕ್ಕೋ ಮೇಂಬರ್ ಆದ ಅಂದರೆ ಅಲ್ಲಿ ಆತ ಅರ್ಧ ಸತ್ತ ಎಂದೆ ಅರ್ಥ. ಆ ನೆಲೆಯಲ್ಲಿ ಆತ ಬರೆಯುವ ಕಾವ್ಯ ಸಹ ನೂರಕ್ಕೆ ಐವತ್ತು ಅಂಕವನ್ನು ಮಾತ್ರ ಪಡೆದುಕೊಳ್ಳಲು ಶಕ್ತವಾಗುತ್ತದೆ. ಕಾರಣವಿಷ್ಟೇ, ಈಗಾಗಲೇ ಪ್ರಸ್ತಾಪಿಸಿರುವಂತೆ ಕಾವ್ಯವು ಅನೇಕ ಸೃಜನಶೀಲ ಅಥವಾ ಕಲಾಚಟುವಟಿಕೆಗಳಲ್ಲಿ ಒಂದು. ಇದು ತನ್ನ ವಾರಿಗೆಯವರಂತೆ ಸ್ವಾತಂತ್ರ್ಯಪ್ರಿಯತೆಯನ್ನು ಇಷ್ಟಪಡುತ್ತದೆ. ಆ ನೆಲೆಯಲ್ಲಿ ಕಾಣುವ ಕವಿ ಸಂತೆಯೊಳಗಿನ ಸಂತನಾಗಿ ಇರುತ್ತಾನೆ. ಅಂತಹ ಪೂರ್ಣ ಸ್ವಾತಂತ್ರ್ಯದ ನೆಲೆಯಲ್ಲಿ ಬದುಕುವ ಮತ್ತು ಬರೆಯುವ ಕವಿ ಮಾತ್ರ ಹೆಚ್ಚು ಎತ್ತರದ ಕಾವ್ಯವನ್ನು ಕೊಡಲು ಸಾಧ್ಯವಾಗುತ್ತದೆ. ಅದು ವಸ್ತುವಿನ ಆಯ್ಕೆ, ಅದರ ನಿರ್ವಹಣೆ, ಏರ್ಪಡಿಸಿಕೊಳ್ಳುವ ಸಂವಿಧಾನ ಮುಂತಾದ ಸಂಗತಿಗಳಲ್ಲಿ ಗೋಚರಿಸುತ್ತದೆ.

ಹೆಚ್ಚು ಸೃಜನಶೀಲತೆಯನ್ನು ಹೊಂದಿರುವ ಪಂಪನಂತಹ ಕವಿಗಳು ಧರ್ಮದ ಪೂರ್ಣ ಅಂಕುಶಕ್ಕೆ ಸಿಲುಕುವುದಿಲ್ಲ. ಹಾಗಾಗಿಯೇ ಅವರು ಒಂದಷ್ಟು ಎತ್ತರಕ್ಕೆ ಹೋಗುತ್ತಾರೆ. ಅಷ್ಟು ಸಾಮರ್ಥ್ಯವಿರದ ಪೊನ್ನನಂತಹ ಕವಿಗಳ ಮೇಲೆ ಈ ಧರ್ಮದ ಸಂಕೋಲೆಗಳನ್ನು ಹಾಕಿದರೆ ಅವರ ಕಾವ್ಯ ಇನ್ನಷ್ಟು ಸೊರಗುವುದಕ್ಕೆ ಈ ಧರ್ಮವೇ ಯತ್ನಿಸಿದಂತಾಗುತ್ತದೆ. ಇಲ್ಲಿ ಕಾವ್ಯ ಮತ್ತು ಧರ್ಮದ ನಡುವೆ ಸಮನ್ವಯವಿರುವುದಿಲ್ಲ; ಬದಲಿಗೆ ಬಿಕ್ಕಟ್ಟು ಇರುತ್ತದೆ. ಇದು ಎಂತಹ ಬಿಕ್ಕಟ್ಟು ಎಂದರೆ, ಎತ್ತು ಮತ್ತು

ಕೋಣವನ್ನು ಒಂದೇ ನೊಗಕ್ಕೆ ಕಟ್ಟಿ ಸಾಗಿಸಿದಂತಹ ಬಿಕ್ಕಟ್ಟು. ಈ ನಿಟ್ಟಿನಲ್ಲಿ ಪ್ರಚಲಿತವಿರುವ ಗಾದೆಯೆಂದರೆ 'ಎತ್ತು ಏರಿಗೆ ಎಳೀತು ; ಕೋಣ ನೀರಿಗೆ ಎಳೀತು. ಹಾಗೆಯೇ ಧರ್ಮ ಮತ್ತು ಕಾವ್ಯಧರ್ಮದ ಜೋಡಿ ಮತ್ತು ಸಂಬಂಧ ಕೂಡ. ಕನ್ನಡ ಕಾವ್ಯ ಪರಂಪರೆಯಲ್ಲಿ ಕನ್ನಡ ಕಾವ್ಯ ಮತ್ತು ಸಾಂಸ್ಥಿಕ ಧರ್ಮಗಳ ನಡುವೆ ಕೂಡ ಇದ್ದದ್ದು ಇಂತಹ ಸಂಬಧವೇ !

ಆದರೂ ನಮ್ಮ ವಿಮರ್ಶೆ ಮುಖ್ಯವಾಗಿ ಆಡಿದ ಮಾತೆಂದರೆ ಕನ್ನಡ ಕಾವ್ಯ ಪರಂಪರೆಯನ್ನು ರೂಪಿಸಿದ ಎರಡು–ಮೂರು ಮುಖ್ಯ ಶಕ್ತಿಗಳಲ್ಲಿ ಧರ್ಮವು ಕೂಡ ಒಂದು ಎಂಬುದು. ಇದಕ್ಕೆ ನನ್ನ ತಕರಾರು ಏನೆಂದರೆ, ಕನ್ನಡ ಕಾವ್ಯ ಮತ್ತು ಸಾಂಸ್ಥಿಕ ಧರ್ಮಕ್ಕೆ ಇದ್ದ ಸಂಬಂಧ ಬಿಕ್ಕಟ್ಟಿನ ಸಂಬಂಧ. ಹಾಗಾಗಿ ಇಲ್ಲಿ ಕವಿಗಳು ಈ ಎರಡನ್ನೂ ತಮ್ಮ ಕೃತಿಗಳಲ್ಲಿ ಸಮನ್ವಯ ಮಾಡಿದರು ಎಂದರೆ ಅದು ನಿಜದರ್ಥದಲ್ಲಿ ಆ ಕಾರ್ಯಕ್ಕಾಗಿ ಹೆಣಗಾಡಿದರು ಎಂಬುದೇ ಆಗಿದೆ. ಹಾಗಾಗಿ ಈ ಪರಂಪರೆಯಲ್ಲಿ ಈ ಕಾವ್ಯ ಮತ್ತು ಧರ್ಮದ ನಡುವೆ ಸಂಬಂಧವು ಕಡಿಮೆ ಇದ್ದಿದ್ದರೆ ಇರುವ ಕಾವ್ಯವೇ ಇನ್ನಷ್ಟು ಉತ್ತಮವಾಗಿ ಒಡಮೂಡುತ್ತಿತ್ತು ಎನ್ನಿಸುತ್ತದೆ. ಈ ನೆಲೆಯಲ್ಲಿ ನಮ್ಮ ನಡುವೆ ಇರುವ ಸಾಹಿತ್ಯ ವಿಮರ್ಶೆ, ಸಾಹಿತ್ಯ ಚರಿತ್ರೆ, ಪ್ರಾಚೀನ ಕೃತಿಗಳ ಸಂಪಾದನೆ ಮುಂತಾದ ಅಧ್ಯಯನ ಶಾಖೆಗಳನ್ನು ಗಮನಿಸೋಣ.

ಭಾರತದಲ್ಲಿ ಹಿಂದೆ ; ಮತ್ತು ಇಂದೂ ಕೂಡ ಒಬ್ಬ ಕವಿ ಹುಟ್ಟಿದ್ದಾನೆಂದರೆ ಅದು ಅವನ ಅರಿವಿಗೂ ಮೀರಿ ಯಾವುದೋ ಒಂದು ಸಾಂಸ್ಥಿಕ ಧರ್ಮದಲ್ಲಿಯೇ ಹುಟ್ಟಬೇಕಿದೆ. ಇದು ಇವನ/ಇವಳ ಹಣೆಬರಹ ! ಹಣೆಬರಹವನ್ನು ಅಳಿಸಲು ಸಾಧ್ಯವಿಲ್ಲ. ಇದು Mass Language – ಜನಭಾಷೆ – ಸ್ತರದಲ್ಲಿ ಆಡುತ್ತಿರುವ ಮಾತು. ಹಾಗೆ ಒಂದು ಧರ್ಮದ ಪರಿಧಿಯಲ್ಲಿ ಹುಟ್ಟಿದ ವ್ಯಕ್ತಿ ಕವಿಯಾಗುವ ಮೊದಲೇ ಅಲ್ಲಿಯ ಕೆಲವು ಸಂಸ್ಕಾರಗಳನ್ನು, ಸಂವೇದನೆಗಳನ್ನು ಹೊಂದುತ್ತಾನೆ. ಅವನು ನಂತರ ಕಾವ್ಯವನ್ನು ಬರೆದಾಗ ಅವುಗಳನ್ನು ಅಲ್ಲಿ ನಿರ್ವಹಿಸುತ್ತಾನೆ. ಈ ನಿರ್ವಹಣೆ ಬೇರೆ ; ಅಂತೆಯೇ ಅದಕ್ಕೆ ನೇಣು ಹಾಕಿಕೊಳ್ಳುವುದು ಬೇರೆ ! ಹಾಗೆ ನೇಣು ಹಾಕಿಕೊಂಡ ಕವಿಗಳು ಎಷ್ಟರಮಟ್ಟಿಗೆ ಉತ್ತಮ ಕವಿಗಳಾಗಿ ಉಳಿದಿದ್ದಾರೆ ? ಉಳಿದಿದ್ದರೂ ಅವರ ಅಸ್ತಿತ್ವ ಇರುವುದು ಸಾಹಿತ್ಯ ಚರಿತ್ರೆಯ ಸಂಪುಟಗಳಲ್ಲಿಯೇ ಹೊರತು ಸಾಹಿತ್ಯ ವಿಮರ್ಶೆಯಲ್ಲಿ ಅಲ್ಲ. ಅಂತಹ ಕವಿಗಳನ್ನು ಕುರಿತ ಚರ್ಚೆ ಸಹ ಸೀಮಿತ ಪಂಡಿತ ಮಂಡಲಿಯಲ್ಲಿ ಮಾತ್ರ ; ಅದೂ ಯಾವುದೋ ಒತ್ತಾಸೆಯ ಹಿನ್ನೆಲೆಯಲ್ಲಿ. ಹಾಗಾಗಿ ಸಾಹಿತ್ಯ ವಿಮರ್ಶೆ ಮತ್ತು ಸಾಹಿತ್ಯ ಚರಿತ್ರೆ ಎಂಬ ಎರಡು ಶಿಸ್ತುಗಳೇ ಉತ್ತಮ ಮತ್ತು ಉತ್ತಮವಲ್ಲದ ಕವಿಗಳನ್ನು ಹೀಗೆ ಬೇರ್ಪಡಿಸಿ ತಮ್ಮೊಳಗೆ ನೆಲೆಯನ್ನು ಕಲ್ಪಿಸಿಕೊಡುತ್ತವೆ.

ನಮ್ಮ ನಡುವೆ ಇರುವ ಇನ್ನೊಂದು ಜ್ಞಾನಶಾಖೆಯೆಂದರೆ ಅದು ಗ್ರಂಥಸಂಪಾದನೆ. ಇದು ವಿಶೇಷವಾಗಿ ಆಧುನಿಕ ಪೂರ್ವ ಕಾವ್ಯ, ಶಾಸ್ತ್ರಗಳನ್ನು ಕೇಂದ್ರೀಕರಿಸಿದೆ. ಇದರ ನಂತರದಲ್ಲಿ ಗುರುತಿಸಬಹುದಾದ ಇನ್ನೊಂದು ಜ್ಞಾನಶಾಖೆಯೆಂದರೆ ಅದು 'ಕಾವ್ಯ ಸಂಗ್ರಹ' ಎಂಬುದಾಗಿದೆ.

'ಕಾವ್ಯ ಸಂಗ್ರಹ' – ಈ ಶಾಖೆಯಲ್ಲಿ ಅನೇಕ ಕಾವ್ಯ ಸಂಗ್ರಹಗಳು ಕಳೆದ ನೂರೈವತ್ತು–ಇನ್ನೂರು ವರ್ಷಗಳಲ್ಲಿ ಪ್ರಕಟವಾಗಿವೆ. ಇನ್ನೂ ಪ್ರಕಟವಾಗಲು ಹಸ್ತಪ್ರತಿಗಳಿವೆ. ಈ ಸಂಗ್ರಹ ಕಾರ್ಯದಲ್ಲಿಯೇ ವಿಮರ್ಶನ ಪ್ರಜ್ಞೆ ಕ್ರಿಯಾಶಿಲ ವಾಗಿರುತ್ತದೆ. ಈ ಪ್ರಜ್ಞೆಯು ಕವಿಯ ಯಶಸ್ಸಿನ ನೆಲೆಗಳನ್ನು ಉಳಿಸಿಕೊಳ್ಳುತ್ತದೆ ಮತ್ತು ಅವನ ಇತರೆ ನೆಲೆಗಳನ್ನು ವರ್ಜಿಸುತ್ತದೆ. ಆ ಇತರೆ ನೆಲೆಗಳಲ್ಲಿ ಜಡ ಧರ್ಮ ವಿಚಾರಗಳು ಪ್ರಮುಖವಾಗಿ ಸೇರಿವೆ. ಆ ನೆಲೆಯಲ್ಲಿ 'ಆದಿಪುರಾಣ ಸಂಗ್ರಹ', 'ಅಜಿತನಾಥ ಪುರಾಣ ಸಂಗ್ರಹ', 'ಅನಂತನಾಥಪುರಾಣ ಸಂಗ್ರಹ' ಮುಂತಾದವುಗಳನ್ನು ಹೆಸರಿಸಬಹುದು.

ಇಲ್ಲಿ ಕವಿ ಯಾವುದೇ ಧರ್ಮಕ್ಕೆ ಸೇರಿದ್ದರೂ ತನ್ನ ಉತ್ತಮವಲ್ಲದ ಕೃತಿಗಳಲ್ಲಿ ಆದರ್ಶ ಧರ್ಮೀಯನಾಗಿ ಗೆದ್ದಿದ್ದರೂ ಆದರ್ಶ ಕವಿಯಾಗಿ ಸೋತಿರುವುದರಿಂದ ಆ ನಿರ್ದಿಷ್ಟ ಧರ್ಮದ ಮಠಗಳು, ಅಧ್ಯಯನ ಸಂಸ್ಥೆಗಳು ನಡೆಸುವ ವಿಚಾರ ಸಂಕಿರಣಗಳಲ್ಲಿಯೇ ಆ ಧರ್ಮೀಯ ಕವಿ ಚರ್ಚೆಗೊಳಪಡದೆ ನತದೃಷ್ಟ ಕವಿಯಾಗಿ ಮಾರ್ಪಟ್ಟುಬಿಡುತ್ತಾನೆ. ಉದಾಹರಣೆಗೆ ಇಂದಿಗೂ ನಮ್ಮ ನಡುವೆ ಇರುವ ಜೈನಕವಿಗಳೆಂದು ಪಂಪ, ರನ್ನ, ಜನ್ನ, ಆಂಡಯ್ಯ ಮುಂತಾದವರನ್ನು ಹೆಸರಿಸುತ್ತಾರೆಯೇ ವಿನಃ ವೃತ್ತವಿಲಾಸನಂತಹ 'ವೃತ್ತ'ದೊಳಗಿನ ಕವಿಗಳನ್ನು ಈ ವೃತ್ತದೊಳಗಿನ ವಿದ್ವಾಂಸರೇ ಗಂಭೀರವಾಗಿ ಪರಿಗಣಿಸುವುದಿಲ್ಲ. ಹಾಗಾಗಿಯೇ ಒಂದು ಧರ್ಮದ ಹೆಸರನ್ನು ಒಬ್ಬ ಕವಿಯ ಹೆಸರಿಗೆ ಉಪಸರ್ಗವಾಗಿ ತರುವಾಗ ಆ ಕವಿಯ ಬಗ್ಗೆ ವಿಮರ್ಶನ ಪ್ರಜ್ಞೆ ಇದ್ದರೆ ಒಳಿತು. ಕಾರಣ ಕವಿಯ 'ಕ್ಯಾಸ್ಟ್ ಸರ್ಟಿಫಿಕೇಟ್ಟೇ' ಅವನ ಕಾವ್ಯ ವಿಮರ್ಶೆಗೆ ತೋರುಗಂಬವಲ್ಲ. ಈ ಹಿನ್ನೆಲೆಯಲ್ಲಿ ಅನೇಕ ಕವಿಗಳಲ್ಲಿ ಇದ್ದ ಸೃಜನಶೀಲತೆಯ ವಿಕಾಸಕ್ಕೆ ಧರ್ಮವು ಪೂರಕವಾಗಿದ್ದಕ್ಕಿಂತ ಮಾರಕವಾಗಿದ್ದೇ ಹೆಚ್ಚು. ಈ ಸಂಬಂಧ ಕಡಿಮೆ ಇದ್ದಿದ್ದರೆ ಈ ಹಿಂದೆ ಪ್ರಸ್ತಾಪಿಸಿದಂತೆ ಕನ್ನಡದಲ್ಲಿ ಇನ್ನಷ್ಟು ಉತ್ತಮ ಕಾವ್ಯ ಮೂಡುತ್ತಿತ್ತು. ಈ ಮಾತುಗಳ ಧ್ವನಿಯೇನೆಂದರೆ, ನಾವು ನಿನ್ನೆಯನ್ನು ಸರಿಪಡಿಸಿಕೊಳ್ಳಬೇಕೆಂಬುದಲ್ಲ ; ಅದು ಮೂರ್ಖತ್ವದ ಪರಾಕಾಷ್ಠೆಯಾಗುತ್ತದೆ. ಬದಲಿಗೆ ಇವತ್ತನ್ನು ಸರಿಪಡಿಸಿಕೊಳ್ಳಬೇಕು ಎಂಬುದು. ಚರಿತ್ರೆಯ ಪಾಠ ವರ್ತಮಾನಕ್ಕೆ ಅಗತ್ಯ. ಭವಿಷ್ಯದ ಭದ್ರಬುನಾದಿ ಇಲ್ಲಿ ಸಾಧ್ಯ. ಈ ನೆಲೆಯಲ್ಲಿ ನಮ್ಮ ಸಾಹಿತ್ಯ, ಚರಿತ್ರೆಯ ಪುನರ್ ವ್ಯಾಖ್ಯಾನ ಆಗಬೇಕು. ಆಗ ಹುಟ್ಟುವ ವಿಮರ್ಶೆ ಮಾತ್ರ ಇವತ್ತಿನ ವಿಮರ್ಶೆಯಾಗುತ್ತದೆ. ಅದು ಹಿಂದಿನ ವಿಮರ್ಶೆಗೆ ವಿಸ್ತರಣೆಯಾಗಿ ಘನತೆಯನ್ನು

ಸಹ ಪಡೆಯುತ್ತದೆ.

ಇದೇ ಸಂದರ್ಭದಲ್ಲಿ ನೋಡಬೇಕಿರುವ ಇನ್ನೊಂದು ಸಂಗತಿಯೇನೆಂದರೆ, ಧರ್ಮ ಇರದ ನೆಲ ನಮ್ಮಲ್ಲಿ ಇರಲಿಲ್ಲ ; ಹಾಗಾಗಿ ಜನ ಮತ್ತು ಕವಿಗಳು ಇದರ ಚೌಕಟ್ಟಿನಲ್ಲಿಯೇ ಬದುಕಿದ್ದರು ; ಯೋಚಿಸಿದ್ದರು ಎಂದು ಸಾಮಾನ್ಯವಾಗಿ ಹಲವರು ಭಾವಿಸುತ್ತೇವೆ. ಆದರೆ ವಾಸ್ತವವೆಂದರೆ ; ಇಲ್ಲಿ ಈ ಧರ್ಮದ ಕಾಗುಣಿತವನ್ನು ಅರಿಯದವರೇ ಬಹುಸಂಖ್ಯಾತರು ಎಂಬುದು. ಹೀಗಿರುವಾಗ ಧರ್ಮವು ಕನ್ನಡ ಕಾವ್ಯದ ಹಿನ್ನೆಲೆಯ ಪ್ರಮುಖ ಶಕ್ತಿಗಳಲ್ಲಿ ಒಂದು ಆಗಿತ್ತು ಎಂಬ ಮಾತು ಪುನರ್ ವಿವೇಚನೆಗೆ ಒಳಪಡುವುದು ಸೂಕ್ತವೆನ್ನಿಸುತ್ತದೆ.

ಇಂದು ಹೊಸ ನಮೂನೆಯಲ್ಲಿ ಜಾತಿಗಳು, ಧರ್ಮಗಳು ಧ್ರುವೀಕರಣಕ್ಕೆ ಒಳಗಾಗುತ್ತಿವೆ. ಇಂತಹ ಸಂದರ್ಭದಲ್ಲಿ ಈ ಸಾಮಾಜಿಕ ಕೂಟಗಳು ಕಾವ್ಯದ ಮೇಲೆಯೂ ಹಕ್ಕು ಸ್ಥಾಪಿಸುವ ಯತ್ನವನ್ನು ಮಾಡುತ್ತವೆ ' ಮಾಡುತ್ತಿವೆ. ಇಂತಹ ಹುನ್ನಾರಗಳ ಬಗ್ಗೆ ಎಚ್ಚರವಿರಬೇಕು. ಅಂಥವರಿಂದ ನುಸುಳಿಕೊಳ್ಳುವುದು ಹೇಗೆ ಎಂಬುದನ್ನು ಕನ್ನಡದ ಅನೇಕ ಸತ್ವಯುತ ಕವಿಗಳು ಸ್ವತಃ ನಿರ್ವಹಿಸಿ ತೋರಿದ್ದಾರೆ. ಇವರು ಚರ್ಚೆಯಲ್ಲಿ ಪ್ರಮುಖವಾಗುವ ಬಗೆಗಳೇ ಜಡರನ್ನು ಅಪ್ರಸ್ತುತಗೊಳಿಸುವ ಬಗೆಗಳೂ ಆಗಿರುತ್ತವೆ. ಹಿಂದೆಯೂ ಈ ಕವಿಗಳು ಜನ ಬದುಕಬೇಕೆಂದು ಬರೆದರು. ನಾವು ಸಹ ಜನರ ಬಗ್ಗೆ ಮಾತ್ರ ಯೋಚಿಸುವುದು ಸೂಕ್ತ ಎನ್ನಿಸುತ್ತದೆ.

■

## ೧೦. ಡಾ॥ ಎಸ್. ಶ್ರೀಕಂಠಶಾಸ್ತ್ರಿಗಳು : ಕನ್ನಡ ಸಾಹಿತ್ಯ ಸೇವೆ, ಶೋಧನೆ

–ಡಾ॥ ಟಿ. ವಿ. ವೆಂಕಟಾಚಲ ಶಾಸ್ತ್ರೀ

ಇತಿಹಾಸಕಾರರಾಗಿ ಪ್ರಸಿದ್ಧರಾಗಿದ್ದ ಡಾ. ಎಸ್. ಶ್ರೀಕಂಠಶಾಸ್ತ್ರಿಗಳು ಕನ್ನಡ ಭಾಷೆ ಸಾಹಿತ್ಯಗಳ ವಿಷಯದಲ್ಲಿ ಸಹ ಪಂಡಿತರಾಗಿದ್ದವರು, ಕನ್ನಡ ಕವಿಯಾಗಿಯೂ ಕೃತಿ ರಚನೆ ಮಾಡಿದವರು ಎನ್ನುವುದು ಅವರ ಬಹುಮುಖ ಪ್ರತಿಭೆ ಪಾಂಡಿತ್ಯಗಳನ್ನು ಪ್ರಕಟಿಸುವ ಹೃದಯಂಗಮ ಸಂಗತಿಯಾಗಿದೆ.

ಶಾಸ್ತ್ರಿಗಳು ಭಾರತದ ಹಾಗೂ ಕರ್ನಾಟಕದ ಇತಿಹಾಸ ಧರ್ಮ ಕಲೆಗಳು ಮುಂತಾದುವನ್ನು ಅಧಿಕರಿಸಿ ಲೇಖನಗಳನ್ನೂ ಗ್ರಂಥಗಳನ್ನೂ ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ವಿಪುಲವಾಗಿ ಬರೆದಿದ್ದಾರೆ. ನೇರವಾಗಿ ಕನ್ನಡ ಭಾಷೆ ಸಾಹಿತ್ಯಗಳ ಬಗೆಗೆ ಅವರ ಗಮನಹರಿದಿರುವುದು ತೀರ ಕಡಮೆ. ಒಂದಿಲ್ಲ ಒಂದು ಬಗೆಯಲ್ಲಿ ಇತಿಹಾಸ ಧರ್ಮ ಇವುಗಳೊಂದಿಗೆ ಅವುಗಳ ಸಂಬಂಧ ಇದ್ದರೆ ಮಾತ್ರ ಅವುಗಳನ್ನು ಕುರಿತು ವಿಚಾರ ವಿಮರ್ಶೆಗಳನ್ನು ನಡಸಿದ್ದಾರೆ. ಪ್ರಧಾನತಃ ಅವರು ಒಬ್ಬ ಇತಿಹಾಸಕಾರರು. ಅವರ ಪರಿಪ್ರೇಕ್ಷ್ಯ ಏನಿದ್ದರೂ ಇತಿಹಾಸದ ಹಿನ್ನೆಲೆಯಲ್ಲಿ, ಇತಿಹಾಸದ ಸಲುವಾಗಿ ಎನ್ನುವುದನ್ನು ಮರೆಯುವಂತಿಲ್ಲ.ನಮ್ಮ ಕಾಲದ ಇನ್ನೊಬ್ಬ ವಿದ್ವಾಂಸರಾದ ಆ. ನೇ. ಉಪಾಧ್ಯೇ ಅವರು ಅರ್ಧಮಾಗಧಿ ಅಪಭ್ರಂಶ ಭಾಷೆಗಳ ಶೋಧನೆ ವಿಮರ್ಶೆಗಳಲ್ಲಿ ಕನ್ನಡ ಭಾಷೆಯ ಸಾಹಿತ್ಯ ಕೃತಿಗಳನ್ನೂ ಟೀಕೆ ವ್ಯಾಖ್ಯಾನಗಳನ್ನೂ ಆಕರಗಳಾಗಿ ಬಳಸುತ್ತಿದ್ದುದನ್ನು ಈ ಸಂದರ್ಭದಲ್ಲಿ ನೆನೆಯಬಹುದಾಗಿದೆ.

ಶ್ರೀಕಂಠಶಾಸ್ತ್ರಿಗಳ ಪ್ರಸಿದ್ಧ ಕೃತಿ Sources of Karnataka History (Volume I) ಸಿದ್ಧವಾಗುವಾಗ, ಅವರು ನೃಪತುಂಗ, ಪಂಪ, ಚಾವುಂಡರಾಯ, ಪೊನ್ನ, ರನ್ನ, ಚಂದ್ರರಾಜ, ದುರ್ಗಸಿಂಹ, ನಾಗವರ್ಮ (I, II), ಚಾವುಂಡರಾಯ (II), ನಾಗವರ್ಮಾಚಾರ್ಯ, ಶ್ರೀಧರಾಚಾರ್ಯ, ಕೀರ್ತಿವರ್ಮ, ನಯಸೇನ, ಬಸವಣ್ಣ, ಗುಣವರ್ಮ (II) ಇವರ ಸಾಹಿತ್ಯ ಕೃತಿಗಳನ್ನು ಗಮನಿಸಿ, ವಕ್ತವ್ಯಾಂಶಗಳನ್ನು

ಸಂಗ್ರಹಿಸುವಾಗಲೂ ಐತಿಹಾಸಿಕ ದೃಷ್ಟಿಕೋನವನ್ನೇ ಉಳ್ಳವರಾಗಿದ್ದರು ಎಂಬುದು ನಿಚ್ಚಟವಾಗಿ ಕಂಡುಬರುತ್ತದೆ. ಹಳಗನ್ನಡ ಭಾಷೆಯಲ್ಲಿ ರಚಿತವಾಗಿರುವ ಪ್ರಾಚೀನ ಕನ್ನಡ ಗ್ರಂಥಗಳನ್ನು ಮೂಲದಲ್ಲಿಯೇ ವ್ಯಾಸಂಗ ಮಾಡಿ ಅವರು ವಿಷಯ ವಿಶ್ಲೇಷಣೆ ಮಾಡಿದ್ದಾರೆ. ಅವರ ಈ ವಿಶ್ಲೇಷಣೆಗಳಿಂದ ಆಯಾ ಕವಿಯ ಜೀವನ ಕಾಲ ಆಶ್ರಯ ಮೊದಲಾದ ಸಂಗತಿಗಳ ಸರಿಯಾದ ಗ್ರಹಿಕೆಗೆ ತುಂಬ ಸಹಾಯವಾಗಿದೆ. ಪ್ರಾಚೀನ ರಾಜವಂಶಗಳು, ದೊರೆಗಳು, ಅವರ ವಂಶಾನುಕ್ರಮಣಿ, ಬಿರುದುಗಳು, ಪ್ರಾಚೀನ ಕವಿಗಳು ಮತ್ತು ಕವಿಕೃತಿಗಳು ಇವನ್ನೆಲ್ಲ ಯಶಸ್ವಿಯಾಗಿ ಒಗ್ಗೂಡಿಸಿದ್ದಾರೆ. ಇಂಗ್ಲಿಷ್ ಭಾಷೆಯಲ್ಲಿ ಬರೆದಿರುವ ಟಿಪ್ಪಣಿಗಳಿಂದ ಇದು ಸಾರಾಂಶರೂಪದಲ್ಲಿ ದೊರೆಯತ್ತವೆ. ತೇದಿಗಳನ್ನು ಸ್ವತಃ ಗುಣಿಸಿದ್ದಾರೆ. ಒಂದು ಸಮಗ್ರ ರಚನೆಯಲ್ಲಿ ಎಲ್ಲೆಲ್ಲಿ ಚರಿತ್ರೆಗೆ ಬೇಕಾದ ಸಂಗತಿಗಳುಂಟೋ ಅಲ್ಲಲ್ಲಿ ಅವರ ಕಣ್ಣು ಕೈಗಳು ಸೂಕ್ಷ್ಮವಾಗಿ ಹರಿದಾಡಿವೆ. ಉದಾಹರಣೆಗೆ, ನಾಗವರ್ಮನ, 'ಕಾವ್ಯಾವಲೋಕನ'ದಂಥ ಸಂಕಲನ ಗ್ರಂಥದಲ್ಲಿ ಉದ್ದಕ್ಕೆ ಚೆದುರಿ ಹೋಗಿರುವ ಐತಿಹಾಸಿಕ ಪ್ರಾಮುಖ್ಯದ ಉಲ್ಲೇಖಗಳನ್ನೆಲ್ಲ ಒಗ್ಗೂಡಿಸುವಲ್ಲಿ, ಇಮ್ಮಡಿ ಚಾವುಂಡರಾಯನ 'ಲೋಕೋಪಕಾರ'ದ ಉದ್ಧೃತಿಗಳನ್ನು ಕೊಡುವಾಗ, ಬಸವಣ್ಣನವರ ವಚನಗಳ ರಾಶಿಯಿಂದ ಚರಿತ್ರಾಂಶಗಳನ್ನು ಹೆಕ್ಕಿತೆಗೆಯುವಾಗ ಅವರ ಸಂಗ್ರಹ ವಿಮರ್ಶೆಗಳ ದೃಷ್ಟಿ ಎಂಥದೆಂಬುದು ವಿದಿತವಾಗುತ್ತದೆ.

ಈಗ ನಾವು ಕನ್ನಡ ಭಾಷೆ ಸಾಹಿತ್ಯಗಳಿಗೆ ಸಂಬಂಧಿಸಿದ ಬಿಡಿಬರಹಗಳತ್ತ ಹೊರಳೋಣ.

'ಬಸವೇಶ್ವರ' ಒಂದು ಚಿಕ್ಕ ಲೇಖನ. ಇಲ್ಲಿ ಬಸವಣ್ಣನವರು ಕರ್ನಾಟಕದ ಇತಿಹಾಸದಲ್ಲಿ ಕಾಣಿಸಿಕೊಳ್ಳುವ ಹಲವರು ಬಿಜ್ಜಳರಲ್ಲಿ ಯಾರ ಆಸ್ಥಾನದಲ್ಲಿ ಇದ್ದರೆಂಬ ವಿಚಾರವನ್ನು ಚರ್ಚಿಸಿದ್ದಾರೆ. ಬಸವ-ಬಿಜ್ಜಳರ ಉಲ್ಲೇಖವಿರುವ ಉಪಲಬ್ಧ ಶಾಸನಗಳನ್ನೂ ಹಲವು ವೀರಶೈವ ಮತ್ತು ಜೈನ ಗ್ರಂಥಗಳನ್ನೂ ಲಕ್ಷಿಸಿ, ಬಸವಣ್ಣನವರು ಕಳಚುರಿ ಬಿಜ್ಜಳನ ಆಸ್ಥಾನದಲ್ಲಿ ಇದ್ದಿರಲಾರರು, ರಾಯಮುರಾರಿ ಸೋಯಿ ದೇವನ ಪಾದ ಪದ್ಮೋಪಜೀವಿಯೂ ಸಿಂದವಂಶದವನೂ ಮಂಗಳವೇಢೆ ರಾಜಧಾನಿಯಾಗಿ ತಲಕಾಡು ಪ್ರದೇಶವನ್ನು ಆಳುತ್ತಿದ್ದವನೂ ಆದ ಬಿಜ್ಜಣನೆಂಬವನ ಆಸ್ಥಾನದಲ್ಲಿ ಇದ್ದಿರಬೇಕು ಎಂಬುದಾಗಿ ವಾದಿಸಿದ್ದಾರೆ. ಆದರೆ ಈ ವಿಷಯದಲ್ಲಿ ಮತ್ತೆ ಚರ್ಚೆಯನ್ನು ಮುಂದುವರಿಸಿರುವ ವಿದ್ವಾಂಸರು "ಕಳಚುರಿ ಬಿಜ್ಜಳನೆ ಬಸವಣ್ಣನವರ ಬಿಜ್ಜಳ" ಎಂದು ಅನಂತರದಲ್ಲಿ ಭಾವಿಸಿರುವುದು (ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ, ೪-೧, ಪು. ೪೫೫-೫೭) ಕಂಡುಬರುತ್ತದೆ.

ಹೀಗೆಯೇ 'ಸಂಶೋಧಕರ ದೃಷ್ಟಿಯಲ್ಲಿ ಪುರಂದರದಾಸರು' ಇನ್ನೊಂದು ಚಿಕ್ಕ ಲೇಖನ. ದಿನಪತ್ರಿಕೆಯೊಂದರ ದೀಪಾವಳಿ ಸಂಚಿಕೆಯಲ್ಲಿ ಪ್ರಕಟವಾದ ಈ ಬರಹ

ಅದರ ಪ್ರಕಟನೆಯ ಅನಂತರದಲ್ಲಿ ಸ್ವಲ್ಪ ಕಾಲ ವಿದ್ವಾಂಸರ ನಡುವೆ ಉಂಟುಮಾಡಿದ ಕುತೂಹಲ ಅನನ್ಯ ರೀತಿಯದು. ಪುರಂದರದಾಸರ ವಿಷಯದಲ್ಲಿ ಪ್ರಚಲಿತವಿದ್ದ ಅನೇಕ ಐತಿಹ್ಯಗಳನ್ನು ಉದ್ದಕ್ಕೆ ಪ್ರಶ್ನಿಸುತ್ತ ಹೋಗಿರುವ ಶಾಸ್ತ್ರಿಗಳು ಒಬ್ಬ ಸತ್ಯನಿಷ್ಠ ಸಂಶೋಧಕರಾಗಿ ಪ್ರಕಟಿಸಿರುವ ಧೈರ್ಯವೂ ಅನನ್ಯವಾದುದಾಗಿದೆ. ಈ ಬರಹದಲ್ಲಿ ಅವರು ಪುರಂದರದಾಸರ ಮನೋಭೂಮಿಕೆಯನ್ನೇ ಬೆದಕಿನೋಡಿ, ಅದಕ್ಕೂ ವಿಜಯನಗರದ ಪತನಕ್ಕೂ ಒಂದು ತೆರನ ಸಂಬಂಧವನ್ನು ಕಲ್ಪಿಸಿದ್ದಂತೂ ಆ ಕಾಲದ ಇತರ ವಿದ್ವಾಂಸರಿಗೆ ಅಚ್ಚರಿಯನ್ನೇ ಉಂಟುಮಾಡಿತು. ಶಾಸ್ತ್ರಿಗಳು ತಮ್ಮ ಪ್ರಶ್ನೆಗಳಿಗೆ ಆಂತರಿಕ ಮತ್ತು ಬಾಹ್ಯ ಪ್ರಮಾಣಗಳನ್ನು ಸಾಕಷ್ಟು ಉದ್ಧರಿಸಿ, ವಿಶ್ಲೇಷಿಸಿ ಪುರಂದರದಾಸರ ಸಾಧನೆ ವ್ಯಕ್ತಿತ್ವಗಳನ್ನು ಜನ ವೃಥಾ ಉತ್ಪ್ರೇಕ್ಷಿಸಿದ್ದಾರೆ ಎಂದು ಇಲ್ಲಿ ಅಭಿಪ್ರಾಯಪಟ್ಟರು. ಆದರೆ ಪ್ರಜಾ ಸಾಮಾನ್ಯರಲ್ಲಿ ಸಹ ಕುತೂಹಲ ಕೆರಳಿಸಿ ಅವರ ಲೇಖನ ಉಗ್ರವಾದ ಟೀಕೆಗೆ ಗುರಿಯಾಯಿತು. ಗಣ್ಯ ವಿದ್ವಾಂಸರೂ ತಮ್ಮ ಅಭಿಪ್ರಾಯಗಳನ್ನು ತಿಳಿಸಿ ಶಾಸ್ತ್ರಿಗಳ ಪ್ರಶ್ನೆಗಳಿಗೆ ಸಮಾಧಾನ ಹೇಳಿದರು. (ವಿವರಗಳಿಗೆ ನೋಡಿ : ಪ್ರಬುದ್ಧ ಕರ್ಣಾಟಕ, ೪೬–೧,೨, ವಸ್ತುಕೋಶ ೧೯೬೪)

'ಅನ್ನಮಾಚಾರ್ಯ ಚರಿತಮು' ಎಂಬ ತೆಲುಗು ಗ್ರಂಥವೇ ಪುರಂದರದಾಸರ ಜೀವನ ಹಾಗೂ ಕಾಲವಿಚಾರಗಳನ್ನು ಅರಿಯಲು ಮುಖ್ಯವಾದ ಆಧಾರಗ್ರಂಥ ಎಂಬ ಶಾಸ್ತ್ರಿಗಳ ಮಾತನ್ನು ಒಪ್ಪಬಹುದಾದರೂ ಪುರಂದರದಾಸರ ಕೃತಿಗಳು ಯಾವ ವಿಶ್ವ ಸಂದೇಶವನ್ನೂ ಕೊಡಲಿಲ್ಲ. ಪರಮತ ದ್ವೇಷವನ್ನು ಹರಡಿವೆ ಎಂಬರ್ಥದ ಮಾತುಗಳು ತೀರ ನಿಷ್ಠುರವಾಯಿತೆಂದೇ ಹೇಳಬೇಕು. ರಕ್ಕಸತಂಗಡಿ ಕದನದಲ್ಲಿ ಪುರಂದರದಾಸರ ಕೈವಾಡವೆಷ್ಟಿದ್ದಿತು ಎಂಬುದನ್ನು ವಿವೇಚಿಸಬೇಕು ಎನ್ನುವುದು ಹಾರಿಕೆಯ ಮಾತು ಎನ್ನಿಸುತ್ತದೆ. ಇವನ್ನೆಲ್ಲ ವಿದ್ವಾಂಸರು ಬಲವಾಗಿ ಖಂಡಿಸಿದ್ದಾರೆ.

ಕುಮುದೇಂದು ಕವಿವಿರಚಿತವಾದ 'ಸಿರಿಭೂವಲಯ' ಎಂಬ ಕುತೂಹಲಕರ ಅಂಕನಿಬದ್ಧವಾದ ಕಾವ್ಯದ ಮೇಲೆ ಎರಡು–ಮೂರು ಲೇಖನಗಳನ್ನು ಶ್ರೀಕಂಠ ಶಾಸ್ತ್ರಿಗಳು ಬರೆದಿದ್ದಾರೆ. ಈ ಗ್ರಂಥ ದೊರೆತು ಪ್ರಕಟವಾಗಿ ಪ್ರಚಾರಕ್ಕೆ ಬಂದ ಹೊಸತರಲ್ಲಿ ಅದರ ಬಗ್ಗೆ ವಿಶೇಷವಾಗಿ ವಿಚಾರ ಮಾಡುತ್ತಿದ್ದ ವಿದ್ವಾಂಸರಲ್ಲಿ ಶಾಸ್ತ್ರಿಗಳೂ ಒಬ್ಬರು. ಒಂದರಲ್ಲಿ (ಅಭಿವಂದನೆ, ೧೯೫೬, ಪು. ೫೬೨–೮೯), ಆ ಗ್ರಂಥದ ೧–೨ ನೆಯ ಭಾಗಗಳಲ್ಲಿ ಹಲವಾರು ಅಂಶಗಳನ್ನು ವಿಸ್ತಾರವಾಗಿ ಚರ್ಚಿಸಿದ್ದಾರೆ. ಧವಳಗ್ರಂಥ, ಅವುಗಳ ಕರ್ತೃಗಳು ಮತ್ತು ಟೀಕೆಗಳು, 'ಸಿರಿ ಭೂವಲಯ'ದ ಕರ್ತೃ ಕಾಲ ವಸ್ತು ಮತ್ತು ಪ್ರಶಸ್ತಿ ಇತ್ಯಾದಿ ಸಂಗತಿಗಳು ಇವನ್ನೆಲ್ಲ ವಿಸ್ತಾರವಾಗಿ ಪರಿಚಯಿಸಿರುವುದು ಕಾಣುತ್ತದೆ. ಈ ಗ್ರಂಥದ ಕಾಲವನ್ನು ಅವರು ಕ್ರಿ.ಶ. ೯೩೦–೧೧೨೦ರ ನಡುವೆ ಎಂಬುದಾಗಿ ಗುರುತಿಸಿರುವುದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ ಎಂಬುದನ್ನು ಆ ಗ್ರಂಥದ ಈಚಿನ ಪರಿಷ್ಕರಣದಲ್ಲಿ (ಪುಸ್ತಕ ಶಕ್ತಿ,

ಬೆಂಗಳೂರು, ೨೦೦೩) ನಾನು ಸಕಾರಣವಾಗಿ ಚರ್ಚಿಸಿದ್ದೇನೆ. ಶಾಸ್ತ್ರಿಗಳು ಇನ್ನೊಂದು ಬರಹದಲ್ಲಿ ('ಸಂಶೋಧನ ಲೇಖನಗಳು, ೧೯೭೫) ಈ ಗ್ರಂಥದ ವಿಶಿಷ್ಟ ಪ್ರಕಾರದ ಗಣಿತ ಭಾಗಗಳನ್ನು ಅವರು ವಿಶ್ಲೇಷಿಸಿರುವ ರೀತಿಯನ್ನು ನೋಡಿದರೆ, ಅವರೊಬ್ಬ ಗಣಿತ ಶಾಸ್ತ್ರಜ್ಞರೆಂದೇ ಭಾವನೆ ಬರುವಂತಿದೆ.

ವಚನಕಾರ ದಾಸಿಮಯ್ಯನ ಕಾಲ ಜೀವಿತಗಳಿಗೆ ಸಂಬಂಧಿಸಿದ ಐತಿಹಾಸಿಕ ಮತ್ತು ಅನ್ಯ ಸಾಕ್ಷ್ಯಗಳನ್ನೆಲ್ಲ ಹೇರಳವಾದ ಶಾಸನಗಳ ಹಾಗೂ ಸಾಹಿತ್ಯ ಕೃತಿಗಳ ಆಕರಗಳನ್ನು ಅವಲಂಬಿಸಿ ಶೋಧಿಸಿ ಒಗ್ಗೂಡಿಸಿ ೫೩ ಪುಟಗಳಷ್ಟು ದೀರ್ಘವಾದ ಲೇಖನವನ್ನು ಶಾಸ್ತ್ರಿಗಳು ಬರೆದಿದ್ದಾರೆ. ಇದು ಕನ್ನಡ ಸಾಹಿತ್ಯ ಚರಿತ್ರೆಯ ಕ್ಷೇತ್ರದಲ್ಲಿ ಅವರಿಗಿದ್ದ ಆಳವಾದ ಆಸಕ್ತಿಯನ್ನೂ ಪರಿಶ್ರಮವನ್ನೂ ಎತ್ತಿ ತೋರಿಸುವ ಸಂಗತಿಯಾಗಿದೆ. ವಿಸ್ತಾರವಾದ ಚರ್ಚೆಯ ಕೊನೆಗೆ ಅವರು ತಮ್ಮ ನಿಲವನ್ನು ಹೀಗೆ ತಿಳಿಸಿದ್ದಾರೆ : "ಜಯಸಿಂಹ ಸುಗ್ಗಲೆ ಪೊಟ್ಟಲಕೆರೆ ಸಂಬಂಧ ಪಡೆದ ಮುದನೂರು ದಾಸಿಮನ ಸಂಬಂಧವಾದ ಕಥೆಗಳು ಹುಟ್ಟಿ ಬಿಜ್ಜಳನ ಹಿರಿಯ ಸಮಕಾಲೀನನಾದ ದೇವರ ದಾಸಿಮಯ್ಯನಿಗೆ ಅನ್ವಯಿಸಲ್ಪಟ್ಟವೆಂದು ತಾತ್ಕಾಲಿಕವಾಗಿ ಹೇಳಬಹುದು." ವೀರಶೈವಧರ್ಮ ಸಾಹಿತ್ಯಗಳಿಗೆ ಸಂಬಂಧವಿರುವ ಅನೇಕಾನೇಕ ವಿಷಯಗಳ ಗಣಿಯೆಂದು ಹೇಳಬಹುದಾದ ಈ ಲೇಖನವನ್ನು ವಿದ್ವಾಂಸರು ಅಷ್ಟಾಗಿ ಗಮನಿಸಿದಂತೆ ತೋರುತ್ತಿಲ್ಲ. ಇದಕ್ಕೆ ಏನು ಕಾರಣವೋ ತಿಳಿಯದು. ಈಗ ಈ ಚರ್ಚೆ ಮುಂದುವರಿದು ಜಯಸಿಂಹ ಸುಗ್ಗಲೆ ಪೊಟ್ಟಲಕೆರೆ ಸಂಬಂಧದ ದೇವರದಾಸಿಮಯ್ಯನೂ (ಕ್ರಿ.ಶ. ೧೦೧೫-೪೪) ವಚನಕಾರ ಜೇಡರ ದಾಸಿಮಯ್ಯನೂ (ಕ್ರಿ.ಶ. ೧೧೩೫-೪೦) ಭಿನ್ನರೆಂಬುದು ವಿದಿತವಾಗಿದೆ.

ದಾಕ್ಷಿಣಾತ್ಯವಾಙ್ಮಯದಲ್ಲಿ ಬಹು ಪ್ರಧಾನ ಘಟ್ಟವೆಂದು ೧೫ನೆಯ ಶತಮಾನವನ್ನು ಶಾಸ್ತ್ರಿಗಳು ಗುರುತಿಸಿ ಬರೆದ ಲೇಖನ '೧೫ನೆಯ ಶತಮಾನದ ವಾಙ್ಮಯ' ಆ ಕಾಲದ ವೀರಶೈವ ಸಾಹಿತ್ಯಕಾರರನ್ನೇ ಮುಖ್ಯವಾಗಿ ಕುರಿತಿರುವ ಒಂದು ಸಾಮಾನ್ಯ ಪರಿಚಯಾತ್ಮಕ ಲೇಖನ. ಇಮ್ಮಡಿ ದೇವರಾಯನ ಕಾಲದ ಕನ್ನಡ-ತೆಲುಗು ಸಾಹಿತ್ಯಗಳ ಪೋಷಣೆಯನ್ನು ಸಾಮಾನ್ಯ ವಾಚಕರಿಗೆ ಪರಿಚಯಿಸಲೆಂದು ಬರೆದಿರುವ ಈ ಬರಹದಲ್ಲಿ, ಶಾಸ್ತ್ರಿಗಳು ತಾವು ಪ್ರಸ್ತಾವಿಸಿರುವ ಕೆಲವು ಐತಿಹ್ಯಗಳನ್ನು ಪ್ರಶ್ನಿಸದೆ ನಿರೂಪಿಸಿರುವುದು ಆಶ್ಚರ್ಯವುಂಟುಮಾಡುತ್ತದೆ. ಈ ವಿಷಯದಲ್ಲಿ ಕವಿಚರಿತೆಕಾರರಾದ ಆರ್. ನರಸಿಂಹಾಚಾರ್ಯರನ್ನು ಎ. ವೆಂಕಟಸುಬ್ಬಯ್ಯನವರು ಆಕ್ಷೇಪಿಸುವಂತೆ ಇತಿಹಾಸಕಾರರಾದ ಶ್ರೀಕಂಠ ಶಾಸ್ತ್ರಿಗಳು ಆಕ್ಷೇಪಿಸಿ ಐತಿಹಾಸಿಕ ವಸ್ತುನಿಷ್ಠತೆಯನ್ನು ಎತ್ತಿ ಹಿಡಿಯುವ ಅವಕಾಶವಿತ್ತು.

ಶ್ರೀಕಂಠಶಾಸ್ತ್ರಿಗಳ ಸಾಹಿತ್ಯದ ಒಲವನ್ನು ಬಲ್ಲವರು ತಮ್ಮ ಸಾಹಿತ್ಯ ರಚನೆಗಳಿಗೆ ಅವರಿಂದ ಮುನ್ನುಡಿಗಳನ್ನು ಬೇಡಿ ಬರೆಸಿಕೊಳ್ಳುತ್ತಿದ್ದರು ; ಇವರಲ್ಲಿ ಪ್ರತಿಷ್ಠಿತ

ವಿದ್ವಾಂಸರಿದ್ದಾರೆ, ಸಾಮಾನ್ಯ ಲೇಖಕರೂ ಇದ್ದಾರೆ. ಹೀಗೆಯೇ ಪತ್ರಿಕೆಗಳು ಅವರಿಂದ ವಿಮರ್ಶೆಗಳನ್ನು ಬರೆಯಿಸಿವೆ.

ವಿಮರ್ಶೆಗಳ ಭಾಗ ಶಾಸ್ತ್ರಿಗಳ ವಸ್ತು ವಿಜ್ಞತೆ, ವಿಮರ್ಶ ವಿಚಕ್ಷಣತೆ ಮತ್ತು ವೈಜ್ಞಾನಿಕ ದೃಷ್ಟಿಕೋನಗಳನ್ನು ತೋರಿಸುತ್ತದೆ. ಅವರು ಮಹಾ ಲೇಖಕರ ಬಗೆಗೆ ಮೆಚ್ಚುಗೆಯನ್ನು ಧಾರಾಳವಾಗಿ ಸೂಚಿಸುವ ಉಪಚಾರದ ಮಾತುಗಳನ್ನು ಆಡಲುಹೋಗದೆ ಕುಂದುಕೊರತೆಗಳನ್ನೇ ಪ್ರಮುಖವಾಗಿ ಆಡಿರುವುದು ಈ ಬರಹಗಳಲ್ಲಿ ಕಂಡುಬಂದಿರುವ ವಿಧಾನ. ಹೀಗೆ ಮಾಡಿರುವುದರಿಂದ ಮೂಲ ಲೇಖಕರಿಗೆ ಕೆಲಮಟ್ಟಿಗೆ ಕಿರಿಕಿರಿಯಾಗುವುದು ದಿಟ. ಆದರೆ ಗ್ರಂಥ ರಚನೆ ನಿರ್ದುಷ್ಟವಾಗಿ ಆಗಬೇಕು, ಹಾಗಿದ್ದರೆ ಅದರ ಉಪಯೋಗ ಹೆಚ್ಚುತ್ತದೆ ಎನ್ನುವುದು ಟೀಕೆಯ ಹಿಂದಿನ ಉದ್ದೇಶ. ಪರಿಶ್ರಮದ ಕೊರತೆ, ಎಚ್ಚರಿಕೆಯ ಆಭಾವ, ಜವಾಬ್ದಾರಿಗೆ ಹೆಗಲುಕೊಡದ ತೂಷ್ಣೀಭಾವ ಇಂತಹವುಗಳಿಗೆ ಶಾಸ್ತ್ರಿಗಳು ಸಹಿಸದೆ ಆಕ್ಷೇಗಳನ್ನು ಎತ್ತುತ್ತಾರೆ, ಪ್ರಶ್ನೆಗಳನ್ನು ಎಸೆಯುತ್ತಾರೆ. ತಾವೇ ಪ್ರತಿಯಾಗಿ ಉತ್ತರಗಳನ್ನೋ ಸಮಾಧಾನಗಳನ್ನೋ ಹೇಳಬಲ್ಲ ವ್ಯುತ್ಪತ್ತಿ ಅವರಿಗುಂಟು . ಆದರೆ ಪ್ರಾಯಃ ಹೆಚ್ಚಿನ ಸ್ಥಳಾವಕಾಶವಿಲ್ಲದೆ ಅವರು ವಿವರಗಳಿಗೆ ಹೋಗುವುದಿಲ್ಲವೆಂದು ತೋರುತ್ತದೆ. ಆದರೆ ಮುನ್ನುಡಿಗಳಲ್ಲಿ ಲೇಖಕರಿಗೆ ಪ್ರಿಯವಾಗುವ ಮೆಚ್ಚು ಮಾತುಗಳನ್ನು ಅವರು ಒಮ್ಮೊಮ್ಮೆ ಧಾರಾಳವಾಗಿಯೇ ಆಡಿದ್ದಾರೆ ; ಅವಶ್ಯ ಕಂಡೆಡೆ ಆಯಾ ಗ್ರಂಥ ವಿಷಯದ ಸಂಗತಿಗಳನ್ನು ಕುರಿತು ಸ್ವತಂತ್ರ್ಯ ವಿಚಾರದ ಪ್ರತಿಫಲಗಳನ್ನೂ ನೀಡಿದ್ದಾರೆ. ಉದಾಹರಣೆಗೆ 'ಭಾವ ರಾಮಾಯಣ ನಾಟಕ ತ್ರಿವೇಣಿ'ಗೆ ಬರೆದ ಮುನ್ನುಡಿಯನ್ನು ಗಮನಿಸಬಹುದು.

ವಿದ್ವಾಂಸರೂ ಬಹುಭಾಷಾ ಪಂಡಿತರೂ ಆದ ಶ್ರೀಕಂಠಶಾಸ್ತ್ರಿಗಳ ಯಾವುದೇ ಲೇಖನವಿರಲಿ, ಅವರ ವಿಸ್ತಾರವಾದ ವ್ಯಾಸಂಗ, ವಿವಿಧ ಭಾಷೆಗಳ ಆಕರಗಳಿಂದ ಎತ್ತಿದ ವಿಪುಲವಾದ ಸಾಕ್ಷ್ಯಾಧಾರಗಳು, ಅನೇಕ ಶಾಸ್ತ್ರಗಳ ಅಧ್ಯಯನದ ಪ್ರೌಢಿಮೆ ಇವು ತಪ್ಪದೆ ಅಲ್ಲಿ ಪ್ರಕಟಗೊಂಡಿರುತ್ತವೆ. ಇವು ಯಾರಿಗಾದರೂ ಆಶ್ಚರ್ಯ ದಿಗ್ಭ್ರಮೆಗಳನ್ನು ಉಂಟುಮಾಡುವಂತೆ ಅಲ್ಲಿ ಹರಡಿಕೊಂಡಿರುತ್ತವೆ. ಇಂದಿನ ಸಂಶೋಧಕರಲ್ಲಿ ಈ ಗುಣಗಳು ಕಾಣದಿರುವುದು ಖೇದದ, ನಿರಾಶೆಯ ಸಂಗತಿಯಾಗಿದೆ.

ಈ ಬರಹವನ್ನು ಶ್ರೀಕಂಠಶಾಸ್ತ್ರಿಗಳ ಎರಡು ಸೃಜನಶೀಲ ರಚನೆಗಳ ಪ್ರಸ್ತಾವದೊಂದಿಗೆ ಮುಗಿಸಬಹುದೆಂದು ತೋರುತ್ತದೆ.

ಶಾಸ್ತ್ರಿಗಳ ಹಳಗನ್ನಡ ಭಾಷೆ ಛಂದಸ್ಸುಗಳಲ್ಲಿದ್ದ ಪ್ರೌಢಿಮೆಯನ್ನು ಪ್ರಕಟಿಸುವುದೇ ಅಲ್ಲದೆ ಒಂದು ಕಾಲದ ಸಾಹಿತ್ಯಾಭಿರುಚಿಯನ್ನೂ ಸೂಚಿಸುವ ಎರಡು ರಚನೆಗಳಲ್ಲಿ

ಗಣೇಶಾಷ್ಟಕ ಎಂಬುದನ್ನು ಒಂದು ಸ್ಥಳೀಯ ದಿನಪತ್ರಿಕೆ ಪ್ರಕಟಿಸಿತು (ಸಾಧ್ವಿ, ೮-೧೧-೧೯೨೬), ಇನ್ನೊಂದು ಹಸ್ತಪ್ರತಿ ರೂಪದಲ್ಲಿಯೇ ಇದ್ದು ಈಚೆಗೆ ನನ್ನಿಂದ ಸಂಪಾದಿತವಾಗಿ ಪ್ರಕಟವಾಯಿತು (ಪ್ರಬುದ್ಧ ಕರ್ಣಾಟಕ, ೫೭-೩, ೧೯೭೫, ಪು. ೪೯-೬೨). ಆ ಇನ್ನೊಂದು 'ಶ್ರೀಕಂಠೇಶ್ವರ ಶತಕ' ಎಂಬ ಸುದೀರ್ಘ ಕವಿತೆಯಾಗಿದ್ದು, ಇದು ಸಹ ಹಳಗನ್ನಡ ಭಾಷೆ ಛಂದಸ್ಸುಗಳಲ್ಲಿಯೇ ರಚಿತವಾಗಿರುವ ಪ್ರೌಢರಚನೆಯೇ ಆಗಿದೆ.

'ಗಣೇಶಾಷ್ಟಕ'ದ ಈ ಎರಡು ಮತ್ತೇಭವಿಕ್ರೀಡಿತಗಳನ್ನು ಮಾದರಿಗೆ ಇಲ್ಲಿ ಎತ್ತಿ ಬರೆಯಬಹುದು.

ನಿರುತಂ ನಿನ್ನನೆ ಪೂಜಿಸುತ್ತಮನಿಶಂ ತ್ವನ್ನಾಮಮಂ ಪೇಳ್ದು ತ್ವ
ಚ್ಚರಿತಂ ಮನ್ಮನಮಂ ಮನಂ ಗೊಳಿಸೆ ಸಂತೋಷಾಶ್ರುನೇತ್ರಂಗಳಿಂ
ಪೊರೆಪೊಣ್ಮಲ್ ಗಳಗದ್ಗದಧ್ವನಿ ಗಳತ್ಸೇದಾಂಬುರೋಮಾಂಚಮು
ತ್ಕರವಾದತ್ತು ಶಿವಾತನುಭವ ಶಿವಂ ಭದ್ರಂ ಶುಭಂ ಮಂಗಳಂ ॥

ಕವಿವರ್ಯಂಗೆ ಗಜಾನನಂಗೆ ಸರಳಗ್ರೀವಾತ್ಮಜಂಗಬ್ಜಸಂ
ಭವನಾಕಾಧಿಪಪೂಜಿತಂಗೆ ಕಮಳಾವಾಣೀಶಿವೇಂದ್ರಾಣೀ ಸಂ
ಸ್ತವನಾಲೋಲುಪಮಾನಸಂಗೆ ಭುಜಗಾಲಂಕಾರಗುಸ್ಯತ್ಕಲಾ
ಧವಗಾರ್ತವ್ರಜಪಾರಿಜಾತಕೆ ಶಿವಂ ಭದ್ರಂ ಶುಭಂ ಮಂಗಳಂ ॥

ಈ ಪದ್ಯಗಳು (೪,೬) ಹಳಗನ್ನಡ ಭಾಷೆಯ ಎಲ್ಲ ವ್ಯಾಕರಣ ಲಕ್ಷಣಗಳನ್ನೂ ಅನುಸರಿಸಿ ರಚಿತವಾಗಿವೆಯೆಂದು ಹೇಳಲಾಗಿದ್ದರೂ ನಿಸ್ಸಂಶಯವಾಗಿ ಆ ಧೋರಣೆಯಲ್ಲಿ ಸುಲಲಿತವಾಗಿ ಬರೆದಿರುವುದಂತೂ ಕಂಡು ಬರುತ್ತದೆ.

ಎರಡನೆಯ ರಚನೆಯನ್ನು ಶಾಸ್ತ್ರಿಗಳು ತಮ್ಮ ಜನ್ಮಸ್ಥಳ ನಂಜನಗೂಡು ಎಂಬುದರಿಂದಾಗಿ ಅಲ್ಲಿಯ ಅಧಿದೈವವನ್ನು ಕೀರ್ತಿಸುವ ಆಶಯದಿಂದ ರಚಿಸಿದ್ದಾಗಿದೆ. ರಚನೆಯನ್ನು ೧೯೨೫ ರಲ್ಲಿ ಆರಂಭಿಸಿ, ೧೯೬೬ ರಲ್ಲಿ ಮುಗಿಸಿ ಅಲ್ಲದೆ ಸು. ೫೦ ವರ್ಷಕ್ಕೆ, ಎಂದರೆ ೧೯೭೪ ರಲ್ಲಿ ಸಾಕ್ಷಾತ್ತಾಗಿ ನಂಜನಗೂಡಿನ ಶ್ರೀಕಂಠೇಶ್ವರನ ಸನ್ನಿಧಿಯಲ್ಲಿ ಶಾಸ್ತ್ರಿಗಳು ತಮ್ಮ ಈ ಸ್ತೋತ್ರರೂಪದ ಶತಕವನ್ನು ಸಮರ್ಪಿಸಿದ್ದಾರೆ ಎನ್ನುವುದು. ಹಸ್ತಪ್ರತಿಯಲ್ಲಿ ದೊರೆಯುವ ಲಿಖಿತದಿಂದಲೇ ತಿಳಿಯುತ್ತದೆ.

ಪ್ರಾಚೀನ ಕನ್ನಡ ಚಂಪೂಕಾವ್ಯಗಳಲ್ಲಿ ನಮಗೆ ಪರಿಚಿತವಾಗಿರುವ ಖ್ಯಾತ ಕರ್ಣಾಟಕ ವೃತ್ತಗಳೂ ವಿರಳ ವರ್ಣವೃತ್ತಗಳೂ ಇಲ್ಲಿ ಬಳಕೆಯಾಗಿದ್ದು, ಶಾಸ್ತ್ರಿಗಳು ತಮ್ಮ ಹಳಗನ್ನಡ ಕಾವ್ಯಗಳ ಅಭ್ಯಾಸದ ಕಾರಣದಿಂದಲೇ ಹೀಗೆ ಮಾಡಿದ್ದಾರೆ ಎಂದು

ಊಹಿಸಬಹುದಾಗಿದೆ. ಪ್ರಾಸಾನುಪ್ರಾಸಗಳು ಎದ್ದು ತೋರುತ್ತಿರುವ ಪ್ರೌಢಪದಬಂಧದ ಈ ಹಳಗನ್ನಡ ಕಾವ್ಯ ನಿರರ್ಗಳಗತಿಯಲ್ಲಿ ಸಾಗುತ್ತ ಹಳೆಯ ಕವಿಗಳ ಕಾವ್ಯಬಂಧದ ನೆನಪು ತರುವಂತೆ ಹೃದಯಂಗಮವಾಗಿದೆ. ಮಾದರಿಗೆ ಈ ಕೆಳಗಿನ ವೃತ್ತಗಳನ್ನು ನೋಡಬಹುದು :

ತಿಳಿದೆಂ ನಾಂ ಸಕಲಾಗಮಸ್ಮೃತಿಪುರಾಣಾಂತಸ್ಥ ತತ್ತ್ವಂಗಳಂ
ತಿಳಿದೆಂ ಕಾಪಿಲ ಗೌತಮಾರ್ಹತ ಕಣಾದ ಪ್ರತ್ಯಭಿಜ್ಞಾಮತಂ
ಗಳ ಪಾತಂಜಲ ಪಾಂಚರಾತ್ರನುವಿಶಿಷ್ಟಾದ್ವೈತ ಕಾಪಾಲಿಕಾ
ಖಿಲಮಂ ನಿನ್ನ ಮಹತ್ತ್ವಮಂ ತಿಳಿದೆನಿಲ್ಲೈ ಶ್ರೀಕ್ಷೈಳಕಂಠೇಶ್ವರಾ ॥

ಮೃದುಪದ ಬಂಧುರಂ ಗುಣಗಣಾಂಚಿತಮುತ್ತಮಧರ್ಮ ಸಂಗತಂ
ಮಧುರವಚೋವಿರಾಜಿತಮಲಂಕೃತಮುಂ ರಸಭಾವಭಾಸಿತಂ
ಹೃದಯವಶೀಕೃತಂ ಸುಕವಿತಾವನಿತಾತನುಜಾತೆಯಂ ಸುಖ
ಪ್ರದ ನಿನಗಿತ್ತಿಹೆಂ ಗ್ರಹಿಪುದೀಶ್ವರ ಶಂಕರ ಚಂದ್ರಶೇಖರಾ ॥

ರಸನಾಗ್ರಸ್ಥಿತವಾರಿಜಾಸನ ವಧೂಪಾದಸ್ಫುರನ್ನೂಪುರ
ಪ್ರಸರನ್ಮಂಜುಳನಾದ ಸನ್ನಿಭಸಮುಜ್ಜೃಂಭದ್‌ವಚೋಗುಂಭವಾ
ವಪಥಂ ಸಂಸ್ಕೃತ ಕನ್ನಡಾಂಧ್ರ ಕವಿತಾವಾಗೀಶ್ವರಂ ಸರ್ವಶಾ
ಸ್ತ್ರಸಮುದ್ಭಾಸಿತಚೇತಸಂ ಬುಧವರಂ ಶ್ರೀಕಂಠಶರ್ಮಾಹ್ವಯಂ ॥

ನುತಸತ್ಕಾಶ್ಯಪಗೋತ್ರಸಂಭವನುಮಾಪಸ್ತಂಬಮಂ. ಪಾರ್ವತೀ
ಪತಿ ಪಾದಾಂಬುಜಭೃಂಗನುಂ ಸುಕವಿತಾವಿದ್ಯಾಧರಂ. ಲೋಕವಿ
ಶ್ರುತ ಚಾರಿತ್ರನುಮಾಮಹೇಶತಕಂ ಸೋಮಾರ್ಕತಾರಂಬರಂ
ಕ್ಷಿತಿಯೊಳ್‌ನಿಲ್ವವೊಲ್ಯೆದೆ ತಾಂ ರಚಿಸಿದಂ ಶ್ರೀಕಂಠಶರ್ಮಾಹ್ವಯಂ ॥

ಈ ವೃತ್ತಗಳಲ್ಲಿ ಕವಿಯಾಗಿ, ವೇದಾಂತಿಯಾಗಿ, ಶಾಸ್ತ್ರವಿದರಾಗಿ ಶ್ರೀಕಂಠಶಾಸ್ತ್ರಿಗಳು ತಮಗಿದ್ದ ಪ್ರವೇಶ ಪರಿಣತಿಗಳನ್ನು ಸ್ಪಷ್ಟವಾಗಿ ಹೇಳಿಕೊಂಡಿರುವುದನ್ನು ಗಮನಿಸಿದಾಗ, ಇತಿಹಾಸಕಾರರಾಗಿಯೇ ವಿಶೇಷವಾಗಿ ನಮಗೆ ಪರಿಚಿತರಾದ ಅವರ ಬಹುಮುಖ ಪ್ರತಿಭೆ ಯಾವ ರೀತಿಯದು ಎಂಬುದು ಸಹ ಚೆನ್ನಾಗಿ ತಿಳಿಯುತ್ತದೆ.

■

# ೧೧. ಕನ್ನಡದಲ್ಲಿ ಐತಿಹಾಸಿಕ ಕಾದಂಬರಿಗಳು

**–ಡಾ॥ ಕೆ. ರಮಾನಂದ**

ಸಮಯವನ್ನು ಕೊಲ್ಲಲು ಮನೋರಂಜನೆಯನ್ನು ಸುಲಭದಲ್ಲಿ ಪಡೆಯಲು ಮಾನವ ಇಚ್ಛಿಸಿದಾಗಲೇ ಕಾದಂಬರಿಯ ಉಗಮವಾಯಿತು. ಸಣ್ಣ ಕತೆಗಿಂತಲೂ ದೊಡ್ಡದಾಗಿ ಒಂದು ಸಾಮಾನ್ಯ ಪುಸ್ತಕದಷ್ಟು ಗಾತ್ರದ ಗದ್ಯರೂಪದ ಕತೆಯೇ ಕಾದಂಬರಿ ಎಂದು ಸ್ಥೂಲವಾಗಿ ಹೇಳಬಹುದು. ಸಣ್ಣ ಕತೆಗಿಂತಲೂ ಕಾದಂಬರಿಯಲ್ಲಿ ಚಿತ್ರಿತವಾಗುವ ಜೀವನಕ್ಷೇತ್ರ ದೊಡ್ಡದು, ವಿವರವಾದದ್ದು, ಆಳವಾದದ್ದು. ತಂತ್ರಶೈಲಿಗಳು ಲೇಖಕನನ್ನು ಅವಲಂಬಿಸಿರುತ್ತವೆ. ಸಣ್ಣಕಥೆ ಯಾವುದಾದರೊಂದು ಅನುಭವ ಅಥವಾ ಘಟನೆಯನ್ನು ಚಿತ್ರಿಸುತ್ತದೆ. ಒಳ್ಳೆಯ ಕಾದಂಬರಿ ಇಡೀ ಜೀವನದ ಗುರಿ–ಧೋರಣೆಯನ್ನು–ಅನುಭವಗಳನ್ನು ಒಳಗೊಂಡಿರುತ್ತದೆ.

"ರಾಲಂಡ್ ಬಾರ್ಥ್" ಎಂಬ ವಿದ್ವಾಂಸರು ಲೇಖಕ ಮತ್ತು ಸಮಾಜ ಇವರ ನಡುವೆ ಉಂಟಾಗುವ ಒಪ್ಪಂದದ ಕಾರಣದಿಂದಲೇ ಕಾದಂಬರಿ ಹುಟ್ಟುತ್ತದೆ. ಕಾದಂಬರಿ ಒಂದು ವಿಧವಾದ ಮೃತ್ಯು. ಅದು ಬದುಕನ್ನು ವಿಧಿಯಾಗಿ, ಸ್ಮರಣೆಯನ್ನು ಉಪಯುಕ್ತ ಕೃತಿಯಾಗಿ, ವೇಳೆಯನ್ನು ನಿರ್ದಿಷ್ಟವಾದ ಮತ್ತು ಅರ್ಥಪೂರ್ಣವಾದ ಕಾಲವನ್ನಾಗಿ ಪರಿವರ್ತಿಸುತ್ತದೆ. ಆದರೆ ಈ ಪರಿವರ್ತನೆ ಸಾಧ್ಯವಾಗುವುದು ಸಮಾಜದ ಸಮ್ಮುಖದಲ್ಲಯೇ" ಎಂದಿದ್ದಾರೆ.

'ಮರಾಠಿ ಭಾಷೇಚ ಕೋಶ' ಎಂಬುದರಲ್ಲಿ ಕಾದಂಬರಿಗೆ 'ಕಲ್ಪಿತ ಕಥಾಕೋಶ' ಎಂಬ ಅರ್ಥ ಕೊಡಲಾಗಿದೆ. ನೂತನ ಸಾಹಿತ್ಯಕ್ಕೆ ಕಾದಂಬರಿ ಎಂದು ಮೊದಲಿಗೆ ಕರೆದವರು ಮರಾಠಿಗರು. ಅದನ್ನು ಉತ್ತರ ಕರ್ನಾಟಕದವರು ಸ್ವೀಕರಿಸಿದರು.

ಮೈಸೂರು ವಿಭಾಗದಲ್ಲಿ ಇದಕ್ಕೆ 'ನಾವೆಲ್ಸು' ಎಂಬ ಹೆಸರಿದ್ದಿತು ಎಂದು ಡಾ. ಶ್ರೀನಿವಾಸ ಹಾವನೂರು ಅವರು ಹೇಳಿದ್ದಾರೆ. ಕಾದಂಬರಿ (Novel) ಕಲ್ಪನೆ (fiction)ಯ ಒಂದು ಮಹತ್ವಪೂರ್ಣವಾದ ಆವಿಷ್ಕಾರವಾದುದರಿಂದ ಕಲ್ಪನೆಯ

ಉದ್ದೇಶಗಳಾದ ಪರಿಷ್ಕಾರ (Sublimation) ಮತ್ತು ಪರಿಜ್ಞಾನ (Cognition) ಅವರ ಉದ್ದೇಶಗಳೂ ಆಗಿವೆ. ಆದರ್ಶ ಮತ್ತು ವಾಸ್ತವಗಳ ವಿಶಿಷ್ಟ ಸಂಯೋಗದಲ್ಲಿ ಕಾದಂಬರಿ ಹುಟ್ಟಿಕೊಳ್ಳುತ್ತದೆ. ಆದರೆ ಕಾದಂಬರಿ ವಾಸ್ತವದ ಅನುಕರಣೆಯಲ್ಲ. ಅದಕ್ಕಿಂತ ಭಿನ್ನವಾದ ರಚನೆ (Structure). ಅದನ್ನು ಒಂದು ವ್ಯವಸ್ಥಿತವಾದ ಮಾಡೆಲ್ (Systamatic Model) ಎಂದು ನೋಡಬೇಕೇ ವಿನಃ ಅನುಕೃತಿಯೆಂದಲ್ಲ. ಕಾದಂಬರಿಯ ಲಕ್ಷ್ಯ ಐತಿಹಾಸಿಕ ವರ್ತಮಾನದತ್ತ ಇರುವುದರಿಂದ ಅದು ಆದರ್ಶ ಭೂತಕಾಲದಲ್ಲಿಯೇ ಪೂರ್ಣ ನಂಬಿಕೆಯನ್ನಿಟ್ಟು ಮಹಾಕಾವ್ಯದಿಂದ ತೀರಾ ಭಿನ್ನವಾಗಿರುತ್ತದೆ. ಕಾದಂಬರಿ ಮನಸ್ಸು ಮತ್ತು ಅವನಿಗಿರುವ ಜಗತ್ತು ಇವುಗಳ ಪರಸ್ಪರ ಸಂಬಂಧದ ಪರಿಣಾಮವಾಗಿರುವುದರಿಂದ ವಾಸ್ತವ (Reality) ಮತ್ತು ಆದರ್ಶ (Ideal) ಇವುಗಳ ಕ್ರಿಯೆ ಪ್ರತಿಕ್ರಿಯೆ ಅದರ ಜೀವಾಳವಾಗಿರುತ್ತದೆ. ೧೭ನೇ ಶತಮಾನದ ಆರಂಭದಲ್ಲಿಯೇ ಕಾದಂಬರಿಯ ಉಗಮವಾಯಿತೆಂದು ಹೇಳಬಹುದು. ಸ್ಪೇನ್‌ದೇಶದಲ್ಲಿ ಸರ್ವಾಂಟೆಸ್ (Cervantes) ಎನ್ನುವವನು 'ಡಾನ್‌ಕ್ವಿಕ್ಸೋಟ್' (Donquixote) ಎನ್ನುವ ಕಾದಂಬರಿಯನ್ನು ಬರೆದ. ಇದೇ ಪ್ರಪಂಚದ ಮೊದಲ ಕಾದಂಬರಿ ಎಂದು ಹೇಳಲಾಗಿದೆ. ಹಾಗೆಯೇ ಇಂಗ್ಲೀಷ್ ಭಾಷೆಯ ಮೊದಲ ಕಾದಂಬರಿ ಡೇನಿಯಲ್ ಡೇಪೋನ 'ರಾಬಿನ್‌ಸನ್ ಕ್ರೂಸೋ' ಆಗಿದೆ.

ಕನ್ನಡ ಕಾದಂಬರಿ ಕ್ಷೇತ್ರಕ್ಕೆ ತನ್ನದೇ ಆದ ಹರಹಿದೆ. ತನ್ನದೇ ಆದ ಇತಿಹಾಸವಿದೆ. ಕನ್ನಡ ಕಾದಂಬರಿ ಕ್ಷೇತ್ರದ ಪ್ರಾರಂಭದ ಬೆಳವಣಿಗೆ ಅಷ್ಟು ಫಲವತ್ತಾಗದಿದ್ದರೂ ಆಗ ಮೂಡಿಬಂದ ಕಾದಂಬರಿಕಾರರ ಕಾದಂಬರಿಗಳು ಯಾವ ಕಾಲಕ್ಕೂ ರಂಜನೆಯನ್ನುಂಟು ಮಾಡುವಂತಹ ಮೌಲ್ಯಗಳನ್ನೊಳಗೊಂಡಿದೆ ಆ ಕಾರಣಕ್ಕಾಗಿಯಾದರೂ ಅಂದಿನ ಹಿರಿಯ ಕಾದಂಬರಿಕಾರರನ್ನು ನೆನೆಯಬೇಕಾಗಿದೆ.

ಕನ್ನಡದಲ್ಲಿ ಸ್ವತಂತ್ರ ಕಾದಂಬರಿಯನ್ನು ರಚಿಸಿದ ಶ್ರೇಯಸ್ಸು 'ಲಕ್ಷ್ಮಣಭೀಮರಾವ ಗದಗಕರ' ಎಂಬುವವನದಾಗಿದೆ. ಇವನು 'ಸೂರ್ಯಕಾಂತ' (ಕ್ರಿ.ಶ. ೧೮೯೨) ಎಂಬ ಕಾದಂಬರಿಯನ್ನು ಬರೆದಿದ್ದಾನೆ. ಇದು ಕನ್ನಡದ ಹೊಸ ಕಾದಂಬರಿಯಂತೆ. ಅದರ ಪೀಠಿಕಾ ಭಾಗದಲ್ಲಿ ಹೀಗೆ ಹೇಳಿಕೊಂಡಿದ್ದಾನೆ :

"ಜನರಲ್ಲಿ ಓದುವ ಅಭಿರುಚಿ ಹುಟ್ಟದ ಹೊರತು ಯಾವ ಭಾಷೆಯೂ ಉತ್ತಮ ಸ್ಥಿತಿಯಲ್ಲಿ ಬರಲಾರದು. ಇಂತಹ ಅಭಿರುಚಿಯನ್ನು ಹುಟ್ಟಿಸಬೇಕಾದರೆ ಕಾದಂಬರಿ, ಇತಿಹಾಸ, ನಾಟಕ ಮುಂತಾದ ಪುಸ್ತಕ ಸಾಮಗ್ರಿಯು ಅವಶ್ಯಕವಾಗಿ ಬೇಕಾಗುತ್ತದೆ. ಈ ಕೊರತೆಯನ್ನು ನನ್ನ ಕೈಲಾದಮಟ್ಟಿಗೆ ನಿವಾರಿಸಬೇಕೆಂದು ಆಸೆಯುಳ್ಳವನಾಗಿ ಈ ಚಿಕ್ಕ ಕಾದಂಬರಿಯನ್ನು ಬರೆದಿದ್ದೇನೆ." ಇದರ ಕಥೆ ಹೀಗೆ ಸಂಗ್ರಹಿಸಬಹುದು.

ಬಡವರ ಮನೆಯಲ್ಲಿ ಜನಿಸಿದ ಸೂರ್ಯಕಾಂತನು ಕಾಲಕ್ರಮದಲ್ಲಿ ರಾಜನ

ಆಶ್ರಯವನ್ನು ಹೊಂದಿ ಯುದ್ಧದಲ್ಲಿ ಅವನಿಗೆ ಸಹಾಯ ಮಾಡುತ್ತಾನೆ. ತಾನು ಮನೆಬಿಟ್ಟು ಬಂದು ಹಲವು ದಿನಗಳಾದಾಗ ತಂದೆ-ತಾಯಿಯನ್ನು ಕರೆಸಿಕೊಂಡು ಅವರನ್ನು ತನ್ನ ಬಳಿಯೇ ಸುಖದಲ್ಲಿರುವಂತೆ ನೋಡಿಕೊಳ್ಳುತ್ತಾನೆ. ಈ ಕಾದಂಬರಿಯ ಮುಖ್ಯ ಉದ್ದೇಶ ಒಳ್ಳೆಯ ರೀತಿ ಹಾಗೂ ಸದಾಚಾರ ಬೋಧನೆಗಳೇ ಆಗಿವೆ.

ಈ ಕಾಲದ ಸಾಮಾಜಿಕ ಕಾದಂಬರಿಗಳಲ್ಲಿ ಬೋಳಾರ ಬಾಬೂರಾಯರ ವಾಗ್ದೇವಿ ಯಾದವನ 'ಕಲಾವತಿ ಪರಿಣಯ' ಮುಮ್ಮಡಿ ಕೃಷ್ಣರಾಜರವರ 'ಸೌಗಂಧಿಕಾ ಪರಿಣಯ' (೧೮೭೧) ಗಳನ್ನು ಹೆಸರಿಸಬಹುದು. ರೆಂಟಾಲ ವೆಂಕಟಸುಬ್ಬಯ್ಯನವರ 'ಕೇಸರಿ ವಿಲಾಸ' (೧೮೯೩) ಕೂಡ ಇಲ್ಲಿ ಹೆಸರಿಸಬಹುದಾಗಿದೆ.

ಗುಬ್ಬಿ ಮುರುಗಾರಾಧ್ಯರು 'ಶೃಂಗಾರ ಚತುರ್ಯೋಲ್ಲಾಸಿನಿ' ಎಂಬ ಸ್ವತಂತ್ರ ಕಾದಂಬರಿಯಲ್ಲಿ ಸುಂದರ ವರ್ಣನೆಗಳಿವೆ. ಗುಲವಾಡಿ ವೆಂಕಟರಾಯರ 'ಇಂದಿರಾಬಾಯಿ' ಸ್ವತಂತ್ರ ಕಾದಂಬರಿ. ಮುದ್ದಣನ 'ಗೋದಾವರಿ', ಗೊ. ನ. ಸವಣೂರರ 'ಹೇಮಲತೆ-ಪ್ರಭಾಕರ', ಗೂಳಪ್ಪ ಕೊಟ್ರಪ್ಪ ಅರಳಿಯ 'ಕನ್ನಡ ಶೌರ್ಯಸಾಗರ' ಇಲ್ಲಿ ಉಲ್ಲೇಖಿಸಬಹುದು.

ಶ್ರೀ ಕೇರೂರು ವಾಸುದೇವಾಚಾರ್ಯರ ಹೆಸರು ಚಿರಸ್ಥಾಯಿಯಾಗಿದೆ. ಅವರ 'ಯದುಮಹಾರಾಜ' ಐತಿಹಾಸಿಕ ಕಾದಂಬರಿ ಮೈಸೂರು ರಾಜಮನೆತನಕ್ಕೆ ಸಂಬಂಧಿಸಿದ್ದು. ಆಚಾರ್ಯಶೈಲಿ ಎಂದರೆ ಸಂಸ್ಕೃತ ಭೂಯಿಷ್ಠತೆ. ಉತ್ತರ ಕರ್ನಾಟಕದ ದೇಸೀಯ ಕೆಚ್ಚು ವಿವರಗಳ ಸಜೀವ ಚಿತ್ರಣ, ಸುಂದರವಾದ-ಹರಿತ ಮತ್ತು ಕೊಂಕುಗಳ ವ್ಯಂಗ್ಯಗಳ ಸಮನ್ವಯವಿದೆ.

ಮೈಸೂರಿನ ಅರಸರು ಚಾಮರಾಜ ಒಡೆಯರು. ಅವರ ದಳವಾಯಿಯಾದ ಮಾರನಾಯಕ ತಾನೇ ಒಡೆಯರನ್ನು ಕೊಂದು ಸಿಂಹಾಸನವನ್ನೇರುತ್ತಾನೆ. ಅದೇ ವೇಳೆಗೆ ವಿಜಯನಗರದ ಯದುವಂಶೋತ್ಪನ್ನರಾದ ಯದುರಾಜ ಕೃಷ್ಣರಾಜರು ಬಂದು ಅನೇಕ ತಂತ್ರಗಳಿಂದ ಮಾರನಾಯಕನನ್ನು ಹಣ್ಣು ಮಾಡಿ ಧರ್ಮಪ್ರತಿಷ್ಠಾಪಕರಾಗುತ್ತಾರೆ. ಭದ್ರನಾಯಕ, ನಂಜರಾಜ ಮೊದಲಾದ ಅನೇಕ ಪಾತ್ರಗಳು ಇಲ್ಲಿ ಬರುತ್ತವೆ. "ಭ್ರಾತೃಘಾತಕ ಔರಂಗಜೇಬ" ಎಂಬ ಆಚಾರ್ಯರ ಐತಿಹಾಸಿಕ ಕಾದಂಬರಿಯು ಕಥಾವಸ್ತು ಹಾಗೂ ಪಾತ್ರಗಳ ದೃಷ್ಟಿಯಿಂದ ನಿಜವಾದ ರಸಾನುಭವವನ್ನುಂಟು ಮಾಡುತ್ತದೆ. ಅಣ್ಣ-ತಮ್ಮಂದಿರನ್ನು ಕೊಂದು ತಂದೆ-ತಾಯಿಯ ಕಣ್ಣುಗಳನ್ನು ಬೇಕಾದರು ಕಳೆದು ಸಿಂಹಾಸನವನ್ನೇರುವ ಕ್ರೂರತ್ವ ಮೊಗಲರಿಗೆ ತಲೆತಲಾಂತರದಿಂದ ಬಂದಿದೆ. ಆ ಪರಂಪರೆಯಲ್ಲೇ ಬಂದ ಔರಂಗಜೇಬ ಯಾವ ಕರುಣೆಯೂ ಇಲ್ಲದೆ ತನ್ನ ಭ್ರಾತೃಗಳನ್ನು ಕೊಂದು ಸಿಂಹಾಸನವನ್ನೇರುತ್ತಾನೆ. ಇಲ್ಲಿಯ ವರ್ಣನೆಗೆ ಒಂದು ಉದಾಹರಣೆ :

"ರೋಷನಾರಾ-ಬೇಗಂ ಇಬ್ಬರೂ ಸುಂದರಿಯರು. ಒಬ್ಬಳದು ಕಣ್ಣುಗಳಿಗೆ ತಂಪನ್ನೆರೆಯುವ ಚೆಲುವಾದರೆ ಇನ್ನೊಬ್ಬಳದು ಜ್ವಾಲಾಮುಖಿಯ ಸೌಂದರ್ಯ, ಔರಂಗಜೇಬನ ಪ್ರೇಯಸಿ ಹೀರಾ ಸುಲ್ತಾನಾ. ಬರ್ಹಾಣಪುರದಲ್ಲಿ ಔರಂಗಜೇಬ ಮುರಾದರ ಸಂದರ್ಶನವಾಯಿತು. ಬಿಳೀಗಂಜಿಯ ಚಲ್ಲಣವನ್ನುಟ್ಟು ಮೈಯಲ್ಲಿ ಹಸಿರು ಬಣ್ಣದ ಕಪನಿಯನ್ನು ತೊಟ್ಟು ತಲೆಗೆ ತೆಳುವಾದ ಅರಿವೆಯ ಟೊಪ್ಪಿಗೆಯನ್ನು ಹಾಕಿಕೊಂಡು ಔರಂಗಜೇಬನು ನಿಂತಿದ್ದನು. ಕುದುರೆಯ ಕೊರಳಿಗೆ ಹಾಕಿದ ಮಣಿಯಸರದಂತೆ ವಿಚಿತ್ರವಾಗಿ ಕಾಣುವ ಸ್ಫಟಿಕಮಣಿಯ ಮಾಲೆಯು ಅವನ ವಿಶಾಲವಾದ ಎದೆಯಲ್ಲಿ ಜೋತಾಡುತ್ತಿದ್ದಿತು'. ಹೀಗೆ ಈ ಕಾದಂಬರಿಯ ಶೈಲಿ ಬಹಳ ಸುಂದರವಾಗಿದೆ. ಈ ಕಾಲದ ಪಂ. ಭೀಮಾಜಿ ಹುಲಕವಿಯ 'ನರಗುಂದ ಬಂಡಾಯ' ರಾಮಚಂದ್ರತ್ರ್ಯಂಬಕ ಕರ್ಪೂರರ 'ಪದ್ಮಿನಿ, 'ಮಹಾರಾಣಿ ಲಕ್ಷ್ಮೀಬಾಯಿ, ಶಂಕರ ಅಣ್ಣಾಜಿ ಕುಲಕರ್ಣಿಯ 'ಜಕಣಾಚಾರ್ಯ' ಮುದುವೀಡು ಕೃಷ್ಣರಾಯರ 'ಚಿತ್ತೂರು ಮುತ್ತಿಗೆ' ಎಂಬ ಐತಿಹಾಸಿಕ ಕಾದಂಬರಿಗಳ ಬಗೆಗೆ ಸಂಶೋಧನೆ ಮತ್ತು ವಿಸ್ತೃತ ಅಧ್ಯಯನಗಳಾಗಬೇಕಾಗಿದೆ.

ಈ ಕಾಲದ ಕಾದಂಬರಿಕಾರರಲ್ಲಿ ಹೆಸರಾದವರು ಬಿ. ವೆಂಕಟಾಚಾರ್ಯ ಮತ್ತು ಗಳಗನಾಥರು. ಗಳಗನಾಥರ ೬೦ ಕಾದಂಬರಿಗಳಲ್ಲಿ ಕೆಲವು ಕಾದಂಬರಿಗಳು ಸ್ವತಂತ್ರವಾದವು.

೧೮೯೮ ರಲ್ಲಿ ಬಂದ ಪದ್ಮನಯಾನಾ ಅವರ ಸ್ವತಂತ್ರ ಕಾದಂಬರಿ. ಕುಮುದಿನಿ, ಸತ್ವಸಾರ, ಮಾಧವ ಕರುಣಾವಿಲಾಸ, ಸ್ವರಾಜ್ಯ ಸುಗಂಧ, ದುರ್ಗದ ಬಿಚ್ಚುಗತ್ತಿ, ಕನ್ನಡಿಗರ ಕರ್ಮಕತೆ ಹೆಸರಿಸತಕ್ಕವಾಗಿವೆ.

ಗಳಗನಾಥರ 'ಕುಮುದಿನಿ' ಐತಿಹಾಸಿಕ ಕಾದಂಬರಿಗೆ ಮೂಲ ಕಥಾವಸ್ತು ವಿಜಯನಗರದ ಸಾಮ್ರಾಜ್ಯ ಇತಿಹಾಸವೇ ಆಗಿದೆ. ಕ್ರಿ.ಶ. ೧೬೧೬ ನೆಯ ಇಸವಿಯ ಡಿಸೆಂಬರ್ ತಿಂಗಳ ೧೨ನೆಯ ತಾರೀಖಿನಂದು ಕೋಚಿನ ಪಟ್ಟಣದಿಂದ ಮ್ಯಾನುಯೆಲ್ ಬರಡಾನ್ ಎಂಬ ಪೋರ್ಚುಗೀಸನು ಬರೆದ ಪತ್ರವು ಲಿಸಬನ್ನಿನ ಹಳೆಯ ಪತ್ರಾಗಾರದಲ್ಲಿ ದೊರೆತಿದ್ದು ಅದರ ಮುಖ್ಯಾಂಶವನ್ನು ನಿವೆಲ್ಲರು ಕೊಟ್ಟಿರುವುದು ಇದಕ್ಕೆ ಆಧಾರ.

**ಕುಮುದಿನಿಯ ಕತೆ ಹೀಗಿದೆ :**

ಸಾಯುವಂತಿದ್ದ ದೊರೆ ವೆಂಕಟಪತಿರಾಯನು ಪಟ್ಟಕ್ಕೆ ತನ್ನ ತಮ್ಮನ ಮಗ ಚಿಕ್ಕರಾಯನೇ ಅರ್ಹನೆಂದ. ರಾಣಿಬಾಯಮ್ಮ ತನಗೆ ಮಕ್ಕಳಿಲ್ಲದಿದ್ದರೂ ಮಗನಿದ್ದಾನೆಂದು ಸಾಧಿಸಿ ತೋರುವಲ್ಲಿ ವಿಫಲಳಾದಳು. ಬಾಯಮ್ಮನ ತಂದೆ ಜಗರಾಯ ಸಿಂಹಾಸನವನ್ನೇರಿದ ಚಿಕ್ಕರಾಯನನ್ನು ಕುತಂತ್ರದಿಂದ ಸೆರೆಗೆ ಹಾಕಿಸಿದಾಗ ಎಚ್ಚಮನಾಯಕನು ಚಿಕ್ಕರಾಯನಿಗೆ ಪಟ್ಟಕಟ್ಟುತ್ತಾನೆ. ಜಗರಾಯನನ್ನು

ಸೋಲಿಸಿದ ಕಾದಂಬರಿಯ ನಾಯಕಿ ಕುಮುದಿನಿ ಎಚ್ಚಮನಾಯಕರ ಶೃಂಗಾರ ಪ್ರಸಂಗ, ಎಚ್ಚಮ ಚಾಂದ ಖಾನರ ಸ್ನೇಹ ಇವು ಈ ಕಾದಂಬರಿಯಲ್ಲಿ ಬಂದಿವೆ. ಕುಮುದಿನಿಯಲ್ಲಿ ಬರುವ ಕರುಣಾಜನಕ ಪ್ರಸಂಗದ ವರ್ಣನೆ ಹೀಗಿದೆ :

ಅಂದು ಮುಂಜಾನೆ ರಂಗರಾಯನು (ಚಿಕ್ಕರಾಯ) ತನ್ನ ದುರವಸ್ಥೆಯನ್ನು ಕುರಿತು ಚಿಂತಿಸುತ್ತಾ ಕುಳಿತಿದ್ದನು. ಹೆಂಡತಿ–ನಾಲ್ಕು ಜನ ಮಕ್ಕಳು, ಹಿರಿಯಮಗನ ಹೆಂಡತಿ ಎಲ್ಲರೂ ಚಿಂತೆ ನಿರುತ್ಸಾಸಗಳಿಂದಲೇ ಇದ್ದರು. ರಂಗರಾಯನ ಚಿಕ್ಕಮಗಳು ಎರಡು ವರ್ಷದ ನಾಗಲಾಂಬಿಕೆ ಮಾತ್ರ ಏನೂ ಅರಿಯದೆ ಉಲ್ಲಾಸದಿಂದ ನಗುತ್ತಾ ಕಲೆಯುತ್ತ ಆನಂದಿಂದ ಆಟವಾಡುತ್ತಿದ್ದಳು.

ರಾಣಿಯು ಈ ಕೂಸಿನ ಮನೋಹರ ಕುಣಿತವನ್ನು ನೋಡುವಾಗ ಆಕೆಯ ಮನಸ್ಸಿನಲ್ಲಿ ಕೂಸಿನ ಕಾಲೊಳಗೆ ಒಂದಾದರೂ ವಡವೆಯಿಲ್ಲವೆಂಬ ಅಲ್ಪವಾದ ದುಃಖ ಹುಟ್ಟಲು ಆ ಅಲ್ಪದುಃಖವೇ ದುರ್ದೈವದಿಂದ ಪರ್ವತಾಕಾರವನ್ನು ಧರಿಸಿ ನಿಂತಂತೆ ಖಡ್ಗಪಾಣಿಯಾದ ಚಿನ್ನ ಓಬಲನು ಅವರೆದುರು ನಿಂತುಕೊಂಡನು.

ಚಿನ್ನ ಓಬಲನ ಆಜ್ಞೆಯನ್ನು ಕೇಳಿ ಎಲ್ಲರೂ ಆಘಾತಗೊಂಡರು. ಅವನ ಕ್ರೂರ ರೂಪವನ್ನು ಕಂಡು ನಾಗಲಾಂಬಿಕೆ ಚಿಟ್ಟನೆ ಚೀರಿ ತಾಯಿಯನ್ನು ಅಪ್ಪಿಕೊಂಡಳು. ತನ್ನ ಅಪರಾಧವೇನೂ ಇಲ್ಲ. ತನಗೆ ರಾಜ್ಯವೇ ಬೇಡ ಎಂದು ರಂಗರಾಯನು ಎಷ್ಟು ಪರಿಪರಿಯಿಂದ ದೈನ್ಯವಾಗಿ ಹೇಳಿದರೂ ಚಿನ್ನ ಓಬಲ ಒಪ್ಪಲಿಲ್ಲ.

ಹೆಂಗಸಿನಂತೆ ಪ್ರಾಣಭಿಕ್ಷೆ ಬೇಡುವ ರಂಗರಾಯ ಅತಿ ದಯನೀಯನಾಗಿದ್ದಾನೆ. ಚಿನ್ನ ಓಬಲನದು ಒಂದೇ ಮಾತು "ಆತ್ಮಹತ್ಯೆ ಮಾಡಿಕೊ, ಇಲ್ಲವಾದರೆ ನಾನೇ ನಿಮ್ಮನ್ನು ಕೈಮುಟ್ಟಿಕೊಲ್ಲಬೇಕಾಗುವುದು".

ಕೊನೆಗೆ ನಿರುಪಾಯನಾದ ರಂಗರಾಯ ಆತ್ಮಹತ್ಯೆಗೆ ಸಿದ್ಧನಾದ. ಆತನ ಪತಿವ್ರತೆ ರಾಣಿ ವೈಧವ್ಯದ ಕಲಂಕ ಹತ್ತದಂತೆ ಮೊದಲು ತನ್ನನ್ನು ಸಂಹರಿಸಬೇಕೆಂದಳು. ಚಿಕ್ಕನಾಗಲಾಂಬಿಕೆ ತಾಯಿಯನ್ನು ಗಟ್ಟಿಯಾಗಿ ಅಂಟಿಕೊಂಡಳು. ಅವಳಿಗಿಂತ ತುಸು ದೊಡ್ಡವಳಾದ ಮುದ್ದುರಂಗಮ್ಮನು ಗಾಬರಿಯಾಗಿ ಬೆದರಿದ ಚಿಗುರೆಮರಿಯಂತೆ ತನ್ನ ದೊಡ್ಡ ಕಣ್ಣುಗಳನ್ನು ತಿರುಗಿಸುತ್ತಾ ಅವ್ವನ ಹತ್ತಿರ ಹೋಗಲೋ ಅಪ್ಪನ ಹತ್ತಿರ ಹೋಗಲೋ ಅಣ್ಣನ ಹತ್ತಿರ ಹೋಗಲೋ ಅತ್ತಿಗೆಯ ಹತ್ತಿರ ಹೋಗಲೋ ಎಂದು ಯೋಚಿಸುತ್ತಿದ್ದಳು.

ರಾಜನು ರಾಣಿಯನ್ನು ಖಡ್ಗದಿಂದ ಕೊಂದು ಹಾಕಿದ. ಮುದ್ದು ರಂಗಮ್ಮ ತಾಯಿಯ ಈ ಅವಸ್ಥೆಯನ್ನ ನೋಡಿ ಬಿರಿಬಿರಿ ಕಣ್ಣುಬಿಡುತ್ತಾ ಅಂಜಿಕೆಯಿಂದ ಗದಗದ ನಡುಗುತ್ತಾ ನಿಂತಿದ್ದಳು.

ರಂಗರಾಯನ ಕ್ರೂರವಾದ ಖಡ್ಗವು ಅಪ್ಪಾ ಬೇಡ ಬೇಡವೆಂದು ಕೈಮರೆ ಮಾಡಿ

ಕೂಗುವ ಕೂಸಿನ ರೂಪವನ್ನು ನಿರಾಯಾಸದಿಂದ ನೆಲಕ್ಕೆ ಕೆಡವಿತು. ರಂಗರಾಯ ಕೊನೆಗೆ ಎಲ್ಲರನ್ನೂ ನಿರ್ದಯದಿಂದ ಕೊಂದರೂ ಚಿಕ್ಕ ಮಗುವನ್ನು ಮಾತ್ರ ಕೊಲ್ಲಲಾರದೆ 'ಎಲಾ ದುಷ್ಟ ಓಬಲಾ ! ನಿನ್ನ ಬಯಕೆಯು ಪೂರ್ಣವಾಯಿತೆ ? ಈ ಕೂಸಾದ ನಾಗಲಾಂಬಿಕೆಯನ್ನು ಕೊಲ್ಲುವುದು ನನ್ನಿಂದಾಗದ್ದರಿಂದ ಆಕೆಯನ್ನು ಕ್ರೂರವಾದ ನಿನ್ನ ಪಾಲಿಗೆ ಬಿಟ್ಟಿದ್ದೇನೆ ಎಂದು ತನ್ನನ್ನು ಇರಿದುಕೊಂಡು ಪ್ರಾಣಬಿಟ್ಟ. ಮಗ ವೀರನರಸಿಂಗ ತನ್ನ ಹೆಂಡತಿಯನ್ನು ಕೊಂದು ತಾನೂ ಆತ್ಮಹತ್ಯೆ ಮಾಡಿಕೊಂಡು, ರಕ್ತದಲ್ಲಿ ಮುಣುಗಿದ. ಒಂದು ಕೂಸು ಮಾತ್ರ ಅಂತಕ ಸ್ವರೂಪನಾದ ಓಬಲನ ಎದುರಿಗೆ ಕಣ್ಣುಬಿಡುತ್ತಾ ಕುಳಿತಿತ್ತು. ಅದನ್ನುದಯಾ ಶೂನ್ಯವಾದ ಓಬಲನು ಎಗ್ಗಿಲ್ಲದೆ ತುಂಡರಿಸಿ ಅರಸು ಮನೆತನದವರಾರೂ ಉಳಿಯದಂತೆ ಮಾಡಿ ಸೆರೆಮನೆಯಿಂದ ಹೊರಟುಹೋದನು. ಇಂತಹ ಹೃದಯಸ್ಪರ್ಶಿಯಾದ ಸನ್ನಿವೇಶಗಳು ಗಳಗನಾಥರ ಪ್ರತಿಭಾ ಲೇಖನಿಯಿಂದ ಮೂಡಿಬಂದು ಕಾದಂಬರಿ ರೂಪಗಳಲ್ಲಿ ಅಡಗಿ ಕುಳಿತಿದೆ.

ಅಕಬರನನ್ನು ಅನೇಕ ಬಾರಿ ಸೋಲಿಸಿದರೂ ಕೊನೆಗೆ ಕಾಡು ಮೇಡುಗಳಲ್ಲಿ ಅಲೆವ ಮಹಾರಾಣಾ ಪ್ರತಾಪಸಿಂಹನ ಕಥೆ ಸತ್ವಸಾರ ಕಾದಂಬರಿಯಲ್ಲಿದೆ. ಕನ್ನಡಿಗರ ಕರ್ಮಕತೆ ಮಾಧವ ಕರುಣಾವಿಲಾಸ ಕಾದಂಬರಿಗಳು ಕೈಲಿಹಿಡಿದು ಓದಿ ಮುಗಿಸಿದಾಗ ಹೊಸ ಅನುಭವ ಇಂದಿಗೂ ನೀಡುತ್ತದೆ. ಇದೇ ಅವಧಿಯಲ್ಲಿ ಉತ್ತರ ಕರ್ನಾಟಕದ ಶ್ರೀ ಗ. ಹು. ಹೊನ್ನಾಪುರ ಮಠರವರು ಅನೇಕ ಕಾದಂಬರಿಗಳನ್ನು ರಚಿಸಿದ್ದರೂ ೧೯೧೮ ರಲ್ಲಿ ಬಂದ 'ಅದ್ಭುತ ಪ್ರೇಮ' ಐತಿಹಾಸಿಕ ಕಾದಂಬರಿಯಾಗಿದೆ. ಅಕಬರನ ಕಾಲಕ್ಕಿದ್ದ ಫೈಜಿ ಎಂಬ ಮಹಮದೀಯ ಪಂಡಿತ ಮತ್ತು ಸುಶೀಲೆ ಎಂಬ ಹಿಂದು ಸ್ತ್ರೀಯ ಬಂಧು-ಭಗಿನಿ ಪ್ರೇಮ ರಜಪೂತ ಮಾನಸಿಂಹನನ್ನು ಮದುವೆಯಾದ ಸುಶೀಲೆಯ ಕಥೆ ಇದರ ವಸ್ತುವಾಗಿದೆ. ಪಂಡಿತ ಕೇಶವಶರ್ಮ ಗಲಗಲಿ ಈ ಕಾಲದಲ್ಲಿ 'ನೂರಜಹಾನ' ಎಂಬ ಐತಿಹಾಸಿಕ ಕಾದಂಬರಿ ಬರೆದರು. ಮುಂದೆ ಹೊಸ ಯುಗದಲ್ಲಿ ಅನೇಕ ಕಾದಂಬರಿಕಾರರು ಆಗಿ ಹೋದರು. ಅವರಲ್ಲಿ ಮುಖ್ಯರಾದವರು ಕರ್ನಾಟಕದ ಪ್ರಾಚೀನ ರಾಜಮನೆತನವಾದ ಕದಂಬರನ್ನು ಕುರಿತು ದೇವುಡುರವರು ಬರೆದ 'ಮಯೂರ' ಕಾದಂಬರಿ ಮುಖ್ಯವಾದುದು.

ಕಾದಂಬರಿ ಸಾರ್ವಭೌಮರೆಂದು ಖ್ಯಾತರಾದ ಅ.ನ. ಕೃಷ್ಣರಾಯರು ಹಾಗೂ ಇತಿಹಾಸ ತಜ್ಞರಾದ ಕೊರಟಿ ಶ್ರೀನಿವಾಸರಾಯರ ವಿಜಯನಗರ ಸಾಮ್ರಾಜ್ಯ ಮಾಲಿಕೆಯ ಐತಿಹಾಸಿಕ ಕಾದಂಬರಿಗಳು ಪ್ರಮುಖವಾದ ಆಯಾಮವನ್ನು ಪಡೆದಿವೆ. ಐತಿಹಾಸಿಕ ಕಾದಂಬರಿ ಕ್ಷೇತ್ರದಲ್ಲಿ ಪಳಗಿದ ತ. ರಾ. ಸು. ರವರು ಚಿತ್ರದುರ್ಗದ ಇತಿಹಾಸವನ್ನು ಕುರಿತು ಕಂಬನಿಯಕುಯಿಲು, ರಕ್ತರಾತ್ರಿ, ಪಂಜರದ ಪಕ್ಷಿ, ತಿರುಗು ಬಾಣ, ದುರ್ಗಾಸ್ತಮಾನ ಕಾದಂಬರಿಗಳನ್ನು ಬರೆದು ಪ್ರಖ್ಯಾತರಾದರು. ಪತ್ತೇದಾರಿ

ಕಾದಂಬರಿಗಳನ್ನು. ಅನೇಕ ಕಾದಂಬರಿಗಳನ್ನು ಬರೆದ ಟಿ. ಕೆ. ರಾಮರಾವ್‌ರವರು 'ಜಗದೇವರಾಯ' ಎಂಬ ಕಾದಂಬರಿಯನ್ನು ರಚಿಸಿದರು. ವೀರಕೇಸರಿ ಸೀತಾರಾಮಶಾಸ್ತ್ರಿಯವರ 'ದೌಲತ್' ಟಿಪ್ಪುವಿನ ಕತೆಯನ್ನು 'ನಗರದರಾಣಿ' ವೀರಮ್ಮಾಜಿಯ ಕತೆ ಒಳಗೊಂಡಿದೆ. ಎಸ್. ವಿ. ಶ್ರೀನಿವಾಸರಾವ್‌ರವರ ಪ್ರೌಢಪ್ರತಾಪಿ ವೀರರಾಜೇಂದ್ರಗೆ –ನೃಪತುಂಗ ಪ್ರಶಸ್ತಿ ಬಂದಿವೆ. ಗಾತ್ರದಲ್ಲಿ ಬೃಹತ್ತಾದ, ಕೊಡಗಿನ ರಾಜಮನೆತನವನ್ನು ಕುರಿತು ಮಾಸ್ತಿಯವರು ಬರೆದ ಚಿಕ್ಕವೀರರಾಜೇಂದ್ರ ಹಾಗೂ ಕೆಳದಿ ನಾಯಕರನ್ನು ಕುರಿತು ಬರೆದ 'ಚನ್ನಬಸವ ನಾಯಕ' ಕಾದಂಬರಿಗಳು ಕನ್ನಡ ಸಾಹಿತ್ಯದ ಮೇರು ಕೃತಿಗಳೆನಿಸಿಕೊಂಡಿವೆ. ನಿರಂಜನರ ಅಪರಂಪರ, ಕಲ್ಯಾಣಸ್ವಾಮಿ ಕಟ್ಟೀಮನಿಯವರ ಕಾದಂಬರಿಗಳು ಈ ಕಾಲದ ಪ್ರಮುಖ ಕೃತಿಗಳಾಗಿವೆ.

ಸಿ. ಎನ್. ಜಯಲಕ್ಷ್ಮಿದೇವಿಯವರ 'ಶಪ್ತವ್ಯಾಪಿ' ಹಾಗೂ ನೀಳಾದೇವಿಯವರು ಬರೆದ ರಾಮಾನುಜಾಚಾರ್ಯರ ಬಗೆಗಿನ ಕಾದಂಬರಿಗಳು ಐತಿಹಾಸಿಕ ಆಯಾಮವನ್ನು ಒಳಗೊಂಡಿವೆ. ಇದೇ ಅವಧಿಯಲ್ಲಿ ಕೆ. ವಿ. ಅಯ್ಯರ್‌ರವರು ಶಾಂತಲೆಯನ್ನು ಕುರಿತು ಶಾಂತಲಾ ಕಾದಂಬರಿಯನ್ನು ಬರೆದರು ರೋಚಕ ಸನ್ನಿವೇಶಗಳೊಂದಿಗೆ ಮೂಡಿಬಂದ ಈ ಕಾದಂಬರಿಯಲ್ಲಿ ಕಲ್ಪನೆ ಹಾಗೂ ಕುತೂಹಲ ಓದುಗರಿಗೆ ತಣಿವುವುಂಟು ಮಾಡುತ್ತದೆ. ಶಿವಗಂಗೆಯ ಬೆಟ್ಟದಿಂದ ಬಿದ್ದ ಶಾಂತಲೆ ಲಕ್ಷ್ಮಿಯನ್ನು ಆವರಿಸುವುದು ಈ ಕಾದಂಬರಿಯ ಹೈಲೈಟ್.

ಕನ್ನಡದ ಕಾದಂಬರಿಗಳಲ್ಲಿ ಬೃಹತ್ ಐತಿಹಾಸಿಕ ಕಾದಂಬರಿ ಎಂಬ ಕೀರ್ತಿಗೆ ಪಾತ್ರವಾದುದು ಶ್ರೀ ಸಿ. ಕೆ. ನಾಗರಾಜರಾವ್ ಅವರ 'ಪಟ್ಟಮಹಾದೇವಿ ಶಾನ್ತಲದೇವಿ.'

ಅನೇಕ ವರ್ಷಗಳ ಅಧ್ಯಯನದಿಂದ ಹೊಯ್ಸಳರಾಜರನ್ನು ಕುರಿತಂತೆ ಬರೆಯಲಾದ ಈ ಕಾದಂಬರಿಯಲ್ಲಿ ಪ್ರತಿಯೊಂದಕ್ಕೂ ಆಧಾರ, ಸಾಕ್ಷಿ, ಶಾಸನ, ದಾಖಲೆಗಳನ್ನು ನೀಡುತ್ತಾ ರಾಯರು ಓದುಗರ ಕುತೂಹಲವನ್ನು ತಣಿಸುತ್ತಾರೆ. ಇಲ್ಲಿಯ ವರ್ಣನೆಗಳು ಪಾತ್ರಗಳು ಕಥಾವಸ್ತು ಅದ್ಭುತವಾಗಿದೆ. ಮಹಾರಾಣಿ ಶಾನ್ತಲೆ ಸಲ್ಲೇಖನ ವ್ರತ ಕೈಗೊಂಡು ಮಡಿಯುವುದನ್ನು ಶಾಸನಗಳ ಆಧಾರದಿಂದ ನಿರೂಪಿಸಲಾಗಿದೆ.

ಪಡಬಾರದ ಪಾಡುಪಟ್ಟು ಕೊನೆಗೆ ಯಾರೂ ಮುಂದೆ ಬರದಾದಾಗ ತಾವೇ ನಿಂತು ಪ್ರಕಟಿಸಿದ ಲೇಖಕರ ಧೈರ್ಯ ಮೆಚ್ಚ ತಕ್ಕದ್ದೇ ಆಗಿದೆ. ಇಲ್ಲಿರುವ ವಿಷಯ ವೈಖರಿ ಅನೇಕ ಸಂಶೋಧನಾ ಗ್ರಂಥಗಳಿಗೆ ಆಕರವಾಗಬಲ್ಲದು.

ಇದು ೧೧ನೆಯ ಶತಮಾನದ ಕಡೆಯ ದಶಕದಲ್ಲಿ ಆರಂಭವಾಗಿ ೧೨ನೆಯ ಶತಮಾನದ ನಾಲ್ಕನೆಯ ದಶಕ ಆರಂಭದವರೆಗಿನ ಗತಕಾಲದ ಜನಜೀವನವನ್ನು ಸಮಗ್ರವಾಗಿ ಬಿಂಬಿಸುವ ಕಾಲಮಾನದ ದೃಷ್ಟಿಯಿಂದ ಒಂದು ಬಗೆಯ ವಾತಾವರಣ ಭಾವನೆಗಳಿಗೆ ಸೀಮಿತವಾದ ವಸ್ತುವುಳ್ಳ ಕೃತಿಯಾದರೂ ಸಾರ್ವಕಾಲಿಕವಾದ,

ಶಾಶ್ವತವಾದ ವಿಶ್ವವ್ಯಾಪಿಯಾದ ನಿಜಮಾನವೀಯ ಮೌಲ್ಯಗಳತ್ತ ಸಮಕಾಲೀನ ಪ್ರಜ್ಞೆಯನ್ನು ಒಳಗೊಂಡಿದೆ. ಮೂರ್ತಿದೇವಿ ಪುರಸ್ಕಾರವನ್ನು ಪಡೆದ ಈ ಕಾದಂಬರಿಯಲ್ಲಿ ಶಾನ್ತಲದೇವಿಯ ವರ್ಣನೆ ಶಾಸನಗಳಲ್ಲಿರುವಂತೆ ವಿಸ್ತಾರವಾಗಿ ಚಿತ್ರಿಸಲಾಗಿದೆ.

ಶಾಂಲತಾದೇವಿ ಹೀಗೆದ್ದಳಂತೆ :

ಸಕಳಕಳಾಗಮಾನೂನೆ । ಅಭಿನವ ರುಗ್ಮಿಣೀದೇವಿ । ಪತಿಹಿತೆ ಸತ್ಯಭಾಮೆ । ವಿವೇಕೈಕ ಬೃಹಸ್ಪತಿ । ಪ್ರತ್ಯುತ್ಪನ್ನ ವಾಚಸ್ಪತಿ, ಮುನಿಜನವಿನೇಯ ಜನವಿನೀತೆ । ಪತಿವ್ರತಾ ಪ್ರಭಾವ ಸಿದ್ಧ ಸೀತೆ। ಶುದ್ಧ ಚರಿತ್ರೆ। ಚತುಸ್ಸಯ ಸಮುದ್ಧರಣಕರಣ ಕಾರಣೆ। ಮನೋಜರಾಜವಿಜಯಪತಾಕೆ, । ನಿಜಕಳಾಭ್ಯುದಯ ದೀಪಿಕೆ । ಗೀತವಾದ್ಯನೃತ್ಯ ಸೂತ್ರಧಾರೆ। ಜನಸಮಯ ಸಮುದಿತ ಪ್ರಕಾರೆ। ಮಹಾರಾಭಯ ಬೇಷಜಶಾಸ್ತ್ರದಾನ ವಿನೋದೆ । ಸಕಳ ಗುಣಗಣಾನೂನೆ । ಬ್ರತಗುಣ ಶೀಳೆ । ಲೋಕ್ಯಕ ವಿಖ್ಯಾತೆ । ಪುಣ್ಯೋಪಾರ್ಜನಕರಣ ಕಾರಣೆ । ಸೌತಿಗಂಧ ಹಸ್ತಿ । ಜಿನಧರ್ಮಕಥಾಕಥನ ಪ್ರಮೋದೆ। ಜಿನಧರ್ಮ ನಿರ್ಮಳೆ। ಅಗಣ್ಯ ಲಾವಣ್ಯ ಸಂಪನ್ನೆ। ಜಿನಗಂಧೋದಕ ಪವಿತ್ರೀತ್ರಿ ತೋತ್ತ ಮಾಂಗೆ । ಮೃದುಮಧುರ ವಚನ ಪ್ರಸನ್ನೆ । ಪಂಚಾಲಂಕಾರ (ವಾಸ್ತು, ಶಿಲ್ಪ, ಸಾಹಿತ್ಯ, ಚಿತ್ರ, ಸಂಗೀತ–ಇವು ಲಲಿತಕಲಾ ಪಂಚಕ) ಪಂಚರತ್ನ ಯುಕ್ತೆ। ಸಂಗೀತ ವಿದ್ಯಾ ಸರಸ್ವತಿ। ಅಭಿನವಾರುಂಧತಿ। ಪತಿಹಿತಭ್ರತೆ ಸರ್ವಕಳಾನ್ವಿತೆ। ಸರ್ವಮಂಗಳ ಸ್ಥಿತಯುತೆ । ಸರ್ವಜೀವಹಿತೆ । ದಯಾರಸಾಮೃತ ಪೂರ್ಣೆ । ಅನೂನದಾನಾಭಿಮಾನಿ । ವಿಚಿತ್ರ ನರ್ತನ ಪ್ರವರ್ತನ ಪಾತ್ರ ಶಿಖಾಮಣಿ । ಸಕಳ ಸಮಯರಕ್ಷಾಮಣಿ। ಸಂಗೀತ  ಸುಗತ ಸರಸ್ವತಿ। ವಿಶುದ್ಧಾಚಾರವಿಮಳೆ। ಸಂಗೀತ ವಿದ್ಯಾಸರಸ್ವತಿ। ಬಿಣ್ಪೆಂದಮೆ ಭೂಮಿ ದೇವತೆ। ರಣವ್ಯಾಪಾರದೊಳ್ ಖಳ್ಗ ದೇವತೆ। ಜನಕೆಲ್ಲಂ ಪುಣ್ಯದೇವತೆ । ವಿದ್ಯೆಯೊಳ್ ವಾಗ್ದೇವತೆ । ಸಕಳ ಕಾರ್ಯೋದ್ಯೋಗ ದೊಳ್ ಮಂತ್ರದೇವತೆ।

ಸಾಮಾನ್ಯ ಹೆಗ್ಗಡೆಯ ಮಗಳು ನಿರೀಕ್ಷೆಗೆ ಮೀರಿ ಪಟ್ಟಮಹಾದೇವಿಯಾದಳು ಶಾನ್ತಲೆ. ಕ್ರಿ.ಶ. ೧೯೧೫ ರಲ್ಲಿ ಚಿತ್ರದುರ್ಗದಲ್ಲಿ ಹುಟ್ಟಿದ ಶ್ರೀ ಸಿ. ಕೆ. ನಾಗರಾಜರಾಯರು ಅನೇಕ ಕೃತಿಗಳನ್ನು ಅನುವಾದಿತ ಕಾದಂಬರಿಗಳನ್ನು ರಚಿಸಿದ್ದಾರೆ. ೨೦೭೮ ಮುದ್ರಿತ ಪುಟಗಳ ಈ ಕಾದಂಬರಿಯಲ್ಲಿ ಶಾಂತಲಾದೇವಿಯ ಬಾಳಿನ ಸುತ್ತ ಬಾಲ್ಯದಿಂದ ಸಾಯುವವರೆಗೆ ಆಗಿನ ಕಾಲದ ಕಲೆ, ಸಂಸ್ಕೃತಿ, ಶಿಲ್ಪ, ಧರ್ಮ, ಸಾಹಿತ್ಯ ಜನಜೀವನ, ರಾಜಕೀಯ ಹೋರಾಟ, ಆರ್ಥಿಕ ಪರಿಸ್ಥಿತಿ, ಕುತಂತ್ರಗಳು, ಮೇಲಾಟ, ಸಂಚು, ಮಾನವೀಯ ಮೌಲ್ಯಗಳ, ದೌರ್ಬಲ್ಯಗಳ ಸೆಳೆತ, ಪಿಸುಣತನ, ರಾಷ್ಟ್ರದ್ರೋಹ, ರಾಷ್ಟ್ರನಿಷ್ಠೆ, ವ್ಯಕ್ತನಿಷ್ಠೆ, ಯುದ್ಧಗಳು, ಸ್ವಾರ್ಥ, ಮೂಢನಂಬಿಕೆ ಹೀಗೆ ಹಲವು ಮುಖಗಳು ಹರಡಿವೆ. ಶಾಂತಲೆಯು ಸಲ್ಲೇಖನದಿಂದ ಸಾಯುವುದನ್ನು

ಕಾದಂಬರಿಕಾರರು ಶಾಸನದ ಆಧಾರದಿಂದ ಪ್ರಸ್ತುತಪಡಿಸುತ್ತಾರೆ. ಅವರ ಶೈಲಿಗೆ ಒಂದು ಉದಾಹರಣೆ.

'ಮಗನ ಹಾಗೆ ನೋಡಿಕೊಳ್ಳಲು ನೀವಿರುವಾಗ ಅವನಿಗೇನು ಕಡಿಮೆ ?'ಎಂದ ವಿನಯಾದಿತ್ಯ.

'ನಾನಿರುವವರೆಗೆ ಆಮೇಲೆ ?'

'ಆಮೇಲಿನ ಮಾತು ಈಗೇಕೆ ಅವ್ವ ' ಎಂದ ವಿನಯಾದಿತ್ಯ.

ಅವನ ಕೊರಳ ಶೆರೆ ಏಕೋ ಉಬ್ಬಿ ಬಂತು.

'ಹಾಗೆಯೇ ಆಗಲಿ ಈಗಿನ್ನು ಮತ್ತೆ ಆ ಮಾತು ಬೇಡ. ಶಿವರಾತ್ರಿ ಕಳೆವ ಸಮಯದಲ್ಲಿ ನಾನು ಉದಯರಾಗ ಹಾಡಿದೆನಲ್ಲವೆ ? ಈಗ ಈ ಶಾರದೆಯ ಸನ್ನಿಧಿಯಲ್ಲಿ ಸಂಧ್ಯಾರಾಗ ಹಾಡಬೇಕೆಂದು ಮನಸ್ಸು ಹಾತೊರೆಯುತ್ತಿದೆ. ಹಾಡಲೆ ? ಶಿವಕ್ಷೇತ್ರಕ್ಕೆ ಬಂದು ನಿಮಗೆಲ್ಲ ಕತ್ತಲಾದ ಮೇಲೆಯೆ ಸಂಜೆಯ ಆರೋಗಣೆಯಾಗುತ್ತದೆ. ಅದಕ್ಕೆ ತಡವಾಗುತ್ತದೆಯೆಂದರೆ ನಾನು ಹಾಡುವುದಿಲ್ಲ.'

"ನಮಗೆ ತಡವಾಗುವುದು ಹಾಗಿರಲಿ, ನೀವೆ ಈಗ ಐದು ದಿವಸದಿಂದ ಉಪವಾಸ. ಆ ಉಪವಾಸದಲ್ಲಿ ಹಾಡುವುದಾಗಿ ಹೇಳುವಾಗ' ಎಂದು ಚಟ್ಟಲದೇವಿ ತನ್ನೊಳಗೆ ಅದುಮಿಕೊಂಡಿದ್ದ ವಿಷಯವನ್ನು ಹೊರಗೆಡಹಿದಳು.

ಏನು ಅಮ್ಮಾಜಿ, ಐದು ದಿನದಿಂದ ನೀನು ಉಪವಾಸವೆ ? ಎಂದು ಆಶ್ಚರ್ಯವಾಗಿ ಮಾಚಿಕಬ್ಬೆ ಕೇಳಿದಳು.

"ಇದೊಂದು ದಿವಸ ಅವ್ವ, ಇಂದು ಶಾರದೆಯ ಧ್ಯಾನ ಮಾಡಿದರೆ ಮುಗಿಯಿತು. ಆಮೇಲೆ ನಾನು ಯಾವ ನೇಮಕ್ಕೂ ಅಂಟಿಕೊಂಡಿರುವುದಿಲ್ಲ" ಎಂದಳು ಶಾಂತಲದೇವಿ. 'ಸರಿ ಹಾಗಾದರೆ ಹಾಡಿ ಮುಗಿಸು' ಆಯಾಸ ಮಾಡಿಕೊಳ್ಳಬೇಡ ಎಂದಳು ಮಾಚಿಕಬ್ಬೆ '.

ಶಾನ್ತಲದೇವಿ ಪದ್ಮಾಸನ ಹಾಕಿ ದಕ್ಷಿಣಕ್ಕೆ ಮುಖಮಾಡಿ ಕುಳಿತು ಶಾರದಾ ಸ್ತುತಿಯನ್ನು ಹಾಡತೊಡಗಿದಳು. ನಿರರ್ಗಳವಾಗಿ ಅವಳ ಶಾರೀರದಿಂದ ಹೊಮ್ಮಿ ಬರುತ್ತಿದ್ದ ನಾದ ಅಲ್ಲೆಲ್ಲ ಪಸರಿಸಿತು. ಸನಿಯದಲ್ಲೇ ಇದ್ದ ಬೆಟ್ಟಕ್ಕೆ ಬಡಿದು ಪ್ರತಿಧ್ವನಿತವಾಗುತ್ತಾ ಬಂದಿತು. ಆ ಆನಂದದಲ್ಲಿ ಎಲ್ಲರೂ ಮೈಮರೆತರು. ಹಾಡುತ್ತ ಹಾಡುತ್ತ ಅವಳ ಧ್ವನಿ ಅತಿತಾರಕಕ್ಕೆ ಹೋಗಿ ಗಕ್ಕೆಂದು ನಿಂತುಬಿಟ್ಟಿತು.

ಬಡಿದೆಬ್ಬಿಸಿದವರಂತೆ ಎಲ್ಲರೂ ಕಣ್ಣುಬಿಟ್ಟರು. ಶಾನ್ತಲದೇವಿ ಕಣ್ಮುಚ್ಚಿ ಕಂಬಕ್ಕೆ ಬೆನ್ನೊರಗಿಸಿ ಕುಳಿತಿದ್ದಳು. ಅವಳ ಮುಖದ ಮೇಲೆ ಒಂದು ಬಗೆಯ ಶಾಂತಿಯಿಂದ ಕೂಡಿದ ಕಳೆ ಬೆಳಗುತ್ತಿತ್ತು.

'ಮಗು ಶಾನ್ತಲೆ' ಎಂದು ಮಾರಸಿಂಹಯ್ಯ ಕೂಗಿ ಕುಳಿತಲ್ಲಿಂದ ಎದ್ದ. ಎರಡು ಹೆಜ್ಜೆ ಇಡುವಷ್ಟರಲ್ಲಿ ತತ್ತರಿಸಿದ. ಹತ್ತಿರದಲ್ಲಿ ಇದ್ದವರು ಹಿಡಿದುಕೊಂಡರು. ಅವನು ಅವರ ಮೇಲೆ ಕುಸಿದ. 'ಅಯ್ಯೋ ! ಏನಾಯಿತಪ್ಪ' ಎಂದು ಮಾಚಿಕಬ್ಬೆ ಮಗಳ ಬಳಿ ಬಂದು ಹಣೆ ಮುಟ್ಟಿದಳು. ಶಾಂತಲದೇವಿಯ ಕತ್ತುವಾಲಿತು. ಮಾಚಿಕಬ್ಬೆ ಪಾದ ಮುಟ್ಟಿದಳು. ತಣುವು ಗೊಡತೊಡಗಿತ್ತು. 'ಇದಕ್ಕೇ ಧ್ಯಾನ ಮಾಡಿದರೆ ಮುಗಿಯಿತು ಎಂದೆಯಾ ! ಇದನ್ನು ನೋಡಲು ನಾನು ಬದುಕಿರಬೇಕಾಗಿತ್ತೆ ? ನನ್ನನ್ನು ಬೆಳುಗೊಳಕ್ಕೆ ಕರೆದೊಯ್ಯಿರಿ. ಅಲ್ಲಿ ಸಲ್ಲೇಖನ ಮಾಡಿ ನಾನು ಬಿಡುಗಡೆ ಹೊಂದುತ್ತೇನೆ. ಯಾರಿಗೂ ಹೇಳದ ಅವಳು ಸಲ್ಲೇಖನ ಮಾಡಿ ಐದು ದಿನದಲ್ಲಿ ಮುಕ್ತಿ ಪಡೆದಳು ಎಂದು ರೋದಿಸತೊಡಗಿದಳು. ಅವಳ ಉಸಿರು ತಗ್ಗಿತು. ರುದ್ರ ಮೌನ ಅಲ್ಲಿ ಆವರಿಸಿತು.

ದೂರದಿಂದ ಅಶ್ವಗಳ ಖುರಪುಟಧ್ವನಿ ಕೇಳಿಸತೊಡಗಿತು. ಜನರ ಕಿವಿ ಅತ್ತ ನಿಮಿರಿದವು. ಎಲ್ಲರ ಕಣ್ಣಲ್ಲೂ ನೀರು ಧಾರಾಕಾರವಾಗಿ ಹರಿಯುತ್ತಿತ್ತು.

ನಾಲ್ಕೆಂಟು ಅಶ್ವಗಳು, ಎರಡು ರಥಗಳು ಬಂದವು. ಮಹಾರಾಜ ಬಿಟ್ಟಿದೇವ ಅಶ್ವದಿಂದ ಇಳಿದ, ಅಲ್ಲಿದ್ದ ಜನಸಮೂಹ ನೋಡಿದ. 'ಪಟ್ಟಮಹಾದೇವಿ ಎಲ್ಲಿ ? ಎಂದು ಕೇಳಿದ. ಯಾರೂ ಉತ್ತರಿಸಲಿಲ್ಲ. ಅಷ್ಟರಲ್ಲಿ ರಥಗಳಿಂದ ರಾಣಿ ಬಮ್ಮಲದೇವಿ, ರಾಣಿ ರಾಜಲದೇವಿಯರು ಇಳಿದಿದ್ದರು. ರೇವಿಮಯ್ಯ ಕಣ್ಣೀರು ಸುರಿಸುತ್ತಾ ಮುಂದೆ ಬಂದು ನಿಂತ. 'ಏನಾದೀತು ರೇವಿಮಯ್ಯ ?"

'ಅಮ್ಮಾಜಿ ಬಿಡುಗಡೆ ಹೊಂದಿದರು, ಹೆಗ್ಗಡೆಗಳು ಮಗಳನ್ನು ಹಿಂಬಾಲಿಸಿದರು. ಸನ್ನಿಧಾನ ಸ್ವಲ್ಪ ಮುಂಚೆ ಬಂದಿದ್ದರೆ ? ಅಮ್ಮಾಜಿ ಈಗ ಮೂರು ದಿನದಿಂದ ಸನ್ನಿಧಾನ ಬರಲಿಲ್ಲ ಎಂದು ಬಹಳವಾಗಿ ತಪಿಸಿದರು.' ಎಂದ. 'ಗಂಟಲು ಬಿಗಿಯಿತು. 'ಈಗ ದೇವಿ ಎಲ್ಲಿ ?' ರೇವಿಮಯ್ಯ ಮಾತನಾಡದೆ ಮುಂದಡಿ ಇಟ್ಟ. ಮಹಾರಾಜ ಬಿಟ್ಟಿದೇವ ರಾಣಿಯರು ಬಮ್ಮಲದೇವಿ, ರಾಜಲಾದೇವಿಯವರು ರೇವಿಮಯ್ಯನನ್ನು ಹಿಂಬಾಲಿಸಿ ಪಟ್ಟಮಹಾದೇವಿಯ ಬಳಿ ಕುಸಿದರು. ಅಲ್ಲಿದ್ದವರೆಲ್ಲರ ದುಃಖವನ್ನು ಅಳೆಯಲು ಸೃಷ್ಟಿಕರ್ತನಿಗೂ ಸಾಧ್ಯವಾಗಿರಲಾರದು. ತಂದೆ ಮತ್ತು ಮಗಳ ಪೂರ್ಣ ಸಂಸ್ಕಾರ ವಿಧಿಗಳು ಶಿವಗಂಗೆಯಲ್ಲಿ ನಡೆದವು. ಧಾಳಿಯಲ್ಲಿ ಗೆದ್ದು ಲೊಕ್ಕಿಗುಂಡಿಯಲ್ಲಿ ಶಾರ್ದೂಲ ಪತಾಕೆ ಹಾರಿಸಿ ಬಂದ ಬಿಟ್ಟಿದೇವನ ಸಮ್ಮುಖದಲ್ಲಿ ನಂತರ ಮಾಚಿಕಬ್ಬೆ ಬೆಳಗೊಳದಲ್ಲಿ ಸಲ್ಲೇಖನ ವ್ರತಮಾಡಿ ಪತಿಯನ್ನೂ ಮಗಳನ್ನೂ ಸೇರಿಕೊಂಡಳು. ಮಹಾರಾಜ ಅಲ್ಲಿಗೂ ರಾಣಿಯರು ಬಮ್ಮಲಾದೇವಿ ರಾಜಲಾದೇವಿಯವರೊಂದಿಗೆ ಬಂದು ತನ್ನ ಅಶ್ರು ಅರ್ಪಿಸಿದ. ತನ್ನ ಶಿಷ್ಯಳ ಅಂತ್ಯವನ್ನು ತಾನು ನೋಡುವಂತಾಯಿತಲ್ಲ ಎಂದು ಕೊರಗಿದ ಲೋಕಿಮಯ್ಯ ಅವಳ ಹಾಗೂ ಅವಳ ಮಾತಾಪಿತೃಗಳ ಮರಣವಾರ್ತೆಯನ್ನು ತನಗೆ ತೋರಿದಂತೆ ಬರೆದು ತಂದು

ಮಹಾರಾಜನಿಗರ್ಪಿಸಿದ. ಮಹಾರಾಜನು ಅವನ್ನು ನಿಧಾನವಾಗಿ ಓದತೊಡಗಿದ. ಶ್ರೀಮತ್‌ಪರಮ ಗಂಭೀರ ಸ್ಯಾದ್ವಾದಾಮೋಘ ಲಾಂಛನಂ ಜೀಯಾತ್ರ್ಯೈ ಲೋಕನಾಥಸ್ಯ ಶಾಸನಂ ಜಿನಶಾಸನಂ ॥ .....

ಓದಿದ ನಂತರ ಬಿಟ್ಟಿದೇವನ ಕಣ್ಣಲ್ಲಿ ನೀರು ಹನಿಗೂಡಿದ್ದುದು ಅವನು ಬರಹವನ್ನು ತೊಡೆಯಮೇಲಿಟ್ಟುಕೊಂಡಾಗ ಗೋಚರವಾಯಿತು.

ಹೀಗೆ ಸಾಗುತ್ತದೆ ಕಾದಂಬರಿಕಾರರ ಶೈಲಿ. ರುದ್ರಮೂರ್ತಿ ಶಾಸ್ತ್ರಿಯವರ ಅಶೋಕ, ಔರಂಗಜೇಬ, ಕುಮಾರರಾಮ, ಬಿ. ಎಲ್. ವೇಣುರವರ ಚಿತ್ರದುರ್ಗದ ಬಗೆಗಿನ ಕಾದಂಬರಿ, ಇತ್ತೀಚೆಗೆ ಬರೆಯಲಾರಂಭಿಸಿರುವ ಗಣೇಶಯ್ಯನವರ ಕರಿಸಿರಿಮನೆ ಮುಂತಾದ ಐತಿಹಾಸಿಕ ಕಾದಂಬರಿಗಳು ಐತಿಹಾಸಿಕ ಕಾದಂಬರಿ ಕ್ಷೇತ್ರವನ್ನು ವಿಶಾಲವಾಗಿಸಿವೆ. ಟಿಪ್ಪುಸುಲ್ತಾನ್ ಮತ್ತು ಕೃಷ್ಣದೇವರಾಯನ ಬಗೆಗೆ ಬಂದ ಹೊಸ ಲೇಖಕರ ಐತಿಹಾಸಿಕ ಕಾದಂಬರಿಗಳು ಖ್ಯಾತಿಯನ್ನು ಪಡೆದಿವೆ.

ಐತಿಹಾಸಿಕ ಕಾದಂಬರಿಗಳಲ್ಲಿ ಕಥಾವಸ್ತು ಮುಖ್ಯವಾಗುತ್ತದೆ. ಇದಕ್ಕೆ ಆಧಾರವಾಗಿ, ಶಾಸನಗಳು, ನಾಣ್ಯ, ವಿದೇಶಿ ಬರಹ, ಹಸ್ತಪ್ರತಿ, ತಾಳೆಗರಿಗಳು ಮುಖ್ಯವಾಗುತ್ತವೆ.

ಪಾತ್ರಗಳು ಚಾರಿತ್ರಿಕ ಹಾಗೂ ಕಲ್ಪನೆಯಿಂದ ಕೂಡಿದವು. ಭಾಷೆ, ಶೈಲಿ, ಉದ್ದೇಶ, ವರ್ಣನೆ, ವಿಷಯ ನಿರೂಪಣೆ, ಕುತೂಹಲದ ಕಾಪಾಡುವಿಕೆ ಐತಿಹಾಸಿಕ ಕಾದಂಬರಿಗಳಲ್ಲಿ ಮುಖ್ಯ. ಚಲನಚಿತ್ರವಾಗಿ ಐತಿಹಾಸಿಕ ಕಾದಂಬರಿಗಳನ್ನು ತೋರಿಸುವುದು ಕಷ್ಟವಾದರೂ ಹಲವಾರು ಚಿತ್ರಗಳು ಬಂದಿವೆ. ಮಯೂರ, ಇಮ್ಮಡಿ ಪುಲಿಕೇಶಿ, ರಣಧೀರ ಕಂಠೀರವ, ಅಮರಶಿಲ್ಪಿ, ಕುಮಾರರಾಮ, ಕಲ್ಲರಳಿ ಹೂವಾಗಿ , ಕಿತ್ತೂರು ಚೆನ್ನಮ್ಮ, ಸಂಗೋಳ್ಳಿ ರಾಯಣ್ಣ, ಕೃಷ್ಣದೇವರಾಯ ಹೀಗೆ ಕಿರುತೆರೆಯಲ್ಲಿ ಧಾರಾವಾಹಿಯಾಗಿಯೂ ಇದು ಬರಬಹುದು. ಸಂಗೀತ ಲಾವಣಿಯಾಗಿ ಹೊರಹೊಮ್ಮಬಹುದು. ವಿಮರ್ಶಕನ ದೃಷ್ಟಿಯಲ್ಲಿ ಐತಿಹಾಸಿಕ ಕಾದಂಬರಿಗಳು ಹೊಳಪನ್ನು ಪಡೆಯುತ್ತವೆ. ಆಚಾತುರ್ಯದಿಂದ ಕೆಲವು ಕಾದಂಬರಿಕಾರರ ಹೆಸರು ಬಿಟ್ಟುಹೋಗಿದ್ದರೆ ಅನ್ಯಥಾ ಕಾರಣವಾಗುವುದಿಲ್ಲ.

–(ವಿವಿಧ ಆಧಾರಗಳಿಂದ)

■

---

* ದಿನಾಂಕ : ೧೭–೭–೨೦೧೦ ರಂದು ನಡೆದ ಸಿ. ಕೆ. ನಾಗರಾಜ್‌ರಾವ್ ಸ್ಮಾರಕ ದತ್ತಿ ಉಪನ್ಯಾಸದ ಲಿಖಿತ ರೂಪ.

# ೧೨. ಚನ್ನಪಟ್ಟಣದ ಅಹೋಬಲದಾಸರು

–ಡಾ. ಶಿವಣ್ಣ ಬೆಳವಾಡಿ

ಕನ್ನಡ ಹರಿದಾಸ ಸಾಹಿತ್ಯ ಪರಂಪರೆಯನ್ನು ಪರಿಚಯಿಸುವ ನಿಟ್ಟಿನಲ್ಲಿ ಗಂಭೀರವಾಗಿ ನಿರತರಾಗಿರುವ ಹೊಸ ಪರಂಪರೆಯ ಕನ್ನಡ ವಿದ್ವಾಂಸರಲ್ಲೊಬ್ಬರು ಡಾ. ನಾ. ಗೀತಾಚಾರ್ಯರು. ಗ್ರಂಥ ಸಂಪಾದನೆ, ಕಾವ್ಯ, ಅನುವಾದ, ಸಂಪಾದನೆಗಳ ಜತೆ ಜತೆಗೆ ಶಾಸನ, ಭಾಷಶಾಸ್ತ್ರಗಳ ಅಧ್ಯಯನವನ್ನೂ ಒಳಗೊಂಡಂತೆ ಹರಿದಾಸ ಪರಂಪರೆಯ ಹೆಜ್ಜೆ ಗುರುತುಗಳ ಬೆನ್ನಹಿಂದೆ ಬಿದ್ದು, ಕಾಲಗರ್ಭದಲ್ಲಿ ಎಲ್ಲೋ ಮರೆಯಾಗಿರುವ ಹರಿದಾಸ ಸಾಹಿತ್ಯವನ್ನು ಬೆಳಕಿಗೆ ತರುವ ಕಾರ್ಯದಲ್ಲಿ ಡಾ. ನಾ. ಗೀತಾಚಾರ್ಯರು ಇಂದು ಗಮನಾರ್ಹರಾಗುತ್ತಿದ್ದಾರೆ. ಹರಿದಾಸ ಸಾಹಿತ್ಯ ಅಧ್ಯಯನದಲ್ಲಿ ದ್ವೈತ, ಅದ್ವೈತಗಳಂತೆ ವಿಶಿಷ್ಟಾದ್ವೈತ ಪರಂಪರೆಯು ಮುಖ್ಯವಾದುದು ಎಂಬ ವಿಚಾರದಲ್ಲಿ ಗೀತಾಚಾರ್ಯರು ದೃಢಚಿತ್ತರಾಗಿರುವುದಕ್ಕೆ ಅವರ ಈ ಕೃತಿಗಳೇ ಸಾಕ್ಷಿ "ತುಮಕೂರು ಜಿಲ್ಲೆಯ ಕೀರ್ತನಕಾರರು", "ಹರಿದಾಸ ಸಾಹಿತ್ಯ ದ ಮೂರು ದಾರಿಗಳು" "ತಿಮ್ಮಪ್ಪದಾಸರ ಕೀರ್ತನೆಗಳು" ಸಮಗ್ರ ದಾಸಸಾಹಿತ್ಯ ಸಂಪುಟ" "ವೆಂಕಟದಾಸರು ಮತ್ತು ಇತರ ಅದ್ವೈತ ದಾಸರ ಕೀರ್ತನೆಗಳು" ಹಾಗೂ "ಚನ್ನಪಟ್ಟಣದ ಅಹೋಬಲದಾಸರ ಕೀರ್ತನೆಗಳು" ಮುಖ್ಯವಾಗಿವೆ.

ಶಂಕರಾಚಾರ್ಯರ ಅದ್ವೈತ ಪರಂಪರೆಯನ್ನು ತಿಮ್ಮಪ್ಪದಾಸರ ಮುಖೇನ ಹೊಸದಾಗಿ ಗುರುತಿಸಿದ ಕೀರ್ತಿ ಪ್ರೊ. ಎಂ. ವಿ. ಸೀತಾರಾಮಯ್ಯನವರಿಗೆ ಸಂದರೆ, ಅವರ ಶಿಷ್ಯರಾದ ಡಾ. ನಾ. ಗೀತಾಚಾರ್ಯರಿಗೆ ನಾರಾಯಣ ಶರ್ಮ ಸಂಸ್ಕೃತಿ ಕೇಂದ್ರದ ಮೂಲಕ ಸಂಪಾದಿಸಿ ಪ್ರಕಟಿಸಿರುವ "ಚನ್ನಪಟ್ಟಣದ ಅಹೋಬಲದಾಸರ ಕೀರ್ತನೆಗಳ ಮುಖೇನ ರಾಮಾನುಜಾಚಾರ್ಯರ ವಿಶಿಷ್ಟಾದ್ವೈತ ಪರಂಪರೆಯ ಹೊಸ ಮಜಲುಗಳನ್ನು ಗುರುತಿಸಿದ ಕೀರ್ತಿ ಸಲ್ಲಬೇಕಾಗುತ್ತದೆ.

ಹತ್ತೊಂಬತ್ತನೆಯ ಶತಮಾನದ ಹರಿದಾಸ ಪರಂಪರೆಯಲ್ಲಿ ಪ್ರಮುಖರಾದ ತುಳಸಿದಾಸರ ಶಿಷ್ಯರಾದ ಚನ್ನಪಟ್ಟಣದ ಅಹೋಬಲದಾಸರು ಬಣಜಿಗ

ಜಾತಿಯವರು. ಇವರು ಕನಕದಾಸರ ನಂತರದ ಪ್ರಮುಖ ವೈದಿಕೇತರ ಹರಿದಾರಾಗಿದ್ದಾರೆ. ಅಷ್ಟೇ ಅಲ್ಲದೆ ಇವರು ತತ್ವಪದಕಾರರೂ ಕೂಡ. ಶಿಶುನಾಳ ಶರೀಫ್ ಮತ್ತು ಕನಕದಾಸರಂತೆ ವಿಶಿಷ್ಟ ಮನೋಭಾವದವರಾಗಿಯೂ ಕಂಡುಬರುತ್ತಾರೆ. ಇಂಥ ವೈದಿಕೇತರ ಹರಿದಾಸರ ಬಗೆಗೆ ಗೀತಾಚಾರ್ಯರಿಗೆ ವಿಶೇಷವಾದ ಕಾಳಜಿ ಆಸಕ್ತಿ ಇರುವುದು ಗಮನಾರ್ಹ. ಹಾಗೇ ನೋಡಿದರೆ ವೈದಿಕೇತರ ಹರಿದಾಸರ ಸಾಹಿತ್ಯ ಸಮೃದ್ಧವಾಗಿ ಹಾಗೂ ಸಾಮಾಜಿಕ ಕಳಕಳಿಯಿಂದಲೂ ಕೂಡಿರುವಂತಹದ್ದು. ಇದು ಕೂಡ ಗೀತಾಚಾರ್ಯರ ಸಂಶೋಧನಾಸಕ್ತಿಗೆ ಕಾರಣವಿರಬಹುದು. ತುಳಸೀದಾಸರ ಶಿಷ್ಯರುಗಳಾದ ಚನ್ನಪಟ್ಟಣದ ಅಹೋಬಲದಾಸರು ಬಣಜಿಗರು, ಮುಳುಬಾಗಿಲಿನ ರಂಗಸ್ವಾಮಿ ದಾಸರು ಗಾಣಿಗರು, ಕೋಲಾರದ ಚೆಂಬುದಾಸರು ದಲಿತದಾಸರು, ಅಲಗೂರಿನ ಅಪ್ಪಾಜಿದಾಸರು ರೆಡ್ಡಿಗಳು, ಚಿಂತಾಮಣಿಯ ಶ್ರೀನಿವಾಸದಾಸರು ಉಪ್ಪಾರರು, ಶ್ರೀರಂಗಪಟ್ಟಣ ಸಮೀಪದ ದರಿಕುಪ್ಪದ ಕೃಷ್ಣದಾಸರು ಗೌಡರು, ಮೈಸೂರಿನ ಬೈರೇಗೌಡರು ಒಕ್ಕಲಿಗರು. ಈ ಎಲ್ಲ ಹರಿದಾಸರು ಸಮಾಜದ ಎಲ್ಲಾ ವರ್ಗದವರಾಗಿದ್ದು ಸಾಮಾಜಿಕ ಕಾಳಜಿಯನ್ನು ಹೊಂದಿರುವಂತವರು ಎಂಬುದನ್ನು ಗೀತಾಚಾರ್ಯರು ಮೊದಲಬಾರಿಗೆ ಶೋಧಿಸಿ ಕನ್ನಡ ಸಾಹಿತ್ಯಕ್ಕೆ ನೀಡಿದ್ದಾರೆ. ಇದು ವಿನೂತನ ಚಿಂತನೆಯಾಗಿದೆ.

ಡಾ. ನಾ. ಗೀತಾಚಾರ್ಯರು "ಚನ್ನಪಟ್ಟಣದ ಅಹೋಬಲದಾಸರ ಕೀರ್ತನೆಗಳು" ಕೃತಿಯ ಪ್ರಸ್ತಾವನೆಯಲ್ಲಿ, ಕನ್ನಡದ ಶ್ರೀ ವೈಷ್ಣವ ಹರಿದಾಸ ಸಾಹಿತ್ಯ ಕುರಿತಂತೆ, ಅಹೋಬಲದಾಸರ ಪರಿಚಯ ಕುರಿತಂತೆ ಸುದೀರ್ಘವಾದ ವಿವರವನ್ನು ಕೊಟ್ಟಿದ್ದಾರೆ. ಅಹೋಬಲದಾಸರ ಕೀರ್ತನೆಗಳಲ್ಲಿ ಹರಿಕುರಿತ ನಾಮಸ್ಮರಣೆ, ಮಂತ್ರಮಹಿಮೆ, ಆತ್ಮಸಮರ್ಪಣೆ, ವಿರಕ್ತಿ, ಲೋಕ ಸುಖದ ನಿರಾಕರಣೆ, ದೀನತೆ, ದಾಸ್ಯಮನೋಭಾವ, ಗುರುಮುಖೇನ ಹರಿದರ್ಶನ, ಹರಿದಾಸ ಸೇವೆಯ ಹಂಬಲ, ಇತ್ಯಾದಿ ಭಾವಗಳು ಕೀರ್ತನೆಯಲ್ಲಿ ಕಂಡುಬರುವುದನ್ನು ಗುರ್ತಿಸಿದ್ದಾರೆ.

"ಏನು ಬರೆದೆಯೊ ಬ್ರಹ್ಮನೇ
ನನ್ನರಿಯಲರಿಯದು ಸುಮ್ಮನೆ
ನೋನವನು ಹೋಗಾಡಿ ಜನರೊಳು
ಹೀನವಾಗುವ ಹಾಂಗೆ ಹಣೆಯೊಳು
ಹಿಂದೆ ಮಾಡಿದ ಕರ್ಮವು ಯಿದ
ಕ್ಕೊಂದುಪಾಯದ ಮರ್ಮವು
ತಂದೆ ನೀನೆನಗಿಂದು ತೋರಲು
ನಿಂದು ಭಜಿಸುವೆ ಮಂದರೋದ್ಧರ

ಪಾಪಗಳ ಹರನ್ಯಾರೆಲೊ
ಭೂಪ ದಶ ಅವತಾರನೆ
ಕೋಪ ಮಾಡದೆ ದಾಸ ಮಾಡಿದ
ಪಾಪಗಳ ಪರಿಹರಿಸೊ ಬೇಗದಿ

ಹೀಗೆ ಇಷ್ಟ ದೈವನಲ್ಲಿ ದಾಸನಾಗಿ ತನ್ನ ತಪ್ಪು ಒಪ್ಪುಗಳನ್ನೆಲ್ಲ ನಿವೇದಿಸಿಕೊಂಡು ಪಶ್ಚಾತ್ತಾಪ ಪಡುತ್ತ ತನ್ನನ್ನು ತಾನು ತಿದ್ದಿಕೊಳ್ಳುವ ಪರಿಶುದ್ಧ ಜೀವನದೆಡೆಗೆ ಸಾಗುವುದು ಹರಿದಾಸರ ಲಕ್ಷಣಗಳಲ್ಲೊಂದು. ಇಂಥ ಲಕ್ಷಣಗಳನ್ನು ಮೈಗೂಡಿಸಿಕೊಂಡುಬಂದ ಚನ್ನಪಟ್ಟಣದ ಅಹೋಬಲದಾಸರು, ಇವುಗಳ ಜೊತೆಗೆ ಸರ್ವರನ್ನು ಗೌರವದಿಂದ ಕಾಣುವ, ವಯಸ್ಸು, ಜಾತಿ ಅಂತಸ್ತಿನ ಭೇದಬಾವವಿಲ್ಲದಿರುವ, ಎಲ್ಲರು ಸಮಾನರು ಎನ್ನುವ ಧೋರಣೆಯನ್ನು ಹೊಂದಿದವರಾಗಿರುವುದು ಅವರ ಕೀರ್ತನೆಗಳಿಂದ ತಿಳಿದು ಬರುತ್ತದೆ. ಹೀಗಾಗಿ ದಾಸ ಪರಂಪರೆಯ ಸಾಲಿನಲ್ಲಿ ಅಹೋಬಲದಾಸರಿಗೂ ಮಹತ್ವದ ಸ್ಥಾನ ಇದೆ.

ಅಹೋಬಲದಾಸರ ವಿಶಿಷ್ಟಾದ್ವೈತ ತತ್ವ ಪರಂಪರೆಯವರು ಎನ್ನುವುದು ಡಾ. ನಾ. ಗೀತಾಚಾರ್ಯರ ದೃಢ ನಿಲುವು. ಈ ನಿಲುವಿಗೆ ಅವರು ಕೊಡುವ ಕಾರಣ. ಅಹೋಬಲದಾಸರು ತುಳಸಿದಾಸರ ಶಿಷ್ಯರು. ಶಿಷ್ಯತ್ವ ಏಕ ನಿಷ್ಟೆಯದಾಗಿದ್ದು, ಗುರುವಿನ ಮೂಲಕವೇ ತಮ್ಮನ್ನು ಗುರುತಿಸಿಕೊಳ್ಳುವುದರಿಂದ ಇವರ ತತ್ವ ವಿಶಿಷ್ಟಾದ್ವೈತ ಎನ್ನುವುದರಲ್ಲಿ ಅನುಮಾನವಿಲ್ಲ. ಆ ಮೂಲಕ ಲಭಿಸಿದ ಆಧ್ಯಾತ್ಮದ ಜ್ಞಾನವನ್ನು ಅರಗಿಸಿಕೊಂಡಿರುವ ದಾಸರು ವಿಶಷ್ಟಾದ್ವೈತ ತತ್ವವನ್ನು ಅತ್ಯಂತ ಸರಳವಾದ ಶೈಲಿಯಲ್ಲಿ ಬಹಳ ಸ್ಪಷ್ಟವಾಗಿ ಜನಮನಕ್ಕೆ ಮುಟ್ಟಿಸುವಲ್ಲಿ ಯಶಸ್ವಿಯಾಗಿದ್ದಾರೆ ಎನ್ನುವುದಕ್ಕೆ ಅಹೋಬಲದಾಸರ ಕೀರ್ತನೆಯಲ್ಲಿ ಆಧಾರಗಳು ಸಿಗುತ್ತವೆ.

'ಶುದ್ಧ ರೂಪನ ಮಾಡಿ ನನಗಾ
ಚಿದ್ವಿವೇಕದ ಕವಚ ತೊಡಿಸಿದ
ಸತ್ಸ್ವರೂಪಾಚಾರ್ಯನಹುದೆಲೋ'

ಹೀಗೆ ಗರುವಿನ ನಾಮಸ್ಮರಣೆಯ ಲೀಲೆಯಲ್ಲಿಯೇ ಭಕ್ತಿಭಾವದ ಬಂಧನವನ್ನು ಕಟ್ಟಿ ಹಾಡುವ ಇಂಥ ಕೀರ್ತನೆಗಳು ಯಥೇಚ್ಛವಾಗಿ ಅಹೋಬಲದಾಸರಲ್ಲಿ ಕಂಡುಬರುತ್ತವೆ.

"ದುಗ್ಗಾಣಿಯು ದೊಡ್ಡದಲ್ಲ ನಿನ್ನ
ಪೆಗ್ಗೆಗೆ ಯಮನಾಳು ಹೊರಿಸ್ಯಾರು ಕಲ್ಲು"

ಎನ್ನುವ ಈ ಕೀರ್ತನೆಯಲ್ಲಿ ಹಣದ ಮೋಹ ಕೆಟ್ಟದ್ದು ಎನ್ನುವ ಸೂಚನೆ ಇದೆ. ಇಂಥ ಇನ್ನೂ ಅನೇಕ ಕೀರ್ತನೆಗಳಲ್ಲಿ ಸಾಮಾಜಿಕ ಚಿಂತನೆ ಎದ್ದು ಕಾಣಿಸುತ್ತದೆ.

ಮನುಷ್ಯನ ಅಸಹಜತೆಗಳು, ಜಾತಿ, ಧರ್ಮ, ಮತ, ಮೇಲು-ಕೀಳು, ಸ್ತ್ರೀ ಅಸಮಾನತೆ, ನಡೆ-ನುಡಿ, ಇತ್ಯಾದಿಗಳನ್ನೆ ತನ್ನ ಕೀರ್ತನೆಗಳ ಮುಖೇನ ಹತ್ತೊಂಬತ್ತನೇ ಶತಮಾನದ ಬದುಕನ್ನೇ ತೆರೆದಿಟ್ಟ ಚನ್ನಪಟ್ಟಣದ ಅಹೋಬಲದಾಸರು ಶ್ರೀ ವೈಷ್ಣವರಲ್ಲದವರಾದರೂ ವಿಶಿಷ್ಟಾದ್ವೈತ ಪರಂಪರೆಯರಾಗಿದ್ದಾರೆ. ಇಂಥವರ ಬಗೆಗೆ ಅಧ್ಯಯನ ನಡೆಸಿ ಬೆಳಕಿಗೆ ತಂದ ಡಾ. ನಾ. ಗೀತಾಚಾರ್ಯರ ಸಾಧನೆ ಶ್ಲಾಘನೀಯವಾದುದು ಹಾಗೂ ಹರಿದಾಸ ಪರಂಪರೆಗೆ ಮಹತ್ವದ್ದು ಕೂಡ ಹೌದು.

■

# ೧೩. ಮೇಘ ಸಂದೇಶ ಮತ್ತು ಮೇಘಪ್ರತಿ ಸಂದೇಶಗಳ ಒಂದು ವಿಶ್ಲೇಷಣೆ

**–ಸುಬ್ರಾಯ ಈಶ್ವರ ಹೆಗಡೆ**

ಸಂಸ್ಕೃತದ ಸಂದೇಶ ಕಾವ್ಯಗಳಲ್ಲಿ ಮಹಾಕವಿ ಕಾಳಿದಾಸನ ಮೇಘದೂತವು ಮೊದಲನೆಯ ಗ್ರಂಥವೆನ್ನಬಹುದು. ಇದರಲ್ಲಿ ಕುಬೇರನ ಶಾಪಕ್ಕೊಳಗಾದ, ಒಬ್ಬ ವಿರಹಿಯಾದ ಯಕ್ಷನ ಮನೋವ್ಯಥೆಯ ಮಾರ್ಮಿಕವಾದ ಚಿತ್ರಣವಿರುತ್ತದೆ. ಮೇಘದೂತವು ಕಾಳಿದಾಸನ, ಮಾನವ ಪ್ರಕೃತಿಯ ಮತ್ತು ಬಾಹ್ಯ ಪ್ರಕೃತಿಯ ಸೂಕ್ಷ್ಮವಾದ ದರ್ಶನದ ಭವ್ಯ ಭಂಡಾರವಾಗಿದೆ. ಬಾಗ್ಯಪ್ರಕೃತಿಗೆ ಇದರಲ್ಲಿರುವಷ್ಟು ಮಹತ್ವ ಸಂಸ್ಕೃತದ ಬೇರಾವ ಗ್ರಂಥದಲ್ಲಿಯೂ ಇಲ್ಲ. ಪೂರ್ವ ಮೇಘದಲ್ಲಿ ಪ್ರಾರಂಭದಿಂದ ಕೊನೆಯವರೆಗೆ ಪ್ರಕೃತಿಯ ಮನೋಹರ ದೃಶ್ಯಗಳು ವರ್ಣಿತವಾಗಿವೆ. ಪ್ರಕೃತಿಯ ದೃಶಗಳಲ್ಲಿ ವಿಜ್ಞಾನಕ್ಕೆ ಸಮ್ಮತವಾದ ಅನೇಕ ವಿಷಯಗಳಿವೆ.

ಯಕ್ಷ ಮತ್ತು ಅವನ ಪ್ರೇಯಸಿಯ ವರ್ಣನೆಯನ್ನು ಮಾಡುವ ಸಮಯದಲ್ಲಿ ಕವಿಯು ಮಾನವ ಹೃದಯದ ಮಾರ್ಮಿಕವಾದ ಸುಂದರ ಚಿತ್ರಣವನ್ನು ಪ್ರಸ್ತುತಗೊಳಿಸಿರುವನು. ಮೇಘದೂತವು ವಾಸ್ತವವಾಗಿ ವಿರಹದಿಂದ ಉತ್ಕಂಠಿತವಾದ, ಹೃದಯದ ಮರ್ಮಮಯವಾದ ವಿರಹವೇದನೆಯಾಗಿರುತ್ತದೆ. ಇದರ ಪ್ರತಿಯೊಂದು ಪದ್ಯದಲ್ಲೂ ಪ್ರೇಮದ ವಿಹಲ್ವತೆ, ವಿವಶತೆ, ಮುಂತಾದವು ಅಭಿವ್ಯಕ್ತವಾಗುತ್ತದೆ. ಪೂರ್ವಮೇಘವೂ ಬಾಹ್ಯ ಪ್ರಕೃತಿಯ ಮನೋಹರವಾದ ಚಿತ್ರವಾದರೆ, ಉತ್ತರ ಮೇಘವು ಅಂತಃ ಪ್ರಕೃತಿಯ ಆಧಾರದ ಮೇಲಿನ ಸುಂದರ ವರ್ಣನೆಯಾಗಿರುತ್ತದೆ. ಬಾಹ್ಯಪ್ರಕೃತಿಯ ಮನೋಹರ ಕಾಂತಿಯನ್ನು ಪ್ರಸ್ತುತಗೊಳಿಸುವುದರಲ್ಲಿಯೂ ಮತ್ತು ಹೃದಯದಲ್ಲಿ ಸತತವೂ ಉದಯಿಸುವ ಭಾವನೆಗಳನ್ನು ಚಿತ್ರಿಸುವುದರಲ್ಲಿಯೂ ಕಾಳಿದಾಸನ ಈ ಕಾವ್ಯಕ್ಕೆ ಸರಿಸಮನಾದುದು ಬೇರೊಂದಿಲ್ಲ. ವಿರಹದಿಂದ ಪೀಡಿತಳಾದ ಪ್ರೇಯಸಿಯೊರ್ವಳ ಹತ್ತಿರಕ್ಕೆ ಮೇಘವನ್ನು ಸಂದೇಶವಾಹಕನಾಗಿ ಕಳುಹಿಸುವ ಅದ್ಭುತವಾದ ಕಲ್ಪನೆಯು ವಿಶ್ವಸಾಹಿತ್ಯದಲ್ಲಿಯೇ ಅಪೂರ್ವವಾದುದು. ಹೀಗೆ ಅಚೇತನವಾದ ವಸ್ತುವೊಂದನ್ನು, ಪ್ರೇಮ ಪ್ರಸಂಗದಲ್ಲಿ

ದೌತ್ಯಕಾರ್ಯಕ್ಕಾಗಿ ಕಳುಹಿಸುವುದು ಮತ್ತು ಪ್ರಣಯದ ವಿಷಯದಲ್ಲಿ ಗಾಢವಾದ ಉತ್ಕಂಠತೆಯನ್ನು ಅಭಿವ್ಯಕ್ತಗೊಳಿಸುವುದು, ನಿಜವಾಗಿಯೂ ಪ್ರತಿಭಾಸಂಪನ್ನನಾದ ಕವಿಯೊರ್ವನ ಉತ್ಕೃಷ್ಟ ಕಲ್ಪನೆಯಾಗಿದೆ.

ಮೇಘಪ್ರತಿ ಸಂದೇಶ – ಮಂಡಿಕಲ್ ರಾಮಶಾಸ್ತ್ರಿಗಳು ಇದರ ಕರ್ತೃ. ರಾಮಶಾಸ್ತ್ರಿಗಳು, ಕಾಳಿದಾಸನು ನಿಲ್ಲಿಸಿದ ಹಂತದಿಂದ ಕಾವ್ಯಧಾರೆಯನ್ನು ಮೇಘಪ್ರತಿ ಸಂದೇಶದಲ್ಲಿ ಮುಂದುವರಿಸಿದ್ದಾರೆ. ಮೋಡದ ಮೂಲಕ, ತನ್ನ ಪ್ರಿಯನ ಸುದ್ದಿ ತಿಳಿದ ಯಕ್ಷ ಪತ್ನಿಗೆ ಅತೀವ ಆನಂದವೂ, ಸಮಾಧಾನವೂ ಆಗುತ್ತದೆ. ಆಕೆ ತನ್ನ ಮನದ ಅಳಲನ್ನು ತೋಡಿಕೊಂಡು, ಅಲಕೆಯ ತನ್ನ ಮನೆಯ ಸ್ಥಿತಿಗತಿಗಳನ್ನು ವಿವರಿಸಿ, ಪತಿಗೆ ಮರುಸಂದೇಶವನ್ನು ಕಳುಹಿಸಲು ಮೇಘವನ್ನು ಪ್ರಾರ್ಥಿಸುತ್ತಾಳೆ. ಇದರಲ್ಲಿಯೂ ಎರಡು ಸರ್ಗಗಳಿವೆ. ಮೇಘ ಪ್ರತಿಸಂದೇಶದಲ್ಲಿ ಯಕ್ಷಿಣಿಯ ವ್ಯಕ್ತಿತ್ವದ ಸೂಕ್ಷ್ಮ ಒಳನೋಟಗಳನ್ನು ಕಾಣಬಹುದು. ಆಕೆಯ ನಿತ್ಯ ಜೀವನದ ಪರಪಾಟಗಳು, ಅವಳ ಅಂತರಂಗ, ಜೀವನದ ಧಾಟಿ, ಅಲಕಾನಗರಿಯ ಸಮಾಜ ಸ್ಥಿತಿ, ಅಲ್ಲಿನ ಸ್ತ್ರೀ, ಪುರುಷರ, ಮಕ್ಕಳ, ತರುಣಿಯರ ಚಿತ್ರಗಳು ಸಹಜವಾಗಿ ವರ್ಣಿತವಾಗಿವೆ.

ಒಂದನೆಯ ಶತಮಾನದ ಕಾಳಿದಾಸನು ತನ್ನ ಮೇಘದೂತದಲ್ಲಿ ಚಿತ್ರಿಸಿದ, ಭಾರತೀಯ ಸಂಸ್ಕೃತಿಯ ಎಲ್ಲಾ ಮೌಲ್ಯ ಪರಂಪರೆಗಳನ್ನು ೧೯ನೇ ಶತಮಾನದ, ರಾಮಶಾಸ್ತ್ರಿಗಳ ಮೇಘಪ್ರತಿ ಸಂದೇಶದಲ್ಲಿ ಪ್ರತಿಬಿಂಬಿತವಾಗಿವೆ. ಕಾಳಿದಾಸನು ಉಜ್ಜಯಿನಿ, ಉತ್ತರ ಭಾರತದ ವರ್ಣನೆಗಳನ್ನು ತನ್ನ ಕೃತಿಯಲ್ಲಿ ವರ್ಣಿಸಿದರೆ, ಶಾಸ್ತ್ರಿಗಳು ಮೇಘಪ್ರತಿಸಂದೇಶದಲ್ಲಿ ದಕ್ಷಿಣ ಭಾರತದ ಹಾಗೂ ಕರ್ನಾಟಕದ ಪ್ರಕೃತಿ–ಪರಂಪರೆಗಳನ್ನು ಚಿತ್ರಿಸಿದ್ದಾರೆ. ಈ ಕವಿವರ್ಯರು ತಮ್ಮ ಜನ್ಮ ಭೂಮಿಯ ಬಗ್ಗೆ ಅತ್ಯಾದರ ಗೌರವ–ಪ್ರೀತಿಗಳನ್ನು ತಮ್ಮ ಕಾವ್ಯಗಳಲ್ಲಿ ಬಣ್ಣಿಸಿದ್ದಾರೆ. "ಜನನೀ ಜನ್ಮಭುಮಿಶ್ಚ ಸ್ವರ್ಗಾದಪಿ ಗರೀಯಸೀ" ಎಂಬುದನ್ನು ತಿಳಸಿದ್ದಾರೆ. ಈ ಎರಡೂ ಕಾವ್ಯಗಳಲ್ಲಿ ಮಾನವನ ದಾಂಪತ್ಯ ಜೀವನದ ಒಂದು ಮನೋಜ್ಞ ಚಿತ್ರಣವೂ ಮೂಡಿಬಂದಿದೆ.

ಮದುವೆಯಿಂದ ಗಂಡು–ಹೆಣ್ಣುಗಳ ಮಿಲನ, ಅವರಿಬ್ಬರ ಮನವನ್ನು ಬಂಧಿಸಿ ಹೇಗೆ ಒಂದಾಗಿ ಬೆಸೆಯುತ್ತದೆ ಎಂಬುದೊಂದು ವಿಸ್ಮಯವಾದರೆ, ಅಯತ್ನಿತವಾಗಿ ಮೂಡುವ ಈ ಭಾವಬಂಧನ, ಒಂದಾಗಿರುವಾಗ ವರವಾದರ, ಬೇರ್ಪಟ್ಟಾಗ ಶಾಪವೂ ಆಗಬಲ್ಲದು. ವಿರಹ ವಿಯೋಗ ಏನೇನು ಮಾಡಬಲ್ಲದು ? ಎಷ್ಟು ದೂರಕ್ಕೆ ಒಯ್ಯಬಲ್ಲುದು, ಪ್ರೀತಿ–ಸ್ನೇಹಗಳ ಅಂತಃಶಕ್ತಿಯನ್ನು ಪರೀಕ್ಷಿಸ ಬಲ್ಲದು ? ನೇರ ನಡೆ–ನುಡಿಯುಳ್ಳ ಸರಳ ಮನಸ್ಕರ ಒಳಕಣ್ಣನ್ನು ತೆರೆಸಬಲ್ಲದು ಎಂಬುದನ್ನು ಮೇಘದೂತ ಹೆಜ್ಜೆ ಹೆಜ್ಜೆಗೂ ತೋರಿಸುತ್ತದೆ. ಕಾಳಿದಾಸನನ್ನು ಅನುಸರಿಸಿ ಮೇಘ ಪ್ರತಿಸಂದೇಶದಲ್ಲಿ, ರಾಮಶಾಸ್ತ್ರಿಗಳು, ನೇಯ್ದಿರುವ ದಾಂಪತ್ಯದ ದುಃಖ–ದುಮ್ಮಾನಗಳು, ಸುಕುಮಾರ–ಸುಂದರ, ಭಾವ–ಬಂಧನಗಳು, ಜೀವನದಲ್ಲಿ ಬರುವ

ನೋವು-ನಲಿವುಗಳು, ಜೀವನದ ಒಂದು ಭಾಗವಾಗಿದೆ ಎಂಬುದನ್ನು ತಿಳಿಸುವುದು. ಇಂದಿನ ಯಾಂತ್ರಿಕತೆಯಲ್ಲಿ ದಾಂಪತ್ಯದ ಪಾವಿತ್ರ್ಯ ಆದರ್ಶ ಮರೆಯಾಗುತ್ತಿದೆ. ಎಲ್ಲಾ ಸಂಬಂಧಗಳೂ ಸಂಶಯಾತೀತವಾಗಿವೆ. ದಾಂಪತ್ಯಜೀವನದಲ್ಲಿ ಬಿರುಕು ಕಾಣುತ್ತಿದೆ.ಇಂತಹ ಸನ್ನಿವೇಶದಲ್ಲಿ ಅಚೇತನಗಳ ಮೂಲಕ ಸಂದೇಶ ಕಾವ್ಯಗಳು ನಿಷ್ಕಲ್ಮಶ ಪ್ರೇಮ, ಪರಸ್ಪರ ಪ್ರೀತಿ, ಆದರ-ಗೌರವಗಳ ಸಂದೇಶವನ್ನು ಸಾರುತ್ತಿರುವುದನ್ನು ಗಮನಿಸಿದಾಗ, ಎತ್ತೆತ್ತಲೋ ಸಾಗುತ್ತಿರುವ ನಮ್ಮ ಬದುಕಿನ ಬಂಡಿಗೆ ಒಂದಿಷ್ಟು ಗುತ್ತು-ಗುರಿಗಳನ್ನು ಒದಗಿಸಬಲ್ಲದು ಎನ್ನುವುದರಲ್ಲಿ ಸಂಶಯವಿಲ್ಲ.

# ೧೪. ಶ್ರೀಮತ್ ಭಟಕಳ ಜೀವನ್ಮುಕ್ತ ಕವಿ ಅಪ್ಪಯ್ಯ ಸಮರ್ಥರ ಪದಗಳಲ್ಲಿ ಕೆಳದಿ ಇತಿಹಾಸ ತುಣುಕುಗಳು

–ಡಾ॥ ಕೆಳದಿ ವೆಂಕಟೇಶ್ ಜೋಯಿಸ್

ಶ್ರೀ ಗುರುದೇವದತ್ತ ಶ್ರೀಮತಿ ಜೀವನ್ಮುಕ್ತ ಕವಿ ಭಟಕಳ ನಡಘಾರ ಶಾಂತಿಬಾಯಿಯವರ ಪುಣ್ಯ ಚರಿತ್ರೆ ಮತ್ತು ಅವರು ರಚಿಸಿದ ಅಭಂಗಗಳು, ಪದಗಳು ಇರುವ ಕ್ರಿ.ಶ, ೧೯೨೮ ರಲ್ಲಿ ಶಾಂತಿಬಾಯಿಯವರ ಸ್ಮಾರಕಾರ್ತವಾಗಿ ಅವರ ಮಗಳು ನಾಡಘರ ಸರಸ್ವತೀಬಾಯಿ ಇವರಿಂದ ಪ್ರಕಟಿಸಲ್ಪಟ್ಟ ಪುಸ್ತಕದಲ್ಲಿ ಶ್ರೀಮತ್ ಭಟಕಳ ಜೀವನ್ಮುಕ್ತ ಕವಿ ಅಪ್ಪಯ್ಯ ಸಮರ್ಥರ ಪುಣ್ಯ ಚರಿತ್ರೆ ಮತ್ತು ಪದಗಳನ್ನು ಸಂಗ್ರಹಿಸಿದ್ದು ಅದರಲ್ಲಿ ಕೆಳದಿ ಇತಿಹಾಸ ಕುರಿತು ಹಲವು ಮಾಹಿತಿ ನಮಗೆ ಲಭ್ಯವಾಗುತ್ತದೆ. ಇದನ್ನು ಅನಂತ ಶಿವರಾಮ ಮೂಡಭಟಕಳ ಇವರು ಸಂಗ್ರಹಿಸಿ ಬರೆದದ್ದಾಗಿದ್ದು ವಿಜಾಪುರದಲ್ಲಿ ರಾಧಾ ಪ್ರಿಂಟಿಂಗ್ ವರ್ಕ್ಸ್‌ನಲ್ಲಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥ ಸಮರ್ಪಣೆಯ ಭಾಗದಲ್ಲಿ ಶ್ರೀ ಅನಂತ ಶಿವರಾಮ ಮೂಡಭಟಕಳ ಇವರು ಶ್ರೀಮತ್ ಪರಮಹಂಸಪರಿವ್ರಾಜಕಾಚಾರ್ಯ ಶ್ರೀಚಿತ್ರಾಪುರಾಧಿಷ್ಠಿತ ಶ್ರೀಮತ್ ಪಾಂಡುರಂಗಾಶ್ರಮ ಶ್ರೀಸ್ವಾಮಿಗಳವರ ದಿವ್ಯಶ್ರೀ ಸನ್ನಿಧಿಯಲ್ಲಿ ಈ ಅಲ್ಪ ಕೃತಿಯನ್ನು ಸಮರ್ಪಿಸಿದ ಅನಾಥ ಆಜ್ಞಾ ಪಾಪಿಯಾದ ತನ್ನನ್ನು ಉದ್ಧರಿಸಬೇಕೆಂದು ಸೆರಗೊಡ್ಡಿ ಬೇಡಿಕೊಳ್ಳುವ ಆಜ್ಞಾಧಾರಕ ಅನಂತ ಶಿವರಾಮ ಮೂಡಭಟಕಳ ಈತನ ಸಾಷ್ಟಾಂ ಪ್ರಣಾಮಪೂರ್ವಕ ಬಿನ್ನಹಗಳು ಎಂದು ಭಿನ್ನವಿಸಿಕೊಂಡಿದ್ದಾರೆ.

ಶ್ರೀ ಪರಮೇಶ್ವರನ ಸಚ್ಚಿದಾನಂದ ಸ್ವರೂಪದಲ್ಲಿ ಐಕ್ಯವನ್ನು ಪಡೆದು ಆತ್ಮಾಜ್ಞಾನಿಗಳಾದ ಮಹಾತ್ಮರು ಈ ಜಗತ್ತಿನ ಪ್ರತಿ ಭಾಗದಲ್ಲಿಯೂ ಕಾಲಾನುಸಾರವಾಗಿ ಜನಿಸಿ ತಮ್ಮ ನೆರೆಯಲ್ಲಿರುವ ಯೋಗ್ಯ ಜನರನ್ನು ಉದ್ಧರಿಸುವುದಲ್ಲದೆ ತಮ್ಮ ಕೀರ್ತಿಯನ್ನು ಶಾಶ್ವತಗೊಳಿಸಿ, ತಮ್ಮ ತರುವಾಯ ಅನೇಕ ಕಾಲದವರೆಗೆ ಭಕ್ತಿ ಜ್ಞಾನ ವೈರಾಗ್ಯಗಳನ್ನು ಸಾಧಿಸುವ ಸನ್ಮಾರ್ಗವನ್ನು ತೋರಿಸಿ ಕೊಟ್ಟು ಹೋಗುವರು. ಇಂತಹ ಸತ್ಪುರುಷರ ಜನ್ಮಸ್ಥಾನವೆನಿಸಿ ಗೌರವವನ್ನು ಪಡೆದ ಭಾಗ್ಯವು ನಮ್ಮ ಉತ್ತರ ಕನ್ನಡ ಪ್ರಾಂತದ ಪಾಲಿಗಾದರೂ ಯಥೇಷ್ಟವಾಗಿ

ಬಂದಿರುತ್ತದೆಂಬುದಕ್ಕೆ ಸಂಶಯವಿಲ್ಲ. ಶ್ರೀ ಜ್ಞಾನದೇವ, ತುಕಾರಾಮ, ರಾಮದಾಸ, ಏಕನಾಥ ಇತ್ಯಾದಿ ಭಗವದ್ಭಕ್ತರು ಮಹಾರಾಷ್ಟ್ರ ಸೀಮೆಯಲ್ಲಿ ಆಗಿಹೋದ ಕಾಲದಲ್ಲಿಯೇ ಸಹ ಈ ಪ್ರಾಂತ್ಯದಲ್ಲಿ ಅನೇಕಾನೇಕ ಸಾಧುಸಜ್ಜನರು ಅವತರಿಸಿದ್ದರು. ಪರಂತು ಮಹಾರಾಷ್ಟ್ರ ಜನರು ತಮ್ಮಲ್ಲಿಯ ಸತ್ಪುರುಷರ ಗ್ರಂಥಗಳನ್ನು ಮುದ್ರಿಸುವುದು, ಅವರ ಜನ್ಮ ಚರಿತ್ರೆಯನ್ನು ಬರೆಯುವುದು ಮುಂತಾದ ಸಾಧನಗಳಿಂದ ಅವರ ಹೆಸರು ಕೀರ್ತಿಯನ್ನು ದಿಗಂತ ಪ್ರಸಿದ್ಧಿಗೆ ತಂದಿರುವರು. ಈ ತೆರದ ಅಭಿಮಾನವಾಗಲಿ ಉತ್ಸಾಹವಾಗಲಿ ನಮ್ಮ ಉತ್ತರ ಕನ್ನಡಿಗರಲ್ಲಿ ತೀರಾ ಕಡಿಮೆಯೆಂದ್ರೆ, ಅತಿಶಯೋಕ್ತಿಯಾಗದು. ಆದುದರಿಂದ ಇವರಲ್ಲಿಯ ಸಾಧುಸಂತರ ಕೀರ್ತಿಯು ಕೇವಲ ಅವರು ಜನಿಸಿದ ಊರು ಮತ್ತು ಅದರ ನೆರೆಹೊರೆ ದಾಟಿ ಮುಂದೆ ಸಾಗಲಿಲ್ಲವೆನ್ನಬಹುದು.

ಇಂತಹ ಸಾಧುಗಳಲ್ಲಿ ಒಬ್ಬರಾದ ಬ್ರಹ್ಮಶ್ರೀ ಅಪಯ್ಯ ಮಹಾತ್ಮರು, ಶಾಲಿವಾಹನ ಶಕ ೧೬೦೦ (ಕ್ರಿ. ಶ. ೧೬೭೮)ನೆಯ ವರ್ಷದ ಸುಮಾರಿನಲ್ಲಿ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿಗೆ ಸೇರಿರುವ ಬಟಕಳ ಊರಿನಲ್ಲಿ ಆಗಿಹೋದ್ರು. ಇವರ ಚರಿತ್ರೆವನ್ನು ಆ ಕಾಲದ ಜನರಾಗಲೀ ಆನಂತರದವರಾಗಲೀ ಈವರೆಗೆ ಯಾರೂ ಬರೆದಿಡಲಿಲ್ಲ. ಆದ ಪ್ರಯುಕ್ತ, ಈಗ ಅದನ್ನು ಆದ್ಯಂತವಾಗಿ ಸಂಗ್ರಹಿಸುವುದಕ್ಕೆ ಬಗೆಯೇ ಇಲ್ಲ. ತತ್ತಥಾಪಿ ಈ ಚಿಕ್ಕ ಪುಸ್ತಕದಲ್ಲಿ ಸಂಗ್ರಹಿಸಿ ಬರೆದಿರುವುದಾಗಿ ಸಂಪಾದಕರು ಬರೆಯುತ್ತಾರೆ.

ಅಪ್ಪಯ್ಯ ಸಮರ್ಥರಿಗೆ ಗುರುವಿಮಲಾನಂದರ ವರದಿಂದ ಬ್ರಹ್ಮಜ್ಞಾನೋಪದೇಶ ವಾದಂದಿನಿಂದ ಆ ಗುರು ಅನುಗ್ರಹದಿಂದ ಅವರಲ್ಲಿ ಕವಿತಾ ಶಕ್ತಿಯು ತನ್ನಾರೆ ಉತ್ಪನ್ನವಾಗಿ ಇವರು ಪ್ರಸಂಗೋಪಾತ್ ಭಕ್ತಿಜ್ಞಾನವೈರಾಗ್ಯಪರವಾದ ಸಾವಿರಾರು ಪದಗಳನ್ನು ಕಟ್ಟಿದ್ದರಂತೆ. ಆದರೆ ಅವೆಲ್ಲವುಗಳ ಸಂಗ್ರಹವನ್ನು ಯಾರೊಬ್ಬರೂ ಮಾಡಿಡದೆ ಈಗ ಅವು ದುರ್ಲಭವಾಗಿವೆ. ಆ ಪದಗಳ ಯೋಗ್ಯತೆಯು ಎಷ್ಟೆಂಬುದು ಅವುಗಳಲ್ಲಿ ಎರಕವಾಗಿದ್ದ ಪರಮಾರ್ಥದ ಮರ್ಮವನ್ನು ಗ್ರಹಿಸುವವರಿಗೆ ತಿಳಿಯದೆ ಇರದು. ಉತ್ತರ ಕನ್ನಡ ಪ್ರಾಂತದಲ್ಲಿ ಬೇಂಡವಾದ್ಯದ ಇಲ್ಲವೆ ಬೇರೆ ಸುಲಭ ರಾಗಗಳುಳ್ಳ ಮರಾಠಿ ಸುರಸಂಗೀತಗಳ, ಹಾಗೂ ಇತರ ಸಂಗೀತ ನಾಟಕಗಳೊಳಗಿನ ಶೃಂಗಾರಿಕ ಪದಪದ್ಯಗಳ ಅಭಿಯೋಗವಾಗತೊಡಗಿ, ಅವುಗಳ ಬೊಬ್ಬೆಯಲ್ಲಿ ಈ ಹಳೆ ಕನ್ನಡ ಪದಗಳೆಲ್ಲ ದಿಕ್ಕುಪಾಲಾಗಿ ಹೋಗಿ ಇವುಗಳ ಶಬ್ದವೇ ಅಡಗಿ ಹೋಯಿತೆನ್ನಬಹುದು. ಮೊದಲ ಮುದ್ರಣದಲ್ಲಿ ૩೮ ಪದಗಳು ಅನಂತರ ಎರಡನೆ ಮುದ್ರಣದಲ್ಲಿ ಒಟ್ಟಿಗೆ ೪೯ ಪದಗಳು ಮೂರನೆ ಮುದ್ರಣದಲ್ಲಿ ೫೨ ಪದಗಳು ಸೇರಿವೆ. ಈ ಮೊದಲು ಕಾರವಾರ ಹೈಸ್ಕೂಲಿನಲ್ಲ ಮಾಸ್ತರ್ ಆಗಿ ಕೆಲಸ ನಿರ್ವಹಿಸುತ್ತಿದ್ದ ಕೊಪ್ಪಿ ಶಂಕರರಾಯರು ಅಪ್ಪಯ್ಯನವರ ಸಣ್ಣದೊಂದು ಚರಿತ್ರೆಯನ್ನು ಬರೆದಿದ್ದೂ ಇದೆ. ಪದಗಳು ಶುದ್ಧ ವೇದಾಂತ ಕೃತಿಗಳಾಗಿದ್ದು ಅವುಗಳನ್ನು ನಕಲು ಮಾಡುವ, ಪಾಠಮಾಡುವ ಸಾಧಾರಣ ಜನರಿಗೆ ಅವುಗಳ ಅರ್ಥವು ಗ್ರಾಹ್ಯವಾಗದೆ ಅವುಗಳಲ್ಲಿ ಹೇರಳ ಪಾಠಾಂತರಗಳೂ, ಪ್ರಾಸಕ್ಕೆ ಮತ್ತು ಅರ್ಥಕ್ಕೆ ಅನುವಾಗದ ಅಸಂಗತವಾದ

ಹೆಚ್ಚಿಗೆ ಶಬ್ದಗಳೂ ಅಥವಾ ಪದಲೋಪಗಳೂ, ಕೆಲವಡೆಯಲ್ಲಿ ಪಂಕ್ತಿಗೆ ಪಂಕ್ತಿಯೇ ಕಾಣದೆ ಹೋದದ್ದೂ ಇದ್ದು ಅವುಗಳನ್ನು ಅನಂತ ಶಿವರಾಮ ಮೂಡಭಟಕಳ ತಿದ್ದಿದ್ದಿದೆ.

ಒಟ್ಟು ನಾಲ್ಕು ಅಂಕಗಳಿದ್ದು ಮೊದಲ ಅಂಕದಲ್ಲಿ ಬಾಲ್ಯಾವಸ್ಥೆ ಮತ್ತು ವಿರಕ್ತಿ, ದ್ವಿತಿಯಾಂಕದಲ್ಲಿ ಪರಮೇಶ್ವರ ಪ್ರಾಪ್ತಿ, ತೃತಿಯಾಂಕದಲ್ಲಿ ಶ್ರೀ ಗುರೂಪದೇಶವು ಚತುರ್ಥಾಂಕದಲ್ಲಿ ಮಹತ್ಕಾರ್ಯಗಳಿವೆ. ಪ್ರಥಮಾಂಕದಲ್ಲಿ ಅಪಯ್ಯನವರ ಜನ್ಮ ಕಾಲ ನಿರ್ಣಯ, ನಿಜ ನಾಮ, ತಂದೆಯ ಹೆಸರು, ವಿದ್ಯಾಭ್ಯಾಸ ಇವರಿಗುಂಟಾದ ವಿರಕ್ತಿಯನ್ನು ಚರ್ಚಿಸಲಾಗಿದೆ. ಅಂತೆಯೇ ಚತುರ್ಥಾಂಕದಲ್ಲಿ ಧರ್ಮಸ್ಥಳದ ವರದಯ್ಯ ಹೆಗಡೆಗೆ ಕಣ್ಣು ದೃಷ್ಟಿ ಮಾಡಿದ ಕಥೆ, ಶ್ರೀ ಕೊಲ್ಲೂರು ಮೂಕಾಂಬಿಕೆಯು ಹೂವಿನ ಪ್ರಸಾದ ಕೊಟ್ಟ ಕಥೆ, ಅಘನಾಶಿನೀ ನದಿಯನ್ನು ದೋಣಿ ಇಲ್ಲದೆ ದಾಟಿದ ಕಥೆ, ನಗರದ ಸಂಸ್ಥಾನದಲ್ಲಿ ಅಪ್ಪಯ್ಯನವರು ರಾಮಾಯಣ ಬರೆದ ಕಥೆ ತುಪಾಕಿ ಮತ್ತು ಗುಡುಗುಡಿಗಳ ಮೇಲೆ ಪದಗಳನ್ನು ಕಟ್ಟಿದ್ದು, ಅಪ್ಪಯ್ಯನವರ ಸೇವಕ ನಂದನು ಪದ ರಚಿಸಿದ್ದು, ಇವರು ಇತರ ಭಾಷೆಗಳಲ್ಲಿ ಪದ ರಚಿಸಿದ್ದು, ಜಟಗಭೂತದ ಕಥೆ, ನಗರದ ಅಮಲದಾರ ಮೇಲೆ ಪದ ಕಟ್ಟಿದ್ದು, ಪರವೂರಿಂದ ಬಂದ ವಾದ್ಯದವನನ್ನು ಜಯಿಸಿದ ಕಥೆ, ಅಪ್ಪಯ್ಯನವರು ಪರಲೋಕವನ್ನೈದಿದ ಸಂಗತಿ, ಇವರ ಸಮಾಧಿಮಠ ಮುಂತಾದ್ದರ ವರ್ಣನೆ ಇವರ ಕುಟುಂಬದವರಾದ ಶಾಂತಿಬಾಯಿಯವರು, ಅಪ್ಪಯ್ಯನವರು ರಚಿಸಿದ ಪದಗಳು ಇವೆ.

ಪುಟ ಸಂಖ್ಯೆ ೨೩ :

ಶ್ರೀ ಕೊಲ್ಲೂರು ಕೊಡಚಾದ್ರಿ ಮೂಕಾಂಬಿಕಾ ದೇವಿಯು ನಗರದ ಅರಸರ ಕುಲದೇವಿಯಾಗಿದ್ದಳು. ಆದಕಾರಣ ಕೆಲಸಬಿದ್ದಾಗ ತಪ್ಪನೆ ಹೋಗಿ ದೇವರ ದರ್ಶನ ಮಾಡಿಕೊಂಡು ಬರಲಿಕ್ಕೆ ಅನುಕೂಲವಾಗುವಂತೆ, ಆ ಅರಸರು ಕೊಲ್ಲೂರಿಗೂ ನಗರಕ್ಕೂ ಅತೀ ಸಮೀಪದ ಹಾದಿಯನ್ನು ಹೊಸದಾಗಿ ಮಾಡಿಸಿದ್ದರಂತೆ. ಪ್ರತಿನಿತ್ಯ ಬೆಳಿಗ್ಯೆ ಒಂದು ತಾಸು ಹೊತ್ತಿನೊಳಗೆ ಕೊಲ್ಲೂರಿನಲ್ಲಿ ದೇವರ ಪೂಜೆಯಾಗಲು ದೇವರ ತೀರ್ಥ ಮತ್ತು ಗಂಧ ಮುಡಿಪ್ರಸಾದವನ್ನು ರಾಜನ ದೂತರಾದ ಕುದುರೆ ಸವಾರರು ತೆಗೆದುಕೊಂಡು, ಆ ಹಾದಿಯಿಂದ ನಾಲ್ಕು ತಾಸು ಹೊತ್ತಿಗೆ ಅರಮನೆಯಲ್ಲಿ ಒಯ್ದು ಕೊಡುವ ಹಾಗೆ, ಅರಸರು ವ್ಯವಸ್ಥೆಯನ್ನು ಮಾಡಿಟ್ಟಿದ್ದರು. ಒಂದಾನೊಂದು ದಿವಸ ಆ ದೇವಿಯ ಅರ್ಚಕನ ಮನೆಯಲ್ಲಿ ಏನೋ ವಿಶೇಷ ಗಟ್ಟಳೆ ಇದ್ದದರಿಂದ, ಅವನು ಆ ಹೊಸ್ತು ಮಲಗಲಿಕ್ಕೆ ಹೋಗುವಾಗ ಮಧ್ಯರಾತ್ರೆ ಮೀರಿತು. ಹೀಗಾಗಿ ಉಷ: ಕಾಲಕ್ಕೆ ಎಚ್ಚರವಾಗದೆ ನಿದ್ರೆಬಿದ್ದು ಹೋಯಿತು. ಮುಂಜಾನೆ ಎಂದಿನಂತೆ ಕುದುರೆ ಸವಾರರು ಬಂದು, ಮಹಾದ್ವಾರದಲ್ಲಿ ಒದರಿದ ಕೂಡಲೆ ಅರ್ಚಕನು ಎದ್ದು ನೋಡುತ್ತಾನೆ–ಸಮಯ ಮೀರಿ ಹೋಗಿದೆ. ರಾಜಾಜ್ಞೆಯಲ್ಲವೇ ? ಒಂದರ ಕ್ಷಣ ತಡವಾದರೆ, ಎಂಥಾ ಘೋರ ಶಿಕ್ಷೆಯಾದೀತೋ ಎಂಬ ಭಯದಿಂದ ಆಗ ಆ ಅರ್ಚಕನು ಕಂಗಾಲಾದನು. ಶ್ರೀದೇವಿಯ ಪೂಜೆಯನ್ನು ಮಾಡುವವರೆಗೆ ಆ ದೂತರನ್ನು ತಡಿಸಿಕೊಂಡರೆ, ಕೆಲಸಕ್ಕೆ ಬಾರದೆಂದು ಆಲೋಚಿಸಿ, ಇದ್ದದ್ದರಲ್ಲಿಯೇ

ಒಂದು ಹಂಚಿಕೆಯನ್ನು ಹೂಡಿದನು. ಮುನ್ನಾದಿವಸ ತೀರ್ಥ ಹರಿವೆಯೊಳಗೆ ಇತ್ತಷ್ಟೇ, ಅದನ್ನಿಷ್ಟು ಎರಕೊಂಡು ಬಂದು ತನ್ನ ಶಿಖೆಯಲ್ಲಿದ್ದ ಮುಂಚಿನ ದಿನ ಮುಡಕೊಂಡ ದೇವರ ಪ್ರಸಾದದ ಹೂವನ್ನು ತೆಗೆದು, ಅವೆರಡನ್ನು ಆ ಸವಾರರ ಕೈಯಲ್ಲಿ ಕೊಟ್ಟು, ಹೋಗಿರ್ರಿ, ಎಂದು ಕಳುಹಿಕೊಟ್ಟನು. ಪರಂತು 'ರಾಮೇಶ್ವರ ಬಿಟ್ಟರೂ ಶನೀಶ್ವರ ಬಿಡನು'. ಅಲ್ಲಿ ಅರಸನು, ಊಟದ ಸಮಯದಲ್ಲಿ, ಆ ತೀರ್ಥವನ್ನು ಸೇವಿಸಿ, ಪ್ರಸಾದವನ್ನು ಕೈಯಲ್ಲಿ ತೆಗೆದುಕೊಂಡು ನೋಡುತ್ತಾನೆ-ಅದರಲ್ಲಿ ತಲೆಕೂದಲು ಇದೆ. ಇದೇನು ಆಶ್ಚರ್ಯವೆಂದು ಆಲೋಚಿಸಿ, ಹಾಗೆಯೇ ಸುಮ್ಮನಿದ್ದು, ಊಟದ ಬಳಿಕ ಆ ಭಟ್ಟನನ್ನುಕರೇಕಳುಹಿಸಿ ವಿಚಾರ ಮಾಡಲಾಗಿ ಆತನು 'ದೇವರ ಮಹಿಮೆ ನಾನರಿಯೆ' ಎಂದು ಸುಳ್ಳಾಡದೆ ಗುಟ್ಟಿನ ಮೇಲೆ ಉತ್ತರ ಕೊಟ್ಟನು. ಆಗ ಆ ಭಕ್ತಿವಂತನಾದ ಅರಸನು 'ಒಳ್ಳೇದು, ಶ್ರೀ ಮೂಕಾಂಬಿಕಾ ಅಮ್ಮನವರ ತಲೆಗೆ ಕೂದಲು ಇದ್ದದ್ದನ್ನು ನೀನು ಕಾಣಿಸದಿದ್ದರೆ, ನಿನಗೆ ಘೋರ ಶಿಕ್ಷೆಯಾದೀತು ಎಂದು ಆ ಭಟ್ಟನನ್ನು ಬೆದರಿಸಿ, ಇಂಥ ದಿವಸವೇ ತಾನು ಕೊಲ್ಲೂರಿಗೆ ಬರುತ್ತೇನಾಗಿ ಅಪ್ಪಣೆ ಮಾಡಿದನು. ಶಿಲಾಮಯವಾದ ಪ್ರತಿಮೆಗೆ ಕೂದಲು ಇರಲಿಕ್ಕೆ ಸಾಧ್ಯವೇ ? ಈ ಅರ್ಚಕನು ಒಳ್ಳೇ ವೇದಾಧ್ಯಯನ ಮಾಡಿದ ಯೋಗ್ಯ ವಿಪ್ರವರ್ಯನಾಗಿದ್ದು, ದೇವರ ಮೇಲೆ ತುಂಬಾ ಭಕ್ತಿ ವಿಶ್ವಾಸವಿದ್ದಂಥವನಾಗಿ, ದೇವಸ್ಥಾನದಲ್ಲಿಯ ಎಲ್ಲ ದೇವತಾ ಕಾರ್ಯಗಳನ್ನು ಯಾವಾಗಲೂ ವಿಧ್ಯುಕ್ತವಾಗಿ ನ್ಯೂನತೆಯಿಲ್ಲದೆ ಮಾಡುತ್ತಾ ಬರುವಲ್ಲಿ ಒಂದು ದಿವಸ ತಪ್ಪಿದ್ದಕ್ಕೆ ಈ ತರದ ಸಂಕಷ್ಟ ಪ್ರಾಪ್ತವಾಯಿತಲ್ಲಾ ದೇವರೇ ಇನ್ನೇನು ಮಡಲಿ ? ಅಯ್ಯೋ ಕರ್ಮಗತೆಯೇ ಎಂದು ಚಿಂತಿಸುತ್ತ, ವ್ಯಥೆಯಿಂದ ಮೃತ ಪ್ರಾಯನಾಗಿ ಇದ್ದ ಸಮಯಕ್ಕೆ ಇದೇ ಅಪ್ಪಯ್ಯನವರು ಈ ಅಂಬಿಕಾ ಸನ್ನಿಧಿಯಲ್ಲಿ ಬಂದು ಮುಟ್ಟಿದರು. ಇವರ ಕೀರ್ತಿಯನ್ನು ಮೊದಲೇ ಕೇಳಿದ ಆ ಭಟ್ಟನು ಇವರಿಗೆ ಅಡ್ಡಬಿದ್ದು, ಗೋಳಾಡಿ, ತನ್ನ ಜೀವ ಉಳಿಸುವಂತೆ ಏನಾದರು ಉಪಾಯವನ್ನು ದಯಪಾಲಿಸಬೇಕೆಂದು ಅರಿಕೆ ಮಾಡಲು- 'ಶ್ರೀಜಗಜ್ಜನನಿಯಾದ ಮಕಾಂಬಿಕೆಗೆ ಅನನ್ಯವಾಗಿ ಶರಣ ಹೋಗಿರಿ. ಆ ದೇವಿಯ ಅನುಗ್ರಹವಿದ್ದರೆ, ಹಾಗೂ ನೋಡೋಣ ಎಂದು ತಕ್ಕಷ್ಟು ಧೈರ್ಯ ಹೇಳಿದರು.

ಅಷ್ಟರಲ್ಲಿ ಒಂದು ಚಮತ್ಕಾರವೇನಾಯಿತೆಂದರೆ-ಯಾವನೋ ಒಬ್ಬ ತುಂಟ ಪಾಳ್ಯಗಾರನು ನೆರೆ ಸೀಮೆಯಲ್ಲಿ ಪ್ರಬಲನಾಗಿ, ನಗರದ ರಾಜ್ಯದ ಮೇಲೆ ದಂಡೆತ್ತಿ ಬರುತ್ತಾನೆಂಬ ಭಯಂಕರ ವಾರ್ತೆಯು ರಾಜಧಾನಿಯಲ್ಲೆಲ್ಲಾ ಹಬ್ಬಿತು. ಆಗ ಅರಸನು ತನ್ನ ಚತುರಂಗ ಬಲವನ್ನು ಸವರಿಸಿ, ಯುದ್ಧಕ್ಕೆ ಸಿದ್ಧನಾಗಿ, ಬೇಗನೇ ಕುಲದೇವಿಯ ದರ್ಶನ ಪಡಕೊಂಡು ಬರಬೇಕೆಂದು ಹೊರಟು, ಕೊಲ್ಲೂರಿಗೆ ಬಂದನು. ಇಂಥ ಗಡಿಬಿಡಿಯಲ್ಲಿ ಅರಸನಿಗೆ ತಾನು ಮೊದಲು ಈ ಭಟ್ಟಗೆ ಹೇಳಿದ ಮಾತು ನೆನಪಿತ್ತೋ ಹ್ಯಾಗೋ ಇರಲಿ. ಅವನು ಸ್ನಾನ ಸಂಧ್ಯಾವಂದನೆಯನ್ನು ತೀರಿಸಿಕೊಂಡು ದೇವರಿಗೆ ಆರತಿ ಎತ್ತುವ ಸಮಯಕ್ಕೆ ದೇವಸ್ಥಾನದಲ್ಲಿ ಬಂದು ದೇವರ ಎದುರಿಗೆ ನಿಂದಿರಲು, ಅಪ್ಪಯ್ಯನವರು ತಮ್ಮ ವೀಣೆಯನ್ನು ಸಜ್ಜುಮಾಡಿ, ದೇವರ ಮುಂದೆ ನಿಂತು 'ಅರಸನ

ಮೇಲೆ ಬಂದ ಸಂಕಟವನ್ನು ನಿವಾರಿಸುತ್ತೇನೆಂದು ಅಭಯ ಪ್ರಸಾದವನ್ನು ಕೊಡು' ಎಂಬರ್ಥದ ನಾ ನಿನ್ನ ಪಾದದ ಬಳಿಗೆ ಬಂದೆನು. ಹೂವಾ ಕೊಡಿಸೆ ॥ ಭಕ್ತರಾ ಒಡಂಬಡಿಸೆ । ಮನದ ಜ್ಞಾನವ ಬಿಡಿಸೆ ॥ ಮನಕೆ ಸಂತೋಷದ ಕೊಡಿಸೆ ॥ ಎಂಬಾದಿಯಾದ (ಮುಂಚೆ ಪದಸಂಗ್ರಹದೊಳಗಿನ ೧೯ನೇ) ಪದವನ್ನು ಹಾಡಿದರು.

ಕೂಡಲೇ ಎಂಥಾ ಚಮತ್ಕಾರವಾಯಿತು । ಈ ಪದ ಮುಗಿಯುವ ಮೊದಲೇ ಶಿಲಾಮಯವಾದ ಆ ಅಂಬಿಕ ಮೂರ್ತಿ ಎಂಬುದು ಮಹಾ ರೌದ್ರರೂಪಿಣಿಯಾದ ಪ್ರತ್ಯಕ್ಷ ಚಂಡಿಕೆಯಂತೆ ಎಲ್ಲರಿಗೂ ತೋರಿ, ಶಿಖೆಯಿಂದ ಕಾಲುಂಗುಟ ಪರಿಯಂತ ಬೀಸಿ ಬಿಟ್ಟ ತಲೆಕೂದಲಿನ ಮೇಲೆ ಇರುವುದಾಗಿ ಕಾಣುವ ಒಂದು ಹೂವಿನ ಚಂಡು ಥಟ್ಟನೆ ಹಾರಿ ಬಂದು, ಅರಸನ ಮೈಮೇಲೆ ಬಿತ್ತು. ಅಹಹಾ । ಇದು ಮಾನುಷ ಕೃತಿಯೋ, ದೈವತಂತ್ರವೋ, ಏನನ್ನಬೇಕು ? ಮುಖ್ಯ, ದೇವರು ಭಕ್ತರಿಗೆ ಯಾವ ರೂಪವನ್ನು ತೋರಿಸುವದಕ್ಕಾದರೂ ಸಿದ್ಧನಾಗಿದ್ದಾನೆಂಬುದಕ್ಕೆ ಅನುಮಾನವಿಲ್ಲವು.

೪. ನಗರದ ರಾಜಧಾನಿಯಲ್ಲಿ ಅಪ್ಪಯ್ಯನವರ ಜಾತಿಯ ಅನೇಕ ಸಾರಸ್ವತ ಬ್ರಾಹ್ಮಣರು ಅರಮನೆಯಲ್ಲಿ ಮನೆವಾರ್ತೆ, ಉಗ್ರಾಣ, ಚಿಕ್ಕ ಅರಮನೆ, ದೊಡ್ಡ ಅರಮನೆ ಇತ್ಯಾದಿ ಒಂದೊಂದಕ್ಕೆ ಒಬ್ಬೊಬ್ಬರು ಮೇಲುದ್ಯೋಗಸ್ಥರಾಗಿ ಇರುತ್ತಿದ್ದರು. ಅಪ್ಪಯ್ಯನವರ ಕೀರ್ತಿಯು ಆ ನಗರದ ಅರಸನಿಗೆ ಗೊತ್ತಾದ ಬಳಿಕ ಅದು ರಾಜಸ್ಥಾನದಲ್ಲೆಲ್ಲ ಹಬ್ಬುವದೇ ಆಯಿತು. ಕೊಲ್ಲೂರಲ್ಲಿ ದರ್ಶನವಾದಾಗ ಅಪ್ಪಯ್ಯನವರಿಗೆ ತಮ್ಮ ರಾಜಧಾನಿಗೆ ಬರಬೇಕಾಗಿ ಅರಸನು ಬಹಳವಾಗಿ ಹೇಳಿಕೊಂಡಿದ್ದನಂತೆ, ಆ ನೆನಪಿನಿಂದಲೂ ಇವರ ಜಾತಿ ವರ್ಗದ ಉದ್ಯೋಗಸ್ಥರ ಆಗ್ರಹದಿಂದಲೂ ಒಂದು ದಿನ ನಗರಕ್ಕೆ ಹೋಗಬೇಕೆಂದು ಮನಸ್ಸುಳ್ಳವರಾಗಿ ಹೊರಟು, ಅನೇಕ ಪಯಣಗತಿಯಿಂದ ಆ ರಾಜಧಾನಿಯೊಳಗೆ ಹೊಕ್ಕರು ; ಹಾಗೂ ಅರಸನ ಒಡ್ಡೋಲಗವಾಗುವ ದಿವಸ ತಮ್ಮ ವೀಣೆಯನ್ನು ಹಿಡಕೊಂಡು ರಾಜಮಂದಿರವನ್ನು ಪ್ರವೇಶಿಸಿದರು. ರಾಜಾಶ್ರಯದಲ್ಲಿ ಅನೇಕಾನೇಕ ಪಂಡಿತರು ಶಾಸ್ತ್ರಿಗಳು ಕವಿಗಳು ಇರುತ್ತಾರಷ್ಟೆ. ಅವರೆಲ್ಲರೂ ಈ ಸಾಧುವಿಗಿ ನೋಡಿ "ಇವರು ಯಾವ ಶಾಸ್ತ್ರಕಾರರು ? ಏನು ಬಲ್ಲರು ?" ಎಂಬ ಚರ್ಚೆ ಮಾಡಹತ್ತಿದರು. ಇದಲ್ಲದೆ, ಬರಿಗೈಯ್ಯಿಂದ ರಾಜದರ್ಶನ ಮಾಡಲಿಕ್ಕೆ ಬಂದದ್ದು ಶಾಸ್ತ್ರವಿರುದ್ಧವೆಂದು ಇವರಿಗೆ ಕುಚೇಷ್ಟೆ ಮಾಡಲಿಕ್ಕೆ ಹಣಿಕಿದರು; ಇದು ಅಪ್ಯನವರ ಲಕ್ಷ್ಯಗೆ ಬಂದು, ಇದ್ದದ್ದರಲ್ಲಿಯೇ ಏನು ಉಪಾಯ ಮಾಡೋಣ ಎಂದು ಅತ್ತಿತ್ತ ನೋಡಲು, ಅಲ್ಲೇ ಏನು ಉಪಾಯ ಮಾಡೋಣ ಎಂದು ಅತ್ತಿತ್ತ ನೋಡಲು, ಅಲ್ಲೇ ಮೂಲೆಗೆ ಒಂದು ಗೆರೆಟೆ ಬಿದ್ದದ್ದನ್ನು ನೋಡಿ, ಅದನ್ನು ಎತ್ತಿಕೊಂಡು, ಅದರ ಮೇಲೆ ಶ್ರೀದ್ರಮಾಯಣ ಪುಣ್ಯಕಥೆಯನ್ನು ಸಂಕ್ಷಿಪ್ತವಾಗಿ ಪದ್ಯರೂಪದಲ್ಲಿ ಬರೆದರು. ಅಷ್ಟರಲ್ಲಿ ಅರಸನು ಬಂದು ಸಿಂಹಾಸನಾರೂಢನಾಗಲು, ಆ ನೃಪಸನ್ನಿಧಿಯಲ್ಲಿ ಇದನ್ನು ನಜರಗಾಣಿಕೆಯಾಗಿ ಇಟ್ಟುಬಿಟ್ಟರು. ಆಗ ರಾಜಾಜ್ಞೆಯ ಮೇರೆಗೆ, ಅಲ್ಲಿದ್ದ ಕವಿಗಳು ಅದನ್ನು ಎತ್ತಿ ಓದಲು, ಆ ನವರಸಭರಿತವಾದ ಪದ್ಯಗಳನ್ನು ಕೇಳಿ ಬಹಳ ಆನಂದಪಟ್ಟು, ವಿದ್ಯಾಭಿಮಾನಿಯಾದ

ಆ ಅರಸನು ಇವರಿಗೆ 'ಅಪ್ಪಯ್ಯ ವರಕವಿಗಳು' ಎಂಬ ಬಿರುದನ್ನು ಕೊಟ್ಟನು. ಬಳಿಕ ರಾಜಾಗ್ರಹದಿಂದ ಇವರು ಅಲ್ಲಿಯೇ ಬಹಳ ದಿವಸ ಉಳಿದು, ಇನ್ನು ಅನೇಕ ಕಾವ್ಯಕವನಗಳಿಂದ ಆ ಸಂಗೀತ ಪ್ರಿಯನಾದ ಅರಸನ ಮನರಂಜಿಸಿ, ಅನಂತರ ಅಲ್ಲಿಂದ ಹೊರಟು ಬಂದರು. ಆ ಕಾಲದಿಂದ ಇವರು ಪ್ರತಿವರ್ಷ ನಗರಕ್ಕೆ ಹೋಗಿ, ಅಲ್ಲಿ ಕೆಲಕಾಲ ಇರುತ್ತಿದ್ದರು ; ಆಗ ಅರಸನು ತನ್ನ ಊಟ ಉಪಚಾರಗಳಾದ ನಂತರ, ವಿಶ್ರಾಂತಿಯ ವೇಳೆಯಲ್ಲಿ, ಇವರನ್ನು ಬರಮಾಡಿಕೊಂಡು, ಇವರ ವಿವೇಕ ಯುಕ್ತ ಪದಗಳನ್ನೂ, ಉಪದೇಶಪರವಾದ ಮಾತುಗಳನ್ನೂ ಆಲಿಸುತ್ತಾ ಸಂತೋಷದಿಂದ ಹೊತ್ತು ಕಳಿಯುತ್ತಿದ್ದನು.

೫. ನಗರದ ಅರಮನೆಯ ಬಾಗಿಲ ಕಾವಲಿಗೆ ಇದ್ದ ಒಬ್ಬಾನೊಬ್ಬ ಶಿಪಾಯಿಯು ಈ ಮಹಾತ್ಮರು ಕಂಡ ಕಂಡ ವಿಷಯಗಳ ಕುರಿತು ಪದಗಳನ್ನು ಕಟ್ಟುತ್ತಾರೆಂಬ ಕೀರ್ತಿ ಕೇಳಿದ್ದನು; ಪರಂತು, ಬಾಗಿಲ ಕಾಯುವುದನ್ನು ಬಿಟ್ಟು, ಒಳಗೆ ಅರಮನೆಯಲ್ಲಿ ಇವರು ಹೇಳುವ ಗೀತಗಳನ್ನು ಆಲೈಸಲಿಕ್ಕೆ ಹೋಗುವದಕ್ಕೆ ಆತನಿಗೆ ತೆರಪಿದ್ದಿಲ್ಲ. ಹೀಗಿನ ಅವಸ್ಥೆಯಲ್ಲಿ, ಒಂದು ದಿನ, ಅವರು ಬಾಗಿಲ ದಾಟಿ ಹೋಗುವಾಗ, ಅಯ್ಯಾ, ತಮ್ಮಡಿಗೆ ವಂದನೆ ಮಾಡಿದೆನು. ತಾವು ಬೇಕಾದ್ದರ ಮೇಲೆ ಗೀತ ಕಟ್ಟುತ್ತೀರಿಯಂತೆ; ನನ್ನ ಕೈಯಲ್ಲಿರುವ ಈ ತುಪಾಕಿಯ ಮೇಲೆ ಒಂದು ಪದವ ಹೇಳಿರಿ, ನೋಡೋಣ; ಎಂದು ಅರಿಕೆ ಮಾಡಿದ್ದಕ್ಕೆ, ಅವರು ತಡಮಾಡದೆಲೆ ॥ ಎನ್ನ ಮೋಹದ ತುಪಾಕಿಯ ಪಿಡಿದು ಹಸ್ತದಲಿ। ಚನ್ನಾಗಿ ಶೃಂಗರಿಸುವೆ ॥ (ಎಂಬ ಮುಂದೆ ಪದಸಂಗ್ರಹದೊಳಗಿನ ೭ನೇ ) ಪದವನ್ನು ಹೇಳಿದರು; ಇದನ್ನು ಕೇಳಿ ಆತನಿಗೆ ವಿಸ್ಮಯವಾಯಿತು. ಈ ವರ್ತಮಾನ ಇನ್ನೊಬ್ಬ ಕಾವಲುಗಾರನು ಕೇಳಿ, ಇನ್ನೊಂದು ದಿನ ಅವನು ಕಾವಲಿಗೆ ಇದ್ದಾಗ, ಇವರು ಆ ದ್ವಾರದೊಳಗಿಂದ ಹಾದು ಹೋಗುವ ಸಮಯ ನೋಡಿ, ಅವನು– ತನ್ನದೊಂದು ಗುಡುಗುಡಿಯದೆ; ಅದರ ಮೇಲೆ ಒಂದು ಪದವನ್ನು ಕಟ್ಟಿ ಕೊಡಬೇಕು–ಎಂಬುದಾಗಿ ಅಪ್ಪಯ್ಯನವರಿಗೆ ಹೇಳಿಕೊಂಡನು. ಅವನು ಒಂದುವೇಳೆ ಅಪಹಾಸ್ಯದಿಂದ ಹೇಳಿದ್ದರೂ, ಇವರು ಯಾವ ಉಪಾಯದಿಂದಲಾದರೂ ವೇದಾಂತ ತತ್ವಗಳ ಪ್ರಸಾರ ಮಾಡಬೇಕೆಂಬುದೊಂದೇ ಉಪಕಾರಬುದ್ಧಿಯಿಂದ ಸಮ್ಮತಿಸಿ, ॥ ಗುಡುಗುಡಿಯನು ಸೇದಿ ನೋಡೋ । ನಿನ್ನ *ಒಡಲೊಳಗಿದ್ದ ರೋಗವನೀಡಾಡೋ ॥ ಎಂಬ (ಪದ ಸಂಗ್ರಹದೊಳಗಿನ ೧೧ನೇ) ಪದವನ್ನು ರಚಿಸಿ, ಆತಗೆ ಅದನ್ನು ಬರಕೊಟ್ಟು, ತಾವು ಮುಂದೆ ಹೋದರು.

ಹೀಗೆ ಶ್ರೀಮತ್ ಭಟಕಳ ಜೀವನ್ಮುಕ್ತ ಕವಿ ಅಪ್ಪಯ್ಯ ಸಮರ್ಥರ ಪದಗಳಲ್ಲಿ ಕೆಳದಿ ಇತಿಹಾಸ ತುಣುಕುಗಳು ಹಾಸುಹೊಕ್ಕಾಗಿ ಬಂದಿದೆ. ಇದು ಕೆಳದಿ ಇತಿಹಾಸದ ಅಧ್ಯಯನ ಮಾಡುವವರಿಗೆ ಪ್ರಮುಖ ಆಕರವಾಗಿಯೂ ಪರಿಣಮಿಸಿವೆ. ಇಂತಹ ಇನ್ನೂ ಹತ್ತು ಹಲವು ಕೃತಿಗಳಲ್ಲಿ ಕೆಳದಿ ಇತಿಹಾಸ ಕುರಿತು ನಮಗೆ ಮಾಹಿತಿ ಲಭ್ಯವಾಗುತ್ತಿದ್ದು ಅದರ ಬಗೆಗೆ ಬೆಳಕು ಚೆಲ್ಲುವ ಅಗತ್ಯವಿದೆ. ■

# ೧೫. ಕವನ ಹುಟ್ಟುವ ಸಮಯ ಮತ್ತು ಕಾವ್ಯ ಪರಿಕಲ್ಪನೆಗಳು

**–ಸಂಧ್ಯಾ ಲಕ್ಷ್ಮೀನಾರಾಯಣ ಹೆಗಡೆ**

ವಾಗರ್ಥವಿವ ಸಂಪ್ರಕ್ತೌ ವಾಗರ್ಥಪ್ರತಿಪತ್ತಯೆ ।
ಜಗತಃ ಪಿತರೌ ವಂದೇ ಪಾರ್ವತೀಪರಮೇಶ್ವರೌ ॥

ಎಂಬ ಕಾಳಿದಾಸನ ಶ್ಲೋಕ ಇಲ್ಲಿಯವರೆಗೆ ಎಷ್ಟು ಬಾರಿ ಚರ್ಚಿತವಾಗಿದೆಯೋ ಗೊತ್ತಿಲ್ಲ; ಆದರೆ ಶಬ್ದಾರ್ಥಗಳ, ಭಾಷಾರ್ಥಗಳ, ಕಾವ್ಯಾನುಭವಗಳ ಮಾತು ಬಂದಾಗೆಲ್ಲ ಈ ಶ್ಲೋಕ ನೆನಪಾಗುವುದು ಸುಳ್ಳಲ್ಲ. ಶಬ್ದಕ್ಕೊಂದು ಅರ್ಥವಿರುತ್ತದೆ, ಆ ಅರ್ಥ ಶಬ್ದದ ಜೊತೆ ಜೊತೆಗೇ ಸ್ಫುರಣವಾಗುತ್ತದೆ, ವಾಗರ್ಥಗಳ ಅನ್ಯೋನ್ಯತೆ ಬಿಡಿಸಲಾಗದ್ದು ಎಂಬ ತಿಳಿವಳಿಕೆಯೇ ಅತ್ಯಂತ ರೋಚಕ. ಈ ತಿಳುವಳಿಕೆಯೇ ವಾಗ್ವ್ಯಾಪಾರದ ವಾಚ್ಯಾರ್ಥ, ವ್ಯಂಗ್ಯಾರ್ಥ, ಕಾವ್ಯಪರಿಕಲ್ಪನೆಗಳ ಚರ್ಚೆಯ ಇತಿಹಾಸಕ್ಕೆ ಕಾರಣವಾಯಿತು; ಮೀಮಾಂಸಾ ಕ್ರಮದ ಚರಿತ್ರೆಗೆ ಹೇತುವಾಯಿತು. ಭಾಷಿಕ ಉಪಯೋಗದ ಉತ್ಕೃಷ್ಟ ಮಟ್ಟ ಎನ್ನುವ ಕಾವ್ಯದ ಚರ್ಚೆಯಲ್ಲಿ ಭಾರತೀಯರು ಈ ತಿಳುವಳಿಕೆಯನ್ನು ಹೊಂದಿದ್ದುದು ಸುಳ್ಳಲ್ಲ. ಇಂದು ಕಾವ್ಯ ಚರ್ಚೆಯನ್ನು ನಾವು ನೋಡಿದರೆ ಎರಡು ಸಹಸ್ರಮಾನದ ಇತಿಹಾಸವಿರುವುದನ್ನು ಕಾಣುತ್ತೇವೆ. ಭಾಷೆಯಲ್ಲಿ ಕಾವ್ಯ ಹೇಗೆ ರೂಪು ತಾಳುತ್ತದೆ ? ಕಾವ್ಯ ಎಂದರೇನು ? ವಾಚ್ಯಾರ್ಥಕ್ಕಿಂತ ಭಿನ್ನವಾದದ್ದು ಕಾವ್ಯವೇ ? ಕಾವ್ಯವೆಂದರೆ ವ್ಯಂಗ್ಯಾರ್ಥವೇ ? ಕಾವ್ಯದ ಕಾರಣಗಳು–ಇವೆಲ್ಲ ಚರ್ಚೆಗೆ ಎರಡು ಸಹಸ್ರಮಾನದ ಇತಿಹಾಸವಿದ್ದರೂ ಇಂದಿಗೂ ಚರ್ಚೆ ನಿಂತಿಲ್ಲ. ನಮ್ಮ ಸುತ್ತಲೇ ಇರುವ ಕವಿಯೊಬ್ಬ ಇದರ ಬಗ್ಗೆ ಯೋಚಿಸುತ್ತಾನೆ, ತನ್ನನಿಸಿಕೆಯನ್ನೂ ಬರೆಯುತ್ತಾನೆ. ಅನೇಕ ಕವಿ ವಿಮರ್ಶಕರು ಇದರ ಬಗ್ಗೆ ಮಾತನ್ನಾಡುತ್ತಾರೆ. ಅಲ್ಲಿಗೆ ಕಾವ್ಯಮೀಮಾಂಸೆಗೆ ಅಂದರೆ ಕಾವ್ಯದ ಕುರಿತಾದ ಚರ್ಚೆಗೆ ಸಾವಿಲ್ಲವೆಂದಾಯಿತು. ಈ ಅಂಶವನ್ನು ಗಮನದಲ್ಲಿರಿಸಿಕೊಂಡು ಈ ಮೊದಲು ಬೆಳೆದು ಬಂದ ಕಾವ್ಯ ಚರ್ಚೆಯ ಮೀಮಾಂಸಾಕ್ರಮವನ್ನೂ, ಕೆ. ಎಸ್. ನರಸಿಂಹಸ್ವಾಮಿಯವರ 'ಕವನ ಹುಟ್ಟುವ ಸಮಯವನ್ನೂ' ಸಂವಾದಿಯಾಗಿಟ್ಟು

ನೋಡುವ ಕುತೂಹಲಕ್ಕೆ ಈ ಲೇಖನದಲ್ಲಿ ಅಭಿವ್ಯಕ್ತಿ ಕಲ್ಪಿಸಿಕೊಳ್ಳಲಾಗಿದೆ.

ಹಿಂದೆ ಬೆಳೆದುಬಂದ ಮೀಮಾಂಸಾಕ್ರಮವನ್ನು ಅವಲೋಕಿಸಿದರೆ ಇಂದು ಅಷ್ಟು ಎತ್ತರದ ಮಟ್ಟದಲ್ಲಿ ಮೀಮಾಂಸಾಕ್ರಮ ಬೆಳೆದುಬಂದಿಲ್ಲ. ವಿಮರ್ಶೆಯ ಜೊತೆಗೇ ಕೆಲವೊಂದು ಮಾತುಗಳು ಬಂದಿರಬಹುದಾದರೂ ನಿಶ್ಚಿತವಾದ, ತೀಕ್ಷ್ಣ ಚರ್ಚೆ ನಡೆದಿಲ್ಲ ಎಂದೇ ಹೇಳಬೇಕಾಗುತ್ತದೆ. ಅದೇನೇ ಇರಲಿ ಕವಿ ಮಾತ್ರ ಅಲ್ಲಲ್ಲಿ ತನ್ನ ಕಾವ್ಯದ ಹುಚ್ಚಿನ ಬಗ್ಗೆ ಮಾತನ್ನಾಡುತ್ತಲೇ ಬಂದಿದ್ದಾನೆ. ಬೇಂದ್ರೆ, ಕುವೆಂಪು, ಅಡಿಗ ಪು.ತಿ.ನ. ಮುಂತಾದ ಮಹತ್ವದ ಕವಿಗಳು ಕಾವ್ಯ ಎಂದರೇನು? ಅವುಗಳ ಹುಟ್ಟಿನ ಬಗ್ಗೆ ತಮ್ಮ ಅನಿಸಿಕೆಗಳೇನು ಎಂಬುದನ್ನು ತಮ್ಮ ಕಾವ್ಯದಲ್ಲಿ ಹೇಳಿದ್ದಾರೆ. ಹಾಗೆಯೇ ಕವಿ ಕೆ. ಎಸ್. ನರಸಿಂಹಸ್ವಾಮಿಯವರೂ ಕೂಡಾ ತಮ್ಮ ಕವನ ಹುಟ್ಟುವ ಸಮಯ'ದಲ್ಲಿ ತಮ್ಮ ವಿಶಿಷ್ಟ ಅನುಭವವನ್ನು ವ್ಯಕ್ತಗೊಳಿಸಿದ್ದಾರೆ. ಕವನ ಹುಟ್ಟುವ ಸಂದರ್ಭದ ಕವಿಯ ಮನಸ್ಥಿತಿ, ಕಾವ್ಯಕಾರಣಗಳು, ಕಾವ್ಯದ ಅಭಿವ್ಯಕ್ತಿ ಮುಂತಾದ ಸೂಕ್ಷ್ಮ ವಿಷಯಗಳ ಕುರಿತು ಕವಿ ಇದರಲ್ಲಿ ಮಾತನ್ನಾಡುತ್ತಾರೆ. ಕವಿಯ ಈ ಅನಿಸಿಕೆಯನ್ನು ನಮ್ಮ ಕಾವ್ಯಚರ್ಚೆಯ ಮೊದಲಿನ ಪರಿಕಲ್ಪನೆಗಳೊಂದಿಗೆ ನೋಡಿ ಚರ್ಚಿಸಬಹುದಾಗಿದೆ.

**'ಇನ್ನೊಂದು ದಿವಸ ಕಾದರೆ ನಷ್ಟವೇ ?' – 'ನಾನೃಷಿಃ ಕುರುತೇ ಕಾವ್ಯಂ'**

ಬಿದಿರ ತಡಿಕೆಯ ಹಿಂದೆ ಬಿಚ್ಚಲಾಗದ ಕಣ್ಣು
ಕವನ ಹುಟ್ಟಿತೆ ? ಎಂದು ಕೇಳುತ್ತಿದೆ.
ನಾನೀಗ ತುಟಿಯಂಚಿನಲ್ಲಿ ಹೇಳಿದ್ದಿಷ್ಟೆ;
ಇನ್ನೊಂದು ದಿವಸ ಕಾದರೆ ನಷ್ಟವೆ ?

'ಋಷಿಯಲ್ಲದವನು ಕವಿಯಾಗಲಾರ' ಎಂಬುದು ತುಂಬ ಹಳೆಯ ಮಾತು. ಇಲ್ಲಿ 'ಋಷಿ' ಎನ್ನುವ ಮಾತಿಗೆ ಸನ್ಯಾಸಿ, ವಿರಕ್ತ ಎಂದು ಶಬ್ದಶಃ ಅರ್ಥ ಮಾಡಬೇಕಿಲ್ಲ. ಕವಿಯಾದವನು ಕಾವ್ಯ ಬರೆಯುವ ಸಮಯದಲ್ಲಿ ನಿಜವಾಗಿಯೂ ತಪಸ್ವಿಯೇ, ಋಷಿಯೇ ಹೌದು. ಯಾಕೆಂದರ ಆ ಸಮಯದಲ್ಲಿ ಉಳಿದೆಲ್ಲ ಲೌಕಿಕ ವ್ಯಾಪಾರದಿಂದ ಆತ ಮುಕ್ತನಾಗಿರುತ್ತಾನೆ. ತಾನು ಹಾಗೂ ತನ್ನಕವನ ಮಾತ್ರ ಅವನ ದೃಷ್ಟಿಯಾಗಿರುತ್ತದೆ. ಇದು ತಪಸ್ವಿಗೆ ದೇವರ ಮೇಲಿರುವ ನಿಚ್ಚಳ ಭಕ್ತಿಯಂತೆ. ಹೇಗೆ ತಪಸ್ವಿಯ ಕಣ್ಣಿಗೆ ದೇವರು ಮಾತ್ರ ಮುಖ್ಯವೋ, ದೇವರು ಮಾತ್ರ ಕಣ್ಣೆದುರಿಗಿನ ಸತ್ಯವೋ ಕವಿಗೂ ಕಾವ್ಯ ಹಾಗೆಯೇ. 'ಬಿದಿರ ತಡಿಕೆಯ ಹಿಂದೆ ಬಿಚ್ಚಲಾಗದ ಕಣ್ಣು ಕವನ ಹುಟ್ಟಿತೇ' ಎಂದು ಕೇಳಿದರೆ ಕವಿ ತುಟಿಯಂಚಿನಲ್ಲಿ 'ಇನ್ನೊಂದು ದಿವಸ ಕಾದರೆ ನಷ್ಟವೇ ?' ಎನ್ನುತ್ತಾನೆ. ಇದು ಕವಿ ಮತ್ತು ಕಾವ್ಯದ ನಡುವೆ ನಡೆಯುವ ಆತ್ಮಸಂವಾದ. ಇಲ್ಲಿ ಕವನ ಹುಟ್ಟಿತೇ ?' ಎಂದು ಹೇಳುವುದೂ ಕವಿಯ ಮನಸ್ಸೇ. 'ಇನ್ನೊಂದು ದಿವಸ ಕಾದರೆ ನಷ್ಟವೇ ?' ಎಂದು ಕೇಳುವುದೂ ಕವಿಯ ಮನಸ್ಸೇ. ಆದರೆ ಒಂದು ಕವಿಯ ಭಾವನಾ ವಲಯಕ್ಕೆ ಸಂಬಂಧಪಟ್ಟ ವಿಷಯವಾಗಿದ್ದರೆ ಇನ್ನೊಂದು ಬುದ್ಧಿಗೆ ಸಂಬಂಧಪಟ್ಟ ವಿಷಯ. ಹಸಿಹಸಿಯಾದ ಅನುಭವ ವಿಶೇಷವನ್ನು ಕಲಾತ್ಮಕವಾದ

ಭಾಷೆಯ ಚೌಕಟ್ಟಿನಲ್ಲಿ ಹಿಡಿದಿಡುವಂತೆ ಸಹಾಯ ಮಾಡುವುದು ಬುದ್ಧಿ. ಇದು ದೇವದರ್ಶನದ ತರಾತುರಿಯ ತಪಸ್ವಿಗೆ ಇಂದ್ರಿಯ ನಿಗ್ರಹದ ಕಾಯುವಿಕೆಯ ವಿವೇಕವನ್ನು ಬೋಧಿಸುವ ಬುದ್ಧಿಯಂತೆ. ಕವಿಯ ಕಾಯುವಿಕೆ ಹಾಗೂ ತಪಸ್ವಿಯ ಕಾಯುವಿಕೆ ಸಂದರ್ಭದ ಮಟ್ಟಿಗೆ ಒಂದೇ. ತಪಸ್ವಿಯ ಕಾಯುವಿಕೆ ದೇವದರ್ಶನದಲ್ಲಿ ಸಾಫಲ್ಯ ಹೊಂದಿದರೆ ಕವಿಯ ಕಾಯುವಿಕೆ ಕಾವ್ಯದರ್ಶನದಲ್ಲಿ ಸಾಫಲ್ಯ ಕಾಣುತ್ತದೆ. ಈ ಕಾಯುವಿಕೆ ವ್ಯರ್ಥವಲ್ಲ. ಬದಲಿಗೆ ಸಾರ್ಥಕವಾದದ್ದು. ಇಂದ್ರಿಯ ನಿಗ್ರಹವಿಲ್ಲದ ತಪಸ್ವಿಯ ತಪಸ್ಸು ವ್ಯರ್ಥವಾಗುವಂತೆ ಬುದ್ಧಿ ಹಾಗೂ ಭಾಷಾ ಹಿಡಿತವಿಲ್ಲದೇ ಕಾವ್ಯ ವ್ಯರ್ಥ ಪ್ರಲಾಪವಾಗಬಾರದು. ಅದಕ್ಕೇ ಕವಿ ಬಿಚ್ಚಲಾರದ ತಡಿಕೆಯ ಹಿಂದೆ ಇನ್ನೂ ಕಣ್ಣು ಬಿಟ್ಟಿರದ ಭ್ರೂಣಾವಸ್ಥೆಯ ಅನುಭವ ವಿಷಯಕ್ಕೆ ಬುದ್ಧಿ, ಭಾಷೆ, ಕಾಲ ಎಂಬ ಕಾಯುವಿಕೆಯ ಸೂಚನೆ ಕೊಟ್ಟು ಉತ್ತಮ ಕಾವ್ಯ ಶಿಶುವಿನ ಜನನಕ್ಕೆ ಕಾರಣನಾಗುತ್ತಾನೆ. ಅಲ್ಲಿಗೆ ತಪಸ್ವಿಯ ನಿಗ್ರಹ ಮತ್ತು ಗಮನವೇ ಕವಿಗೂ ಕಾವ್ಯಸಂದರ್ಭದಲ್ಲಿ ಇರುವಂತದ್ದು; ಇನ್ನೊಂದು ದಿವಸ ಕಾದರೆ ನಷ್ಟವಿಲ್ಲದಂತದು. 'ನಾನೃಷಿಃ ಕುರುತೇ ಕಾವ್ಯಂ'ಎಂಬ ಮಾತು ಕವಿಯ 'ಕವನ ಹುಟ್ಟುವ ಸಮಯ'ಕ್ಕೆ ಸರಿಯಾಗಿ ಹೊಂದಿಕೆಯಾಗುವಂತದ್ದು.

**'ತಕ್ಕಂಥ ಮಾತು' – 'ರೀತಿರಾತ್ಮ ಕಾವ್ಯಸ್ಯ'**

ಅನುಭವದ ಆಯ್ಕೆ ಮುಗಿದಿತ್ತು. ಒದಗಿರಲಿಲ್ಲ
ತಕ್ಕಂಥ ಮಾತು. ಕಾಯುತ್ತ ನಿಂತೆ.
ಅಬ್ಬರಗಳನ್ನು ದಾಟಿದ ಗಟ್ಟಿ ಪಂಕ್ತಿಗಳ
ಸಹಜ ಸಂಚಾರಗಳ ಕನಸ ಕಂಡೆ.

ಕವಿ ಈಗಲೂ ಕಾಯುತ್ತಾನೆ. ಕವನಕ್ಕಾಗಿ ಅನುಭವ ಸಿದ್ಧವಾಗಿದೆ. ಅದನ್ನು ಯಾವುದೇ ಅಬ್ಬರವಿಲ್ಲದೇ ಸಹಜವಾದ, ಆಪ್ತವಾದ, ಗಟ್ಟಿಯಾಗಿ ನಿಲ್ಲುವ 'ತಕ್ಕಂಥ ಮಾತಿನ'ನಲ್ಲಿ ಹಿಡಿದಿಡುವ ಪ್ರಯತ್ನದಲ್ಲಿ ಕವಿ ತೊಡಗಿಕೊಂಡಿದ್ದಾನೆ. ಸಹಜತೆಯೇ ಇಲ್ಲಿ ಮುಖ್ಯವಾದದ್ದು. ಉತ್ತಮ ಕಾವ್ಯಕ್ಕೆ ಉತ್ತಮ ಅನುಭವ ವಿಶೇಷವೊಂದೇ ಸಾಲದು. ಉತ್ತಮ ಭಾಷೆ ಹಾಗೆ ಉತ್ತಮ 'ರೀತಿ'ಯೂ ಬೇಕು. ಅದಿಲ್ಲದೇ ಕಾವ್ಯ ಸೊಗಸದು. ಅದಕ್ಕೇ ನಮ್ಮ ಹಿಂದಿನ ಅಲಂಕಾರಿಕ ವಾಮನ ಎಂದ. 'ರೀತಿಯೇ ಕಾವ್ಯದ ಆತ್ಮ' ಎಂದ. ಅದಿಲ್ಲದೇ ಕಾವ್ಯವನ್ನು ಹೃದ್ಯ ಮಾಡಿಕೊಳ್ಳುವುದಾದರೂ ಹೇಗೆ ? ಅದಕ್ಕೆ 'ತಕ್ಕಂಥ ಮತು' ಬೇಕು. ಅದು ಮನದಲ್ಲಿ ಹೊಳೆಯುವವರೆಗೆ ಕವಿ ಕಾಯುತ್ತಾನೆ. ಕವಿಗೆ ಭಾಷಾ ಸಹಜತೆಯೂ ಅತ್ಯಂತ ಮುಖ್ಯ. ಸಂದರ್ಭ, ಅನುಭವ ಯಾವುದೂ ಕೃತಕವೆನಿಸದ ಹಾಗೆ ಕಾವ್ಯವನ್ನು ಹೊಸೆಯಬೇಕಾಗುತ್ತೆ. ಸಹಜವಾದ ಕಾವ್ಯ ಆಪ್ತವಾಗುತ್ತದೆ, ಕೃತಕವಾದದ್ದು ದೂರಾಗುತ್ತದೆ. ಅದಕ್ಕೇ ಕವಿ ತಕ್ಕಂಥ ಮಾತಿಗಾಗಿ ಕಾಯುತ್ತಾನೆ. ರೀತಿಯ ಹುಡುಕಾಟ ಕವಿಗೆ ನಿರಂತರವಾದದ್ದು. ಸ್ಥೂಲಕ್ಕೆ ಇದು ನಿಂತರೂ ಸೂಕ್ಷ್ಮಕ್ಕೆ ನಿಲ್ಲುವಂತದ್ದಲ್ಲ. ಇದು ಕವನ ಹುಟ್ಟುವಲ್ಲಿನ ಎರಡನೇ ಹಂತ.

**ಕಾವು ಬೆಳಕಾಗುವುದು – ಹೊಳೆಯುವುದು.**

ಆಳದನುಭವವನ್ನು ಮಾತು ಕೈಹಿಡಿದಾಗ
ಕಾವು ಬೆಳಕಾದಾಗ ಒಂದು ಕವನ
ನಾನು ಬಯಲಿಗೆ ಬಂದು ನಿಂತಿದ್ದೇನೆ;
ಬರುವುದಿದೆ ಸರಿಯಾದ ವರ್ತಮಾನ

ಇಲ್ಲಿ ಕವಿ ಹೇಳಿದ 'ಕಾವು ಬೆಳಕಾಗುವುದು' ಎಂಬ ಮಾತನ್ನು ಗಮನಿಸಬೇಕು. ಸಾಮಾನ್ಯರಿಗಾಗದ ವಿಶಿಷ್ಟ ಅನುಭವ ಕವಿಗಾಗುತ್ತದೆ ಎಂಬುದನ್ನು ಎಲ್ಲರೂ ಒಪ್ಪಬೇಕಷ್ಟೇ. ಆದರೆ ಈ 'ಅನುಭವ' ಎನ್ನುವುದು ಕಾವ್ಯ ಎಂಬ ಬೆಳಕಿಗೆ ಕಾರಣವಾಗುವ ಒಂದು ಕಿಡಿ ಅಷ್ಟೆ. ಈ ಅನುಭವದ ಕಿಡಿಗೆ–ಇದನ್ನೇ ಕವಿ 'ಕಾವು' ಎನ್ನುತ್ತಾನೆ–ಮಾತೆಂಬ–ಇದನ್ನು ಬೇಕಾದರೆ ಭಾಷೆ, ಶೈಲಿ ಎಂದು ಹೇಳಬಹುದು–ಆಮ್ಲಜನಕದ ಪೂರೈಕೆಯಾದಾಗ ಅದು 'ಕವನ' ಎಂಬ ಬೆಳಕಾಗಿ ಉಳಿಯುತ್ತದೆ. ಇಲ್ಲಿ ಬೆಳಕು ಎಂಬುದಕ್ಕೆ ಇನ್ನೊಂದು ವಿಚಾರವನ್ನು ಸೇರಿಸಬಹುದು. ಪ್ರತಿಭೆ ಎಂದರೆ ಹೊಳೆಯಿಸುವುದು, ಅಂದರೆ ಏನನ್ನೋ ನೋಡಿ ಕವಿ ತನ್ನೊಳಗೊಂದು ಅನುಭವ ವಿಶೇಷ ಉಂಟಾಗಿರುವಂತೆ ಭಾವಿಸುತ್ತಾನೆ. ಈ ಭಾವಿಸುವ ಕ್ರಿಯೆ, ಅಥವಾ ಅನುಭವ ವಿಶೇಷಕ್ಕೆ ತೆರೆದುಕೊಳ್ಳುವ ಕ್ರಿಯೆ ಕವಿಗೇ ಗೊತ್ತಿಲ್ಲದಂತೆ ನಡೆದಿರುತ್ತದೆ. ಆದರೆ ಇದು ಎಲ್ಲೋ ಮಿಂಚಿನಂತೆ ಬಂದ ಭಾವ. ಅದನ್ನು ಹಾಗೇ ಬಿಟ್ಟರೆ ಹಾಗೇ ನಾಶವಾಗಿ ಹೋಗುತ್ತದೆ. ಅದಕ್ಕಾಗಿಯೇ ಕವಿ ಈ ಕಿಡಿಯಂತಹ ಹೊಳೆಯುವಂತಹ ಸಣ್ಣ ಅನುಭವ ವಿಶೇಷಕ್ಕೆ ಒಂದು ರೂಪು ಕೊಡುವ ಕೆಲಸ ಮಾಡುತ್ತಾನೆ. ಈ ಅನುಭವ ವಿಶೇಷ ತನಗೆ ಮಾತ್ರ ಮಿಂಚಿನಂತೆ ಹೊಳೆದಿದ್ದರ ಅರ್ಥವಂತೂ ಕವಿಗೆ ಇನ್ನೂ ವಿಸ್ತರಿಸಲಾಗದ ಒಗಟೇ. ಈ ಪ್ರತಿಭಾ ವ್ಯಾಪಾರಕ್ಕೆ ಹೊಳೆಯುವುದು ಎಂಬಮಾತೇ ಸರಿಯಾದದ್ದು. ಯಾಕೆಂದರೆ ಈ ಅರ್ಥಸ್ಫುರಣ ಮಿಂಚಿನಂತೆ ನಡೆಯುವಂತದ್ದು. ಇದೇ ಭಾಷೆಯಲ್ಲಿ ಸುಂದರವಾಗಿ ಅಭಿವ್ಯಕ್ತಗೊಂಡಾಗ ಕವನವಾಗುತ್ತದೆ.

ಇದಲ್ಲದೇ 'ಕಾವು ಬೆಳಕಾದಾಗ' ಎಂಬ ಮಾತಿಗೆ ಇನ್ನೂ ಒಂದು ಅರ್ಥವನ್ನು ಕೊಡಬಹುದು. ಕವಿಗೆ ಉಂಟಾದ ಅನುಭವ ವಿಶೇಷವನ್ನು ಇತರರಿಗೆ ಹೇಳಿಕೊಂಡಲ್ಲದೇ ಅವನಿಗೆ ತೃಪ್ತಿಯಿಲ್ಲ. ಅದು ಅವನೆದೆಯೊಳಗಿನ ಕಾವು. ಅದು ಹೊರಬಂದ ಹೊರತು ಕವಿಯ ಚಟಪಡಿಕೆ ನಿಲ್ಲುವುದಿಲ್ಲ. ಅದಕ್ಕೇ ಕುವೆಂಪು 'ಹೇಳಿದರೆ ಹಾಳಾಗುವುದೋ ಅನುಭವ ಸವಿಯು, ಹೇಳದಿರೆ ತಾಳಲಾರನೊ ಕವಿಯು' ಎಂದು ಒಂದು ಕಡೆ ಹೇಳುತ್ತಾರೆ. ಕವಿಯ ಎದೆಯೊಳಗಿನ ಈ ಚಟಪಡಿಕೆಯ ಕಾವು, ಉರಿ ಶಾಂತವಾಗುವುದು ಅಥವಾ ಸಹೃದಯ ವೇದ್ಯವಾಗುವಂತೆ ಸಾಫಲ್ಯ ಹೊಂದಿದ ಬೆಳಕಾಗುವುದು ಅದು ಸಾರ್ಥಕ ಭಾಷೆಯ ಮೂಲಕ ಕವನವಾದಾಗ ಮಾತ್ರ. ಬೆಂಕಿಯ ಕಾವಿನ ಕಿಡಿಯೊಂದು ಬೆಳಕಾಗುವುದು ಎಂದರೆ ಸಾಫಲ್ಯವಲ್ಲದೇ ಮತ್ತಿನ್ನೇನು ? ಸುಡುವ ಕಾವಿನ ಅನುಭವ ಸಹೃದಯರ ಹೃದಯ ಸಂವಾದಕ್ಕೆ ಮತ್ತು ಹೃದಯ ಸಂಸ್ಕಾರಕ್ಕೆ ಕಾರಣವಾಗುವ ಕವನವಾದಾಗ

ಅದು ನಿಜವಾದ ಬೆಳಕೇ ಸರಿ. ಅದಕ್ಕೇ ಕವಿ 'ಆಳದನುಭವವನ್ನು ಮಾತು ಕೈ ಹಿಡಿದಾಗ ಕಾವು ಬೆಳಕಾದಾಗ ಒಂದು ಕವನ' ಎಂದು ಹೇಳುತ್ತಾರೆ.

'ನಾನು ಬಯಲಿಗೆ ಬಂದು ನಿಂತಿದ್ದೇನೆ, ಬರುವುದಿದೆ ಸರಿಯಾದ ವರ್ತಮಾನ'-ಮತ್ತೆ ಕವಿ ಇಲ್ಲಿ ಸರಿಯಾದ ಕಾಲಕ್ಕೆ ಕಾಯುವ ಸೂಚನೆಯಿದೆ. ಕವಿ ಅಭಿವ್ಯಕ್ತಿಗಾಗಿ ಕಾಯುತ್ತಿದ್ದಾನೆ. ಬಯಲಿಗೆ ಬಂದಿದ್ದಾನೆ. ಅಂದರೆ ಅನುಭವಕ್ಕೆ ತನ್ನನ್ನು ತೆರೆದುಕೊಂಡಿದ್ದಾನೆ. ಅಭಿವ್ಯಕ್ತಿಯ ಮಟ್ಟಿಗೆ ಯಾವ ಶೈಲಿಯೋ, ಯಾವ ರೀತಿಯೋ ಕವಿ ಅದನ್ನು ಸ್ವೀಕರಿಸಲು ಸಿದ್ಧನಾಗಿದ್ದಾನೆ. ವಿಶಿಷ್ಟ ಅನುಭವವೊಂದನ್ನು ಹೃದಯದಲ್ಲರಿಸಿಕೊಂಡು ಸದ್ಯದ ಮಟ್ಟಿಗೆ ಭವಿಷ್ಯದ ಸಾಧ್ಯತೆಯಾಗಿರುವ 'ಕವನ'ವನ್ನು ವರ್ತಮಾನದ ಸಾಫಲ್ಯವನ್ನಾಗಿ ಮಾಡಲು ಕವಿ ಹಂಬಲಿಸುತ್ತಾನೆ. ಅವನಿಗೆ ತಿಳಿದಿದೆ- ಸರಿಯಾದ ವರ್ತಮಾನ ಬರುತ್ತದೆ ಎಂದು. ಅದಕ್ಕೇ ಅವನು ಹೇಳಿದ್ದಾನೆ-ಬಯಲಲ್ಲಿ ನಿಂತಿದ್ದೇನೆ, ಸರಿಯಾದ ವರ್ತಮಾನ ನನಗಾಗಿ ಬರುತ್ತದೆ ಎಂದು. ಇದು ಕವನ ಕಟ್ಟುವ ಸಮಯದ ಮೂರನೇ ಹಂತ ಎಂದು ಹೇಳಬಹುದು.

**ಮಾತಿಗೊಂದು ಇತಿಹಾಸ**

ಇಂಥ ಅಂಗಡಿಯಲಿ ಈ ಮಾತಿಗಿಷ್ಟೆ ಬೆಲೆ
ಎನ್ನುವುದು ಮೊದಲು ಗೊತ್ತಾಗಲಿಲ್ಲ
ಒಂದೊಂದು ಮಾತಿಗೊಂದೊಂದು ಇತಿಹಾಸವಿದೆ
ನಾನು ಬೇರಿನ ತನಕ ಹೋಗಲಿಲ್ಲ.

ಇಲ್ಲಿಂದ ಈ ಕಾವ್ಯ ಸ್ವಲ್ಪ ಬೇರೆಯ ಸ್ವರೂಪ ಪಡೆಯುತ್ತದೆ. ಮಾತನ್ನು ಕವಿ ಇಲ್ಲಿ ಅಂಗಡಿಯ ಸರಕಿಗೆ ಹೋಲಿಸುತ್ತಾನೆ. 'ಇಂಥ ಅಂಗಡಿಯಲಿ ಈ ಮಾತಿಗಿಷ್ಟೆ ಬೆಲೆ' ಎಂದು ಹೇಳಿ ಒಂದೊಂದು ಅಂಗಡಿಯಲ್ಲಿ ಒಂದು ಮಾತಿಗೆ ಒಂದೊಂದು ಬೆಲೆ ಎನ್ನುತ್ತಾನೆ. ಮಾತಿಗೆ ಬೆಲೆ ಬರುವುದು ಜನ ಅದನ್ನು ಒಪ್ಪಿದಾಗ ಮಾತು ಇತಹಾಸದ ಮೇಲೆ ನಿಂತಿದೆ ಎಂಬುದು ಕವಿಯ ಅಭಿಪ್ರಾಯ. ಇಲ್ಲಿ ಒಂದು ವಿಷಯ ಗಮನಿಸಬೇಕು. ಪ್ರತಿಯೊಂದು ಮಾತಿಗೂ ಇತಿಹಾಸವಿರುತ್ತದೆ ನಿಜ. ಅಂದರೆ ಮಾತಿನಲ್ಲೇ ಮೂಡಿಬರುವ ಕಾವ್ಯಕ್ಕೂ ಇತಿಹಾಸವಿದೆ ಎಂದಾಯಿತು. ಕಾವ್ಯದ ಇತಿಹಾಸ-ಅನುಭವ. ಈ ಅನುಭವವೇ ಕಾವ್ಯ ನಿರ್ಮಿತಿಗೆ ಕಾರಣ. ಕವಿಯ ಅನುಭವ ಕೇವಲ ಸೌಂದರ್ಯಾನುಭೂತಿಯ ಪ್ರತಿಫಲವಾಗಬೇಕೆಂದಿಲ್ಲ. ಸಮಾಜದಲ್ಲಿ ಬದುಕುವಾಗ ಸಾಮಾಜಿಕವಾಗಿ ನಡೆಯಬಹುದಾದ ಕ್ರಿಯಾವಳಿಗಳೂ ಅನುಭವ ವಿಶೇಷವಾಗಿ ಪರಿಣಮಿಸಬಹುದು. ಸಮಾಜದಲ್ಲಿ ನಾವಾಡಿದ ಮಾತು, ಕೃತಿ, ಕ್ರಿಯೆ ಎಲ್ಲವೂ ನಿರ್ದಿಷ್ಟ ಸಂದರ್ಭದ, ವ್ಯಕ್ತಿಯ, ಪರಿಸರದ ಮೇಲಿಂದ ಬೆಲೆಯನ್ನು ಪಡೆಯುತ್ತವೆ. ಇಲ್ಲಿ ಕವಿಯ ಅನುಭವ ನೋವಿನದ್ದೂ ಆಗಿರಬಹುದು. ಸಂತೋಷದ್ದೂ ಆಗಿರಬಹುದು. ಮಾತಿನ ಇತಿಹಾಸಕ್ಕೆ ನಾನು ಬೇರಿನ ತನಕ ಹೋಗಲಿಲ್ಲ-ಎಂದು ಕವಿ ಹೇಳುತ್ತಾನೆ. ಹೊರಟಿದ್ದರೆ ಏನಾಗುತ್ತಿತ್ತು-ಪ್ರಶ್ನೆ ಹಾಗೆಯೇ ಉಳಿಯುತ್ತದೆ. ಕವಿ ತನಗಾದ ಸಾಮಾಜಿಕ ಅನುಭವವನ್ನು ಕಾವ್ಯದ ಮೂಲಕ

ಹೆಣೆಯುವಾಗ ತನ್ನೊಳಗೇ ಸುಪ್ತವಾಗಿ ಸಂಭಾಷಣೆಗೆ ಇಳಿಯುವುದನ್ನು ಈ ಸಾಲುಗಳು ತೋರುತ್ತವೆ. ಮಾತು, ಬೆಲೆ, ಅಂಗಡಿ, ಇತಿಹಾಸ ಮೊದಲಾದ ಶಬ್ದಗಳು ಸಾಮಾಜಿಕ ಚಿತ್ರಣವನ್ನು ಕಟ್ಟಿಕೊಡುತ್ತವೆ. ಕವಿಯ ಮನಸ್ಸು ಮಾತಿನ ಬೆಲೆಗಾಗಿ ಯೋಚಿಸುತ್ತಿದೆ.

**ಕವಿ ಕಾರ್ಯ–ಕಾವ್ಯಪ್ರಯೋಗ**

ಕಾಯುವುದು ಕಷ್ಟವೂ ಅಲ್ಲ. ನಕ್ಷತ್ರಗಳು
ಆದಿಯಿಂದಲೂ ಕಾಯುತ್ತಿವೆ.
ಕವನ ಹುಟ್ಟುವ ಸಮಯದಲ್ಲಿ ನನ್ನಿಂದಲೇ
ಆಗಬೇಕಾದ್ದಿಲ್ಲಿ ನೂರಾರಿವೆ.

ನಕ್ಷತ್ರಗಳ ಉದಾಹರಣೆ ಕೊಟ್ಟು ಕವಿ ತನ್ನ ಕಾಯುವಿಕೆಯನ್ನೂ ಸಹ್ಯ ಮಾಡಿಕೊಳ್ಳುತ್ತಾನೆ ಈ ಕಾಯುವಿಕೆ ವ್ಯರ್ಥವಾಗುವುದಿಲ್ಲ. ಕವನ ಹುಟ್ಟುವ ಸಮಯದಲ್ಲಿ ಅನಂತ ಸಹನೆಯ ಒಳಮೌನದ ಕಾಯುವಿಕೆ ಬೇಕೇ ಬೇಕು. ಇಲ್ಲದಿದ್ದರೆ ಕವನ ಶಿಶುವಿನ ಜನನ ಹೇಗೆ ಸಾಧ್ಯ ? ಕಾವ್ಯ ರಚನೆಗೆ ಕವಿ ತನ್ನದೇ ಅದೊಂದು ವೈಯಕ್ತಿಕ ಸೀಮಾವಲಯವನ್ನು ಕಟ್ಟಿಕೊಳ್ಳಬೇಕಾಗುತ್ತದೆ. ಕವನ ಹುಟ್ಟುವ ಸಮಯದಲ್ಲಿ ಆತನ ವ್ಯಕ್ತಿತ್ವವೇ ಬದಲಾಗಿ ಆತ ವ್ಯಕ್ತಿಯಾಗಿರದೇ ಕವಿಯಾಗಿರುತ್ತಾನೆ. ಮನದೊಳಗಿನ ಭಾವ ಹೊರ ಹೋದ ಹೊರತೂ ಆತನಿಗೆ ಸಮಾಧಾನವಿಲ್ಲ. ತನ್ನ ಈ ಭಾವಕ್ಕೆ ಇಷ್ಟ ರೂಪ ಕೊಡಲು ಕವಿ ಕಾಯುತ್ತಾನೆ. ಆತನಿಗೆ ತನ್ನ ಹಾಗೂ ಕಾವ್ಯದ ಗೊತ್ತು ಗುರಿಗಳು ಸ್ಪಷ್ಟವಾಗಿ ತಿಳಿದಿದೆ. ಅದಕ್ಕೇ ಆತ "ನನ್ನಿಂದಲೇ ಆಗಬೇಕಾದ್ದಿಲ್ಲಿ ನೂರಾರಿವೆ," ಎಂದು ಹೇಳುತ್ತಾನೆ. ಪ್ರತಿಯೊಂದು ಕವಿಯ ಕಾವ್ಯವೂ ಒಂದೊಂದು ಸ್ಪಷ್ಟ ಉದ್ದೇಶದಿಂದಲೇ ರಚನೆಯಾಗಿರುತ್ತವೆ. ಅದು ನೀತಿ ಬೋಧೆಯಾಗಿರಬಹುದು. ಆನಂದಾನುಭೂತಿಯಾಗಿರಬಹುದು ಅಥವಾ ತನ್ನ ಅನುಭವದ ಅಭಿವ್ಯಕ್ತಿಯೇ ಆಗಿರಬಹುದು–ಒಟ್ಟಿನಲ್ಲಿ ತನ್ನ ಉದ್ದೇಶದ ಅರಿವು ತನಗೂ ತನ್ನ ಕಾವ್ಯಕ್ಕೂ ಇರುವುದನ್ನು ಕವಿ ತಿಳಿಸುತ್ತಾನೆ. ಇಲ್ಲಿ ಕವಿ ತಿಳಿಸುವುದು ಕಾವ್ಯ ಪ್ರಯೋಜನದ ಕುರಿತು. ತನ್ನ ಕಾವ್ಯದಲ್ಲಿ ಕವಿ ಪ್ರಯೋಗಶೀಲ. ಅವನ ಕವನದಿಂದ ಆತ ಏನನ್ನೋ ಸಾಧಿಸಬೇಕಾಗಿದೆ. ಅದು ಅವನಿಂದಲೇ ಆಗಬೇಕಾದ್ದು. ಉಳಿದವರಿಂದ ಅಲ್ಲದ್ದು. ಇದೇ ಆತನ ಕಾವ್ಯದ ವಿಶೇಷತೆ, ಇಲ್ಲಿ ಕವಿ ಈ ಮಾತಿನಿಂದ ಗಮನ ಸೇಳೆಯುವ ಇನ್ನೊಂದು ವಿಷಯವೆಂದರೆ ಪ್ರತಿಯೊಬ್ಬ ಕವಿಯ ಕಾವ್ಯವೂ ತನ್ನಷ್ಟಕ್ಕೆ ತಾನು ವಿಶಿಷ್ಟವಾದದ್ದು ಎನ್ನುವುದು, ಭಿನ್ನವಾದದ್ದು ಎನ್ನುವುದು. ಆದ್ದರಿಂದಲೇ ಒಂದೇ ಸೂರ್ಯೋದಯವನ್ನು ಕಂಡ ಅನೇಕ ಕವಿಗಳ ಕಾವ್ಯಾನುಭವವು ಅನೇಕ ಬಗೆಯಾಗಿ ನಮಗೆ ತೋರಿರುವುದು. ಕಾವ್ಯದ ನೆಲೆಯ ಪರಿಕಲ್ಪನೆ ಆ ಕಾವ್ಯದ ಕೊನೆಯ ಹಂತ ಎನ್ನಬಹುದು.

**ಅಮೂರ್ತ ಭಾವ – ಮೂರ್ತ ರೂಪ**

ತನ್ನ ತೊಡಕುಗಳನ್ನೇ ಅರಿಯದೆ ಪರಿಧಾವಿ
ಸುತಿದೆ ತನ್ನ ಶಿಬಿರದೆಡೆಗೆ
ಅಶರೀರ ಭಾವಕ್ಕೆ ಇಷ್ಟರೂಪವ ತೊಡಿಸಿ
ಕಳಿಸಿಕೊಡಲಾದೀತೆ ನಾಳೆಯೊಳಗೆ

ತನ್ನತೊಡಕುಗಳು ಕಾವ್ಯಕ್ಕೆ ತಿಳಿದಿಲ್ಲ. ಹಾಗೆ ಕಾಲಕ್ಕೂ ಕೂಡಾ. 'ಪರಿಧಾವಿ' ಎನ್ನುವುದು ಕೇವಲ ಸಂವತ್ಸರದ ಹೆಸರಲ್ಲ. ಕಾಲ ವೇಗವಾಗಿ ಕಳೆಯುತ್ತಿರುವುದರ ಸೂಚ್ಯಾರ್ಥ ಕೂಡಾ. ನಾಳೆಯೊಳಗೆ ಕಾವ್ಯರಚನೆಯಾಗಬೇಕಿದೆ. ಆದರೆ ಅಶರೀರ ಭಾವ, ರೂಪು ತಳೆದಿಲ್ಲ. ಯಾವುದರ ಮೇಲೆ ಕವನ ರಚಿಸಬೇಕೆಂದು ಕವಿಗೆ ತಿಳಿದಿದೆ. ಹೇಗೆ ? ಏನನ್ನು ? ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಇದು ಕವನ ಹುಟ್ಟುವ ಸಮಯದ ಸಂದಿಗ್ಧತೆ, ಕವಿ ನಾಳೆಯೊಳಗೆ ತಾನು ಕವನ ಕಟ್ಟಬಲ್ಲೆನೆ ಎಂಬ ಮನಸ್ಥಿತಿಯಲ್ಲಿದ್ದಾನೆ. ತನ್ನ ಅನುಭವ ಅಷ್ಟೇ ಸಮರ್ಥವಾಗಿ ಮಾತಿನ ರೂಪದಲ್ಲಿ ಹೊರಬರಬೇಕು. ಇದು ಭಾಷೆಯ ಮೂಲಕ ಮಾತ್ರ ಸಾಧ್ಯ. ತಾನು ಹೊಂದಿದ ಭಾವಕ್ಕೆ ಅದೇ ರೀತಿಯ ತನ್ನ ಇಷ್ಟರೂಪ ಕೊಡಬೇಕು. ವ್ಯತ್ಯಾಸವಾಗಬಾರದು. ಹೇಳುವಲ್ಲಿನ ವ್ಯತ್ಯಾಸ ಅನುಭವದ ವ್ಯತ್ಯಾಸಕ್ಕೂ ಕಾರಣವಾಗುತ್ತದೆ. ಅದಕ್ಕಾಗಿಯೇ ಕವಿ ಚಟಪಡಿಸುತ್ತಾನೆ. ಕವನ ಹೊರಬಂದಾಗ ಅವನ ಚಟಪಡಿಕೆ ನಿಲ್ಲುತ್ತದೆ. ಇದು ಕವನಕ್ಕೆ, ಆತ ಅಮೂರ್ತಕ್ಕೆ ರೂಪ ಕೊಟ್ಟಿದ್ದು.

ಒಟ್ಟಿನಲ್ಲಿ 'ಕವನ ಹುಟ್ಟುವ ಸಮಯ' ಅತ್ಯಂತ ಸೂಕ್ಷ್ಮವೆನಿಸುವ ಕವಿಯ ಮನಸ್ಥಿತಿಯನ್ನು, ಕವನ ಹುಟ್ಟುವಾಗ ಕವಿ ಅನುಭವಿಸುವ ಚಡಪಡಿಕೆಯನ್ನೂ; ಕೆ. ಎಸ್. ನರಸಿಂಹಸ್ವಾಮಿಯವರು ಕಾವ್ಯದ ಬಗ್ಗೆ ತಳೆದಿರುವ ನಿಲುವನ್ನು ಸ್ಪಷ್ಟಪಡಿಸುತ್ತದೆ. ಕಾವ್ಯದ ಪರಿಕಲ್ಪನೆಯ ಸಂದರ್ಭದಲ್ಲಿ ಇದಕ್ಕೊಂದು ಮಹತ್ವದ ಸ್ಥಾನವಿದೆ ಎಂಬುದರಲ್ಲಿ ಸಂದೇಹವಿಲ್ಲ.

■

೬೯೯೮



## ಸಂಪಾದಕರು ಮತ್ತು ಲೇಖಕರ ವಿಳಾಸಗಳು


**ಪ್ರೊ. ಜಿ. ಅಬ್ದುಲ್ ಬಷೀರ್ (ಸಂ.)**
ನಿವೃತ್ತ ಕನ್ನಡ ಪ್ರಾಧ್ಯಾಪಕರು
ನಂ.೫, ೮ನೆಯ ಅಡ್ಡರಸ್ತೆ
ಬೈರಸಂದ್ರ, ಜಯನಗರ ೧ನೇ ಬ್ಲಾಕ್‌ಪೂರ್ವ
ಬೆಂಗಳೂರು - ೫೬೦ ೦೧೧.
ಮೊಬೈಲ್ : ೯೦೦೮೭೬೩೩೩೬
೯೬೬೩೭೭೮೮೬೮

೧. **ಪ್ರೊ. ಡಿ. ಲಿಂಗಯ್ಯ**
೬೯೦, ೭ನೇ ಬ್ಲಾಕ್, ೨ನೇ ಫೇಸ್
ಬನಶಂಕರಿ ೩ನೇ ಹಂತ,
ಬೆಂಗಳೂರು - ೫೬೦ ೦೮೫.

೨. **ಪ್ರೊ. ಬಸವರಾಜ ಕೋಡಗುಂಟಿ**
ಸಹಾಯಕ ಪ್ರಾಧ್ಯಾಪಕರು
ಕನ್ನಡ ಬಾಶೆ ಮತ್ತು ಅನುವಾದ
ಅಧ್ಯಯನ ವಿಭಾಗ
ದ್ರಾವಿಡ ವಿಶ್ವವಿದ್ಯಾಲಯ
ಕುಪ್ಪಂ-೫೧೭ ೪೨೫, ಆಂಧ್ರಪ್ರದೇಶ

೩. **ಡಾ॥ ಲಕ್ಷ್ಮೀ ಜಿ. ಪ್ರಸಾದ**
ಕನ್ನಡ ಉಪನ್ಯಾಸಕಿ
ಸರ್ಕಾರಿ ಪದವಿಪೂರ್ವ ಕಾಲೇಜು
ಬೆಳ್ಳಾರೆ, ಸುಳ್ಯ, ದಕ್ಷಿಣ ಕನ್ನಡ ಜಿಲ್ಲೆ

೪. **ಡಾ. ಪ್ರಮೀಳ ಮಾಧವ್**
'ಶ್ರೀ ಸದನ', ೮೮/ 'ಎ'
ವಿಠಲ್ ನಗರ, ಇಸ್ರೋ ಲೇಔಟ್ ಸಮೀಪ
ಬೆಂಗಳೂರು-೫೬೦ ೦೭೮

೫. **ಡಾ. ಅಪ್ಪಣ್ಣ ಎನ್. ಹಂಜೆ**
ಇತಿಹಾಸ ಉಪನ್ಯಾಸಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಗದಗ-೫೮೨ ೧೦೧

೬. **ಡಾ. ಮುತ್ತುರಾಜು**
ಕನ್ನಡ ಅಧ್ಯಾಪಕರು
ಜವಾಹರ್ ನವೋದಯ ವಿದ್ಯಾಲಯ
ಉಡುವಳ್ಳಿ-೫೭೭ ೧೪೩
ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.

೭. **ಶ್ರೀ ಪವಿತ್ರ**
ಸಂಶೋಧನ ವಿದ್ಯಾರ್ಥಿ
ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ
ವಿಭಾಗ, ಮೈಸೂರು ವಿಶ್ವವಿದ್ಯಾಲಯ
ಮಾನಸ ಗಂಗೋತ್ರಿ, ಮೈಸೂರು.

೮. **ಡಾ॥ ಕಾ. ವೆಂ. ಶ್ರೀನಿವಾಸಮೂರ್ತಿ**
ಸಹ ಪ್ರಾಧ್ಯಾಪಕರು
ಕನ್ನಡ ಅಧ್ಯಯನ ವಿಭಾಗ
ಸ್ನಾತಕೋತ್ತರ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ
ಕೋಲಾರ-೫೬೩ ೧೦೧

೯. **ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ**
ನಂ. ೬೮/ 'ಬಿ' ಆಶ್ರಮದ ರಸ್ತೆ
ಜಯಲಕ್ಷ್ಮೀಪುರಂ
ಮೈಸೂರು-೫೭೦ ೦೧೨

೧೦. **ಡಾ. ಕೆ. ರಮಾನಂದ**
ನಂ. ೨೨, ಫಾರ್ಕ್ ಏರಿಯಾ
೯ನೇ 'ಎ' ಕ್ರಾಸ್, ಹೊಂಬೇಗೌಡನಗರ
ಬೆಂಗಳೂರು - ೫೬೦ ೦೨೭.

೧೧. **ಡಾ॥ ಶಿವಣ್ಣ ಬೆಳವಾಡಿ**
ಕನ್ನಡ ಉಪನ್ಯಾಸಕರು, ಸುರಾನಾ ಕಾಲೇಜು
ಬೆಂಗಳೂರು - ೫೬೦ ೦೦೪

೧೨. **ಶ್ರೀ ಸುಬ್ರಾಯ ಈಶ್ವರ ಹೆಗಡೆ**
ಸಂಸ್ಕೃತ ಉಪನ್ಯಾಸಕರು
ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜು
ಬೆಂಗಳೂರು - ೫೬೦ ೦೨೦.

೧೩. **ಡಾ॥ ಕೆಳದಿ ವೆಂಕಟೇಶ ಜೋಯಿಸ್**
ಕ್ಯುರೇಟ್, ಕೆಳದಿ ವಸ್ತು ಸಂಗ್ರಹಾಲಯ
ಕುವೆಂಪು ವಿಶ್ವವಿದ್ಯಾಲಯ
ಕೆಳದಿ-೫೭೭ ೪೦೧

೧೪. **ಸಂಧ್ಯಾ ಲಕ್ಷ್ಮೀನಾರಾಯಣ ಹೆಗಡೆ**
C/o. ವಿನಾಯಕ ಭಟ್ಟ
# ೫೧, ಪುಟ್ಟೇನಹಳ್ಳಿ, ೧೦ನೇ ಮುಖ್ಯರಸ್ತೆ
ಜೆ. ಪಿ. ನಗರ, ೨ನೇ ಹಂತ
ಬೆಂಗಳೂರು

1963 ರಿಂದ ಪ್ರಾರಂಭವಾದ "ಕರ್ನಾಟಕ ಲೋಚನ" ಒಂದು ವಿದ್ವತ್ ಪತ್ರಿಕೆ. ಮುಖ್ಯವಾಗಿ ಸಂಶೋಧನೆ, ಪ್ರಾಚೀನ ಕನ್ನಡ ಸಾಹಿತ್ಯ, ಸಂಸ್ಕೃತಿ ವಿವೇಚನೆಗೆ ಮೀಸಲಾಗಿದೆ. ಕನ್ನಡ ನಾಡಿನ ಹಿರಿಯ ಕಿರಿಯ ಸಾಹಿತ್ಯ ಚಿಂತಕರ ಮೂಲ ಆಶಯಕ್ಕೆ ಧಕ್ಕೆ ಬಾರದ ಹಾಗೆ ಉಪಯುಕ್ತ ಲೇಖನಗಳನ್ನು ಬರೆದು ಕೊಡುವುದರ ಮೂಲಕ ಪತ್ರಿಕೆ ನಡೆಯುತ್ತಿದೆ. ಸಮಗ್ರ ಕನ್ನಡ ಸಾಹಿತ್ಯದ ಸಂವರ್ಧನೆಗೆ ಸಹಾಯಕವಾದ 'ಲೋಚನ' ಸಂಶೋಧನ, ಸಂಸ್ಕೃತಿ ಆಸಕ್ತರಿಗೆ ಉಪಯುಕ್ತ ವಾಗಿದೆ. ಇದರ ಉಪಯೋಗವನ್ನು ಕನ್ನಡ ಸಹೃದಯರು ಬಳಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

– **ಪ್ರೊ. ಡಿ. ಲಿಂಗಯ್ಯ**
ಅಧ್ಯಕ್ಷ